ಶುಕ್ರವಾರ, ಮೇ 9, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸತತ ನಾಲ್ಕನೇ ಅರ್ಧಶತಕ

ಪ್ರಭಸಿಮ್ರನ್ ಸಿಂಗ್ (ಔಟಾಗದೇ 50;28ಎ) ಐಪಿಎಲ್ ಹಾಲಿ ಆವೃತ್ತಿಯಲ್ಲಿ ಸತತ ನಾಲ್ಕನೇ ಅರ್ಧಶತಕ ದಾಖಲಿಸುವ ಮೂಲಕ ಈ ಸಾಧನೆ ಮಾಡಿದ ಪಂಜಾಬ್ ಕಿಂಗ್ಸ್ ತಂಡದ ಮೊದಲ ಬ್ಯಾಟರ್ ಎಂಬ ಹಿರಿಮೆಗೆ ಗುರುವಾರ ಪಾತ್ರರಾದರು

12 ಒಟ್ಟು ಪಂದ್ಯ

487 ಒಟ್ಟು ರನ್

RERA NO: PRM/KA/RERA/1251/309/PR/070525/007719
FOR MORE DETAILS VISIT WWW.RERA.KARNATAKA.GOV.IN

Luxuriously Crafted. Perfectly Located.

LAUNCHING **CASAGRAND PROMENADE** YELAHANKA

@ just ₹6999/SFT

65+ PREMIUM AMENITIES | 13000 SFT GRAND CLUBHOUSE
2.6 ACRES LUSH GREENERY | 32000 SFT CENTRAL COURTYARD

THE BEST OF LUXURY & CONNECTIVITY

MALL OF ASIA (10 MINS) | MANYATA TECH PARK (15 MINS)
HEBBAL FLYOVER (15 MINS) | INTERNATIONAL AIRPORT (20 MINS)

SPACIOUS 3 & 4 BHK RESIDENCES FROM ₹1.3CR - ₹1.89CR*

PRICE BENEFITS

YELAHANKA MARKET PRICE ~~₹10000/SFT~~ | CASAGRAND LAUNCH PRICE ~~₹7399/SFT~~

EARLY BIRD PRICE ₹6999/SFT
(FOR FIRST 25 BOOKINGS ONLY)

TYPE	SIZE	LAUNCH PRICE	EARLY BIRD PRICE
3 BHK	1845 - 2152 SFT	~~₹1.37CR~~ - ₹1.6CR	₹1.3CR - ₹1.52CR
4 BHK	2609 - 2670 SFT	₹1.93CR - ~~₹2CR~~	₹1.84CR - ₹1.89CR

TOTAL UNITS - 223 | UNITS SOLD - 83 | AVAILABLE UNITS - 140 | HANDOVER IN 36 MONTHS

CREDAI
93840 54982
EXCLUSIVE SITE VISIT AVAILABLE
VISIT MODEL HOUSE AT SITE

CASAGRAND
building aspirations

3400 SFT SWIMMING POOL

LAUNCHING
CASAGRAND PROMENADE
YELAHANKA

SPACIOUS 3 & 4 BHK RESIDENCES

₹1.3CR - ₹1.89CR*

THOUGHTFULLY CURATED MODERN AMENITIES FOR EVERYDAY LIVING

65+ WORLD-CLASS AMENITIES

CLUBHOUSE VIEW

PODIUM VIEW

Outdoor Amenities
- Walking / Jogging Track
- Cycling Track
- Pergola Seating Gallery
- Senior Citizen Plaza & More

Kid's Play Area
- Skating Rink
- Vertical Playground
- Rock Climbing Wall
- Crèche & More

Sports, Fitness & Well-being
- Indoor Gym
- Yoga Deck
- Cricket Practice Net
- Basketball Court & More

Indoor Games Room
- TT & Pool Room
- Board Games Room
- Video Game Room

Convenience
- Dormitory
- Car Charging Bay
- Car Washing Bay
- Air Filling Station

Terrace Amenities
- Sky Cinema
- Terrace Hangout Plaza
- Grilling Pavilion
- Rooftop Café & More

Swimming Pool Amenities
- Adult Pool
- Kid's Pool
- Outdoor Jacuzzi
- Poolside Cabana & More

Features & Entertainment
- Multi-purpose Hall With Pantry
- Mini Theatre
- Indoor Co-working Space
- Learning Centre & More


MEDITATION DECK


AMPHITHEATRE

AERIAL VIEW


INDOOR GAMES ROOM

Location Route Map



WHY CASAGRAND?

20 years of real estate excellence	**160+** landmark projects	**55,000+** happy families
2023 rigorous quality checks	**87%** on-time delivery	**7 cities** Chennai, Bengaluru, Hyderabad, Coimbatore, Pune, Delhi & Dubai
2 months of rental assurance	**6 months** of resale support	**8 years** warranty & 10 years of community maintenance
75% open area for 2x more light & ventilation	**0%** space wastage planning for carpet area efficiency	**23** global brands used in fittings and finishing materials

CREDAI
93840 54982
EXCLUSIVE SITE VISIT AVAILABLE
VISIT MODEL HOUSE AT SITE

SCAN TO EXPERIENCE THE VIRTUAL WALK-THROUGH

CASAGRAND
building aspirations

ಶುಕ್ರವಾರ, ಮೇ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 128 | ಪುಟ 16
www.prajavani.net
prajavani.net | prajavani | prajavani | prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೂತನ ಪೋಪ್



ಅಮೆರಿಕದ ರಾಬರ್ಟ್ ಫ್ರಾನ್ಸಿಸ್ ಪ್ರಿವೊಸ್ಟ್ ಅವರು ರೋಮನ್ ಕ್ಯಾಥೋಲಿಕ್ ಚರ್ಚ್‌ನ ನೂತನ ಪೋಪ್ ಆಗಿ ಗುರುವಾರ ಆಯ್ಕೆಯಾದರು

ಆಳ-ಅಗಲ
ಯುದ್ಧ: ಪಾಕಿಸ್ತಾನಕ್ಕೆ ಇದೆಯೇ ಶಕ್ತಿ? 10

ನಿಶಿಕಾಂತ ದುಬೆ ಕಿವಿ ಹಿಂಡಿದ ಕೋರ್ಟ್ 11

ಕುಸಿದ ಷೇರು ಸೂಚ್ಯಂಕಗಳು		ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
ಸೆನ್ಸೆಕ್ಸ್	ನಿಫ್ಟಿ			
80,334	24,273	₹1.02 ಲಕ್ಷ (ಬೆಂಗಳೂರು)	₹1.01 ಲಕ್ಷ (ಬೆಂಗಳೂರು)	85.58

ಪರಿಶ್ರಮ
ಪಿಯು ಕಾಲೇಜು | ನೀಟ್ ಅಕಾಡೆಮಿ
NEET 2025 ಕಠಿಣವಾದರೂ, ನಿಮ್ಮ ಗೆಲುವಿಗೆ ಇನ್ನೊಂದು ಅವಕಾಶ ಇರುವುದು!
Parishrama NEET Academy ಜೊತೆ ಯಶಸ್ಸು ಇನ್ನೊಂದೇ ಹೆಜ್ಜೆ ದೂರ!
NEET Repeaters Batch 2026 ನೋಂದಣಿ ಪ್ರಾರಂಭ
2nd Batch starts from 10th May | 3rd Batch starts from 12th May | 4th Batch starts from 14th May
Merit Concession Available
Flexible Fee Payment in 3 Installments Available
Pradeep Eshwar
Founder & Managing Director
ADMISSIONS OPEN 2025-26 PUC (PCMB) & NEET LONG TERM 080 24413400, 74838 30545 www.parishramaneetacademy.com

ಶಾಸಕ ಸ್ಥಾನದಿಂದ ರೆಡ್ಡಿ ಅನರ್ಹ

ಬೆಂಗಳೂರು: ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಏಳು ವರ್ಷ ಶಿಕ್ಷೆಗೆ ಗುರಿಯಾದ ಗಂಗಾವತಿ ಕ್ಷೇತ್ರದ ಶಾಸಕ ಜಿ. ಜನಾರ್ದನ ರೆಡ್ಡಿ ಅವರನ್ನು ಅನರ್ಹಗೊಳಿಸಲಾಗಿದೆ.

'ಮೇ 6ರಿಂದ ಅನರ್ಹ ಆದೇಶವು ಜಾರಿಗೆ ಬರಲಿದ್ದು, ಆರು ವರ್ಷಗಳ ವರೆಗೆ ಮುಂದುವರಿಯಲಿದೆ. ಹೀಗಾಗಿ ವಿಧಾನಸಭೆಯ ಒಂದು ಸ್ಥಾನ ಖಾಲಿ ಯಾಗಿದೆ' ಎಂದು ವಿಧಾನಸಭೆ ಕಾರ್ಯದರ್ಶಿ ಅಧಿಸೂಚನೆ ಹೊರಡಿಸಿದ್ದಾರೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ

ಭಾರತದ ಗಡಿಯ ಹಲವು ನಗರಗಳಲ್ಲಿ 'ಬ್ಲ್ಯಾಕ್‌ಔಟ್' • ಧರ್ಮಶಾಲಾದಲ್ಲಿ ನಡೆಯುತ್ತಿದ್ದ ಐಪಿಎಲ್ ಕ್ರಿಕೆಟ್ ಪಂದ್ಯ ಅರ್ಧದಲ್ಲೇ ಮೊಟಕು

ಪಾಕ್ ದಾಳಿಗೆ ತಡೆಯೊಡ್ಡಿದ ಭಾರತ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ ಸಶಸ್ತ್ರ ಪಡೆಗಳು 'ಆಪರೇಷನ್ ಸಿಂಧೂರ'ದ ಮೂಲಕ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿದ ಬೆನ್ನಲ್ಲೇ ಗುರುವಾರ ಗಡಿಯಲ್ಲಿ ಎರಡೂ ದೇಶಗಳ ನಡುವೆ ಸೇನಾ ಸಂಘರ್ಷ ತೀವ್ರಗೊಂಡಿದೆ.

'ದೇಶದ ಪಶ್ಚಿಮ ಭಾಗದಲ್ಲಿರುವ ಭಾರತೀಯ ವಾಯುಪಡೆಯ 13 ಸೇರಿದಂತೆ ಒಟ್ಟು 15 ಸೇನಾ ನೆಲೆಗಳ ಮೇಲೆ ಡ್ರೋನ್ ಹಾಗೂ ಕ್ಷಿಪಣಿಗಳ ಮೂಲಕ ದಾಳಿ ನಡೆಸಿ ಧ್ವಂಸಗೊಳಿಸುವ ಪಾಕಿಸ್ತಾನದ ಪ್ರಯತ್ನವನ್ನು ಭಾರತೀಯ ಸಶಸ್ತ್ರ ಪಡೆಗಳು ವಿಫಲಗೊಳಿಸಿವೆ. ಪಾಕ್ ಕ್ರಿಯೆಗೆ ಪ್ರತಿ ದಾಳಿಯ ಮೂಲಕ ಲಾಹೋರ್‌ನಲ್ಲಿರುವ ವಾಯು ರಕ್ಷಣಾ ವ್ಯವಸ್ಥೆಯನ್ನು ನಾಶಗೊಳಿಸಲಾಗಿದೆ' ಎಂದು ಭಾರತೀಯ ಅಧಿಕಾರಿಗಳು ಹೇಳಿದರು.

ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ಭಾರತೀಯ ಸೇನೆಯ ಕರ್ನಲ್ ಸೋಫಿಯಾ ಖುರೇಷಿ ಮತ್ತು ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರು ಗುರುವಾರದ 'ಸಿಂಧೂರ' ಕಾರ್ಯಾಚರಣೆಯ ವಿವರಗಳನ್ನು ನೀಡಿದರು.

ಪಾಕಿಸ್ತಾನ ದಾಳಿ ನಡೆಸಲು ಯತ್ನಿಸಿದ ಸ್ಥಳಗಳು

1. ಶ್ರೀನಗರ	8. ಅದಂಪುರ
2. ಅವಂತಿಪುರ	9. ಬಠಿಂಡಾ
3. ಜಮ್ಮು	10. ಚಂಡೀಗಢ
4. ಪಠಾಣ್‌ಕೋಟ್	11. ಫಲೋಡಿ
5. ಅಮೃತಸರ	12. ನಾಲ್
6. ಜಲಂಧರ್	13. ಉತ್ತರಲಾಯಿ
7. ಲುಧಿಯಾನಾ	14. ಭುಜ್

- ಪಠಾಣ್‌ಕೋಟ್ ಬಳಿ ಪಾಕಿಸ್ತಾನದ ಯುದ್ಧ ವಿಮಾನವನ್ನು ಭಾರತ ಹೊಡೆದುರುಳಿಸಿದೆ ಎಂದು ವರದಿಯಾಗಿದೆ. ಆದರೆ, ಸೇನೆಯು ಈ ಬಗ್ಗೆ ಅಧಿಕೃತ ಹೇಳಿಕೆ ನೀಡಿಲ್ಲ
- ಭಾರತದ 28 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಪಾಕಿಸ್ತಾನ ಹೇಳಿದೆ. ಭಾರತದ ದಾಳಿಯಲ್ಲಿ ಇದುವರೆಗೆ 12 ಮಕ್ಕಳು ಸೇರಿದಂತೆ 32 ಮಂದಿ ಮೃತಪಟ್ಟಿದ್ದಾರೆ ಎಂದೂ ಹೇಳಿದೆ
- ಇಸ್ರೇಲ್ ಮೇಲೆ ಹಮಾಸ್ ರಾಕೆಟ್ ದಾಳಿ ನಡೆಸಿದ ರೀತಿಯಲ್ಲಿಯೇ ಪಾಕಿಸ್ತಾನವು ಜಮ್ಮುವಿನ ಹಲವು ಪ್ರದೇಶಗಳ ಮೇಲೆ ದಾಳಿ ನಡೆಸಿದೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ

'ಅವಂತಿಪುರ, ಶ್ರೀನಗರ, ಜಮ್ಮು, ಪಠಾಣ್‌ಕೋಟ್, ಅಮೃತಸರ, ಕಪೂರ್ಥಲಾ, ಜಲಂಧರ್, ಲುಧಿಯಾನಾ, ಅದಂಪುರ, ಬಠಿಂಡಾ, ಚಂಡೀಗಢ, ನಾಲ್, ಫಲೋಡಿ, ಉತ್ತರಲಾಯಿ ಮತ್ತು ಭುಜ್ ಸೇರಿದಂತೆ ಉತ್ತರ ಮತ್ತು ಪಶ್ಚಿಮ ಭಾರತದ ಹಲವಾರು ಮಿಲಿಟರಿ ನೆಲೆಗಳ ಮೇಲೆ ಪಾಕಿಸ್ತಾನವು ಬುಧವಾರ ರಾತ್ರಿ ದಾಳಿ ನಡೆಸಲು ಪ್ರಯತ್ನಿಸಿತು. ಇದನ್ನು ನಮ್ಮ ಸಶಸ್ತ್ರ ಪಡೆಗಳು ವಿಫಲಗೊಳಿಸಿದವು. ಹಲವಾರು ಸ್ಥಳಗಳಿಂದ ದಾಳಿಯ ಅವಶೇಷಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಇದು ಪಾಕ್ ನಡೆಸಿದ ಕೃತ್ಯಕ್ಕೆ ಸಾಕ್ಷಿ' ಎಂದು ಸೋಫಿಯಾ ತಿಳಿಸಿದರು.

'ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಕದನ ವಿರಾಮ ಉಲ್ಲಂಘಿಸಿ ಪಾಕಿಸ್ತಾನ ನಡೆಸಿರುವ ದಾಳಿಯಿಂದಾಗಿ ಪೂಂಛ್ ವಲಯದಲ್ಲಿ 16 ನಾಗರಿಕರು ಸಾವಿಗೀಡಾಗಿದ್ದು, ಹಲವರು ಗಾಯಗೊಂಡಿದ್ದಾರೆ. ಈ ದಾಳಿಯಲ್ಲಿ ಮೂವರು ಮಹಿಳೆಯರು ಮತ್ತು ಐವರು ಮಕ್ಕಳು ಬಲಿಯಾಗಿದ್ದಾರೆ. ಇಲ್ಲಿಯೂ ಪಾಕಿಸ್ತಾನದ ದಾಳಿ ನಿಲ್ಲಿಸಲು ಭಾರತ ಪ್ರತಿಕ್ರಿಯಿಸಬೇಕಾಯಿತು' ಎಂದು ಸ್ಪಷ್ಟಪಡಿಸಿದರು.

'ಧಾರ್ಮಿಕ ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಪಾಕಿಸ್ತಾನ ಅಪಪ್ರಚಾರ ನಡೆಸುತ್ತಿದೆ' ಎಂದರು.

ಅಮೃತಸರದ ಜಮೀನೊಂದರಲ್ಲಿ ಕಂಡು ಬಂದ ಲೋಹದ ಅವಶೇಷವನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದರು —ಪಿಟಿಐ ಚಿತ್ರ

10ನೇ ಪುಟ ನೋಡಿ

'ಜಮ್ಮು: ಪಾಕಿಸ್ತಾನದ ಡ್ರೋನ್ ಪತ್ತೆ'

ಜಮ್ಮು (ಪಿಟಿಐ): ಸ್ಫೋಟವನ್ನು ಹೋಲುವ ದೊಡ್ಡ ಶಬ್ದವು ರಾತ್ರಿ ಕೇಳಿಸಿದ್ದು, ಸ್ಥಳೀಯ ಜನರಲ್ಲಿ ಆತಂಕ ಸೃಷ್ಟಿಯಾಯಿತು. ಸಾಕಷ್ಟು ಭದ್ರತೆ ಇರುವ ಜಮ್ಮು ವಿಮಾನ ನಿಲ್ದಾಣದ ಬಳಿಯಲ್ಲಿಯೇ ಪಾಕಿಸ್ತಾನದ ಡ್ರೋನ್‌ಗಳು ಪತ್ತೆಯಾದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ವಾಯುಪಡೆಯ ನೆಲೆಯನ್ನೂ ಹೊಂದಿರುವ ಈ ವಿಮಾನ ನಿಲ್ದಾಣವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆಯೇ ಎನ್ನುವ ಕುರಿತು ಇನ್ನೂ ಸ್ಪಷ್ಟವಾಗಿಲ್ಲ ಎಂದಿದ್ದಾರೆ. ಸ್ಫೋಟವನ್ನು ಹೋಲುವ ಶಬ್ದ ಕೇಳಿಸಿದ ನಂತರ ಇಡೀ ನಗರದಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಯಿತು. ಪಾಕಿಸ್ತಾನದ ಕೆಲವು ಡ್ರೋನ್‌ಗಳನ್ನು ಭಾರತದ ಡ್ರೋನ್ ನಿರೋಧಕ ವ್ಯವಸ್ಥೆಯಿಂದ ಹೊಡೆದುರುಳಿಸಲಾಯಿತು ಎಂದು ಮಾಹಿತಿ ನೀಡಿದ್ದಾರೆ.

'ಸಿಂಧೂರ' ಕಾರ್ಯಾಚರಣೆ ನಿಲ್ಲದು

ನವದೆಹಲಿ: 'ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಇನ್ನೂ ಮುಂದುವರಿದಿದೆ. ಪ್ರಾಥಮಿಕ ಅಂದಾಜಿನ ಪ್ರಕಾರ, ಪಾಕಿಸ್ತಾನದಲ್ಲಿ ಕುಖ್ಯಾತ ಉಗ್ರರು ಸೇರಿದಂತೆ 100 ಮಂದಿ ಸತ್ತಿದ್ದಾರೆ. ಸತ್ತವರ ತಲೆ ಎಣಿಕೆ ನಡೆಯುತ್ತಿದೆ' ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಸರ್ವಪಕ್ಷ ಸಭೆಗೆ ತಿಳಿಸಿದರು.

'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಬಗ್ಗೆ ಮಾಹಿತಿ ನೀಡಲು ಗುರುವಾರ ಇಲ್ಲಿ ಸುಮಾರು ಎರಡೂವರೆ ಗಂಟೆ ನಡೆದ ಸರ್ವಪಕ್ಷ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

10ನೇ ಪುಟ ನೋಡಿ

ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ (ರಿ)
KARNATAKA RAJYA CHALAVADI MAHASABHA (R)
ನೋಂದಣಿ ಸಂಖ್ಯೆ : 108/2000–2001
ನಂ. 12, 1ನೇ ಮಹಡಿ, ಮಾರುತಿ ನಿಲಯ, ಆರ್.ವಿ. ಲೇಔಟ್, ಕುಮಾರಕೃಪಾ ಪಶ್ಚಿಮ, ಬೆಂಗಳೂರು – 560 020
KCMS

ಸಮೀಕ್ಷೆಯಲ್ಲಿ ತಪ್ಪದೇ ಭಾಗವಹಿಸಿ

ಸಾಮಾಜಿಕ ನ್ಯಾಯದ ಹರಿಕಾರ, ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರ ನೇತೃತ್ವದ ಸರ್ಕಾರವು ಒಳಮೀಸಲಾತಿ ವರ್ಗೀಕರಣಕ್ಕಾಗಿ ಅವಶ್ಯವಿರುವ ದತ್ತಾಂಶಗಳನ್ನು ಸಂಗ್ರಹಿಸಲು ಸಂಬಂಧಪಟ್ಟ ಜಾತಿಗಳ ಸಮೀಕ್ಷೆ ಮಾಡಲು ಆದೇಶಿಸಿರುವುದು ಸಂತೋಷದ ಸಂಗತಿ.

ಬಂಧುಗಳೇ, ಐತಿಹಾಸಿಕವಾಗಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಇವು ಜಾತಿಗಳ ಹೆಸರುಗಳಲ್ಲ ಅನೇಕ ಜಾತಿಗಳ ಗುಂಪುಗಳಿಗೆ ನೀಡಿದ ಹೆಸರುಗಳಾಗಿರುತ್ತವೆ. ಅದ್ದರಿಂದ ಬಲಗೈ ಗುಂಪಿಗೆ ಸಂಬಂಧಿಸಿದ ನಿಮ್ಮ ಮೂಲ ಜಾತಿಯಾದ ಬಲಗೈ/ಛಲವಾದಿ/ಹೊಲಯ/ಮಹರ್/ಪರಯ್ಯ/ಮಾಲಾ/ಚನ್ನದಾಸರ, ಆದಿ ಆಂಧ್ರ, ಆದಿ, ದ್ರಾವಿಡ, ಆದಿ, ಕರ್ನಾಟಕ, ಆಡಿಯಾ (ಕೊಡಗು ಜಿಲ್ಲೆಯಲ್ಲಿ), ಅರೇ ಮಾಲಾ, ಅರ್ವಾ, ಮಾಲಾ, ಬೈರಾ, ಬಕುಡ, ಬಂಡಿ, ಬ್ಯಾಗಾರ, ಚಲ್‌ವಾದಿ, ಚನ್ನಯ್ಯ, ದಾಸರ್, ಹಳ್ಳೀರ್, ಹೋಲರ್, ವಲ್ಹಾರ್, ಹೊಲೇರ್, ಹೊಲೆಯ, ಹೊಲೆಯ ದಾಸರಿ, ತರಲ್, ದೇಗುಮೇಗು, ಮಾಲಾ ಮೈಲಾ, ಮಾಲಾ ದಾಸರಿ, ಮಾಲಾ ಹನ್ನೈ, ಮಾಲಾ ಜಂಗಮ, ಮಾಲಾ ಮಾಸ್ತಿ / ಮಾಸ್ತಿ, ಮಾಲಾ ಸಾಲೆ, ನೆಟ್ಕಣಿ, ಮಾಲಾ ಸನ್ಯಾಸಿ, ಮೇಘವಾಲ್, ಮೆಂಘಾವರ್, ಪರಾಯನ್, ವಳ್ಳುವಲನ್, ಪಲ್ಲಾರ್, ಮೊಗೆರ್, ಮುಕ್ರಿ, ಹಗೇರು, ಹಲ್‌ಸಾರ್/ ಹುಸ್‌ಲಾರ್/ ಹಲ್‌ಸವಾರ್, ಮಾರಿಲಾನ್ ಎಂದು ನಮೂದಿಸಿ.

ಮುಂದೆ ಸರ್ಕಾರವು ಒಳಮೀಸಲಾತಿಯನ್ನು ಜಾತಿ ಸಮೀಕ್ಷೆಯಲ್ಲಿ ದೊರಕಿದ ಜನಸಂಖ್ಯೆಗೆ ಅನುಗುಣವಾಗಿ ನೀಡುವುದರಿಂದ, ಸಮುದಾಯಕ್ಕೆ ಸೇರಿದ ಪ್ರತಿ ವ್ಯಕ್ತಿ ಮತ್ತು ಕುಟುಂಬವನ್ನು ಸಮೀಕ್ಷೆಗೆ ಒಳಪಡಿಸುವ ಜವಾಬ್ದಾರಿ ಇಡೀ ಸಮುದಾಯದ ಮೇಲಿದೆ.

ಒಂದು ವೇಳೆ ಮೂಲ ಜಾತಿ/ಉಪ ಜಾತಿಯನ್ನು ನಮೂದಿಸದ್ದಿದರೇ, ಬಲಗೈ ಗುಂಪಿಗೆ ಸಂಬಂಧಿಸಿದ ಜಾತಿಗಳ ಜನಸಂಖ್ಯೆಯಲ್ಲಿ ವ್ಯತ್ಯಾಸವಾಗಿ ನಮಗೆ ವಾಸ್ತವಿಕವಾಗಿ ದೊರಕಬೇಕಿರುವ ಮೀಸಲಾತಿ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳಾದ ಶಿಕ್ಷಣ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ, ಆರೋಗ್ಯ, ಕೃಷಿ, ತೋಟಗಾರಿಕೆ, ಕೈಗಾರಿಕೆ, ವಾಣಿಜ್ಯ, ಪಶುಸಂಗೋಪನೆ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಸಿಗುವ ಸೌಲಭ್ಯಗಳಿಂದ ನಾವು ಶಾಶ್ವತವಾಗಿ ವಂಚಿತರಾಗಬೇಕಾಗುತ್ತದೆ. ಇದರ ಪರಿಣಾಮದಿಂದ ನಮ್ಮ ಸಮುದಾಯದ ಮುಂದಿನ ಪೀಳಿಗೆ ಶತಶತಮಾನಗಳ ವರೆಗೆ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಎಚ್ಚರವಿರಲಿ.....! ಆದ್ದರಿಂದ, ಕಡ್ಡಾಯವಾಗಿ ಸಮೀಕ್ಷೆಯಲ್ಲಿ ನಿಮ್ಮ ಮೂಲ ಜಾತಿಯನ್ನು ನಮೂದಿಸಿ.

ವಂದನೆಗಳೊಂದಿಗೆ,
ಸಿದ್ಧಯ್ಯ (IAS Rtd) ಅಧ್ಯಕ್ಷರು | ಶಿವರಾಮ್ ಟಿ.ಆರ್ ಕಾರ್ಯಕಾರಿ ಸಮಿತಿ ಸದಸ್ಯರು | ಹೆಚ್. ಎಸ್. ಲಿಂಗೇಶ್ ಕಾರ್ಯಕಾರಿ ಸಮಿತಿ ಸದಸ್ಯರು | ಮಹಾದೇವಯ್ಯ ಕಾರ್ಯಕಾರಿ ಸಮಿತಿ ಸದಸ್ಯರು | ಶಿವಣ್ಣ ಬಿ. ಕಾರ್ಯಕಾರಿ ಸಮಿತಿ ಸದಸ್ಯರು | ಶೀತಲ್ ಕಾಂಬ್ಳೆ ಕಾರ್ಯಕಾರಿ ಸಮಿತಿ ಸದಸ್ಯರು

ಹಂತಗಳು	ಸ್ವರೂಪ	ದಿನಾಂಕ
1	ಮನೆ ಮನೆಗೆ ಭೇಟಿ ನೀಡಿ ಗಣತಿ	ಮೇ 5 ರಿಂದ 17
2	ಮತಗಟ್ಟೆಗಳಲ್ಲಿ ವಿಶೇಷ ಶಿಬಿರ	ಮೇ 19 ರಿಂದ 21
3	ಆನ್‌ಲೈನ್ ಗಣತಿ/ಸ್ವಯಂಘೋಷಣೆ ಜಾತಿ ಪ್ರಮಾಣ ಪತ್ರದ ಆರ್.ಡಿ. ನಂ. ಕಡ್ಡಾಯ	ಮೇ 19 ರಿಂದ 23

ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ - 2025

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ಶ್ರೀ ಸಿದ್ಧರಾಮಯ್ಯ ಸನ್ಮಾನ್ಯ ಮುಖ್ಯಮಂತ್ರಿಗಳು | ಶ್ರೀ ಡಿ. ಕೆ. ಶಿವಕುಮಾರ್ ಮಾನ್ಯ ಉಪಮುಖ್ಯಮಂತ್ರಿಗಳು

ಪಾಲಿಟೆಕ್ನಿಕ್ (ಡಿಪ್ಲೋಮಾ) ಪ್ರವೇಶಾತಿ 2025-26
ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರಿಗೆ ಸುವರ್ಣಾವಕಾಶ
ಕನ್ನಡ/ ಇಂಗ್ಲೀಷ್/ ಇಂಗ್ಲೀಷ್ ಮಿಶ್ರಿತ ಕನ್ನಡ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ

- ಉದ್ಯಮಗಳಿಗೆ ಪೂರಕವಾದ ಪಠ್ಯಕ್ರಮ.
- ಎಲ್ಲಾ ಪಾಲಿಟೆಕ್ನಿಕ್ ಗಳಲ್ಲಿ ಸ್ಮಾರ್ಟ್ ಕ್ಲಾಸ್ ರೂಂಗಳು.
- ವಿವಿಧ ವಿದ್ಯಾರ್ಥಿ ವೇತನಗಳ ಸೌಲಭ್ಯ.
- ಕಲಿಕೆಯ ಜೊತೆಗೆ Industrial visit, Internship
- ಉದಯೋನ್ಮುಖ ಕ್ಷೇತ್ರಗಳಲ್ಲಿ ನೈಪುಣ್ಯತೆ.
- ಶಿಕ್ಷಣ ಮುಗಿದ ತಕ್ಷಣ ಉದ್ಯೋಗ.
- 19 ನೇ ವರ್ಷಕ್ಕೆ ಉದ್ಯಮಿಯಾಗುವ ಅವಕಾಶ.
- ಲ್ಯಾಟರಲ್ ಎಂಟ್ರಿ ಮುಖಾಂತರ ಬಯಸಿದ ಇಂಜಿನಿಯರಿಂಗ್ ಕೋರ್ಸಿನ ಎರಡನೇ ವರ್ಷಕ್ಕೆ ನೇರ ಪ್ರವೇಶ.

ಡಾ.ಎಂ. ಸಿ. ಸುಧಾಕರ್
ಉನ್ನತ ಶಿಕ್ಷಣ ಸಚಿವರು ಪಾಲಿಟೆಕ್ನಿಕ್ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಿರುವುದು

ONLINE/OFFLINE ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದು
ಹೆಚ್ಚಿನ ಮಾಹಿತಿಗಾಗಿ
ಹತ್ತಿರದ ಸರ್ಕಾರಿ ಪಾಲಿಟೆಕ್ನಿಕ್ ಗೆ ಭೇಟಿ ನೀಡಿ
https://dtek.karnataka.gov.in/
ನುರಿತ ಹಾಗೂ ಅನುಭವಿ ಉಪನ್ಯಾಸಕರು । ಅತ್ಯುತ್ತಮ ದರ್ಜೆಯ ಪ್ರಯೋಗಾಲಯಗಳು
ಸಕಲ ಸೌಕರ್ಯಗಳ ಹಾಸ್ಟೆಲ್ ವ್ಯವಸ್ಥೆ । Internship ಹಾಗೂ
ಪ್ರತಿಷ್ಠಿತ ಕಂಪನಿಗಳಲ್ಲಿ Stipend ಸಹಿತ Apprenticeship ಸೌಲಭ್ಯ
ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

ಯುವಕನ ಕೊಲೆ

ಕೆಜಿಎಫ್: ಸಣ್ಣ ವಾಗ್ವಾದ ವಿಕೋಪಕ್ಕೆ ತಿರುಗಿ ಯುವಕನೊಬ್ಬನ ಹತ್ಯೆಗೆ ಕಾರಣವಾದ ಘಟನೆ ಬೇತಮಂಗಲ ಹೊರವಲಯದ ಗುಟ್ಟಹಳ್ಳಿ ಕ್ರಾಸ್‌ನ ಬಾಲಾಜಿ ಬಾರ್‌ನಲ್ಲಿ ಬುಧವಾರ ರಾತ್ರಿ ನಡೆದಿದೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/108/2025
ದಿನಾಂಕ: 11.04.2025 ರ ಮೇಲಿನ ತಿದ್ದುಪಡಿ
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
1) ಬಾಗಲಕೋಟೆ – ಕುಡಚಿ ಹೊಸ ಲೈನ್ ಯೋಜನೆ: ಚೈ. 35068 ರಲ್ಲಿ ಎಲ್‌ಸಿ ಸಂ. 1 ಕ್ಕೆ ಬದಲಾಗಿ 1x18ಮೀ ಕಾಂಪೋಸಿಟ್ ಗಿರ್ಡರ್ (ರೈಲ್ವೆ ಭಾಗ) +2x18.46ಮೀ. ಪಿಎಸ್‌ಸಿ ಗಿರ್ಡರ್ ಮತ್ತು ಯು ಟೈಪ್ ರೀಟೇನಿಂಗ್ ವಾಲ್ + ಅಪ್ರೋಚ್‌ಗಳಲ್ಲಿ ಸಿಸಿ ಬ್ಲಾಕ್ ವಾಲ್‌ಗಳ ಮೂಲಕ ಪ್ರಸ್ತಾವಿತ ಆರ್‌ಓಬಿಯ ನಿರ್ಮಾಣ. 2) ಖಜ್ಜಿಡೋಣಿ ಮತ್ತು ಲೋಕಾಪುರ ನಿಲ್ದಾಣಗಳ ನಡುವೆ ಚೈ. 36593 ರಲ್ಲಿ ಎಲ್‌ಸಿ ಸಂ. 2 ಕ್ಕೆ ಬದಲಾಗಿ 1x24.0 ಮೀ. ಕಾಂಪೋಸಿಟ್ ಗಿರ್ಡರ್ +2x18.46 ಮೀ. ಪಿಎಸ್‌ಸಿ ಗಿರ್ಡರ್ ಮತ್ತು ಯು ಟೈಪ್ ರೀಟೇನಿಂಗ್ ವಾಲ್ + ಅಪ್ರೋಚ್‌ಗಳಲ್ಲಿ ಸಿಸಿ ಬ್ಲಾಕ್ ವಾಲ್‌ಗಳ ಮೂಲಕ ಆರ್‌ಓಬಿಯ ನಿರ್ಮಾಣ. 3) ಲೋಕಾಪುರ ಮತ್ತು ಯಾದವಾಡ ನಿಲ್ದಾಣಗಳ ನಡುವೆ ಚೈ. 38173 ರಲ್ಲಿ 1x18 ಮೀ. ಕಾಂಪೋಸಿಟ್ ಗಿರ್ಡರ್ (ರೈಲ್ವೆ ಭಾಗ) + 2x18.46 ಮೀ. ಪಿಎಸ್‌ಸಿ ಗಿರ್ಡರ್ ಮತ್ತು ಯು ಟೈಪ್ ರೀಟೇನಿಂಗ್ ವಾಲ್ + ಅಪ್ರೋಚ್‌ಗಳಲ್ಲಿ ಸಿಸಿ ಬ್ಲಾಕ್ ವಾಲ್‌ಗಳ ಮೂಲಕ ಆರ್‌ಓಬಿ ಸಂ. 107ಎ ಯ ನಿರ್ಮಾಣ. (ಟೆಂಡರು ಉಲ್ಲೇಖ ಸಂ. ROB107A-LC-1-2-BGK-KUD)	ರೂ. 51,32,69,598/-

ಟೆಂಡರು ಮುಚ್ಚುವ ದಿನಾಂಕ	
ಪ್ರಸ್ತುತ	ಪರಿಷ್ಕೃತ
08.05.2025, (15:00 ಗಂಟೆಯವರೆಗೆ)	22.05.2025, (15:00 ಗಂಟೆಯವರೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ ಬೆಂಗಳೂರು ದಂಡು
PUB/95/AAMO/PRB/SWR/2025-26
South Western Railway - SWR | SWRRLY | SWRRLY

ಬೈಯಪ್ಪನಹಳ್ಳಿ ಮತ್ತು ಎಂ.ಜಿ. ರಸ್ತೆ ನಡುವಿನ ಆರು ಮೆಟ್ರೊ ನಿಲ್ದಾಣಗಳಲ್ಲಿ ಅಳವಡಿಸಿರುವ ಸುಧಾರಿತ ಸಿಸಿಟಿವಿ ಕ್ಯಾಮೆರಾ ನಿಗಾ ವ್ಯವಸ್ಥೆ ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ನಿಯಂತ್ರಣ ಕೊಠಡಿ

ಮೆಟ್ರೊ ನಿಲ್ದಾಣ: ಸಿ.ಸಿ.ಟಿ.ವಿ. ಕ್ಯಾಮರಾ, ಎ.ಐ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ ಮತ್ತು ಎಂ.ಜಿ. ರಸ್ತೆ ನಡುವಿನ ಆರು ಮೆಟ್ರೊ ನಿಲ್ದಾಣಗಳಲ್ಲಿ ಸುಧಾರಿತ ಸಿಸಿಟಿವಿ ಕ್ಯಾಮೆರಾ ನಿಗಾ ವ್ಯವಸ್ಥೆ ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವನ್ನು ಬಿಎಂಆರ್‌ಸಿಎಲ್ ಅಳವಡಿಸಿದೆ.

ನಿಲ್ದಾಣದ ಒಳ ಭಾಗಗಳ ಜೊತೆಗೆ ಸುತ್ತಲಿನ ಪ್ರದೇಶಗಳೂ ಕ್ಯಾಮರಾ ನಿಗಾ ವ್ಯಾಪ್ತಿಗೆ ಒಳಪಡಲಿದ್ದು, ಎ.ಐ. ತಂತ್ರಜ್ಞಾನದಿಂದ ಅಪಾಯಗಳನ್ನು ತಕ್ಷಣ ಗುರುತಿಸಿ, ಪ್ರಯಾಣಿಕರ ಸುರಕ್ಷತೆ ಹೆಚ್ಚಿಸಲು ನೆರವಾಗಲಿದೆ. ನಿಲ್ದಾಣದ ಮುಂದೆ ಇರುವ ವಾಹನಗಳ ಸಂಖ್ಯಾ ಫಲಕಗಳನ್ನು ಗುರುತಿಸಲು 'ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್' (ಎಎನ್‌ಪಿಆರ್) ತಂತ್ರಜ್ಞಾನವನ್ನು ಬಳಕೆ ಮಾಡಲಾಗಿದೆ. ಎಐ ಆಧಾರಿತ ವಿಡಿಯೊ ವಿಶ್ಲೇಷಣೆಯೊಂದಿಗೆ, ಈ ತಂತ್ರಜ್ಞಾನ ಶಂಕಾಸ್ಪದ ಚಟುವಟಿಕೆಗಳು, ಅನುಮಾನಾಸ್ಪದ ಘಟನೆಗಳನ್ನು ತಕ್ಷಣ ಪತ್ತೆಹಚ್ಚಲು ಸಹಕಾರಿಯಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ಸುಧಾರಿತ ತಂತ್ರಜ್ಞಾನ ಅಳವಡಿಸುವ ಮೂಲಕ ಭದ್ರತೆ ಹೆಚ್ಚಿಸಲು ಶ್ರಮಿಸುತ್ತಿದ್ದೇವೆ. ಎ.ಐ. ಮತ್ತು ಎಎನ್‌ಪಿಆರ್ ತಂತ್ರಜ್ಞಾನವು ನಿಲ್ದಾಣದಲ್ಲಿನ ಚಟುವಟಿಕೆಗಳನ್ನು ನಿರಂತರ ಗಮನಿಸಲು ಮತ್ತು ತಕ್ಷಣ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ ರಾವ್ ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಚ್ಛತೆಗೆ ಆದ್ಯತೆ; ಶೇ 90ರಷ್ಟು ಯಶಸ್ಸು ಸಾಧನೆ

ನಗರಕ್ಕೆ 'ಸ್ವಚ್ಛ ನೋಟ': ಮಹೇಶ್ವರ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಾದಚಾರಿ ಮಾರ್ಗಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳಿಗೆ ಒಂದು ತಿಂಗಳಲ್ಲಿ 'ಸ್ವಚ್ಛ ನೋಟ' ನೀಡಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದರು.

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯಾವ ಕೆಲಸ ಮಾಡಬೇಕು ಎಂಬುದನ್ನು ನಮಗೆ ತಿಳಿಸಿದ್ದಾರೆ. ಅದರಂತೆ ಕಾರ್ಯಗಳನ್ನು ಅನುಷ್ಠಾನ ಮಾಡುವ ಉದ್ದೇಶ ಹೊಂದಿದ್ದೇವೆ' ಎಂದು ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

'ನಗರ ಸ್ವಚ್ಛವಾಗಿರಬೇಕು ಎಂದು ಕಟ್ಟಡ ತ್ಯಾಜ್ಯ ಮತ್ತು ಕಸದ ಬ್ಲ್ಯಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವ ಅಭಿಯಾನವನ್ನು ನಡೆಸಲಾಯಿತು. ಶೇಕಡ 90ರಷ್ಟು ಯಶಸ್ಸು ಸಿಕ್ಕಿದ್ದು ಸ್ವಚ್ಛತಾ ಕಾರ್ಯ ಮುಂದುವರಿದಿದೆ' ಎಂದರು.

'ಮಳೆಗಾಲದ ಸಂದರ್ಭದಲ್ಲಿ ಅತಿವೃಷ್ಟಿ ಪ್ರವಾಹಕ್ಕೆ ಒಳಗಾಗುವ ಪ್ರದೇಶಗಳು ಹಾಗೂ ರಸ್ತೆಯಲ್ಲಿ ನೀರು ನಿಂತುಕೊಳ್ಳುವ ಪ್ರದೇಶಗಳನ್ನು ಗುರುತಿಸಲಾಗಿದ್ದು, ಹಲವೆಡೆ ಶಾಶ್ವತ ಪರಿಹಾರಗಳನ್ನು ಕೈಗೊಳ್ಳಲಾಗಿದೆ. ಸಂಚಾರ ವಿಭಾಗದ ಪೊಲೀಸರ ನೆರವಿನೊಂದಿಗೆ ಅವರು ಶಿಫಾರಸು ಮಾಡಿರುವ ಸ್ಥಳಗಳನ್ನೂ ಪಟ್ಟಿ ಮಾಡಿ ಪರಿಹಾರ ಕಾರ್ಯ ಕೈಗೊಂಡಿದ್ದೇವೆ' ಎಂದು ಹೇಳಿದರು.

ಮಹದೇವಪುರ, ನಾಗವಾರ ಹಾಗೂ ನಾಯಂಡಹಳ್ಳಿಯ ಕೆಲವು ಪ್ರದೇಶಗಳಲ್ಲಿ ಒತ್ತುವರಿಯಿಂದ ಪ್ರವಾಹ ಉಂಟಾಗುತ್ತಿದೆ. ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರೊಂದಿಗೆ ಚರ್ಚೆ ನಡೆಸಲಾಗಿದ್ದು, ಒತ್ತುವರಿ ತೆರವಿಗೆ ಸೂಕ್ತ ಆದೇಶಗಳನ್ನು ಪಡೆಯಲಾಗುತ್ತದೆ ಎಂದರು.

ಬಿಎಂಆರ್‌ಸಿಎಲ್ ಕಾಮಗಾರಿಯಿಂದ ಮಳೆ ನೀರು ನಿಲ್ಲುವ ಪ್ರಕರಣಗಳಿದ್ದು, ಬಿಬಿಎಂಪಿ–ಬಿಎಂಆರ್‌ಸಿಎಲ್ ನೊಂದಿಗೆ ಸಮನ್ವಯ ಸಾಧಿಸಿ ಸಮಸ್ಯೆ ಪರಿಹರಿಸಲಾಗುತ್ತದೆ ಎಂದು ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ಹೊಂದಿರುವ ಮಹೇಶ್ವರ ರಾವ್ ತಿಳಿಸಿದರು.

ಕಾಮಗಾರಿ ಮುಗಿಸಲು ಸೂಚನೆ: ನಗರದಲ್ಲಿ ಕೆಪಿಟಿಸಿಎಲ್, ಜಲಮಂಡಳಿ ಸೇರಿದಂತೆ ವಿವಿಧ ಇಲಾಖೆಗಳು ನಡೆಸುತ್ತಿರುವ ಕಾಮಗಾರಿಗಳನ್ನು ಮಳೆಗಾಲ ಆರಂಭವಾಗುವ ಮುನ್ನ ಮುಗಿಸಬೇಕು ಎಂದು ಸೂಚನೆ ನೀಡಲಾಗಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ನಿಗಾ ವಹಿಸಬೇಕು. ಯೋಜನೆ ವಿಭಾಗದ ವಿಶೇಷ ಆಯುಕ್ತರು ಹಾಗೂ ವಲಯ ಆಯುಕ್ತರಿಗೆ ಮೇಲ್ವಿಚಾರಣೆ ಮಾಡಲು ಸೂಚಿಸಲಾಗಿದೆ ಎಂದು ಹೇಳಿದರು.

ಮಾರುಕಟ್ಟೆಗಳ ಮರು ಅಭಿವೃದ್ಧಿ ಹಾಗೂ ಅವುಗಳಿಂದ ಹೆಚ್ಚಿನ ಆದಾಯ ಬರುವಂತೆ ಮಾಡಲು ವಿಶೇಷ ಯೋಜನೆಯನ್ನು ರೂಪಿಸಲಾಗುತ್ತದೆ. ಕೆಲವು ದಿನಗಳಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ನಗರದಲ್ಲಿರುವ ಎಲ್ಲ ಉದ್ಯಾನಗಳನ್ನು ಬಿಬಿಎಂಪಿ ತನ್ನ ಸುಪರ್ದಿಗೆ ತೆಗೆದುಕೊಳ್ಳುತ್ತಿದೆ. ತನ್ನ ಬಡಾವಣೆಗಳಲ್ಲಿರುವ ಉದ್ಯಾನಗಳನ್ನು ಹಸ್ತಾಂತರಿಸುವಂತೆ ಬಿಡಿಎಗೆ ಮನವಿ ಮಾಡಿಕೊಳ್ಳಲಾಗಿದೆ. ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಉದ್ಯಾನಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದು ತಿಳಿಸಿದರು.

1,300 ರಸ್ತೆ ಗುಂಡಿ ದುರಸ್ತಿಗೆ ಕ್ರಮ

ಮಹೇಶ್ವರ ರಾವ್

ಬಿಬಿಎಂಪಿ ವ್ಯಾಪ್ತಿಯಲ್ಲಿ 1,300 ರಸ್ತೆ ಗುಂಡಿಗಳನ್ನು ದುರಸ್ತಿ ಮಾಡುವ ಕಾಮಗಾರಿ ಚಾಲನೆಯಲ್ಲಿದೆ. ರಸ್ತೆ ಗುಂಡಿ ದುರಸ್ತಿ ನಿರಂತರ ಪ್ರಕ್ರಿಯೆಯಾಗಿದೆ ಎಂದು ಮಹೇಶ್ವರ ರಾವ್ ಹೇಳಿದರು.

ಜಲಮಂಡಳಿ ಸೇರಿ ಯಾವುದೇ ಇಲಾಖೆಗಳು ರಸ್ತೆ ಅಗೆದಿದ್ದರೆ, ಅವುಗಳನ್ನು ಈ ತಿಂಗಳ ಅಂತ್ಯದೊಳಗೆ ದುರಸ್ತಿ ಮಾಡಲು ಸೂಚಿಸಲಾಗಿದೆ ಎಂದರು.

ಮೆಜೆಸ್ಟಿಕ್ ಸುತ್ತಮುತ್ತ ಪಾದಚಾರಿ ಮಾರ್ಗಗಳು ಹಲವು ಸಮಸ್ಯೆಗಳನ್ನು ಹೊಂದಿದ್ದು, ಒಂದು ವಾರದೊಳಗೆ ಇವುಗಳ ನೋಟವನ್ನು ಬದಲಿಸುವಂತೆ ಆದೇಶಿಸಲಾಗಿದೆ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಭರವಸೆ ನೀಡಿದ್ದಾರೆ ಎಂದು ಹೇಳಿದರು.

'ಐದು ಕೆಲಸದತ್ತ ಗಮನ'

'ನಗರದಲ್ಲಿ ಅತ್ಯಂತ ಅಗತ್ಯವಿರುವ ಐದು ಕೆಲಸಗಳತ್ತ ಹೆಚ್ಚು ಗಮನಹರಿಸಲಾಗಿದೆ. ಅವುಗಳನ್ನು ದಕ್ಷತೆಯಿಂದ ನಿರ್ವಹಿಸಿದರೆ ಹಲವು ಸಮಸ್ಯೆಗಳು ಬಗೆಹರಿಯಲಿವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದರು.

'ಮಳೆಗಾಲದಲ್ಲಿ ಎಲ್ಲೂ ಪ್ರವಾಹದ ಸನ್ನಿವೇಶ ಉಂಟಾಗಬಾರದು. ಪಾದಚಾರಿ ಮಾರ್ಗದಲ್ಲಿ ಜನರ ಓಡಾಟಕ್ಕೆ ಅಡೆತಡೆ ಇರಬಾರದು. ರಸ್ತೆಬದಿ ಅಥವಾ ಇತರೆಡೆ ಎಲ್ಲೂ ಕಸ ಎಸೆಯುವ 'ಬ್ಲ್ಯಾಕ್ ಸ್ಪಾಟ್' ಗಳಿರಬಾರದು. ಎಲ್ಲೂ ಕತ್ತಲೆ ಇಲ್ಲದಂತೆ ಬೀದಿದೀಪಗಳನ್ನು ನಿರ್ವಹಣೆ ಮಾಡಬೇಕು. ತ್ಯಾಜ್ಯ ಸಂಗ್ರಹ– ವಿಲೇವಾರಿಯಲ್ಲಿ ಸಮಸ್ಯೆ ಉಂಟಾಗಬಾರದು... ಈ ಐದು ಮೂಲ ಕಾರ್ಯಗಳನ್ನು ನಾವು ದಕ್ಷತೆಯಿಂದ ನಿರ್ವಹಿಸಬೇಕಿದೆ. ಇದರ ಬಗ್ಗೆಯೇ ನಮ್ಮ ಗಮನ ಕೇಂದ್ರೀಕೃತವಾಗಿದೆ' ಎಂದು ಹೇಳಿದರು.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 07/2025/SBC, ದಿನಾಂಕ: 02.05.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್‌8255216ಎ	ಡೀಜಲ್ ಲೋಕೊ ಶೆಡ್ / ಕೃಷ್ಣರಾಜಪುರಂ (ಡಿಎಸ್‌ಎಲ್/ಕೆಜೆಎಂ) ನಲ್ಲಿ ಮಶೀನ್ ದುರಸ್ತಿ ಬೇಯ್‌ಗಳಿಗಾಗಿ 10ಟನ್ ಸಾಮರ್ಥ್ಯವುಳ್ಳ ಇಒಟಿ ಕ್ರೇನ್ ಜೊತೆಗೆ 3ಟನ್ ಸಾಮರ್ಥ್ಯವುಳ್ಳ ಹೆಚ್ಚುವರಿ ಹಾಯಿಸ್ಟ್ ಮತ್ತು 90 ಮೀಟರ್ ಉದ್ದದ ಶ್ರೌಡೆಡ್ ಡಿಎಸ್‌ಎಲ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವಿಕೆ. (ಪರಿಮಾಣ: 2 ನಂ.).

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 29.05.2025, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/91/AAMO/PRB/SWR/2025-26 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

NOTICE

COMMAND HOSPITAL, AIR FORCE BANGALORE – 560007
INVITATION OF TENDERS FOR RUNNING REGIMENTAL SHOPS

1. Commandant, Command Hospital Air Force, Bangalore-07 invites sealed tenders from suitable vendors for running regimental shops for a period of one year extendable as per policy in vogue. Govt agencies and civilian vendors can apply for these shops. However, first preference will be given to under mentioned categories.
 (a) War widow/widows of defence personnel killed while on duty
 (b) Disabled soldier and Ex-servicemen
 (c) Spouse/Widows Ex-servicemen
2. Tender Forms for the shop as mentioned below can be procured on payment of Rs.300/- (non refundable) from Service Institute from 09 May 25 to 17 May 25 between 1000 hrs and 1200 hrs on all working days. The application form is to be submitted along with DD/Cheque of Rs.3000/- per tender (refundable) in favor of SI FUND CHAFB as Earnest Money Deposit.
 (a) Supper bar CH
 (b) Optical Shop
 (c) Cafeteria Path lab
 (d) Barber Shop, CH
 (e) Newspaper Shop
 (1) Patient Amenity Shop
 (g) Provision Shop
 (h) ECHS Polyclinic Cafeteria
 (j) Family Wing Tea Stall
 (k) Supper Bar, MTC
3. The tender forms in sealed envelope can be dropped in tender box marked as "INVITATION OF TENDER FOR RUNNING OF SI REGIMENTAL SHOPS" placed at Security, section by 1200 hrs 07 May 25. All vendors participating in bidding may attend or send their representatives to witness the opening of sealed tender box at 1100 hrs on 19 May 25. For any clarification contact Sgt Santosh Kumar 7982173160.
4. Commandant, Command Hospital, Air Force Bangalore reserves the right to accept or reject any of the bids without assigning any reasons and the decision given by him in awarding contract is final and binding to all the concerned. Sd/-

ವರದಿ ನೀಡದ ತಹಶೀಲ್ದಾರ್ ರಾಜೀವ್‌ಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಜಕಾಲುವೆ ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ಬಡಾವಣೆ ನಿರ್ಮಿಸಲಾಗಿದೆ ಎಂಬ ದೂರಿಗೆ ಸಂಬಂಧಿಸಿದಂತೆ ವರದಿ ನೀಡದ ಬೆಂಗಳೂರು ಪೂರ್ವ ತಾಲೂಕು ತಹಶೀಲ್ದಾರ್ ರಾಜೀವ್ ಅವರಿಗೆ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ₹1 ಲಕ್ಷ ದಂಡ ವಿಧಿಸಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಾಡುಗೋಡಿ ಗ್ರಾಮದ ಸರ್ವೆ ನಂ 299 ಹಾಗೂ ಬೆಳತ್ತೂರಿನ ಸರ್ವೆ ಸಂ 11/4ಎ , 11/4 ಬಿ ಜಮೀನಲ್ಲಿ 9 ಗುಂಟೆ ಕಾಲುವೆ ಜಾಗವನ್ನು ಅತಿಕ್ರಮಿಸಿಕೊಂಡು ಭೂ ಸಾಯಿಚರಣ ಎಂಬ ಹೆಸರಿನಲ್ಲಿ ಅಕ್ರಮ ಬಡಾವಣೆ ನಿರ್ಮಿಸಲಾಗಿದೆ ಎಂದು ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸುವಂತೆ ನ್ಯಾಯಾಲಯ ತಹಶೀಲ್ದಾರ್ ಅವರಿಗೆ ಸೂಚನೆ ನೀಡಿ ಕಾಲಾವಕಾಶ ಕಲ್ಪಿಸಿತ್ತು.

ವರದಿ ನೀಡುವಂತೆ ನ್ಯಾಯಾಲಯ ನಿರ್ದೇಶನ ನೀಡಿದ್ದರೂ ತಹಶೀಲ್ದಾರ್ ರಾಜೀವ್ ವರದಿ ಸಲ್ಲಿಸಿರಲಿಲ್ಲ. ಈ ಕಾರಣಕ್ಕಾಗಿ ದಂಡ ವಿಧಿಸಿ, ಜೂನ್ 23ರಂದು ಖುದ್ದು ಹಾಜರಾಗುವಂತೆ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಕೆ.ಆರ್.ಪುರ ಠಾಣಾಧಿಕಾರಿಗಳಿಗೆ ವಾರಂಟ್ ರವಾನಿಸಿದೆ.

'ತಹಶೀಲ್ದಾರ್‌ಗೆ ನ್ಯಾಯಾಲಯಹಲವು ಬಾರಿ ಸೂಕ್ತ ದಾಖಲೆಗಳೊಂದಿಗೆ ವರದಿ ಸಲಿಸುವಂತೆ ಸೂಚನೆ ನೀಡಿದರೂ ವರದಿ ಸಲಿಸಲಿಲ್ಲ. ಒತ್ತುವರಿದಾರರ ಜೊತೆ ತಹಶೀಲ್ದಾರ್ ಶಾಮಿಲಾಗಿ ಸರ್ಕಾರಿ ಜಮೀನು ಉಳಿಸಲು ಮನಸ್ಸು ಮಾಡುತ್ತಿಲ್ಲ' ಎಂದು ದೂರುದಾರ ಬೆಳತ್ತೂರು ಪರಮೇಶ್ ಆರೋಪಿಸಿದ್ದಾರೆ.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ–06–ಸಿಡಾನ್/2024–25

ತಾತ್ಕಾಲಿಕ ಆಧಾರದ ಮೇರೆಗೆ ಎಆರ್‌ಐಎಸ್ ಸೆಲ್ ಅಡಿಯಲ್ಲಿ **ಒಂದು ಯಂಗ್ ಪ್ರೊಫೆಷನಲ್–1** ತೊಡಗಿಸಿಕೊಳ್ಳಲು 28–05–2025 ರಂದು ಬೆಳಿಗ್ಗೆ 10.30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಕ್ರೋಢೀಕೃತ ಮಾಸಿಕ ಸಂಭಾವನೆ ರೂ. 30,000/– ಆಗಿರುತ್ತದೆ. ವಿವರವಾದ ಜಾಹೀರಾತು ಪರಿಶೀಲಿಸಲು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/– ಹಿರಿಯ ಆಡಳಿತಾಧಿಕಾರಿ

ಕೆಲ ಸ್ವಾಮೀಜಿಗಳಿಂದ ಸಂವಿಧಾನಕ್ಕೆ ಅಪಾಯ: ಎಲ್. ಹನುಮಂತಯ್ಯ

ಪ್ರಜಾವಾಣಿ ವಾರ್ತೆ

'ಕೋಮುವಾದ ಧಿಕ್ಕರಿಸಿ–ಸಂವಿಧಾನ ರಕ್ಷಿಸಿ ಜನಕ್ರಾಂತಿ ಸಮಾವೇಶ'ದಲ್ಲಿ ಬಿ.ಆರ್.ಅಂಬೇಡ್ಕರ್ ಮತ್ತು ಪ್ರೊ.ಬಿ.ಕೃಷ್ಣಪ್ಪ ಅವರ ಭಾವಚಿತ್ರಗಳಿಗೆ ಎಂ.ಗುರುಮೂರ್ತಿ, ಎಲ್.ಹನುಮಂತಯ್ಯ, ಸಿ.ಎಸ್.ಷಡಾಕ್ಷರಿ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳು ಪುಷ್ಪನಮನ ಸಲ್ಲಿಸಿದರು
ಪ್ರಜಾವಾಣಿ ಚಿತ್ರ

ಬೆಂಗಳೂರು: 'ಭಾರತವು ಜಾತ್ಯತೀತ ರಾಷ್ಟ್ರವಲ್ಲ. ಇದು ಹಿಂದೂಗಳ ರಾಷ್ಟ್ರ. ಹೀಗಾಗಿ ಜಾತ್ಯತೀತ ಎಂಬುದನ್ನು ಕಿತ್ತೊಗೆದು, ಭಾರತವನ್ನು ಹಿಂದೂರಾಷ್ಟ್ರ ಎಂದು ಘೋಷಿಸಬೇಕು ಎಂದು ಕೆಲ ಸ್ವಾಮೀಜಿಗಳು ಈಚೆಗೆ ನಡೆದ ಕುಂಭಮೇಳದಲ್ಲಿ ಒತ್ತಾಯಿಸಿದ್ದರು. ದೇಶದ ಸಂವಿಧಾನಕ್ಕೆ ಇದಕ್ಕಿಂತ ದೊಡ್ಡ ಅಪಾಯ ಬೇಕೆ' ಎಂದು ಸಾಹಿತಿ ಎಲ್.ಹನುಮಂತಯ್ಯ ಪ್ರಶ್ನಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ನಗರದಲ್ಲಿ ಗುರುವಾರ ಆಯೋಜಿಸಿದ್ದ 'ಕೋಮುವಾದ ಧಿಕ್ಕರಿಸಿ–ಸಂವಿಧಾನ ರಕ್ಷಿಸಿ ಜನಕ್ರಾಂತಿ ಸಮಾವೇಶ' ಉದ್ಘಾಟಿಸಿ ಅವರು ಮಾತನಾಡಿದರು.

'ತಮ್ಮದೇ ಸಂವಿಧಾನವನ್ನು ಸಿದ್ಧಪಡಿಸಿಟ್ಟುಕೊಂಡಿದ್ದೇವೆ. ಅದನ್ನು ಜಾರಿ ಮಾಡುವುದಷ್ಟೇ ಉಳಿದಿದೆ ಎಂದು ಆ ಸ್ವಾಮೀಜಿಗಳು ಕುಂಭಮೇಳದಲ್ಲಿ ಹೇಳಿದ್ದರು. ದೇಶಕ್ಕೆ ಮತ್ತು ಸಂವಿಧಾನಕ್ಕೆ ನಿಜವಾಗಿಯೂ ಅಪಾಯ ಇರುವುದು ಇಂತಹ ಸ್ವಾಮೀಜಿಗಳಿಂದ. ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕಿತ್ತು' ಎಂದು ಹೇಳಿದರು.

'ನಿಜವಾಗಿಯೂ ಈಗ ಸಂವಿಧಾನವನ್ನು ರಕ್ಷಿಸಬೇಕಾದ ತುರ್ತು ಪರಿಸ್ಥಿತಿ ಎದುರಾಗಿದೆ. ಅದಕ್ಕೆ ಅಪಾಯ ಎದುರಾಗಿರುವ ಬಗ್ಗೆ ಮತ್ತು ಯಾರಿಂದ ಅಪಾಯವಾಗುತ್ತಿದೆ ಎಂಬುದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ' ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ, 'ಹಿಂದೂರಾಷ್ಟ್ರ ರಕ್ಷಣೆ ಹೆಸರಿನಲ್ಲಿ ಮನುಧರ್ಮ ಸ್ಥಾಪನೆಗೆ ಹುನ್ನಾರ ನಡೆದಿದೆ. ಅದರ ಭಾಗವಾಗಿ ಕುಂಭಮೇಳದಲ್ಲಿ ಕೆಲ ಮಠಾಧೀಶರು ತಮ್ಮದೇ ಸಂವಿಧಾನದ ಪ್ರಸ್ತಾಪ ಮಾಡಿದ್ದಾರೆ. ಇದು ದೇಶದ್ರೋಹ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ. ಎಸ್. ಷಡಾಕ್ಷರಿ ಉಪಸ್ಥಿತರಿದ್ದರು.

ಮಹೇಶ ಜೋಶಿಗೆ ಕಪ್ಪುಬಾವುಟ ಪ್ರದರ್ಶಿಸಲು ನಿರ್ಧಾರ

ಮಂಡ್ಯ: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಅವರು ಮೇ 9ರಂದು ನಗರಕ್ಕೆ ಬರಲಿದ್ದು, ಆ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸಲು ಸಮಾನ ಮನಸ್ಕರ ವೇದಿಕೆ ನಿರ್ಧರಿಸಿದೆ.

'ಪ್ರಜಾವಾಣಿ'ಯಲ್ಲಿ 'ಸ್ಮರಣ ಸಂಚಿಕೆ ಬಿಡುಗಡೆಗೆ ಗ್ರಹಣ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾದ ಬೆನ್ನಲ್ಲೇ ಜೋಶಿ ಅವರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ಸಂಜೆ 4ಕ್ಕೆ 'ಬೆಲ್ಲದಾರತಿ' ಸ್ಮರಣ ಸಂಚಿಕೆ ಕುರಿತು ಸಮಾಲೋಚನಾ ಸಭೆ ನಡೆಸಲು ನಿರ್ಧರಿಸಿದ್ದರು. ಇದು ತಿಳಿಯುತ್ತಿದ್ದಂತೆ, ನಗರದ ಕರ್ನಾಟಕ ಸಂಘದಲ್ಲಿ ವೇದಿಕೆ ಮುಖಂಡರು ಗುರುವಾರ ಸಂಜೆ ಸಭೆ ನಡೆಸಿ, ಪ್ರತಿಭಟಿಸಲು ನಿರ್ಧರಿಸಿದ್ದಾರೆ.

ಹಿಂದಿನ ವರ್ಷ ಡಿ.20ರಿಂದ 22ರವರೆಗೆ ನಡೆದ 87ನೇ ನುಡಿಜಾತ್ರೆ ಮುಗಿಸಿಕೊಂಡು ಹೋದ ಜೋಶಿ ಅವರು ನಾಲ್ಕೂವರೆ ತಿಂಗಳ ನಂತರ ಜಿಲ್ಲೆಗೆ ಬರುತ್ತಿರುವುದು ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ಉಸ್ತುವಾರಿ ಸಚಿವರ ನೇತೃತ್ವದಲ್ಲಿ 'ಸಮ್ಮೇಳನದ ಲೆಕ್ಕ ಕೊಡುವ ಪತ್ರಿಕಾಗೋಷ್ಠಿಗೂ ಅವರು ಗೈರಾಗಿದ್ದರು.

'ಸಮ್ಮೇಳನಕ್ಕೆ ದುಡಿದ ಜಿಲ್ಲಾ ಕಸಾಪ ಸದಸ್ಯರು ಮತ್ತು ಕನ್ನಡ ಮನಸುಗಳಿಗೆ ಕೃತಜ್ಞತೆ ಸಲ್ಲಿಸಲು ಇದುವರೆಗೂ ಜಿಲ್ಲೆಗೆ ಬಂದಿಲ್ಲ' ಎಂದು ಆರೋಪಿಸಿ ಆಕ್ರೋಶ ವ್ಯಕ್ತವಾಗಿತ್ತು. ಸಮ್ಮೇಳನ ಮುಗಿದ ತಕ್ಷಣವೇ ಕಸಾಪ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಜೋಶಿ ವಜಾಗೊಳಿಸಿದ್ದರು. ಅದರ ವಿರುದ್ಧ ಸಮಿತಿಯವರು ತಡೆಯಾಜ್ಞೆ ತಂದಿದ್ದಾರೆ.

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಷೇರುದಾರರಿಗೆ ಸೂಚನೆ – ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿಗೆ ವರ್ಗಾಯಿಸುವ ಬಗ್ಗೆ

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿಗಳ ಪ್ರಾಧಿಕಾರ (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಹಿಂದಿರುಗಿಸುವುದು) ನಿಯಮ, 2016 ಆಗಿಂದಾಗ್ಗೆ ಬದಲಾವಣೆಯಾದ ಪ್ರಕಾರವಾಗಿ (" ಸದರಿ ನಿಯಮಗಳು) ಓದಿಕೊಂಡಂತೆ ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳಿಗೆ ಅನುಗುಣವಾಗಿ ಈ ಸೂಚನೆಯನ್ನು ಪ್ರಕಟಿಸಲಾಗಿದೆ.

ಈ ನಿಯಮಗಳು, ಇನ್ನಿತರ ವಿಷಯಗಳೊಂದಿಗೆ, ಸತತವಾಗಿ ಏಳು ವರ್ಷಗಳಿಗೆ ಕೇಂದ್ರ ಸರ್ಕಾರ ಸ್ಥಾಪಿಸಿದ ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣ ನಿಧಿಗೆ (ಐಇಪಿಎಫ್) ಲಾಭಾಂಶಗಳನ್ನು ಪಾವತಿಸದೆ ಅಥವಾ ಷೇರುದಾರರು ಪಡೆಯದೆ ಇರುವ ಎಲ್ಲಾ ರೀತಿಯ ಷೇರುಗಳಿಗೆ ಸಂಬಂಧಿಸಿದಂತೆ ವರ್ಗಾವಣೆಯನ್ನು ಒದಗಿಸುವುದು. ಅದರಂತೆ, ಸದರಿ ನಿಯಮದ ಅಡಿಯಲ್ಲಿ ಯಾರ ಷೇರುಗಳು ಐಇಪಿಎಫ್ ಡೀಮ್ಯಾಟ್ ಖಾತೆಗೆ 2025 ರ ಸೆಪ್ಟೆಂಬರ್ ತಿಂಗಳಲ್ಲಿ ವರ್ಗಾಯಿಸಲು ಅನ್ವಯಿಸುವಂತಹ ಸಂಬಂಧಿತ ಷೇರುದಾರರಿಗೆ ಸೂಚನೆ ನೀಡಿದೆ. ಕಂಪನಿಯು ಇಂತಹ ಷೇರುದಾರರ ಮತ್ತು ಐಇಪಿಎಫ್ ಡೀಮ್ಯಾಟ್ ಖಾತೆಗೆ ವರ್ಗಾಯಿಸಲು ನಿಶ್ಚಯಿಸಿರುವ ಷೇರುಗಳ ವಿವರಗಳನ್ನು ತನ್ನ ವೆಬ್‌ಸೈಟ್ @<https://www.timken.com/en-in/investors/statutory-compliances/> (ಐಇಪಿಎಫ್_ಎಫ್‌ವೈ 2017–18" ಕ್ಕೆ ವರ್ಗಾಯಿಸಬೇಕಾದ ಟಿಐಎಲ್ ಷೇರುಗಳು) ರಲ್ಲಿ ಅಪ್‌ಲೋಡ್ ಮಾಡಲಾಗಿದೆ. ಕಂಪನಿಯು ಸಂಬಂಧಿತ ಷೇರುದಾರರಿಗೆ ಅಗತ್ಯವಿರುವ ಕ್ರಮ ಕೈಗೊಳ್ಳಲು ಲಭ್ಯವಿರುವ ಇತ್ತೀಚಿನ ವಿಳಾಸಕ್ಕೆ ಪ್ರತ್ಯೇಕವಾದ ಸಂದೇಶವನ್ನು ರವಾನಿಸಿದೆ.

ಹಣಕಾಸು ವಾರ್ಷಿಕ 2017–18 ಕ್ಕೆ ಹಾಗೂ ಮುಂದಿನ ಸಾಲುಗಳಿಗೆ ಐಇಪಿಎಫ್‌ಗೆ ವರ್ಗಾಯಿಸದೆ ಉಳಿದಿರುವ ಷೇರುಗಳ ಬಗ್ಗೆ ಕಂಪನಿಯು ಘೋಷಿಸಿರುವ ಪಡೆಯದೆ ಉಳಿದ ಅಂತಿಮ ಲಾಭಾಂಶವನ್ನು ಪಡೆಯಲು ಅಂತಹ ಷೇರುದಾರರಿಗೆ ಕಂಪನಿ / ರಿಜಿಸ್ಟ್ರಾರ್ ಹಾಗೂ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗೆ ತಮ್ಮ ಮನವಿಯ ಅರ್ಜಿಯನ್ನು ಸಲ್ಲಿಸಲು ಸೂಚನೆ ನೀಡಲಾಗಿದೆ, ಅಂತಯೇ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಸಲಾಗುವುದಿಲ್ಲ. ತಾವುಗಳು ಗಮನಿಸಬೇಕಾದ ಅಂಶವೇನೆಂದರೆ ಮೇಲಿನ ನಿಗಧಿತ ದಿನದೊಳಗೆ ತಮಗೆ ಸಲ್ಲಬೇಕಾದ ಲಾಭಾಂಶಕ್ಕಾಗಿ 13 ಸೆಪ್ಟೆಂಬರ್ 2025 ರ ಒಳಗೆ ಅರ್ಜಿ ಸಲ್ಲಿಸಲು ವಿಫಲವಾದರೆ, ಕಂಪನಿಯು ಮುಂದೆ ಷೇರುದಾರರಿಗೆ ಯಾವುದೇ ಸೂಚನೆ ನೀಡದೆ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವುದಲ್ಲದೆ ಬೇರೆ ದಾರಿ ಇರುವುದಿಲ್ಲ. ಷೇರುದಾರರಿಗೆ ತಿಳಿಸುವುದೇನೆಂದರೆ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಯಿಸುವ ಉದ್ದೇಶ : ಕಂಪನಿಯು ತಾವು ಹೊಂದಿರುವ ಮೂಲ ಷೇರು ಪ್ರಮಾಣ ಪತ್ರ (ಗಳು)ದ ಬದಲಾಗಿ ಷೇರು ಪ್ರಮಾಣ ಪತ್ರ (ಗಳ)ದ ಪ್ರತಿಯನ್ನು ನೀಡುವುದು ಮತ್ತು ಇಂತಹ ಸಂದರ್ಭದಲ್ಲಿ, ಮೂಲ ಷೇರು ಪ್ರಮಾಣ ಪತ್ರ (ಗಳ)ದ ನೋಂದಾಯಿಸಲಾದ ತಮ್ಮ ಹೆಸರು ನಿಯಮಾನುಸಾರ ರದ್ದುಗೊಳ್ಳುತ್ತದೆ.

ಈ ಮೂಲಕ ಸೂಚಿಸುವುದೇನೇಂದರೆ ಐಇಪಿಎಫ್‌ಗೆ ವರ್ಗಾಯಿತಗೊಂಡ ಷೇರುಗಳು, ಯಾವುದೇ ಷೇರಿಗಳಿಗೆ ಅನ್ವಯಿಸುವ ಎಲ್ಲಾ ಸೌಲಭ್ಯಗಳು ಇದ್ದಲ್ಲಿ, ಇದನ್ನು ಒಳಗೊಂಡಂತೆ ಐಇಪಿಎಫ್ ಪ್ರಾಧಿಕಾರದಿಂದ ನಿಯಮದ ಅನುಸಾರ ಇವೆಲ್ಲವನ್ನು ಅನುಸರಿಸಿ ಅಂತಹ ಷೇರುಗಳನ್ನು ಪಡೆಯಬಹುದು. ಈ ವಿಷಯದ ಬಗ್ಗೆ ಸ್ಪಷ್ಟತೆಗಾಗಿ, ನಮ್ಮ ಆರ್‌ಟಿಎ, ಸಿಬಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ರಸ್ಸೆ ಕೋರ್ಟ್, 5ನೇ ಮಹಡಿ, 20, ಸರ್ ಆರ್ ಎನ್ ಮುಖರ್ಜಿ ರಸ್ತೆ, ಕೋಲ್ಕತಾ – 700001 ದೂರವಾಣಿ ಸಂಖ್ಯೆ 033: 4011 6700/6725, ಇ–ಮೇಲ್: rta@cbmsl.com, website: www.cbmsl.com ಮೂಲಕ ಇವರನ್ನು ದಯವಿಟ್ಟು ಸಂಪರ್ಕಿಸಿ.

ದಿನಾಂಕ: 8 ಮೇ, 2025

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/–
ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ–562110, ಬೆಂಗಳೂರು ಗ್ರಾಮಾಂತರ ಜಿಲ್ಲೆ .
ಸಂಖ್ಯೆ:ಬಿಐಎಪಿಎ/ಟಿಪಿ/ಎಂಐಎಸ್/ಅನಧಿಕೃತ /03/2020–21/25–26/216 ದಿನಾಂಕ: 29.04.2025

ಸಾರ್ವಜನಿಕ ಪ್ರಕಟಣೆ

ವಿಷಯ: ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅನಧಿಕೃತ ಅಭಿವೃದ್ಧಿಗಳನ್ನು ತಡೆಯುವ ಕುರಿತು.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4–ಎ(1) ರನ್ವಯ ಸರ್ಕಾರದ ಆದೇಶ ಸಂ. ಹೆಚ್‌ಯುಡಿ 142 ಎಂಎನ್‌ಎಲ್ 95 **ದಿನಾಂಕ : 12/01/1996** ರಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಸಿ) ರನ್ವಯ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 142 ಎಂಎನ್‌ಎಲ್ 95 **ದಿನಾಂಕ : 12/01/1996** ರಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಅದರಂತೆ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ದೇವನಹಳ್ಳಿ ತಾಲ್ಲೂಕಿನ, ಕಸಬಾ, ವಿಜಯಪುರ, ಕುಂದಾಣ ಮತ್ತು ಚನ್ನರಾಯಪಟ್ಟಣ ಹೋಬಳಿಗಳ **ಒಟ್ಟು 188 ಗ್ರಾಮಗಳು** ಮತ್ತು ಯಲಹಂಕ ತಾಲ್ಲೂಕು, ಜಾಲ ಹೋಬಳಿಯ 35 ಗ್ರಾಮಗಳು ಸೇರಿ ಪ್ರಸ್ತುತ ಈ ಪ್ರಾಧಿಕಾರವು **ಒಟ್ಟು 223 ಗ್ರಾಮಗಳನ್ನು** ಒಳಗೊಂಡಿದ್ದು, 430.70 ಚ.ಕಿ.ಮೀ ವಿಸ್ತೀರ್ಣದ ವ್ಯಾಪ್ತಿಯ ಪ್ರದೇಶವನ್ನು ಹೊಂದಿರುತ್ತದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005, ಬೆಂಗಳೂರು, **ದಿನಾಂಕ: 27/01/2009** ಹಾಗೂ ತಿದ್ದುಪಡಿ ಆದೇಶ **ದಿನಾಂಕ: 29/01/2009** ರಲ್ಲಿ ಮಹಾಯೋಜನೆ–2021 (ಅಂತಿಮ) ಅನ್ನು ಅನುಮೋದಿಸಲಾಗಿದ್ದು, ಸದರಿ ಮಹಾಯೋಜನೆಯಂತೆ ಭೂ ಉಪಯೋಗಗಳು ಹಾಗೂ ವಲಯ ನಿಯಮಾವಳಿಗಳು ಚಾಲ್ತಿಯಲ್ಲಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಅನುಸಾರ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕೈಗೊಳ್ಳಬೇಕಾಗಿದ್ದಲ್ಲಿ ಕೆ.ಟಿ.ಸಿ.ಪಿ ಕಾಯ್ದೆ 1961 ರಡಿಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನ ಖರೀದಿಸುವ ಮೊದಲು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಿಂದ ಕೆ.ಟಿ.ಸಿ.ಪಿ ಕಾಯ್ದೆಯಡಿ ಬಡಾವಣೆ ನಕ್ಷೆಗೆ ಅನುಮೋದನೆ ಪಡೆದಿರುವ ಹಾಗೂ ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಆಗಿರುವ ಮತ್ತು ವಸತಿ ಸಮುಚ್ಚಯ/ ವಾಣಿಜ್ಯ ಸಮುಚ್ಚಯ/ ಕೈಗಾರಿಕಾ / ವೇರ್‌ಹೌಸ್ ಕಟ್ಟಡಗಳಿಗೆ ನಕ್ಷೆ ಅನುಮೋದನೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ವಿನ್ಯಾಸ / ಬಡಾವಣೆಗಳಲ್ಲಿನ ನಿವೇಶನ ಮತ್ತು ವಸತಿ ಸಮುಚ್ಚಯ/ ವಾಣಿಜ್ಯ ಸಮುಚ್ಚಯ/ ಕೈಗಾರಿಕಾ /ವೇರ್‌ಹೌಸ್ ಕಟ್ಟಡಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅನಧಿಕೃತ ವಸತಿ ವಿನ್ಯಾಸ / ಬಡಾವಣೆಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ಸರ್ಕಾರದ ವತಿಯಿಂದ ದೊರೆಯಬಹುದಾದ ಸೌಲಭ್ಯಗಳು ಲಭ್ಯವಾಗುವುದಿಲ್ಲ. ಅಲ್ಲದೆ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ಸದರಿ ಮೂಲ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಲಾದ ಬಡಾವಣೆಯಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ವಸತಿ ಸಮುಚ್ಚಯ/ ವಾಣಿಜ್ಯ ಸಮುಚ್ಚಯ/ ಕೈಗಾರಿಕಾ ನಿವೇಶನಗಳಲ್ಲಿ ಕಟ್ಟಲಾದ ಕಟ್ಟಡಗಳನ್ನು ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಿದೆ. ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ / ತೊಂದರೆಗಳಿಗೆ ಈ ಪ್ರಾಧಿಕಾರವುಜವಾಬ್ದಾರಿಯಲ್ಲವೆಂದು ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಭೂ ಮಾಲೀಕರು / ಅಭಿವೃದ್ಧಿದಾರರು ಕೆ.ಟಿ.ಸಿ.ಪಿ ಕಾಯ್ದೆ, 1961 ಕಲಂ 17 ರಡಿಯಲ್ಲಿ ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೇ ಬಡಾವಣೆಯನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ವಿನ್ಯಾಸದ ಮಾಲೀಕರು/ ಅಭಿವೃದ್ಧಿದಾರರು/ ಜಿ.ಪಿ.ಎ. ದಾರರು / ಜಮೀನಿನ ಮಾಲೀಕರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಸಹಿ /–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಹಿ/–
ಅಧ್ಯಕ್ಷರು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ವಾ.ಸಾ.ಸಂ.ಇ/ವಾಪ್ರ/557/ಎಸ್‌ಎಸ್‌ಸಿ/2025–26

'ಬೇಡ ಜಂಗಮ ಹೆಸರಲ್ಲಿ ಮೀಸಲಾತಿ ಕಬಳಿಕೆ ಖಂಡನೀಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ–ವೀರಶೈವ ಸಮಾಜದ ಪೈಕಿ ಹೊನ್ನಾಳಿಯ ರೇಣುಕಾಚಾರ್ಯ ಮತ್ತು ಕೆಲವು ಮಠಾಧೀಶರು ಪರಿಶಿಷ್ಟ ಜಾತಿಗೆ ಲಭ್ಯ ಇರುವ ಮೀಸಲಾತಿಯನ್ನು ಬೇಡ ಜಂಗಮ, ಬುಡುಗ ಜಂಗಮ ಹೆಸರಲ್ಲಿ ಕಬಳಿಸಲು ಮುಂದಾಗಿದ್ದಾರೆ ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಆರೋಪಿಸಿದೆ.

ಈ ಸಮುದಾದವರು ಸಂಘವನ್ನು ರಚಿಸಿಕೊಂಡಿದ್ದು, 'ಹಾಲಿ ನಡೆಯುತ್ತಿರುವ ಪರಿಶಿಷ್ಟ ಜಾತಿ ಜನಗಣತಿಯಲ್ಲಿ ಬೇಡ ಜಂಗಮ, ಬುಡುಗ ಜಂಗಮ ಎಂದು ನಮೂದಿಸುವಂತೆ ವ್ಯಾಪಕ ಪ್ರಚಾರ ಮಾಡುತ್ತಿದ್ದಾರೆ. ಈಗಾಗಲೇ ರೇಣುಕಾಚಾರ್ಯರ ಅಣ್ಣ ದಾರುಕೇಶ್ವರಯ್ಯ ಮತ್ತು ಅವರ ಮಕ್ಕಳು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರದ ಸವಲತ್ತು ಕಬಳಿಸಿದ್ದಾರೆ' ಎಂದು ಪಕ್ಷದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

ತೆಲಂಗಾಣ, ಆಂಧ್ರ, ಮಹಾರಾಷ್ಟ್ರದ ಗಡಿಭಾಗದಲ್ಲಿ ಇರುವ ಬೇಡ ಜಂಗಮರು ಮತ್ತು ಬುಡುಗ ಜಂಗಮರು ಮಾಂಸಾಹಾರಿಗಳಾಗಿದ್ದು, ಕಣಿ ಹೇಳುವ, ಬೇಟೆಯಾಡುವ ಕಾಯಕದಲ್ಲಿ ತೊಡಗಿದ್ದಾರೆ. ಹಂದಿ ಮತ್ತಿತರ ಪ್ರಾಣಿಗಳ ಮಾಂಸ ತಿನ್ನುತ್ತಾರೆ. ಭಿಕ್ಷಾಟನೆ ಮಾಡುತ್ತಾ ಬುರ್ರಕಥಾ ನಾಟಕಗಳನ್ನು ಪ್ರದರ್ಶಿಸುತ್ತಾ ಜೀವನ ಸಾಗಿಸುವ ಈ ಸಮುದಾಯದ ಬಹುತೇಕರು ಅನಕ್ಷರಸ್ತರಾಗಿದ್ದಾರೆ. ಅವರ ಜನಸಂಖ್ಯೆ 2001ರ ಜನಗಣತಿ ಪ್ರಕಾರ ರಾಜ್ಯದಲ್ಲಿ 54,873 ಇತ್ತು. ಆದರೆ, ವೀರಶೈವ ಲಿಂಗಾಯತ ಸಮುದಾಯದವರು ಈ ಸಮುದಾಯದ ಹೆಸರಲ್ಲಿ ಜಾತಿ ಪ್ರಮಾಣಪತ್ರ ಪಡೆಯಲು ಆರಂಭಿಸಿದ ಮೇಲೆ ಜನಸಂಖ್ಯೆ ವಿಪರೀತ ಏರಿಕೆಯಾಗಿದೆ. 2011ರ ಜನಗಣತಿಯ ವೇಳೆಗೆ 1.17 ಲಕ್ಷ, 2014ರಲ್ಲಿ ಕಾಂತರಾಜ ಆಯೋಗದ ವರದಿಯಲ್ಲಿ 4.10 ಲಕ್ಷ ಜನಸಂಖ್ಯೆ ಇದೆ ಎಂದು ವಿವರಿಸಿದ್ದಾರೆ.

ಬೇಡ ಜಂಗಮ, ಬುಡುಗ ಜಂಗಮ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ತಡೆಗಟ್ಟಲು ಸರ್ಕಾರವು ಕ್ರಮ ಕೈಗೊಳ್ಳಬೇಕು. ಸುಳ್ಳು ಜಾತಿ ಪ್ರಮಾಣಪತ್ರವನ್ನು ರದ್ದುಗೊಳಿಸಿ, ಅಂಥವರಿಗೆ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಲಕ್ಷ್ಮೀನಾರಾಯಣಸ್ವಾಮಿ ಬ್ರಹ್ಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹೂಡಿ ಗ್ರಾಮದಲ್ಲಿ ಶ್ರೀಲಕ್ಷ್ಮೀನಾರಾಯಣ ಸ್ವಾಮಿಯ ಬ್ರಹ್ಮರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಮುಂಜಾನೆಯಿಂದಲೇ ಉತ್ಸವದಲ್ಲಿ ದೇವರಿಗೆ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ ನಡೆಯಿತು. ಬ್ರಹ್ಮ ರಥೋತ್ಸವ ಪ್ರಯುಕ್ತ ದೇವರಿಗೆ ಮತ್ತು ರಥಕ್ಕೆ ವಿವಿಧ ಹೂವಿನ ಅಲಂಕಾರ ಹಾಗೂ ಪೂಜಾ ಕೈಂಕರ್ಯಗಳು ನಡೆದವು.

ಹೂಡಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ವೀರಗಾಸೆ, ತಮಟೆ ,ಡೊಳ್ಳು ಕುಣಿತ, ಬೊಂಬೆ ಕುಣಿತ, ಮಂಗಳವಾದ್ಯ ತಂಡದ ನೃತ್ಯ ಪ್ರದರ್ಶನ ರಥೋತ್ಸವಕ್ಕೆ ಮೆರಗು ನೀಡಿದವು. ತಮ್ಮ ಕಷ್ಟಗಳು ಪರಿಹಾರ ಸೇರಿದಂತೆ ವಿವಿಧ ರೀತಿಯ ಇಷ್ಟಾರ್ಥ ಪ್ರಾಪ್ತಿಗಾಗಿ ಭಕ್ತರು ರಥಕ್ಕೆ ಬಾಳೆಹಣ್ಣು ಎಸೆಯುವ ಮೂಲಕ ತಮ್ಮ ಹರಕೆ ಈಡೇರಿಸಿಕೊಂಡರು. ಭಕ್ತರಿಗೆ ಪಾನಕ, ಮಜ್ಜಿಗೆ ಕೊಸಂಬರಿ ವಿತರಿಸಲಾಯಿತು.

ರಾಜಪಾಳ್ಯ, ಸಾದರಮಂಗಲ, ಕೊಡಿಗೆಹಳ್ಳಿ, ತಿಗಳರಪಾಳ್ಯ, ಸಿಂಗಯ್ಯನಪಾಳ್ಯ, ಗರುಡಚಾರಪಾಳ್ಯ ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತರು ಪಾಲ್ಗೊಂಡಿದ್ದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀನಿವಾಸ್ ರೆಡ್ಡಿ, ಹರಿಹರ ತಾಲೂಕಿನಎರೆಹಳ್ಳಿಯರೆಡ್ಡಿಗುರುಪೀಠದಶ್ರೀವೇಮಾನಾನಂದಾ ಸ್ವಾಮೀಜಿ, ಶಾಸಕಿ ಮಂಜುಳಾ ಲಿಂಬಾವಳಿ, ಮುಖಂಡರಾದ ಎಚ್.ವಿ.ಮಂಜುನಾಥ್, ಹೆಚ್.ಎಸ್.ಕಬಡ್ಡಿ ಪಿಳ್ಳಪ್ಪ, ಬಿ.ಎನ್. ನಟರಾಜ್, ಎಚ್.ಎಸ್.ಮಂಜುನಾಥ್ ಭಾಗವಹಿಸಿದ್ದರು.

ಹೂಡಿಯಲ್ಲಿ ಶ್ರೀಲಕ್ಷ್ಮೀನಾರಾಯಣಸ್ವಾಮಿಯ ಬ್ರಹ್ಮರಥೋತ್ಸವ ನಡೆಯಿತು

70 ಕೆರೆಗಳಿಗೆ ಸಂಸ್ಕರಿತ ನೀರು

ವೃಷಭಾವತಿ ಏತ ನೀರಾವರಿ ಯೋಜನೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಚಾಲನೆ

ಪ್ರಜಾವಾಣಿ ವಾರ್ತೆ

ವೃಷಭಾವತಿ ಏತ ನೀರಾವರಿ ಯೋಜನೆಗೆ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು. ಕೃಷ್ಣಬೈರೇಗೌಡ, ಕೆ.ಎಚ್‌.ಮುನಿಯಪ್ಪ, ಎನ್‌. ಶ್ರೀನಿವಾಸ್‌, ವಜ್ರಘಟ್ಟ ನಾಗರಾಜು, ಸಿ.ಆರ್‌.ಗೌಡ, ಸಿದ್ದಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು

ಬೆಂಗಳೂರು/ ನೆಲಮಂಗಲ: ನಗರ, ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಯ 70 ಕೆರೆಗಳನ್ನು ತುಂಬಿಸುವ ವೃಷಭಾವತಿ ಏತ ನೀರಾವರಿ ಯೋಜನೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಚಾಲನೆ ನೀಡಿದರು.

ನೆಲಮಂಗಲ ತಾಲ್ಲೂಕಿನ ಕಣೇಗೌಡನಹಳ್ಳಿಯ ಕೆರೆ ಬಳಿ ವೃಷಭಾವತಿ ಕಣಿವೆಯಿಂದ ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ತುಂಬಿಸುವ ವೃಷಭಾವತಿ ಏತ ನೀರಾವರಿ ಯೋಜನೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

‘ವೃಷಭಾವತಿಯಿಂದ ಕೊಳಚೆ ನೀರು ನೀಡುತ್ತಿಲ್ಲ. ನಾಯಂಡಹಳ್ಳಿ ಬಳಿ ಶುದ್ಧೀಕರಣ ಮಾಡಿದ ನಂತರ ನೆಲಮಂಗಲ ತಾಲ್ಲೂಕಿನ ಕೆರೆಗಳಿಗೆ ಹರಿಸಲಾಗುತ್ತದೆ. ಕೆರೆಯಲ್ಲಿಯೂ ಸಹ ಭೂಮಿಗೆ ಇಂಗುವಾಗಲೂ ನೀರು ಶುದ್ಧವಾಗುತ್ತದೆ. ಶುದ್ಧೀಕರಿಸಿ ನೀಡುತ್ತಿರುವ ನೀರನ್ನು ಕುಡಿಯಲು ಆಗುವುದಿಲ್ಲ. ರೈತರ ಬದುಕನ್ನು ಹಸನು ಮಾಡುವುದೇ ನಮ್ಮ ಸಂಕಲ್ಪ. ರೈತರ ಬದುಕಿಗೆ ಆಧಾರವಾಗಿದ್ದೇವೆ’ ಎಂದು ಹೇಳಿದರು.

‘ನಮಗೆ ನೀರಿನ ಬೆಲೆ ಅರ್ಥವಾಗಬೇಕು ಎಂದರೆ ಕೋಲಾರ, ಚಿಕ್ಕಬಳ್ಳಾಪುರಕ್ಕೆ ಹೋಗಿ ನೋಡಬೇಕು. ಆದರೂ ಅವರು ರೇಷ್ಮೆ, ಹಾಲು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಈಗ ತರಕಾರಿ ಬೆಳೆಯುತ್ತಿದ್ದಾರೆ. ದೇವನಹಳ್ಳಿ ಭಾಗದಲ್ಲಿ ಈ ಹಿಂದೆ ದ್ರಾಕ್ಷಿ ಬೆಳೆಯುತ್ತಿದ್ದರು. ರೇಷ್ಮೆಗೂ ಉತ್ತಮ ಬೆಲೆ ಬಂದಿದೆ. ಹೂಗಳನ್ನು ಬೆಳೆದು ದೇವನಹಳ್ಳಿ ವಿಮಾನ ನಿಲ್ದಾಣದ ಮೂಲಕ ರಫ್ತು ಮಾಡುತ್ತಿದ್ದಾರೆ’ ಎಂದರು.

‘ಎತ್ತಿನಹೊಳೆಯಿಂದ ಬೆಂಗಳೂರು ಗ್ರಾಮಾಂತರ ಭಾಗಕ್ಕೆ ಶೀಘ್ರವೇ ಕುಡಿಯುವ ನೀರು ನೀಡಲಾಗುತ್ತದೆ. ಆ ನೀರಿನಿಂದ ಕೆರೆಗಳನ್ನು ತುಂಬಿಸಿದಾಗ ಅಂತರ್ಜಲವು ಸಹ ಹೆಚ್ಚಳವಾಗಲಿದೆ’ ಎಂದು ಜಲಸಂಪನ್ಮೂಲ ಸಚಿವರೂ ಆದ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ನೆಲಮಂಗಲ ಶಾಸಕ ಶ್ರೀನಿವಾಸ್ ಅವರು ನೆಲಮಂಗಲಕ್ಕೆ ಮೆಟ್ರೊ ಬರಬೇಕು, ಒಳ ಚರಂಡಿ ವ್ಯವಸ್ಥೆ ಬರಬೇಕು, ಅಂತರ್ಜಲ ಹೆಚ್ಚಳವಾಗಬೇಕು, ರೈತರು ಮತ್ತು ಜನಸಾಮಾನ್ಯರ ಬದುಕು ಹಸನಾಗಬೇಕು ಎಂದು ಕೆಲಸ ಮಾಡುತ್ತಿರುವ ವ್ಯಕ್ತಿ. ಇಡೀ ಸರ್ಕಾರವೇ ಅವರ ಪರವಾಗಿ ನಿಂತಿದೆ’ ಎಂದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಿ, ‘ಬಿಜೆಪಿ ಸರ್ಕಾರದಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾಗಿದ್ದ ಜೆ.ಸಿ. ಮಾಧುಸ್ವಾಮಿ, ಶಾಸಕ ಎಸ್‌.ಆರ್‌. ವಿಶ್ವನಾಥ್ ಅವರೇ ವೃಷಭಾವತಿ ಕಣಿವೆ ಯೋಜನೆಯನ್ನು ಉತ್ತಮ ನೀರಾವರಿ ಯೋಜನೆ ಎಂದು ಒಪ್ಪಿದ್ದಾರೆ. ಕೇಂದ್ರ ನಿರಾವರಿ ಇಲಾಖೆ ಕಾರ್ಯದರ್ಶಿ ಯೋಜನೆಯನ್ನು ಚಿಕ್ಕಬಳ್ಳಾಪುರದಲ್ಲಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿ, ಕರ್ನಾಟಕ ಮಾದರಿ ದೇಶದೆಲ್ಲೆಡೆ ವಿಸ್ತರಿಸುವುದಾಗಿ ತಿಳಿಸಿದ್ದಾರೆ. ಆದರೆ ಸ್ಥಳೀಯ ಬಿಜೆಪಿ ನಾಯಕರು ಮಾತ್ರ ವಿಷಪ್ರಾಶನ ಮಾಡುತ್ತಿದ್ದಾರೆ’ ಎಂದು ದೂರಿದರು.

ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ, ಶಾಸಕ ಎನ್.ಶ್ರೀನಿವಾಸ್, ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್.ಗಣೇಶ್, ಉಪಾಧ್ಯಕ್ಷ ಆನಂದ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿ.ಆರ್.ಗೌಡ, ತಾಲ್ಲೂಕು ಸಮಿತಿ ಅಧ್ಯಕ್ಷ ವಜ್ರಘಟ್ಟ ನಾಗರಾಜು, ಮುಖಂಡ ಎಂ.ಕೆ.ನಾಗರಾಜು, ಸಿ.ಎಂ.ಗೌಡ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಏತ ನೀರಾವರಿ ಯೋಜನೆಯಿಂದ 240 ಎಂಎಲ್‌ಡಿ ನೀರು
- ನಗರ, ಗ್ರಾಮಾಂತರ, ತುಮಕೂರು ಜಿಲ್ಲೆಯ 70 ಕೆರೆಗಳಿಗೆ ನೀರು
- ಎತ್ತಿನಹೊಳೆಯಿಂದ ಗ್ರಾಮಾಂತರಕ್ಕೆ ಕುಡಿಯುವ ನೀರು

ರಾಜ್ಯದ ನಾಲ್ಕು ಕಡೆ ಸ್ವರಕ್ಷಣೆ ತಾಲೀಮು ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಾಲ್ಕು ಸ್ಥಳಗಳಲ್ಲಿ ಮೇ 9ರಿಂದ 12ರವರೆಗೆ ನಾಗರಿಕರ ಸ್ವರಕ್ಷಣೆ ತಾಲೀಮು ನಡೆಸಲು ನಿರ್ಧರಿಸಲಾಗಿದೆ ಎಂದು ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆಯ ಮೂಲಗಳು ತಿಳಿಸಿವೆ.

ಮೇ 9ರಂದು ರಾಯಚೂರು, 10ರಂದು ಮೈಸೂರು, 11ರಂದು ಮಂಡ್ಯ ಹಾಗೂ 12ರಂದು ಕಾರವಾರದಲ್ಲಿ ಸ್ವರಕ್ಷಣೆ ತಾಲೀಮು ನಡೆಸಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕೇಂದ್ರ ಗೃಹ ಇಲಾಖೆ ಸೂಚನೆ ಮೇರೆಗೆ ಬೆಂಗಳೂರಿನಲ್ಲಿ ಬುಧವಾರ ಸ್ವರಕ್ಷಣೆಯ ಅಣಕು ಕಾರ್ಯಾಚರಣೆ ನಡೆಸಲಾಗಿತ್ತು. ತಾಲೀಮು ಯಶಸ್ವಿಗೊಂಡಿತ್ತು. ನೂರಾರು ಸಾರ್ವಜನಿಕರು ಕಾರ್ಯಾಚರಣೆ ವೀಕ್ಷಣೆ ಮಾಡಿದ್ದರು ಎಂದೂ ಅವರು ತಿಳಿಸಿದರು.

ಭಾರತ ಹಾಗೂ ಪಾಕಿಸ್ತಾನದ ಮಧ್ಯೆ ಸಂಘರ್ಷ ಮುಂದುವರೆದಿದ್ದು, ಬೇರೆ ಬೇರೆ ಸ್ಥಳಗಳ ಮೇಲೆ ವಾಯು ದಾಳಿ ನಡೆದರೆ ಸ್ವರಕ್ಷಣೆ ಮಾಡಿಕೊಳ್ಳುವುದು ಹೇಗೆಂದು ನಾಗರಿಕರಿಗೆ ತಿಳಿಸಲಾಗುತ್ತಿದೆ. ಇನ್ನೂ ನಾಲ್ಕು ಕಡೆ ತಾಲೀಮು ನಡೆಯಲಿದೆ. ಸದ್ಯ ನಿರ್ಧಾರ ಮಾಡಿರುವ ದಿನದಂದೇ ತಾಲೀಮು ನಡೆಯುವ ಸಾಧ್ಯತೆ ಇದೆ. ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆ ಸಿಬ್ಬಂದಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್‌), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್‌), ಗೃಹರಕ್ಷದಳ, ಎನ್‌ಸಿಸಿ, ಎನ್‌ಎಸ್‌ಎಸ್‌, ಸ್ಕೌಟ್ಸ್‌ ಆ್ಯಂಡ್‌ ಗೈಡ್ಸ್‌, ರೆಡ್‌ಕ್ರಾಸ್‌, ಪೊಲೀಸ್‌ ಸಿಬ್ಬಂದಿ ಪಾಲ್ಗೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

ಸಂಚಾರ ಸಂಪರ್ಕ ದಿನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಂಚಾರ ಪೊಲೀಸ್ ಇಲಾಖೆಯ ಪಶ್ಚಿಮ ವಿಭಾಗದಿಂದ ಮೇ 10ರಂದು ಸಂಚಾರ ಸಂಪರ್ಕ ದಿನ ಆಯೋಜಿಸಲಾಗಿದೆ.

ಮಾಗಡಿ ಮುಖ್ಯರಸ್ತೆಯ ಕೊಟ್ಟಿಗೆಪಾಳ್ಯದ ರಾಷ್ಟ್ರೀಯ ಯುನಾನಿ ವೈದ್ಯಕೀಯ ಸಂಸ್ಥೆಯ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 11ಕ್ಕೆ ಸಂಚಾರ ಸಂಪರ್ಕ ದಿನ ನಡೆಯಲಿದೆ.

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್, ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಶಿವ ಪ್ರಕಾಶ್ ದೇವರಾಜ್ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದಿರಾನಗರ ಬ್ಯಾಸ್ಕೆಟ್ ಬಾಲ್ ಕೋರ್ಟ್ ಮೇಲ್ದರ್ಜೆಗೆ • ಒಳಾಂಗಣ ಕ್ರೀಡಾಂಗಣ ಬಳಕೆಗೆ ಅವಕಾಶ ಸಿಗಲ್ಲ: ಆರೋಪ

ನವೀಕರಣಕ್ಕೆ ಭೂಮಿಪೂಜೆ: ಸ್ಥಳೀಯರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರ ಬ್ಯಾಸ್ಕೆಟ್ ಬಾಲ್ ಕೋರ್ಟ್ ಅನ್ನು ಮೇಲ್ದರ್ಜೇಗೇರಿಸುವ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿತು. ಯೋಜನೆ ವಿರೋಧಿಸುತ್ತಿದ್ದ ತಮ್ಮನ್ನು ಕಾರ್ಯಕ್ರಮ ಸ್ಥಳಕ್ಕೆ ಬಾರದಂತೆ ತಡೆದು ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಇಂದಿರಾನಗರದಲ್ಲಿರುವ ಬಿಬಿಎಂಪಿ ಆಟದ ಮೈದಾನದ ಒಂದು ಬದಿಯಲ್ಲಿ ಬ್ಯಾಸ್ಕೆಟ್ ಬಾಲ್ ಕೋರ್ಟ್ ಇದೆ. ಇದನ್ನು ಒಳಾಂಗಣ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣವಾಗಿ ಮಾಡಬೇಕು ಎಂದು ಇಂದಿರಾನಗರ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಶನ್ ಒಂದು ದಶಕದಿಂದ ಪ್ರಯತ್ನಿಸುತ್ತಾ ಬಂದಿತ್ತು.

'ಇಂದಿರಾನಗರ ಸ್ಟೇಜ್–1, 2, ಲಕ್ಷ್ಮೀಪುರ, ಬಿನ್ನಮಂಗಲ ಸಹಿತ ಸುತ್ತಮುತ್ತಲ ನಿವಾಸಿಗಳಿಗೆ ಇದೊಂದೇ ಆಟದ ಮೈದಾನ ಇರುವುದು. ಇಲ್ಲಿ ಶೇ 30ರಷ್ಟು ಭಾಗವನ್ನು ಬ್ಯಾಸ್ಕೆಟ್ ಬಾಲ್ ಬಳಸಲಾಗುತ್ತಿದೆ. ಕ್ರೀಡಾಂಗಣದ ಉಳಿದ ಜಾಗವು ಬೇರೆ ಕ್ರೀಡೆಗಳಿಗೆ ಬಳಕೆಯಾಗುತ್ತಿದೆ. ಒಳಾಂಗಣ ಕ್ರೀಡಾಂಗಣ ನಿರ್ಮಿಸಿದರೆ ಆನಂತರ ಸ್ಥಳೀಯರ ಬಳಕೆಗೆ ಸಿಗುವುದಿಲ್ಲ' ಎಂದು ಸ್ಥಳೀಯರು ವಿರೋಧಿಸುತ್ತಾ ಬಂದಿದ್ದರು.

ಇಂದಿರಾನಗರ ಬ್ಯಾಸ್ಕೆಟ್ ಬಾಲ್ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡುವಾಗ ಸ್ಥಳೀಯರು ತೆರಳದಂತೆ ಪೊಲೀಸ್ ಬಂದೋಬಸ್ತು ಮಾಡಲಾಗಿತ್ತು

ಇದಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 2016ರಲ್ಲಿ ಸಭೆ ನಡೆದಿತ್ತು. ಸ್ಥಳೀಯರ ವಿರೋಧ ವ್ಯಕ್ತವಾಗಿರುವುದರಿಂದ ಈ ಕಡತವನ್ನು ಸರ್ಕಾರದ ಹಂತದಲ್ಲಿ ಮುಕ್ತಾಯ ಗೊಳಿಸಲಾಗಿದೆ ಎಂದು ಆಗ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿಯವರು ಬಿಬಿಎಂಪಿಗೆ ಪತ್ರ ಬರೆದಿದ್ದರು.

'ಇದೀಗ ಬ್ಯಾಸ್ಕೆಟ್‌ಬಾಲ್ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಅಸೋಸಿಯೇಶನ್ ಮತ್ತೆ ಮುಂದಾಗಿದ್ದು, ಪೊಲೀಸ್ ಬಿಗಿ ಬಂದೋಬಸ್ತ್‌ನಲ್ಲಿ ಶಂಕುಸ್ಥಾಪನೆ ಮಾಡಲಾಗಿದೆ. ನಾವು ಸುಮಾರು 60 ಮಂದಿ ಸ್ಥಳೀಯರು ಅಲ್ಲಿಗೆ ತೆರಳಲು ಪ್ರಯತ್ನಿಸಿದರೂ ಪೊಲೀಸರು ಬಿಟ್ಟಿಲ್ಲ. ದಲಿತ ಸಂಘರ್ಷ ಸಮಿತಿಯವರೂ ಅಲ್ಲಿಗೆ ಹೋಗಲು ಮುಂದಾದಾಗಲೂ ತಡೆದಿದ್ದಾರೆ' ಎಂದು 'ಐ ಚೇಂಜ್ ಇಂದಿರಾನಗರ' ಸಂಸ್ಥಾಪಕಿ ಸ್ನೇಹಾ ನಂದಿಹಾಳ್ ಆರೋಪಿಸಿದ್ದಾರೆ.

'ಒಳಾಂಗಣ ಕ್ರೀಡಾಂಗಣ ನಿರ್ಮಾಣವಾದರೆ ಅದು ಸ್ಥಳೀಯರ ಬಳಕೆಗೆ ಸಿಗುವುದಿಲ್ಲ. ಅಲ್ಲದೇ ವಿಸ್ತೃತ ಯೋಜನಾ ವರದಿಯಲ್ಲಿ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣ ನಿರ್ಮಾಣದ ಜಾಗವನ್ನು ಗುರುತಿಸಿದ್ದು, ಕ್ರೀಡಾಂಗಣದ ಉಳಿದ ಜಾಗವನ್ನು ಪಾರ್ಕಿಂಗ್ ಜಾಗ ಎಂದು ತೋರಿಸಲಾಗಿದೆ. ಇದರಿಂದ ಸ್ಥಳೀಯರಿಗೆ ಕ್ರೀಡಾಂಗಣವೇ ಇಲ್ಲದಂತಾಗಲಿದೆ' ಎಂದು ಅವರು ತಿಳಿಸಿದರು.

ಸ್ಥಳೀಯರಿಗೆ ತೊಂದರೆ ಇಲ್ಲ: 'ಇಂದಿರಾನಗರ ಬಿಬಿಎಂಪಿ ಮೈದಾನದಲ್ಲಿ ಈಗಾಗಲೇ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣ ಇದೆ. ಅದಕ್ಕೆ ಆಟಗಾರರಿಗೆ ಬಟ್ಟೆ ಬದಲಾಯಿಸುವ ಕೊಠಡಿಗಳು ಮತ್ತು ಚಾವಣಿಯಂತಹ ಕೆಲವು ಸೌಲಭ್ಯ ಒದಗಿಸುವ ಕಾರ್ಯಕ್ಕೆ ಮುಂದಾಗಿದ್ದೇವೆ. ಸ್ಥಳೀಯರಿಗೆ ಈ ಮೈದಾನ ಮುಂದೆಯೂ ದೊರೆಯಲಿದೆ. ಯಾರಿಗೂ ಪ್ರವೇಶ ನಿರಾಕರಣೆ ಇರುವುದಿಲ್ಲ. ಸ್ಥಳೀಯರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ' ಎಂದು ಬಿಬಿಎಂಪಿ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಆರ್. ಪ್ರತಿಕ್ರಿಯಿಸಿದ್ದಾರೆ.

'ಮಾಹಿತಿ ಕೊರತೆಯಿಂದ ವಿರೋಧ'

ಗೋವಿಂದರಾಜ್

'₹ 4.5 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣದ ನವೀಕರಣ ಕಾಮಗಾರಿಯನ್ನು ಬಿಬಿಎಂಪಿ ಕೈಗೆತ್ತಿಕೊಂಡಿದೆ. ಬ್ಯಾಸ್ಕೆಟ್ ಬಾಲ್ ಅಸೋಸಿಯೇಷನ್ ಕೋರಿಕೆಯನ್ನು ಮಾತ್ರ ಸಲ್ಲಿಸಿತ್ತು. ಕ್ರೀಡಾಂಗಣಕ್ಕೆ ಯಾರನ್ನೂ ನಿರ್ಬಂಧಿಸುವುದಿಲ್ಲ. ಸ್ಥಳೀಯ ಮಕ್ಕಳಿಗೆ ಅತ್ಯುತ್ತಮ ಗುಣಮಟ್ಟದ ತರಬೇತಿ ನೀಡುವುದಕ್ಕಾಗಿಯೇ ಯೋಜನೆ ರೂಪಿಸಲಾಗಿದೆ. ಮಾಹಿತಿ ಕೊರತೆಯಿಂದ ಕೆಲವರು ಸ್ಥಳೀಯರ ಹೆಸರಿನಲ್ಲಿ ಕಾಮಗಾರಿಗೆ ವಿರೋಧ ವ್ಯಕ್ತಪಡಿಸಿದ್ದಾರೆ' ಎಂದು ಇಂದಿರಾನಗರ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಶನ್ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮಾವು ಮೇಳದ ಜತೆಗೆ ಪುಸ್ತಕ ಮೇಳ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರುಡಾ ಮಾಲ್‌ನಲ್ಲಿ 'ಬೇಸಿಗೆ ಮಾವು ಮೇಳ ಮತ್ತು ಪುಸ್ತಕೋತ್ಸವ' ಗುರುವಾರ ಆರಂಭಗೊಂಡಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಟ ಡಾಲಿ ಧನಂಜಯ್ ಮಾತನಾಡಿ, 'ಮಕ್ಕಳಿಂದ ಹಿರಿಯವರೆಗೆ ಅಕ್ಷರ ಜ್ಞಾನ ಸಂಪಾದನೆಗೆ 1 ಲಕ್ಷ ಪುಸ್ತಕಗಳು ಇಲ್ಲಿ ಲಭ್ಯವಿವೆ. ನೇರವಾಗಿ ಮಾವಿನ ಹಣ್ಣು ಮಾರಾಟ ಮತ್ತು ಪ್ರದರ್ಶನಕ್ಕೆ ರೈತರಿಗೆ ಉತ್ತಮ ವೇದಿಕೆ ಕಲ್ಪಿಸಲಾಗಿದೆ. ಕನ್ನಡ ನಾಡು, ದೇಶಕ್ಕಾಗಿ ಪ್ರತಿಯೊಬ್ಬರು ಗಟ್ಟಿಯಾಗಿ ನಿಲ್ಲಬೇಕು' ಎಂದರು.

ಶಾಸಕ ಉದಯ್ ಗರುಡಾಚಾರ್ ಮಾತನಾಡಿ, 'ದೇಶದಲ್ಲಿ ರೈತ ಮತ್ತು ಸೈನಿಕ ಎರಡು ಕಣ್ಣು ಇದ್ದಂತೆ. ನಮ್ಮ ಮಾವಿನ ಮೇಳದಿಂದ ರೈತರಿಗೆ ಉತ್ತಮ ಬೆಂಬಲ ಬೆಲೆ ಸಿಗಲಿದೆ. ಸಾರ್ವಜನಿಕರಿಗೆ ಉತ್ತಮ ಮಾವಿನ ಹಣ್ಣು ಸವಿಯುವ ಅವಕಾಶ ಸಿಗುತ್ತದೆ. ಅಕ್ಷರ ಜ್ಞಾನ ಯಾವತ್ತೂ ಕಡಿಮೆಯಾಗಬಾರದು. ಪ್ರತಿದಿನ ಪುಸ್ತಕ ಓದುವುದರಿಂದ ಜ್ಞಾನ ಸಂಪಾದನೆ ಹೆಚ್ಚಾಗುತ್ತದೆ' ಎಂದು ಹೇಳಿದರು.

ರೈತರಿಂದ ನೇರವಾಗಿ ಗುಣಮಟ್ಟದ ಮಾವುಗಳನ್ನು ಖರೀದಿಸಲು ಉಜ್ವಲ ಅವಕಾಶ ಕಲ್ಪಿಸಲಾಗಿದೆ. ಮಾವು ಮೇಳವು ಮೇ 8ರಿಂದ 11ರವರೆಗೆ ಹಾಗೂ ಪುಸ್ತಕ ಮೇಳವು ಮೇ 8ರಿಂದ 18ರವರೆಗೆ ಇರಲಿದೆ.

ಗ್ರಾ. ಪಂ. ಅಧ್ಯಕ್ಷರಾಗಿ ಮಹೇಶ್ ಆಯ್ಕೆ

ಕೆಂಗೇರಿ: ರಾಮೋಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಮಹೇಶ್ ಆಯ್ಕೆಯಾದರು. ಪ್ರಭು ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಡೆಯಿತು. 33 ಸದಸ್ಯ ಬಲದ ಪಂಚಾಯಿತಿ ಅಧ್ಯಕ್ಷರ ಚುನಾವಣೆಗೆ ಯಾರೊಬ್ಬರೂ ಉಮೇದುವಾರಿಕೆ ಸಲ್ಲಿಸದ ಹಿನ್ನೆಲೆಯಲ್ಲಿ ಮಹೇಶ್ ಅವರು ಅವಿರೋಧವಾಗಿ ಆಯ್ಕೆಗೊಂಡರು. ಎಇಇ ವಿಜಯೇಂದ್ರ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಮುಖಂಡರಾದ ವೇಣುಗೋಪಾಲ್, ಚೇತನ್, ಮೋಹನ್, ನಾಗರಾಜ್, ದೇವರಾಜ್, ರವಿಕುಮಾರ್, ಮಂಜುನಾಥ್, ಸುಶೀಲಾ ನಾಗರಾಜ್ ಉಪಸ್ಥಿತರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATION SUCCESS ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

Our client (**"Client"**) is desirous of entering into a development agreement with respect to the properties described in the Schedule hereunder with the owners **("Land Owners")**Any person/s, firms, societies, institutions (corporate or otherwise) claiming to have any right, title, interest, benefit, claim or demand in, or to, the Schedule Property and/or any part thereof, by way of sale, agreement, exchange, gift, grant, lease, tenancy, license, assignment, mortgage, charge, lien, trust, family arrangement/ settlement, encumbrance, inheritance, bequest, easement, possession, maintenance, development rights, order/decree/judgment of any Court/Statutory Authority, agreement, understanding or otherwise howsoever, to the Schedule Property is required to intimate the same in writing together with true copies of all documentary proof in support thereof, to the undersigned, at the address given below, within Fourteen (14) days from the date of publication of this notice, failing which, our clients shall proceed ahead to enter into the development agreement in connection with the Schedule Property and no further claims in respect of the Schedule Property would be considered any time thereafter.

SCHEDULE PROPERTY

ALL THAT PIECE AND PARCEL of the below detailed land parcels, all situated at Vaderahalli Village, Bidarahalli Hobli, Bangalore East Taluk, Bangalore Urban District, Karnataka, and bounded by :

SL No.	Survey No.	Land Area	Boundaries (East: E, West: W, North: N & South: S)
1	45/1	18.12 Guntas including 01.04 Guntas of Kharab land.	E: Road (Adur Village Boundary) W : Land Belongs to CM Habi bulla Khan N: Land Belongs to S Muniyappa son of Savarappa S: Remaining Portion of Same Land in Sy 45/1
2	45/2	38 Guntas including 02.08 Guntas of Kharab land.	E: Road (Adur Village Boundary) W: Land Belongs to CM Habi bulla Khan N: SY No 46 belongs Muniyappa S: Same No 45/2 Rajappa Land
3	45/3	19.04 Guntas including 01.04 Guntas of Kharab land.	E: Road (Adur Village Boundary) W: Land Belongs to CM Habi bulla Khan N: Remaining Portion of Same Land in Sy 45/1 S: Land in SY No 45/2 Belongs to Rajappa Son of Savarappa
4	46/1	38 Guntas including 02.08 Guntas of Kharab land.	E: Road (Adur Village Boundary) W: Land Belongs to CM Habi bulla Khan N: Same SY 46 belongs to Krishnappa S: Sy no 45 belongs to venkateshappa present Chandrappa/ Lohith
5	46/2	38 Guntas including 02.08 Guntas of Kharab land.	E: Road (Adur Village Boundary) W: Land Belongs to CM Habi bulla Khan N: Same SY 46 belongs to Krishnappa S: Sy no 45 belongs to venkateshappa present Chandrappa/ Lohith
6	47/1	14.08 Guntas including 01 Guntas of Kharab land.	E: Road (Adur Village boundary) W: SY No 29 Land N: SY No 48 Land S: Same Land Hissa Sy 47 belongs to RH Manjunath
7	47/2	14.04 Guntas including 01 Guntas of Kharab land.	E: Road (Adur Village boundary) W: SY No 29 Land N: Same Land Hissa Sy 47 belongs to Jayaram H S: Same Land Sy 47 hissa Belongs to Jayamma and Praveena R
8	47/3	14.04 Guntas including 01 Guntas of Kharab land.	E: Road (Adur Village boundary) W: Sy no 29 Land N: Sy no 47/2 Belongs RH Manjunath S: Sy no 47/4 belongs to Lokesh
9	47/4	16 Guntas including 01 Guntas of Kharab land.	E: Road (Adur Village Boundary) W: SY no 29 Land N: Same Land Sy 47 hissa Belongs to Jayamma and Praveena R S: Same Land Sy 47 hissa Belongs to janti Jayaram H & Manjunath RH road
10	47/5	06 Guntas, including 01 gunta of Kharab land.	E: Road (Adur Village Boundary) W: SY no 29 Land N: Same Land Sy 47 hissa Belongs to Lokesh H S: Same Land Sy 47 hissa Belongs to Ravi/Raghu/ Munivenkatamma/Ammayamma/Jayaram/Manjunath Lands
11	47/6	03 Guntas	E: Same Land Sy 47 hissa Belongs to Munivenkatamma RH W: SY no 29 Land N: Same Land Sy 47 hissa Belongs to janti Jayaram H & Manjunath RH road S: SY no 46 Land
12	47/7	02 Guntas	E: Same Land Sy 47 hissa Belongs to Ammayamma W: Same Land Sy 47 hissa Belongs to Janti Raghu C and Ravi C N: Same Land Sy 47 Belongs to Jayaram H & Manjunath RH S: SY no 46
13	47/8	02 Guntas	E: Same Land Sy 47 Belongs to Jayaram H W: Same Land Sy 47 Belongs to Munivenkatamma RH N: Same Land Sy 47 Belongs to Jayaram H & Manjunath RH S: SY No 46 Land
14	47/9	01.08 Guntas	E: Same Land Sy 47 hissa Belongs to Manjunath RH W: Same Land Sy 47 hissa Belongs to Ammayamma N: Same Land Sy 47 hissa Belongs to Jayaram & Manjunath RH S: SY No 46 Land
15	47/10	01.08 Guntas	E: Road (Adur Village boundary) W: Same Land Sy 47 hissa Belongs to Jayaram H N: Same Land Sy 47 hissa Belongs to Jayaram H & Manjunath RH Janti road Land S: SY No 46 Land
Total Extent		05 Acres 27 Guntas	

Mr. S T Prashantha Kumar,Senior Partner
Mr. Mali Pavan Gowda,G-Head
Fox Mandal & Associates, Solicitors & Advocates,
FM House, 6/12, Primrose Road, Bangalore – 560025, Karnataka, India
Phone: +91 80 2559 5911, e-mail: prashantha.kumar@foxmandal.in

JOB OPPORTUNITIES

Teachers/ Professors

WANTED TEACHERS: APPLICATIONS are invited from suitable candidates for the following vacancies in centrally located SILICON CITY PUBLIC SCHOOL Managed by the SAL SABEEL EDUCATIONAL TRUST, Indiranagar, Bangalore-38 (1).ENGLISH (HIGH SCHOOL): B.A / M.A, B.Ed (2).HINDI(HIGHER PRIMARY): B.A / M.A, B.Ed (Pratama, Madhyama, Uttama) (3).KANNADA (HIGH SCHOOL): B.A / M.A,B.Ed (4).SOCIAL SCIENCE (HIGH SCHOOL): B.A/ M.A,B.Ed. Interested candidates may submit their Resume or mail within one week time to the address mentioned above. The aforesaid teaching faculty shall be well-versed and possess a minimum experience of 3to5 years in their respective subjects. Contact:080-25219961 7483528625 Email: siliconcitypublicschool38@gmail.com

RAJAJINAGAR PRE-UNIVERSITY COLLEGE
K.T.S.V. SANGHA, 5th BLOCK, RAJAJINAGAR, BANGALORE-10.
Phone: 080-23501128
Required Full Time **Economics Lecturer** interested candidates can send their resume to E-mail: **rpu.principal@gmail.com** reach us on or before **12.05.2025**

Graphic Designers

WANTED DTP_OPERATORS knowing Indesign, Coraldraw and equation editor to compose'Science and mathematics books for a publishing Company. Work'from home allowed. Contact: Prof.Manju Bhaskar: 9880013922

Marketing & Sales

REQUIRED SALES/ Marketing Executive For Energy Saving Products, 2 Wheeler & English Must Salary 20000+ Big Incentive. 8884504422 info@behlinnov.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

RENTAL PROPERTIES

Accommodation Available

Commercial

RENT PLUG-N-PLAY Ground Floor Office 40-Seater & 4th Floor Office 45-Seater With Lifts, Parking, DG-Power`Ups, Power-Backup on Kanakapura Road, Near JPNagar Metro Opp To Pillar-74 Suitable For IT/ITES/Office. Phone-9901453477

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE SELLING

Flat

Kanakapura Road

NEW FLATS Kanakapura Road near Forum Mall, Konanakunte Metro. Swimming Pool, Club house. 2 BHK/ 3 BHK. Good Construction. Anika Maverick Projects:- Sowmya:- 9342247637.

Chandra Layout

FLATE_FOR SALE @_CHANDRA LAYOUT VIJAYNAGAR 3_BHK NEW FLATE BDA PROPERTY GOOD LOCATION CONTACT: 98455-55666

BUSINESS

Business to Business

Business

FOR BUSINESS Takeovers Solutions, Arranging Funds for Mega Projects in Bangalore. Contact: Dr. Swamy Naidu, MBA (U.S.A) Anika Project Consultants, Bangalore:- 9342247637.

TOURS & TRAVEL

Travel

VISIT HIMALAYAN Kingdom Nepal with Expert Guide Manager. All Inclusive Best Arrangements. GANESH SHENOY 8970126393

PERSONAL

Change of Name

CHANGE OF NAME
I, **MOHAMED KHAJA SUHAIL** residing at No.52, 1st Cross, Kere Road, Sapthagiri Layout, Thirumenahalli, Yelahanka, Bengaluru- 560064 have changed my name to **MOHAMMED KHAJA SUHAIL**, vide affidavit dated 07-05-2025 before Notary N Ramesh Gowda, Bengaluru.

CHANGE OF NAME
I, **VASANTHA KAVITHA SHRIKAR,** W/o Kyasambally Changalaraya Reddy Shrikar (K.C.Shrikar) R/a: K.C.Venkatesh, # 18/2, 18th Cross Road, Sadashivanagar, Bangalore - 560080, have changed my name to **VASANTHA KAVITHA** vide Affidavit dated 08.05.2025 before Notary Chandrakala , Bengaluru.



CONNECT

I, SHAILAJA W/o.Late H.N.Keshava Murthy R/a#1523,(FF) 11th_Main Road, Vijayanagara Bangalore 560040 have_changed my`Name to SHAILAJA_NADIG vide`affidavit dated:22.4.2025 before`Notary M.K.Devaki, Bangalore

CHANGE OF NAME
I, **RATHI DEVI THALINJA** & **RATHIDEVI U,** residing at # S-5, Sri Krishna Apts, 2nd floor, 1st Block, 5th Main, 5th Cross, Bank of Baroda Colony, JP Nagar 7th Phase, Bengaluru-560078, declare that above names pertain to me only. Vide affidavit dated 02.09.2024 before Notary T.R. Raghavendra Rao, Bengaluru, Henceforth I shall be called as **RATHI DEVI THALINJA** only

CHANGE OF NAME
I, **SHARAD KHARADE** S/o. R Chandran, R/a #180, 3rd Cross, VHBCS Layout, Shankarmutt, Mahalakshmipuram, Bengaluru 560086 have changed my Name to **SHARAD R KHARADE** vide affidavit dated 7.5.2025 before Notary N Narayana Swamy Bangalore.

ADMISSION CORNER

ADMISSION OPEN
For the Academic Year 2025-2026
3 YEARS DIPLOMA COURSES
* Civil Engineering (General)
* Computer Science Engineering
* Electronics & Communication Engineering
* Mechanical Engineering (General)

A K GOVT AIDED POLYTECHNIC
RMV IInd Stage, Bhoopasandra, Near Hebbal, Bangalore – 560094
080-23512464 (office)
ELIGIBILITY: * SSLC PASS * PUC/ITI PASS or FAIL
Email : akp.principal@gmail.com
Website: alkhateebgroup.org.in
More details contact:
9980157751 / 9448033116
9449446015 / 9945203198

CHANGE OF NAME
I, **PRABHAKAR** Residing at C/o Late Gangappa. No. 324, Dasarahalli, VTC: Bangalore North, Po: H.A Farm, Sub District: Bangalore North, Karnataka-560024 have changed my name to **PALLAVI G** & changed gender from Male to Female vide affidavit dated 08.05.2025 before notary Sumithra N, Bangalore.

Lost

DOCUMENT LOST
I, **ANAND RAJ FRANCIS,** R/at 339, 3rd Square Raod, Shanthinagar, Austin Town, Bengaluru, have lost **Original Sale Deed, Khatha Certificate and Khatha Extract Tax paid Receipt, Reg. No.4912/2002-03 dated 13/01/2003 Regd., in Shivajinagar Sub registrar,** While in transit, If found please contact: **9632303212, 9740247520**

ಮಗು ಕೊಂದಿದ್ದ ಆರೋಪಿ ಬಂಧನ

ಶವವನ್ನು ಬ್ಯಾಗ್‌ನಲ್ಲಿ ತುಂಬಿದ್ದ ಬಂಧಿತ: ಮಕ್ಕಳಿಗೆ ಬಾಲಕ ಹೊಡೆಯುತ್ತಾನೆಂಬ ದ್ವೇಷದಿಂದ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕನನ್ನು ಅಪಹರಿಸಿ ಕೊಲೆ ಮಾಡಿ ಮೃತದೇಹವನ್ನು ಕೆರೆಯ ಬಳಿ ಎಸೆದಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಮಾನಂದ (8) ಕೊಲೆಯಾದ ಬಾಲಕ. ಬಿಹಾರದ ಆರೋಪಿ ಚಂದ್ರೇಶ್ವರ ಮತ್ತೂರು (36) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಕೊಲೆಯಾದ ಬಾಲಕ ರಮಾನಂದ ಕುಟುಂಬ ಹಾಗೂ ಆರೋಪಿ ಚಂದ್ರೇಶ್ವರ ಮತ್ತೂರು ಕುಟುಂಬವು ಅಕ್ಕಪಕ್ಕದಲ್ಲೇ ನೆಲಸಿತ್ತು. ಎರಡೂ ಕುಟುಂಬಗಳ ಮಧ್ಯೆ ಗಲಾಟೆ ನಡೆಯುತ್ತಿತ್ತು. ಇದೇ ದ್ವೇಷದಿಂದ ಬಾಲಕನನ್ನು ಅಪಹರಿಸಿ ಕೊಲೆ ಮಾಡಿದ್ದಾನೆ. ಮೃತದೇಹವನ್ನು ಬ್ಯಾಗ್‌ನಲ್ಲಿ ತುಂಬಿಕೊಂಡು ಹೋಗಿ ರಾಯಸಂದ್ರ ಕೆರೆಯ ಬಳಿ ಎಸೆದಿದ್ದ ಎಂದು ಪೊಲೀಸರು ಹೇಳಿದರು.

ಮೇ 6ರಂದು ಪರಪ್ಪನ ಅಗ್ರಹಾರ ಠಾಣೆಯಲ್ಲಿ ಮಗು ನಾಪತ್ತೆ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಆರಂಭಿಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ ಎಂದು ಮೂಲಗಳು ಹೇಳಿವೆ.

ಚಂದ್ರೇಶ್ವರ ಮತ್ತೂರು

‘ಅನುಮಾನದ ಮೇರೆಗೆ ಆರೋಪಿಯ ಪುತ್ರಿಯನ್ನು ವಿಚಾರಣೆಗೆ ಒಳಪಡಿಸಲಾಯಿತು. ಬಾಲಕನನ್ನು ತಂದೆ ಅಪಹರಿಸಿ ಕೊಲೆ ಮಾಡಿರುವುದಾಗಿ ಆಕೆ ಬಾಯ್ಬಿಟ್ಟಿದ್ದಳು. ಕೊಲೆಯ ವಿಚಾರವನ್ನು ಯಾರಿಗಾದರೂ ತಿಳಿಸಿದರೆ ತನ್ನನ್ನು ಕೊಲೆ ಮಾಡುವುದಾಗಿ ತಂದೆ ಬೆದರಿಕೆ ಹಾಕಿದ್ದಾರೆ ಎಂಬುದಾಗಿ ಹೇಳಿಕೆ ನೀಡಿದ್ದಳು. ಅದನ್ನು ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಯಿತು’ ಎಂದು ಪೊಲೀಸರು ಹೇಳಿದರು.

‘ಎರಡೂ ಕುಟುಂಬಗಳೂ ಬಿಹಾರದಿಂದ ನಗರಕ್ಕೆ ಬಂದು ಪರಪ್ಪನ ಅಗ್ರಹಾರ ಠಾಣಾ ವ್ಯಾಪ್ತಿಯ ರಾಯಸಂದ್ರದಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದವು. ಆರೋಪಿಗೆ ಇಬ್ಬರು ಪುತ್ರಿಯರು ಇದ್ದಾರೆ. ರಮಾನಂದ ಜೊತೆಗೆ ಆರೋಪಿಯ ಪುತ್ರಿಯರು ನಿತ್ಯ ಆಟ ಆಡುತ್ತಿದ್ದರು. ಆಟದ ವಿಚಾರಕ್ಕೆ ಮಕ್ಕಳ ಮಧ್ಯೆ ಗಲಾಟೆ ಆಗುತ್ತಿತ್ತು. ಇದನ್ನು ಆರೋಪಿ ಗಮನಿಸಿದ್ದ. ರಮಾನಂದ ಜತೆಗೆ ಆಟಕ್ಕೆ ಹೋಗದಂತೆ ತನ್ನ ಮಕ್ಕಳಿಗೆ ಆರೋಪಿ ತಾಕೀತು ಮಾಡಿದ್ದ. ಆದರೂ ಮಕ್ಕಳು ಆಟಕ್ಕೆ ಹೋಗುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಮೇ 6ರಂದು ಮದ್ಯಪಾನ ಮಾಡಿ ಮನೆಗೆ ಬಂದಿದ್ದ ಆರೋಪಿ, ಬಾಲಕನ ಮೇಲೆ ಹಲ್ಲೆ ನಡೆಸಿದ್ದ. ಬಾಲಕನ ತಾಯಿ ಮನೆಯ ಕೆಲಸಕ್ಕೆ ಹೋಗಿರುವುದು ಗೊತ್ತಾಗಿ ಅಪಹರಣ ಮಾಡಿದ್ದ. ಕತ್ತು ಹಿಸುಕಿ ಕೊಲೆ ಮಾಡಿ ಮೃತದೇಹವನ್ನು ಬ್ಯಾಗ್‌ನಲ್ಲಿ ತುಂಬಿಕೊಂಡು ಹೋಗಿ ಕೆರೆಯ ಬಳಿ ಎಸೆದಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು. ತನ್ನ ಮಕ್ಕಳಿಗೆ ರಮಾನಂದ ಹೊಡೆಯುತ್ತಾನೆ ಹಾಗೂ ಆತನ ಪೋಷಕರು ತನ್ನ ಮನೆಯವರ ಜೊತೆಗೆ ಗಲಾಟೆ ಮಾಡುತ್ತಾರೆಂಬ ಕಾರಣಕ್ಕೆ ಬಾಲಕನನ್ನು ಅಪಹರಿಸಿ ಕೊಲೆ ಮಾಡಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ. ತನಿಖೆ ಮುಂದುವರೆದಿದೆ’ ಎಂದು ಪೊಲೀಸರು ಹೇಳಿದರು.

ಮನೆ ಖಾಲಿ ಮಾಡಲು ಸೂಚಿಸಿದ್ದ ಮಾಲೀಕ: ‘ಆರೋಪಿ ಎರಡು ತಿಂಗಳಿಂದ ಮನೆಯ ಬಾಡಿಗೆ ಹಣ ಪಾವತಿ ಮಾಡಿರಲಿಲ್ಲ. ಖಾಲಿ ಮಾಡುವಂತೆಯೂ ಮನೆಯ ಮಾಲೀಕ ಸೂಚಿಸಿದ್ದರು ಎಂಬುದು ಗೊತ್ತಾಗಿದೆ. ಬಾಲಕನನ್ನು ಕೊಲೆ ಮಾಡಿ ಮೃತದೇಹವನ್ನು ಬ್ಯಾಗ್‌ನಲ್ಲಿ ತುಂಬಿಕೊಂಡು ಹೋಗುತ್ತಿರುವುದನ್ನು ಕೆಲವರು ಗಮನಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ಹುಡುಕಾಟ ನಡೆಸಿದ್ದ ತಾಯಿ

ಮನೆಯ ಎದುರು ಮಕ್ಕಳು ಆಟ ಆಡುತ್ತಿರುವಾಗಲೇ ಆರೋಪಿ ಅಪಹರಣ ಮಾಡಿದ್ದಾನೆ. ಕೆಲಸಕ್ಕೆ ತೆರಳಿದ್ದ ತಾಯಿ ಮನೆಗೆ ಬಂದು ನೋಡಿದಾಗ ರಮಾನಂದ ಇರಲಿಲ್ಲ. ಅಕ್ಕಪಕ್ಕದ ಮನೆಯವರನ್ನೂ ವಿಚಾರಿಸಿದ್ದರು. ಸುಳಿವು ಸಿಕ್ಕಿರಲಿಲ್ಲ. ಆರೋಪಿ ಮನೆಗೆ ತೆರಳಿ ನೋಡಿದಾಗ ಆತನ ಮನೆಯ ಬಾಗಿಲಿಗೆ ಬೀಗ ಹಾಕಲಾಗಿತ್ತು. ನಂತರ, ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರು ಎಂದು ಮೂಲಗಳು ಹೇಳಿವೆ.

> **ತನಿಖೆ ಮಾಡಿದಾಗ ಪಕ್ಕದ ಮನೆಯ ವ್ಯಕ್ತಿಯ ಜೊತೆಗೆ ಬಾಲಕ ಹೋಗಿರುವುದು ಗೊತ್ತಾಗಿತ್ತು. ಆರೋಪಿಯನ್ನು ವಿಚಾರಣೆ ನಡೆಸಿದಾಗ ಕೃತ್ಯ ಬಯಲಾಗಿದೆ**
> **ಸಾರಾ ಫಾತಿಮಾ**
> ಡಿಸಿಪಿ, ಆಗ್ನೇಯ ವಿಭಾಗ

ರಾಬರ್ಟ್ ಫ್ರಾನ್ಸಿಸ್ ನೂತನ ಪೋಪ್

ವ್ಯಾಟಿಕನ್ ಸಿಟಿ (ಎಎಫ್‌ಪಿ): ಅಮೆರಿಕದ ರಾಬರ್ಟ್ ಫ್ರಾನ್ಸಿಸ್ ಪ್ರಿವೊಸ್ಟ್ ಅವರು ರೋಮನ್ ಕ್ಯಾಥೋಲಿಕ್ ಚರ್ಚ್‌ನ ನೂತನ ಪೋಪ್ ಆಗಿ ಗುರುವಾರ ಆಯ್ಕೆಯಾಗಿದ್ದಾರೆ.

69 ವರ್ಷದ ಅವರು ಇನ್ನು ಮುಂದೆ ‘ಲಿಯೊ 14’ ಎಂಬ ಹೆಸರಿನಿಂದ ಕರೆಸಿಕೊಳ್ಳಲಿದ್ದಾರೆ. ಕ್ಯಾಥೋಲಿಕ್ ಚರ್ಚ್‌ನ ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಅಮೆರಿಕದ ಬಿಷಪ್‌ವೊಬ್ಬರು ಈ ಉನ್ನತ ಹುದ್ದೆಯನ್ನು ಅಲಂಕರಿಸಿದ್ದು ಇದೇ ಮೊದಲು.

1955ರ ಸೆಪ್ಟೆಂಬರ್ 14ರಂದು ಷಿಕಾಗೊದಲ್ಲಿ ಜನಿಸಿದ ರಾಬರ್ಟ್ ಫ್ರಾನ್ಸಿಸ್ ಅವರು ಪೆರು ದೇಶದಲ್ಲಿ ಎರಡು ದಶಕ ಸೇವೆ ಸಲ್ಲಿಸಿದ್ದಾರೆ. ಅಲ್ಲಿ ಬಿಷಪ್ ಆಗಿಯೂ ಕಾರ್ಯ ನಿರ್ವಹಿಸಿದ್ದರು. 2023ರಲ್ಲಿ ಅವರನ್ನು ವ್ಯಾಟಿಕನ್‌ನ ಕಾರ್ಡಿನಲ್ ಆಗಿ ನೇಮಕ ಮಾಡಿಕೊಳ್ಳಲಾಗಿತ್ತು.

ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಸೇರಿದ್ದ ಜನರನ್ನುದ್ದೇಶಿಸಿ ತಮ್ಮ ಚೊಚ್ಚಲ ಸಂದೇಶ ನೀಡಿದ ಅವರು, ‘ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಎಲ್ಲರೂ ಪರಸ್ಪರ ಕೈಜೋಡಿಸಬೇಕು’ ಎಂದು ಕರೆ ನೀಡಿದರು.

‘ಸಂವಾದ, ಮಾತುಕತೆಗಳ ಮೂಲಕ ಸೇತುವೆ ನಿರ್ಮಿಸಿ ಎಲ್ಲರೂ ಪರಸ್ಪರ ಹತ್ತಿರವಾಗಬೇಕು. ಜಗತ್ತಿನಲ್ಲಿ ಸದಾ ಶಾಂತಿ ನೆಲೆಸಲಿ’ ಎಂದು ಹೇಳಿದರು.

ಪೋಪ್ ಆಯ್ಕೆ ಅಂತಿಮಗೊಳ್ಳುತ್ತಿದ್ದಂತೆಯೇ ಇಲ್ಲಿನ ಸಿಸ್ಟೈನ್ ಚಾಪೆಲ್‌ನ ಚರ್ಚ್ ಚಿಮಣಿಯಿಂದ ಬಿಳಿ ಬಣ್ಣದ ಹೊಗೆ ಬಿಡಲಾಯಿತು. ಬಿಳಿ ಬಣ್ಣದ ಹೊಗೆ ಕಂಡ ಕೂಡಲೇ, ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಸೇರಿದ್ದ ಜನರು ಹರ್ಷೋದ್ಗಾರ, ಚಪ್ಪಾಳೆ ತಟ್ಟುವ ಮೂಲಕ ಸಂಭ್ರಮಿಸಿದರು.

ನೂತನ ಪೋಪ್ ಆಯ್ಕೆಯನ್ನು ಸೇಂಟ್ ಪೀಟರ್ಸ್ ಬೆಸಿಲಿಕಾದ ಬಾಲ್ಕನಿಯಿಂದ ಘೋಷಿಸಲಾಯಿತು. ವಿಶ್ವದ ನಾನಾ ದೇಶಗಳನ್ನು ಪ್ರತಿನಿಧಿಸುವ 133 ಕಾರ್ಡಿನಲ್‌ಗಳು ನೂತನ ಪೋಪ್ ಅವರನ್ನು ಆಯ್ಕೆ ಮಾಡಿದರು.

ಪೋಪ್ ಫ್ರಾನ್ಸಿಸ್ ಅವರು ಏಪ್ರಿಲ್ 21ರಂದು ನಿಧನರಾಗಿದ್ದರು. ನೂತನ ಪೋಪ್ ಆಯ್ಕೆಗೆ ಬುಧವಾರ ಮತದಾನ ಪ್ರಕ್ರಿಯೆ ಆರಂಭವಾಗಿತ್ತು.

ನೂತನ ಪೋಪ್ ಆಗಿ ಆಯ್ಕೆಯಾದ ಲಿಯೊ 14 ಅವರು (ರಾಬರ್ಟ್ ಫ್ರಾನ್ಸಿಸ್ ಪ್ರಿವೊಸ್ಟ್) ಸಂದೇಶ ನೀಡಲು ಸೇಂಟ್ ಪೀಟರ್ಸ್ ಬೆಸಿಲಿಕಾದ ಬಾಲ್ಕನಿಗೆ ಬಂದರು —ಎಎಫ್‌ಪಿ ಚಿತ್ರ

ಕುಲಸಚಿವ ಹುದ್ದೆಯ ಆಮಿಷವೊಡ್ಡಿ ವಂಚನೆ: ಎಫ್‌ಐಆರ್ ದಾಖಲು

ಹಣ ವಾಪಸ್ ಕೇಳಿದ್ದಕ್ಕೆ ಕೊಲೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕುಲಸಚಿವ ಹುದ್ದೆ ಕೊಡಿಸುವುದಾಗಿ ಪ್ರಾಧ್ಯಾಪಕ ರೊಬ್ಬರಿಗೆ ಆಮಿಷವೊಡ್ಡಿ ಹಣ ಪಡೆದು ವಂಚಿಸಿ, ಹಣ ವಾಪಸ್ ಕೇಳಿದ್ದಕ್ಕೆ ಜೀವ ಬೆದರಿಕೆ ಹಾಕಿದ್ದ ಆರೋಪದ ಅಡಿ ಆರೋಪಿ ವಿರುದ್ಧ ಗೋವಿಂದರಾಜನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿವೃತ್ತ ಪ್ರಾಧ್ಯಾಪಕ ಆರ್.ಕೆ. ಸೋಮಶೇಖರ್(67) ಅವರು ವಂಚನೆಗೆ ಒಳಗಾದವರು. ಸೋಮಶೇಖರ್ ಅವರು 2015ರಲ್ಲಿ ಆರೋಪಿಗೆ ಹಣ ನೀಡಿದ್ದರು ಎನ್ನಲಾಗಿದೆ. ಆಗ ಸೋಮಶೇಖರ್ ಅವರು ಕರ್ತವ್ಯದಲ್ಲಿ ಇದ್ದರು. ಆ ಸಂದರ್ಭದಲ್ಲಿ ಆರೋಪಿ ಆಮಿಷವೊಡ್ಡಿ ಹಣ ಪಡೆದುಕೊಂಡು ಮೋಸ ಮಾಡಿದ್ದಾನೆ. ಇತ್ತೀಚೆಗೆ ಸೋಮಶೇಖರ್ ಅವರು ಹಣ ವಾಪಸ್ ನೀಡುವಂತೆ ಹೇಳಿದ್ದಕ್ಕೆ ಆರೋಪಿ ಜೀವ ಬೆದರಿಕೆ ಹಾಕಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಸೋಮಶೇಖರ್ ಅವರು ದೂರು ನೀಡಿದ್ದು , ಹೊರಮಾವು ನಂದನಂ ಲೇಔಟ್ ನಿವಾಸಿ ಬಿ.ಜಿ.ರವಿಕುಮಾರ್ ಎಂಬಾತನ ವಿರುದ್ಧ ವಂಚನೆ, ನಂಬಿಕೆ ದ್ರೋಹ, ಜೀವ ಬೆದರಿಕೆ ಸೇರಿ ವಿವಿಧ ಆರೋಪಗಳ ಅಡಿ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರ ಸೋಮಶೇಖರ್ ಅವರು 1983ರಿಂದ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನ ಪರಿಸರ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ, 2019ನೇ ಸಾಲಿನಲ್ಲಿ ನಿವೃತ್ತರಾಗಿದ್ದಾರೆ. ಈ ನಡುವೆ 2010ರಲ್ಲಿ ಸ್ನೇಹಿತರೊಬ್ಬರ ಮೂಲಕ ಆರೋಪಿ ಬಿ.ಜಿ.ರವಿಕುಮಾರ್ ಪರಿಚಯ ಆಗಿದ್ದ. ಬಳಿಕ ಇಬ್ಬರೂ ಸ್ನೇಹಿತರಾಗಿದ್ದರು ಎಂದು ಮೂಲಗಳು ಹೇಳಿವೆ.

‘ತನಗೆ ಪ್ರಭಾವಿ ರಾಜಕಾರಣಿಗಳ ಪರಿಚಯವಿದೆ. ವಿ.ವಿಯಲ್ಲಿ ಉನ್ನತ ಹುದ್ದೆ ಕೊಡಿಸುತ್ತೇನೆ ಎಂದು 2015ರಲ್ಲಿ ಆರೋಪಿ ರವಿಕುಮಾರ್ ಆಮಿಷ ಒಡ್ಡಿದ್ದ. ಆತನ ಮಾತು ನಂಬಿದ್ದ ಸೋಮಶೇಖರ್ ಅವರು ತನಗೆ ಕುಲಸಚಿವ ಹುದ್ದೆ ಕೊಡಿಸುವಂತೆ ಕೇಳಿದ್ದರು. ಅದಕ್ಕೆ ₹ 50 ಲಕ್ಷ ಖರ್ಚಾಗಲಿದೆ ಎಂದು ಆರೋಪಿ ಹೇಳಿದ್ದ. ಬಳಿಕ ಇಬ್ಬರೂ ಮಾತುಕತೆ ನಡೆಸಿ ಅಂತಿಮವಾಗಿ ₹35 ಲಕ್ಷ ಒಪ್ಪಂದ ಆಗಿತ್ತು. ಹುದ್ದೆ ಸಿಗದೇ ಇದ್ದರೆ ಹಣ ವಾಪಸ್ ಕೊಡುವುದಾಗಿ ಭರವಸೆ ನೀಡಿದ್ದ’ ಎಂದು ಮೂಲಗಳು ತಿಳಿಸಿವೆ.

‘ಆರೋಪಿಯ ಮಾತು ನಂಬಿದ್ದ ಸೋಮಶೇಖರ್ ಅವರು ಹಂತಹಂತವಾಗಿ ₹35 ಲಕ್ಷ ನೀಡಿದ್ದರು. ಆರು ತಿಂಗಳೊಳಗೆ ಕೆಲಸ ಆಗಲಿದೆ ಎಂದು ರವಿಕುಮಾರ್ ಹೇಳಿದ್ದ. ಈ ವಿಷಯವನ್ನು ಯಾರೊಬ್ಬರ ಬಳಿಯೂ ಹೇಳದಂತೆ ಸೂಚಿಸಿದ್ದ. ಸೋಮಶೇಖರ್ ಅವರು ಪದೇ ಪದೇ ಹುದ್ದೆಯ ಬಗ್ಗೆ ವಿಚಾರಿಸುತ್ತಿದ್ದರು. ನೆಪ ಹೇಳಿಕೊಂಡು ದಿನ ದೂಡುತ್ತಿದ್ದ. ಅಷ್ಟರಲ್ಲಿ ಸೋಮಶೇಖರ್ ಸೇವೆಯಿಂದ ನಿವೃತ್ತ-ರಾಗಿದ್ದರು. ಬಳಿಕ ತಾನು ಸೇವೆಯಿಂದ ನಿವೃತ್ತನಾಗಿದ್ದು, ತಮ್ಮ ಹಣ ವಾಪಸ್ ನೀಡುವಂತೆ ಕೇಳಿದ್ದರು. ಒಂದು ವರ್ಷದ ಸಮಯ ಕೊಡಿ ಎಂದು ರವಿಕುಮಾರ್ ಹೇಳಿದ್ದ. 2024ರ ಡಿಸೆಂಬರ್‌ನಲ್ಲಿ ಕರೆ ಮಾಡಿ ಹಣ ವಾಪಸ್ ಕೇಳಿದ್ದಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಆರೋಪಿ ರವಿಕುಮಾರ್ ಸೂಚನೆ ಮೇರೆಗೆ ಸೋಮಶೇಖರ್ ಕಳೆದ ಮಾರ್ಚ್ 9ರಂದು ವಿಜಯನಗರ ಸರ್ವೀಸ್ ರಸ್ತೆಯ ಇಂದ್ರಪ್ರಸ್ಥ ಹೋಟೆಲ್ ಬಳಿಗೆ ತೆರಳಿದ್ದರು. ಈ ವೇಳೆ ರವಿಕುಮಾರ್, ಸೋಮಶೇಖರ್ ಅವರನ್ನು ಕಾರಿನಲ್ಲಿ ಕೂರಿಸಿಕೊಂಡು ಚಾಕು ತೆಗೆದು ಕುತ್ತಿಗೆ ಹಿಡಿದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ’ ಎಂದು ಮೂಲಗಳು ತಿಳಿಸಿವೆ.

ತಹಶೀಲ್ದಾರ್‌ಗೆ ಕೃಷ್ಣಬೇರೇಗೌಡ ತರಾಟೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ತಾಲ್ಲೂಕು ಕಚೇರಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ರೈತರ ಕಡತಗಳನ್ನು ವಿಲೇವಾರಿ ಮಾಡುವುದರಲ್ಲಿ ವಿಳಂಬ, ಕಡತಗಳನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ, ಸಿಬ್ಬಂದಿ ಸರಿಯಾದ ಸಮಯಕ್ಕೆ ಹಾಜರಾಗುತ್ತಿಲ್ಲ ಎಂದು ದೂರುಗಳು ಬರುತ್ತಿವೆ ಏನು ಕ್ರಮ ಕೈಗೊಂಡಿದ್ದೀರಿ’ ಎಂದು ತಹಶೀಲ್ದಾರ್ ಅಮೃತ್ ಅತ್ರೇಶ್ ಅವರನ್ನು ಪ್ರಶ್ನಿಸಿದರು.

‘ತಾಲ್ಲೂಕು ಕಚೇರಿಯ ಶೌಚಾಲಯ ಸಂಪೂರ್ಣ ಹಾಳಾಗಿದ್ದು ಗಬ್ಬೆದ್ದು ನಾರುತ್ತಿದೆ. ಶೌಚಾಲಯದ ಸಮಸ್ಯೆ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ಏಕೆ ತಂದಿಲ್ಲ, ಸರಿಪಡಿಸಬೇಡಿ ಎಂದು ನಿಮ್ಮನ್ನು ಯಾರಾದರು ತಡೆದಿದ್ದಾರೆಯೆ, ತಾಲ್ಲೂಕು ಕಚೇರಿ ಎಂದರೆ ಸರ್ಕಾರದ ಪ್ರತಿನಿಧಿ. ಇದನ್ನು ಗ್ಯಾರೇಜ್, ಕಸದ ತೊಟ್ಟಿಯ ರೀತಿ ನಿರ್ವಹಣೆ ಮಾಡುತ್ತಿದ್ದೀರಿ’ ಎಂದು ತರಾಟೆಗೆ ತೆಗೆದುಕೊಂಡರು.

‘ಹಳೆಯದಾದ ಮುರುಕಲು ಟಿಜೋರಿಗಳನ್ನು ಏಕೆ ಇಟ್ಟುಕೊಂಡಿದ್ದೀರಿ. ಇದರಲ್ಲೆಲ್ಲ ಏನು ತುಂಬಿದ್ದೀರಿ, ಅಗತ್ಯವಿರುವ ದಾಖಲೆಗಳನ್ನು ಮಾತ್ರ ಸಂಗ್ರಹಿಸಿ. ಕ್ರಮಬದ್ಧವಾಗಿ ವರ್ಗೀಕರಣ ಮಾಡಿ ಜೋಡಿಸಿ. ದಾಖಲೆಗಳು ಹಾಳಾಗದಂತೆ ಸ್ಕ್ಯಾನಿಂಗ್ ಶೀಘ್ರವಾಗಿ ಪೂರ್ಣಗೊಳಿಸಿ ಎಂದು ಸೂಚಿಸಿದರು. ಸರ್ವೆ ದಾಖಲೆಗಳನ್ನು ಅನುಕೂಲಕ್ಕೆ ತಕ್ಕಂತೆ ತಿದ್ದುವ ಉದ್ದೇಶದಿಂದ ಡಿಜಿಟಲೀಕರಣ ಕಾರ್ಯ ವಿಳಂಬ ಮಾಡುತ್ತಿದ್ದೀರಾ’ ಎಂದು ಅವರು ಸರ್ವೆ ಅಧಿಕಾರಿಗಳನ್ನು ಪ್ರಶ್ನಿಸಿದರು.

ಕಚೇರಿಯನ್ನು ಆಧುನೀಕರಣಗೊಳಿಸಲು ಶಾಸಕ ಶ್ರೀನಿವಾಸ್ ಅವರ ಬಳಿ ಮಾತನಾಡಿ, ಅಂದಾಜು ಪಟ್ಟಿ ಕಳುಹಿಸಿ ಎಂದು ತಹಶೀಲ್ದಾರ್‌ಗೆ ಸೂಚಿಸಿದರು.

ಕೃಷ್ಣಬೈರೇಗೌಡ ಅವರು ಕಡತಗಳನ್ನು ಪರಿಶೀಲಿಸಿ ತಹಶೀಲ್ದಾರ್ ಅಮೃತ್ ಅತ್ರೇಶ್ ಅವರನ್ನು ತರಾಟೆಗೆ ತೆಗೆದುಕೊಂಡರು

ಶ್ರೀಮಹಾಲಕ್ಷ್ಮೀಗೆ ಸಹಸ್ರ ಕಮಲ ಪುಷ್ಪಾರ್ಚನೆ

ದಾಬಸ್ ಪೇಟೆ: ಇಲ್ಲಿನ ಲಕ್ಕೂರು ಗ್ರಾಮದಲ್ಲಿನ ಶ್ರೀ ಮಹಾಲಕ್ಷ್ಮೀ ದೇವಾಲಯದಲ್ಲಿ ಅಮ್ಮನವರಿಗೆ ಏರ್ಪಡಿಸಿದ್ದ ‘ಸಹಸ್ರ ಕಮಲ ಪುಷ್ಪಾರ್ಚನೆ ಹಾಗೂ ಸಹಸ್ರ ಕಮಲ ಪುಷ್ಪಯಾಗ ಮಹೋತ್ಸವ ಮತ್ತು ಶ್ರೀ ಮಹಾಲಕ್ಷ್ಮೀಯವರ ಪ್ರಾಕಾರೋತ್ಸವ ಗುರುವಾರ ಸಂಪನ್ನಗೊಂಡಿತು.

ಬೆಳಿಗ್ಗೆಯಿಂದಲೇ ದೇವಾಲಯದಲ್ಲಿ ವಿವಿಧ ಪೂಜಾ ಕಾರ್ಯಕ್ರಮಗಳು ನಡೆದವು. ದೇವಾಲಯದ ಮುಂಭಾಗ ಹೋಮ ಹವನಗಳು ನಡೆದವು. ಮಹಾಮಂಗಳಾರತಿ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ ನಡೆಯಿತು. ದೇವಾಲಯವನ್ನು ತಳಿರು ತೋರಣ ಹೂ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

‘ಲೋಕ ಕಲ್ಯಾಣಾರ್ಥವಾಗಿ 14 ವರ್ಷದಿಂದ ಭಕ್ತರ ಸಹಕಾರದಲ್ಲಿ ಈ ಪೂಜಾ ಕಾರ್ಯಕ್ರಮ ಏರ್ಪಡಿಸುತ್ತಾ ಬಂದಿದ್ದೇವೆ. ನಾಡದೇವತೆ ಚಾಮುಂಡೇಶ್ವರಿ ದೇವಿಯಷ್ಟೇ ಶ್ರೀ ಮಹಾಲಕ್ಷ್ಮೀ ಕೂಡ ಶಕ್ತಿ ದೇವತೆ’ ಎಂದು ಅರ್ಚಕ ವೇಣುಗೋಪಾಲ್ ಹೇಳಿದರು.

ನಾಗದೇವನಹಳ್ಳಿಯ ಭೂತಪ್ಪಸ್ವಾಮಿ ದೇವರ ಉತ್ಸವ

ಭೂತಪ್ಪಸ್ವಾಮಿ ದೇವರ ಉತ್ಸವ, ಊರಹಬ್ಬ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಶ್ರೀಭೂತಪ್ಪ-ಸ್ವಾಮಿ ದೇವರ ಉತ್ಸವ, ಊರಹಬ್ಬ, ಸಾಂಸ್ಕೃತಿಕ ಉತ್ಸವ, ಗ್ರಾಮೀಣ ಉತ್ಸವ ದೊಡ್ಡಗೊಲ್ಲರಹಟ್ಟಿ, ನಾಗದೇವನಹಳ್ಳಿ-ಯಲ್ಲಿ ಸಂಭ್ರಮದಿಂದ ನಡೆಯಿತು.

ದೇವರ ಉತ್ಸವ ಮೆರವಣಿಗೆ, ಪೂಜಾ ಕುಣಿತ, ಪಟದ ಕುಣಿತಗಳೊಂದಿಗೆ ಜಾನಪದ ಕಲೆಗಳ ಪ್ರದರ್ಶನ ನಡೆಯಿತು. ಮಧ್ಯರಾತ್ರಿ-ಯಿಂದಲೇ ನೂರಾರು ಹೆಣ್ಣುಮಕ್ಕಳು ತಂಬಿಟ್ಟಿನ ಆರತಿ, ಕಳಸದೊಂದಿಗೆ ದೇವರ ಉತ್ಸವ, ಮೆರವಣಿಗೆಯೊಂದಿಗೆ ರಸ್ತೆ ಬೀದಿಯಲ್ಲಿ ಸಾಗಿ ಬಂದರು.

ಭೂತಪ್ಪದೇವಸ್ಥಾನದ ಆವರಣದಲ್ಲಿ ತಮಟೆ, ನಗಾರಿ, ವಾದ್ಯಗೋಷ್ಠಿ, ಪೂಜಾಕುಣಿತ ಸಮಯದಲ್ಲಿ ಭಕ್ತರು ಕುಣಿದು ಕುಪ್ಪಳಿಸಿದರು.

ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೃಷ್ಣಪ್ಪ ಮಾತನಾಡಿ, ‘ನಮ್ಮ ಪೂರ್ವಿಕರೂ ಅನಾದಿಕಾಲದಿಂದಲೂ ನಡೆಸಿಕೊಂಡು ಬರುತ್ತಿರುವ ಭೂತಪ್ಪಸ್ವಾಮಿ ಉತ್ಸವವನ್ನು ಹಿರಿಯರು, ಗ್ರಾಮಸ್ಥರ ನೆರವಿನೊಂದಿಗೆ ಆಚರಿಸಿಕೊಂಡು ಬರಲಾಗುತ್ತಿದೆ’ ಎಂದರು.

ಮುಖಂಡ ಎನ್.ಸಿ.ಕುಮಾರ್, ‘ನೂರಾರು ವರ್ಷಗಳಿಂದ ನಮ್ಮ ಹಿರಿಯರು ಆಚರಿಸುತ್ತಿರುವ ಗೊಲ್ಲ ಜನಾಂಗದ ಆರಾಧ್ಯ ದೈವ ಭೂತಪ್ಪಸ್ವಾಮಿ ಉತ್ಸವವನ್ನು ಗ್ರಾಮೀಣ ಸಂಸ್ಕೃತಿಯಲ್ಲಿ ನಡೆಸಲಾಗುತ್ತಿದೆ’ ಎಂದರು.

ಕೆನರಾ ಬ್ಯಾಂಕ್‌ಗೆ ₹5,070 ಕೋಟಿ ಲಾಭ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹5,070 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹3,951 ಕೋಟಿ ಲಾಭ ಗಳಿಸಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 28ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಗುರುವಾರ ತಿಳಿಸಿದೆ. ಸಾಲ ವಸೂಲಾತಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಬ್ಯಾಂಕ್‌ನಿಂದ ಹೂಡಿಕೆ ಹಾಗೂ ಬಾಹ್ಯ ಬ್ಯಾಂಕಿಂಗ್ ಸೇವೆಯ ವರಮಾನದಲ್ಲಿ ಏರಿಕೆಯಾಗಿದೆ. ಇದರಿಂದ ನಿವ್ವಳ ಲಾಭ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 11ರಷ್ಟು ಹೆಚ್ಚಳವಾಗಿದೆ. ಇದರ ಹೊರತಾಗಿಯೂ ಬಡ್ಡಿ ವರಮಾನದಲ್ಲಿ ಶೇ 1.44ರಷ್ಟು ಇಳಿಕೆಯಾಗಿದೆ. ಒಟ್ಟು ಬಡ್ಡಿ ವರಮಾನ ₹9,442 ಕೋಟಿ ಗಳಿಸಿದೆ. ಬಡ್ಡಿಯೇತರ ವರಮಾನ ₹6,351 ಕೋಟಿ ಆಗಿದೆ. ಈ ವರಮಾನ ಸಂಗ್ರಹದಲ್ಲಿ ಒಟ್ಟಾರೆ ಶೇ 21.74ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 3.34ರಿಂದ ಶೇ 2.94ಕ್ಕೆ ತಗ್ಗಿದೆ. ‘2025–26ನೇ ಆರ್ಥಿಕ ವರ್ಷದಲ್ಲಿ ಸಾಲ ನೀಡಿಕೆಯಲ್ಲಿ ಶೇ 10ರಿಂದ ಶೇ 11ರಷ್ಟು ಬೆಳವಣಿಗೆ ಸಾಧಿಸುವ ಗುರಿ ಹೊಂದಲಾಗಿದೆ. ಠೇವಣಿ ಸಂಗ್ರಹದಲ್ಲಿ ಶೇ 9ರಷ್ಟಕ್ಕೂ ಹೆಚ್ಚು ಗುರಿ ಸಾಧಿಸಲಾಗುವುದು’ ಎಂದು ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ಅವರು ತಿಳಿಸಿದ್ದಾರೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ಲಾಭವನ್ನು (ಎನ್‌ಐಎಂ) ಶೇ 2.75ರಿಂದ ಶೇ 2.80ರ ನಡುವೆ ಕಾಯ್ದುಕೊಳ್ಳಲು ತೀರ್ಮಾನಿಸಲಾಗಿದೆ. ಜಿಎನ್‌ಪಿಎ ಅನ್ನು ಶೇ 2.50ಕ್ಕೆ ತಗ್ಗಿಸಲಾಗುವುದು ಎಂದು ತಿಳಿಸಿದ್ದಾರೆ.

ಸೋಮನಹಳ್ಳಿ ಟೋಲ್ ಪ್ಲಾಜಾ ಇಂದು ಆರಂಭ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ 948ರಲ್ಲಿ ಸೋಮನಹಳ್ಳಿ ಟೋಲ್ ಪ್ಲಾಜಾ ಮೇ 9ರಂದು ಆರಂಭಗೊಳ್ಳಲಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನೆ ಅನುಷ್ಠಾನ ಘಟಕ (ಮೈಸೂರು) ತಿಳಿಸಿದೆ.

ಬಿಡದಿ ಹುಲಿ ಮೀಸಲು ಗಡಿಯಿಂದ ಬೆಂಗಳೂರು ವಿಭಾಗದ ರಸ್ತೆ ಬಳಕೆದಾರರ ಶುಲ್ಕ ಕೇಂದ್ರವನ್ನು ಬೆಂಗಳೂರು ದಕ್ಷಿಣ ತಾಲ್ಲೂಕಿನ ಸೋಮನಹಳ್ಳಿ ಗ್ರಾಮದ ಸಮೀಪ ಪ್ರಾರಂಭವಾಗಲಿದೆ ಎಂದು ಮಾಹಿತಿ ನೀಡಿದೆ.



ಸುಂಕ ವಸೂಲಾತಿ ಕೇಂದ್ರದಿಂದ 20 ಕಿ.ಮೀ. ವ್ಯಾಪ್ತಿಯೊಳಗೆ ವಾಸಿಸುವ ಎಲ್ಲ ವಾಣಿಜ್ಯೇತರ ವಾಹನಗಳಿಗೆ ₹350ಕ್ಕೆ ತಿಂಗಳ ಪಾಸ್ ನೀಡಲಾಗುವುದು ಎಂದು ತಿಳಿಸಿದೆ.

ಶುಲ್ಕ ವಿವರ (₹ಗಳಲ್ಲಿ)

ವಾಹನ ಮಾದರಿ	ಏಕಮುಖ ಸಂಚಾರ	ಅದೇ ದಿನ ಮರಳಿ ಬಂದರೆ	ಜಿಲ್ಲೆಯೊಳಗೆ ನೋಂದಣಿಯಾಗಿರುವ ವಾಹನಗಳಿಗೆ	ವಾಣಿಜ್ಯೇತರ ವಾಹನಗಳಿಗೆ 30ಗಳ ಪಾಸ್	30ಗಳಲ್ಲಿ 50 ಬಾರಿ ಸಂಚಾರದ ಪಾಸ್
ಕಾರು, ಜೀಪು, ವ್ಯಾನ್, ಲಘು ಮೋಟಾರು ವಾಹನ	85	130	45	350	2,855
ಲಘು ವಾಣಿಜ್ಯ ವಾಹನ, ಲಘು ಸರಕು ವಾಹನ, ಮಿನಿ ಬಸ್	140	205	70	-	4,610
ಬಸ್, ಟ್ರಕ್ (ಎರಡು ಆ್ಯಕ್ಸೆಲ್)	290	435	145	-	9,660
ಮೂರು ಆ್ಯಕ್ಸೆಲ್ ವಾಣಿಜ್ಯ ವಾಹನ	315	475	160	-	10,540
ಎಚ್‌ಸಿಎಂ, ಇಎಂಇ, ಎಂಎವಿ (ಆರು ಆ್ಯಕ್ಸೆಲ್‌ವರೆಗೆ)	455	680	225	-	15,150
7 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ವಾಹನ	555	830	275	-	18,440

ವಿಜಯನ್ ಇಮ್ಯಾನುಯೆಲ್ ಅವರು ಲಾಭುರಾಮ್ ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಸಮೀರ್ ಖಾನ್, ಕೆ.ಎಚ್.ದಿಲೀಪ್‌ಕುಮಾರ್, ಸಮೀನ ನೂರ್ ಅಹ್ಮದ್ ಪನಾಲಿ, ರವಿ.ಪಿ ಉಪಸ್ಥಿತರಿದ್ದರು

ವಿದ್ಯಾರ್ಥಿಗಳಿಗೆ ‘ನಮ್ಮ ಸುರಕ್ಷಾ’

ಪ್ರಜಾವಾಣಿ ವಾರ್ತೆ

ಯಲಹಂಕ: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಸಹಯೋಗದೊಂದಿಗೆ ‘ನಮ್ಮ ಸುರಕ್ಷಾ’ ಶೀರ್ಷಿಕೆಯಡಿಯಲ್ಲಿ ರಾಷ್ಟ್ರೀಯ ‘ಹ್ಯಾಕ್‌ಥಾನ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ವಿದ್ಯಾರ್ಥಿಗಳಲ್ಲಿ ಕೋಡಿಂಗ್ ಕೌಶಲಗಳನ್ನು ಚುರುಕುಗೊಳಿಸಲು, ನೈತಿಕ ಹ್ಯಾಕಿಂಗ್ ಅಗತ್ಯವಿರುವ ಯೋಜನೆಗಳಲ್ಲಿ ಕಾರ್ಯನಿರ್ವಹಿಸಲು ಮತ್ತು ನೈಜ ಜಗತ್ತಿನ ಸಮಸ್ಯೆಗಳನ್ನು ಪರಿಹರಿಸಲು ಪ್ರೋತ್ಸಾಹಿಸುವ ಉದ್ದೇಶ ದಿಂದ ಏರ್ಪಡಿಸಿದ್ದ ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸೇರಿ ದೇಶದಾದ್ಯಂತ ವಿವಿಧ ಕಾಲೇಜುಗಳ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪೊಲೀಸರು ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಸಮಸ್ಯೆಗಳ ಕುರಿತ ವಿಷಯ ಗಳನ್ನು ನೀಡಿ, ಪರಿಹಾರಗಳನ್ನು ಕಂಡು ಹಿಡಿಯಲು ಕಾಲಾವಕಾಶ ನೀಡಿದರು. ವಿದ್ಯಾರ್ಥಿಗಳು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಲು ಅವಕಾಶ ಕಲ್ಪಿಸಲಾಗಿತ್ತು.

ಪೊಲೀಸ್ ಮಹಾನಿರ್ದೇಶಕ ಲಾಭುರಾಮ್ ಅವರು, ಪೊಲೀಸ್ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ಪ್ರಾಮುಖ್ಯ ಮತ್ತು ಕರ್ನಾಟಕ ಪೊಲೀಸರು ಉತ್ತಮವಾಗಿ ಕಾರ್ಯನಿರ್ವಹಿಸಲು ಹಲವಾರು ತಾಂತ್ರಿಕ ಸಾಧನಗಳನ್ನು ಹೇಗೆ ಅವಲಂಬಿಸಿದ್ದಾರೆ ಎಂಬುದರ ಕುರಿತು ಮಾಹಿತಿ ನೀಡಿದರು.

ಯುವಸಮುದಾಯವು ಸಮಸ್ಯೆ ಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಂಪ್ಯೂಟರ್ ವಿಜ್ಞಾನ ಮತ್ತು ಮಾಹಿತಿ ವಿಜ್ಞಾನ ಹಾಗೂ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ತಾವು ಪಡೆದಿರುವ ಜ್ಞಾನದೊಂದಿಗೆ ಪೊಲೀಸ್ ಇಲಾಖೆಗೆ ಸಹಾಯಮಾಡುವ ಮಹತ್ವ ವನ್ನು ತಿಳಿಸಿದರು. ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಪತಿ ವಿಜಯನ್ ಇಮ್ಯಾನುಯೆಲ್ ಮಾತನಾಡಿ, ಯುವಮನಸ್ಸುಗಳು ಸಮಾಜದಲ್ಲಿನ ಸಮಸ್ಯೆಗಳ ಕುರಿತು ಯೋಚಿಸಿ, ಕಾರ್ಯನಿರ್ವಹಿಸುವುದರ ಜೊತೆಗೆ ಪರಿಹಾರ ನೀಡಲು ಪ್ರೋತ್ಸಾಹಿಸಬೇಕೆಂಬ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸಹ ಕುಲಪತಿ ಸಮೀರ್ ಖಾನ್, ಕುಲಸಚಿವರಾದ ಸಮೀನ ನೂರ್ ಅಹ್ಮದ್ ಪನಾಲಿ, ದೊಡ್ಡಬಳ್ಳಾಪುರ ವೃತ್ತದ ಡಿವೈಎಸ್‌ಪಿ ರವಿ.ಪಿ, ರಾಜಾನುಕುಂಟೆ ಠಾಣೆಯ ಇನ್‌ಸ್ಪೆಕ್ಟರ್ ಕೆ.ಎಚ್.ದಿಲೀಪ್ ಕುಮಾರ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

‘ಒರೇಟೋರಮ್ ಕಾನ್ಕ್ಲೇವ್-ಯುಎಲ್‌ಸಿ ಎಂಯುಎನ್ 4.0’: ಅತಿಥಿಗಳು: ಯು.ಟಿ. ಖಾದರ್, ಪ್ರಿಯಕೃಷ್ಣ, ಶೇಖ್ ಲತೀಫ್, ಅಧ್ಯಕ್ಷತೆ: ಎನ್. ದಶರಥ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 9.30

ಸಿದ್ದರಾಮಯ್ಯ

‘ಸರಳ ಕಾವೇರಿ’, ಮನೆ ಬಾಗಿಲಿಗೆ ‘ಸಂಚಾರಿ ಕಾವೇರಿ’ ಯೋಜನೆಗಳಿಗೆ ಚಾಲನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸ್ಥಳ: ಬೃಹತ್ ಮೆಟ್ಟಿಲುಗಳ ಮುಂಭಾಗ, ವಿಧಾನಸೌಧದ ಆವರಣ, ಬೆಳಿಗ್ಗೆ 10

ಪ್ಲಾಸ್ಟಿಕ್‌ಗೆ ಸಂಬಂಧಿಸಿದ ತಂತ್ರಜ್ಞಾನ ಪ್ರದರ್ಶನ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಎಂ.ಬಿ. ಪಾಟೀಲ, ತುಷಾರ್ ಪಾರಿಕ್, ಸೌಗತ ಚೌಧರಿ, ಬಿಲ್ಲ ಶುಕ್ಲಾ, ಎಚ್.ವಿ.ಎಸ್. ಕೃಷ್ಣ, ಜೇಕಬ್ ಕ್ರಾಸ್ತ, ಶಿವಕುಮಾರ್ ಆರ್., ಎಂ.ಜಿ. ರಾಜಗೋಪಾಲ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ), ಬೆಳಿಗ್ಗೆ 11

ಬುದ್ಧ, ಬಸವಣ್ಣ, ಬಾಬು ಜಗಜೀವನರಾಮ್, ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆ: ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ಕೆ.ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಪಿ.ಎಂ. ನರೇಂದ್ರಸ್ವಾಮಿ, ಜೆ. ರವಿಶಂಕರ್, ವೈ.ಎಸ್. ಪಾಟೀಲ, ಮಹೇಶ ಬಿ. ಶಿರೂರ, ಜಿ.ಟಿ. ಪುತ್ರ, ಮಹಮ್ಮದ ಪರವೇಜ ಬಂಥನಾಳ, ಆಯೋಜನೆ: ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಕೃಷಿ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘ, ಕೃಷಿ ಪಧವೀಧರ ಅಧಿಕಾರಿಗಳ ಸಂಘ, ಕೃಷಿ ಆಯುಕ್ತರ ಕಚೇರಿ, ಸ್ಥಳ: ಸಂಗಮ ಸಭಾಂಗಣ, ಕೃಷಿ ಆಯುಕ್ತರ ಕಚೇರಿ, ಶೇಷಾದ್ರಿಪುರ ರಸ್ತೆ, ಬೆಳಿಗ್ಗೆ 10

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಅತಿಥಿಗಳು: ಎಂ. ಕೃಷ್ಣಮೂರ್ತಿ, ಎಸ್. ಮಾದೇಶ್ವರನ್, ಮಾವಳ್ಳಿ ಶಂಕರ್, ಅಧ್ಯಕ್ಷತೆ: ಬಿ.ಎಸ್. ದಯಾಸಾಗರ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ಬೆಂಗಳೂರು ಸೆಂಟರ್, ಬೆಳಿಗ್ಗೆ 11.30

ಡಾ.ಎಂ. ಚಿದಾನಂದಮೂರ್ತಿ ದತ್ತಿ ‘ಕನ್ನಡ ಸಂಶೋಧನೆ ಮತ್ತು ಚಿದಾನಂದಮೂರ್ತಿ’ ಉಪನ್ಯಾಸ: ಡಿ.ಕೆ. ಚಿತ್ತಯ್ಯ ಪೂಜಾರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಮನು ಬಳಿಗಾರ್ ಸ್ಥಾಪಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಸ್. ಷಡಕ್ಷರಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಮನು ಬಳಿಗಾರ್, ಪ್ರಶಸ್ತಿ ಸ್ವೀಕರಿಸುವವರು: ಹಿ.ಶಿ. ರಾಮಚಂದ್ರೇಗೌಡ, ಬಿ.ಎನ್. ಸುಮಿತ್ರಾಬಾಯಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಸ್ಮರಣೆ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಉಪನ್ಯಾಸ: ರುದ್ರೇಶ್ ಅದರಂಗಿ, ಉಪಸ್ಥಿತಿ: ದಿಬ್ಬೂರು ಎಸ್. ಗಿರೀಶ್, ಪಿ. ವಿಜಯಕುಮಾರ, ಸುಧಾ ನಾಗರಾಜ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಘಣ, ಗೇಟ್ ಸಂಖ್ಯೆ 7, ಎಂಟನೇ ವಿಭಾಗ, ಜಯನಗರ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ -nagaradalli_indu@prajavani.co.in

ಜೆರುಸಲೇಮ್: ವಿಶ್ವಸಂಸ್ಥೆಯ ಶಾಲೆ ಮುಚ್ಚಿಸಿದ ಇಸ್ರೇಲ್

ಜೆರುಸಲೇಂ(ಎಪಿ): ಪೂರ್ವ ಜೆರುಸಲೇಮ್‌ನಲ್ಲಿ ವಿಶ್ವಸಂಸ್ಥೆ ಸ್ಥಾಪಿಸಿರುವ ಆರು ಶಾಲೆಗಳನ್ನು ಇಸ್ರೇಲ್ ಶಾಶ್ವತವಾಗಿ ಮುಚ್ಚಿದೆ. ಇದರಿಂದಾಗಿ 800ಕ್ಕೂ ಹೆಚ್ಚು ವಿದ್ಯಾರ್ಥಿಗಳ ಶಿಕ್ಷಣವು ಅತಂತ್ರವಾಗಿದೆ.

ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿ ವಿಶ್ವಸಂಸ್ಥೆಯ ಅಂಗ ಸಂಸ್ಥೆ (ಯುಎನ್‌ಆರ್‌ಡಬ್ಲ್ಯುಎ) ನಡೆಸುತ್ತಿರುವ ಆರು ಶಾಲೆಗಳನ್ನು 30 ದಿನಗಳಲ್ಲಿ ಮುಚ್ಚುವಂತೆ ಇಸ್ರೇಲ್ ನೀಡಿದ್ದ ಗಡುವು ಬುಧವಾರ ಅಂತ್ಯವಾಗಿದೆ. ವೆಸ್ಟ್‌ಬ್ಯಾಂಕ್ ನಲ್ಲಿ ವಿಶ್ವಸಂಸ್ಥೆ ನಡೆಸುತ್ತಿರುವ ಶಾಲೆಗಳು ಮುಂದುವರಿಯಲಿವೆ.

ಮಕ್ಕಳ ಮೇಲಿನ ದಾಳಿ: ಜೆರುಸಲೇಮ್‌ನಲ್ಲಿ ತಾನು ಸ್ಥಾಪಿಸಿರುವ ಆರು ಶಾಲೆಗಳನ್ನು ಮುಚ್ಚುವ ಇಸ್ರೇಲ್ ನಿರ್ಧಾರಕ್ಕೆ ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

‘ಇಸ್ರೇಲ್‌ನ ಈ ಕ್ರಮ ಮಕ್ಕಳು ಹಾಗೂ ಶಿಕ್ಷಣ ವ್ಯವಸ್ಥೆ ಮೇಲಿನ ದಾಳಿ. ಈ ಕ್ರಮವು ಅಂತರ ರಾಷ್ಟ್ರೀಯ ಕಾನೂನಿನ ಉಲ್ಲಂಘನೆ’ ಎಂದು ಯುಎನ್‌ಆರ್‌ಡಬ್ಲ್ಯುಎ ಮುಖ್ಯಸ್ಥ ಫಿಲಿಪ್ ಲಾಜರಿನಿ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಲಾಹೋರ್: ತೀರ್ಪು ಪ್ರಶ್ನಿಸಿ ಕೋರ್ಟ್‌ಗೆ ಉಗ್ರ ಹಫೀಜ್ ಅರ್ಜಿ

ಲಾಹೋರ್ (ಪಿಟಿಐ): ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಸೂತ್ರಧಾರಿ ಮತ್ತು ನಿಷೇಧಿತ ಜಮಾತ್-ಉದ್-ದಾವಾ (ಜೆಯುಡಿ) ಉಗ್ರ ಸಂಘಟನೆ ಮುಖ್ಯಸ್ಥ ಹಫೀಜ್ ಸಯೀದ್, ಭಯೋತ್ಪಾದಕ ಕೃತ್ಯಗಳಿಗೆ ಹಣಕಾಸು ನೆರವು ನೀಡಿದ ಪ್ರಕರಣ ಗಳಲ್ಲಿ ತನ್ನನ್ನು ತಪ್ಪಿತಸ್ಥ ಎಂದು ನೀಡಿರುವ ತೀರ್ಪು ಪ್ರಶ್ನಿಸಿ ಲಾಹೋರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾನೆ.

ಈ ಕುರಿತು ಸಯೀದ್ ಮತ್ತು ಜಮಾತ್-ಉದ್-ದಾವಾ ಸಂಘಟನೆಯ ಇತರ ಮುಖಂಡರು ಲಾಹೋರ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿ ವಿಚಾರಣೆಗೆ ಕೋರ್ಟ್ ಸಮ್ಮತಿ ಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಟಾರ್‌ಲಿಂಕ್‌ಗೆ ಪರವಾನಗಿ ಲಭ್ಯ

ನವದೆಹಲಿ (ಪಿಟಿಐ): ದೇಶದಲ್ಲಿ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆ ಆರಂಭಿಸಲು ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಗೆ ಕೇಂದ್ರ ದೂರಸಂಪರ್ಕ ಇಲಾಖೆಯು ಪರವಾನಗಿ ನೀಡಿದೆ.

ಈ ಕಂಪನಿಯು ಟವರ್‌ರಹಿತ ಅತಿವೇಗದ ಇಂಟರ್‌ನೆಟ್ ಸೇವೆ ಒದಗಿಸುವಲ್ಲಿ ಮುಂಚೂಣಿಯಲ್ಲಿದೆ. ಜಗತ್ತಿನಾದ್ಯಂತ 100ಕ್ಕೂ ಹೆಚ್ಚು ದೇಶಗಳಲ್ಲಿ ಸೇವೆ ಒದಗಿಸುತ್ತಿದೆ.

ದೇಶದ ದೂರಸಂಪರ್ಕ ಕಂಪನಿಗಳಾದ ರಿಲಯನ್ಸ್ ಜಿಯೊ ಮತ್ತು ಭಾರ್ತಿ ಏರ್‌ಟೆಲ್ ತನ್ನ ಗ್ರಾಹಕರಿಗೆ ಅತಿವೇಗದ ಇಂಟರ್‌ನೆಟ್ ಸೇವೆ ಒದಗಿಸಲು ಸ್ಟಾರ್‌ಲಿಂಕ್ ಜೊತೆಗೆ ಈಗಾಗಲೇ ಒಪ್ಪಂದಕ್ಕೆ ಸಹಿ ಹಾಕಿವೆ. ಮಳೆ, ಚಂಡಮಾರುತದಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿ ಯಲ್ಲೂ ಸ್ಟಾರ್‌ಲಿಂಕ್ ಇಂಟರ್‌ನೆಟ್ ಸೇವೆ ಒದಗಿಸಲಿದೆ. ಈ ಇಂಟರ್‌ನೆಟ್‌ನ ಸರಾಸರಿ ಡೌನ್‌ಲೋಡ್ ವೇಗವು 50ರಿಂದ 150 ಎಂಬಿಪಿಎಸ್ ಇದೆ ಎಂದು ಹೇಳಲಾಗಿದೆ.

ಸ್ಥಳೀಯ ನಿಯಮಗಳು ಮತ್ತು ಭದ್ರತಾ ಮಾನದಂಡಗಳನ್ನು ಪಾಲಿಸಬೇಕು ಎಂದು ಸ್ಟಾರ್‌ಲಿಂಕ್‌ಗೆ ಸರ್ಕಾರ ಸೂಚಿಸಿದೆ.

ಬಾಲಕಿ ಮೇಲೆ ಅತ್ಯಾಚಾರ ಯುವಕನ ಬಂಧನ

ಚಿಂಚೋಳಿ (ಕಲಬುರಗಿ ಜಿಲ್ಲೆ): ಬಾಲಕಿಯನ್ನು ಯುವಕನೊಬ್ಬ ಪುಸಲಾಯಿಸಿ ಕರೆದೊಯ್ದು ಅತ್ಯಾಚಾರ ನಡೆಸಿದ ಘಟನೆ ಸುಲೇಪೇಟ ಠಾಣೆ ವ್ಯಾಪ್ತಿಯ ಹಳ್ಳಿಯೊಂದರಲ್ಲಿ ನಡೆದಿದೆ.

16 ವರ್ಷದ ಬಾಲಕಿಗೆ ಎದುರು ಮನೆಯ ಮಹಾದೇವ (20) ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದ ದಿನವೇ ನೆರೆ ರಾಜ್ಯಕ್ಕೆ ಕರೆದೊಯ್ದು ಅತ್ಯಾಚಾರ ನಡೆಸಿರುವ ಬಗ್ಗೆ ಬಂದ ದೂರಿನ ಮೇರೆಗೆ ಸುಲೇಪೇಟ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಅಮರ ಕುಲಕರ್ಣಿ ಅವರು ಪೋಕ್ಸೊ ಪ್ರಕರಣ ದಾಖಲಿಸಿಕೊಂಡಿದ್ದರು.

ದೀಕ್ಷಿತ್ ಶೆಟ್ಟಿ

‘ಕಥೆ, ಪಾತ್ರಗಳ ಆಯ್ಕೆಯೇ ಸವಾಲು

ದೀಕ್ಷಿತ್ ಶೆಟ್ಟಿ ಅಭಿನಯದ ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’ ಚಿತ್ರ ತೆರೆಗೆ ಬರಲು ಸಿದ್ಧವಿದೆ. ಕನ್ನಡದ ಜತೆಗೆ ತೆಲುಗು, ತಮಿಳು, ಮಲಯಾಳ ಭಾಷೆಗಳಲ್ಲಿಯೂ ಸಕ್ರಿಯರಾಗಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾಹಿತಿ ಹಂಚಿಕೊಂಡರು...

ವಿನಾಯಕ ಕೆ.ಎಸ್

• ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’ ಚಿತ್ರದಲ್ಲಿ ನಿಮ್ಮ ಪಾತ್ರವೇನು?

‘ಟೈಗರ್’ ಎನ್ನುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಈತ ಒಂದು ಬಗೆಯ ವಿಲಕ್ಷಣ ವ್ಯಕ್ತಿ. ಇದೊಂದು ಬ್ಯಾಂಕ್ ಕಳ್ಳತನಕ್ಕೆ ಸಂಬಂಧಿಸಿದ ಕಥೆ. ಕುತೂಹಲದ ಜತೆಗೆ ಹಾಸ್ಯಮಯ ನಿರೂಪಣೆ ಇದೆ. ಇಲ್ಲಿ ಕಳ್ಳನಾಗಿರುತ್ತೇನೆ. ಕಥೆಯಲ್ಲಿ ಸಾಕಷ್ಟು ತೊಳಲಾಟಗಳಿವೆ. ಏಕೆ ಕಳ್ಳನಾಗುತ್ತೇನೆ ಎಂಬ ಸಣ್ಣ ಹಿನ್ನೆಲೆಯ ಕಥೆಯೂ ಬರುತ್ತದೆ. ಒಟ್ಟಾರೆಯಾಗಿ ಪ್ರೇಕ್ಷಕರನ್ನು ಹಿಡಿದು ಕೂರಿಸಬಲ್ಲ ಮನರಂಜನಾತ್ಮಕ ಚಿತ್ರವಿದು.

• ‘ಬ್ಲಿಂಕ್’ ನಿರ್ದೇಶಕರ ಜತೆ ಇನ್ನೊಂದು ಸಿನಿಮಾ ಮಾಡುತ್ತಿರುವಿರಾ?

ಚಿತ್ರೀಕರಣ ಮುಕ್ತಾಯದ ಹಂತದಲ್ಲಿದೆ. ಈ ಸಿನಿಮಾದಲ್ಲಿ ನಾಯಕನಲ್ಲದೇ ಬೇರೆ ಜವಾಬ್ದಾರಿಗಳನ್ನು ತೆಗೆದುಕೊಂಡಿರುವೆ. ಹೀಗಾಗಿ ಈ ಬಗ್ಗೆ ಸದ್ಯದಲ್ಲಿಯೇ ಅಧಿಕೃತವಾಗಿ ಮಾಹಿತಿ ಕೊಡುವೆ. ಅಲ್ಲಿತನಕ ಹೆಚ್ಚು ಹೇಳಲಾರೆ.

• ನಿಮ್ಮ ಮುಂದಿನ ಯೋಜನೆಗಳ ಬಗ್ಗೆ ಹೇಳಿ.

‘ದಿಯಾ’ ನಿರ್ದೇಶಕರ ಜತೆ ಇನ್ನೊಂದು ಸಿನಿಮಾ ಮಾಡುತ್ತಿರುವೆ. ಚಿತ್ರೀಕರಣ ಪ್ರಗತಿಯಲ್ಲಿದೆ. ತೆಲುಗಿನಲ್ಲಿ ‘ಕೆಜೆಕ್ಯೂ’ ಚಿತ್ರ ನಡೆಯುತ್ತಿದೆ. ‘ದಿ ಗರ್ಲ್ ಫ್ರೆಂಡ್’ ಚಿತ್ರೀಕರಣ ಮುಗಿಸಿ ಬಿಡುಗಡೆಗೆ ಸಿದ್ಧವಿದೆ. ಮಲಯಾಳದಲ್ಲಿ ‘ಏಜಲ್ ನಂ.16’ ಚಿತ್ರದಲ್ಲಿ ನಟಿಸುತ್ತಿರುವೆ. ತೆಲುಗಿನಲ್ಲಿ ‘ಶವರಾ’ ಎಂಬ ಚಿತ್ರ ಸೆಟ್ಟೇರಿದೆ. ತಮಿಳಿನಲ್ಲಿ ‘ಪ್ರೊಡಕ್ಷನ್ ನಂ.7’ ಚಿತ್ರ ಚಿತ್ರೀಕರಣ ಹಂತದಲ್ಲಿದೆ.

• ಬೇರೆ, ಬೇರೆ ಭಾಷೆಗಳಲ್ಲಿ ಒಟ್ಟಿಗೆ ನಟಿಸುತ್ತಿರುವಿರಿ. ಇಲ್ಲಿ ನಿಮಗೆ ಸವಾಲು ಎನ್ನಿಸಿದ್ದೇನು?

ಕಥೆ ಮತ್ತು ಪಾತ್ರಗಳ ಆಯ್ಕೆಯೇ ದೊಡ್ಡ ಸವಾಲು. ಇಲ್ಲಿ ನಟಿಸುತ್ತಿರುವ ಎಲ್ಲ ಚಿತ್ರಗಳು ಬೇರೆ ಬೇರೆ ಜಾನರ್‌ನವು. ಜೊತೆಗೆ ವಿಭಿನ್ನ ಪಾತ್ರಗಳು. ಹೀಗಾಗಿ ನಟನೆ ಸುಲಭವಲ್ಲ. ಒಂದು ಪಾತ್ರದಿಂದ ಇನ್ನೊಂದಕ್ಕೆ ಬದಲಾಗುವುದು ಕಷ್ಟದ ಕೆಲಸ. ಪ್ರತಿ ಪಾತ್ರಕ್ಕೂ ಆ ಭಾಷೆ ಕಲಿಯಬೇಕು. ಪಾತ್ರಕ್ಕೆ ಹೊಂದಿಕೊಳ್ಳಬೇಕು. ಕೆಲವೊಮ್ಮೆ ಆರೋಗ್ಯದ ಸಮಸ್ಯೆಯ ನಡುವೆಯೂ ಚಿತ್ರೀಕರಣ ಮಾಡಬೇಕಾಗುತ್ತದೆ. ಆಗ ತ್ರಾಸದಾಯಕ ಎನಿಸುತ್ತದೆ.

• ಈತನಕ ಸಿನಿಪಯಣ ಖುಷಿ ನೀಡಿದೆಯಾ?

ಖಂಡಿತ ಖುಷಿಯಿದೆ. ಕಿರುತೆರೆಯಿಂದ ಬಂದು ಹಿರಿತೆರೆಯಲ್ಲಿ ಬದುಕು ಕಟ್ಟಿಕೊಳ್ಳುವುದು ಸುಲಭವಲ್ಲ. ಎಲ್ಲರಿಗೂ ಇದು ಸಾಧ್ಯವಾಗುವುದಿಲ್ಲ. ಈ ವಿಷಯದಲ್ಲಿ ನಾನು ಅದೃಷ್ಟವಂತ. ಹಾಗಂತ ಪೂರ್ಣ ತೃಪ್ತಿಯಿಲ್ಲ. ಕೆಲವು ಕಡೆ ಸಿಗಬೇಕಾಗಿದ್ದು ಸಿಕ್ಕಿಲ್ಲ ಎನ್ನಿಸುತ್ತದೆ. ಒಳ್ಳೆ ಸಿನಿಮಾಗಳನ್ನು ಮಾಡಿಯೂ ನಿರೀಕ್ಷಿತ ಯಶಸ್ಸು ಸಿಗದಿದ್ದಾಗ ಸ್ವಲ್ಪ ಬೇಸರವಾಗುತ್ತದೆ.

• ‘ಬ್ಲಿಂಕ್’ ಚಿತ್ರ ಬಿಡುಗಡೆ ವೇಳೆ ಚಿತ್ರಕ್ಕೆ ಜನ ಬಾರದಿರುವುದಕ್ಕೆ ಬೇಸರ ಹೊರಹಾಕಿದ್ರಿ. ಒಟ್ಟಾರೆಯಾಗಿ ಕೆಲ ಉತ್ತಮ ಕನ್ನಡ ಸಿನಿಮಾಗಳಿಗೂ ಜನ ಬಾರದಿರಲು ಕಾರಣವೇನಿರಬಹುದು?

ಜನ ನಂಬಿಕೆ ಕಳೆದುಕೊಂಡಿದ್ದಾರೆ. ಒಂದು ಭಾಷೆಯಲ್ಲಿ ವರ್ಷಕ್ಕೆ ಎರಡು ಉತ್ತಮ ಸಿನಿಮಾಗಳು ಬಂದರೆ ಸಾಲದು. ಸಾಕಷ್ಟು ಉತ್ತಮ ಸಿನಿಮಾಗಳು ಬರಬೇಕು. ಬೇರೆ ಬೇರೆ ಭಾಷೆಗಳಲ್ಲಿ ಕೆಲಸ ಮಾಡುವಾಗ ನನಗೆ ಅನ್ನಿಸಿದ್ದು ಬೇರೆ ಭಾಷೆಗಳಲ್ಲಿ ಆ ಭಾಷೆಯ ಸಿನಿಮಾಗಳ ಮೇಲಿನ ನಂಬಿಕೆಯಿಂದಲೇ ಉತ್ತಮ ಸಿನಿಮಾಗಳು ಗೆಲ್ಲುತ್ತವೆ. ನಮ್ಮಲ್ಲಿ ಹಾಗೆ ಆಗುತ್ತಿಲ್ಲ. ವಾರಕ್ಕೆ ಬಿಡುಗಡೆಯಾಗುವ 10–11 ಸಿನಿಮಾಗಳಲ್ಲಿ ಒಂದು ಚೆನ್ನಾಗಿರುತ್ತದೆ. ಅದು ಕೂಡ ಕಳೆದುಹೋಗುತ್ತದೆ. ನಿರಂತರವಾಗಿ ಉತ್ತಮ ಸಿನಿಮಾಗಳು ಬಂದಾಗ ಮಾತ್ರ ಜನ ಚಿತ್ರಮಂದಿರಗಳತ್ತ ಬರುತ್ತಾರೆ. ಜತೆಗೆ ಉತ್ತಮ ಚಿತ್ರಗಳು ಬಂದಾಗ ಚಿತ್ರರಂಗ ಒಟ್ಟಾಗಿ ನಿಲ್ಲಬೇಕು. ಒಂದು ಸಿನಿಮಾ ಗೆದ್ದರೆ ಅದರ ಹಿಂದೆ ಬರುವ ಮತ್ತೊಂದು ಒಳ್ಳೆಯ ಸಿನಿಮಾಕ್ಕೂ ಜನ ಬರುತ್ತಾರೆ. ಹೀಗೆ ಸಿನಿಮಾ ನೋಡುಗರ ಸಂಖ್ಯೆ ಹೆಚ್ಚುತ್ತದೆ. ‘ಬ್ಲಿಂಕ್’ ಸಿನಿಮಾ ಮಲಯಾಳದಲ್ಲಿ ಬಂದಿದ್ದರೆ ಬೆಂಗಳೂರಿನಲ್ಲಿಯೇ ಕನ್ನಡದಲ್ಲಿ ಒಟ್ಟಾರೆ ರಾಜ್ಯದಲ್ಲಿ ನೋಡಿದ್ದಕ್ಕಿಂತ ಹೆಚ್ಚು ಜನ ನೋಡಿರುತ್ತಿದ್ದರೇನೋ ಅನ್ನಿಸುತ್ತದೆ. ಯಾಕೆಂದರೆ ಜನರಿಗೆ ಆ ಭಾಷೆಯ ಚಿತ್ರಗಳ ಮೇಲೆ ನಂಬಿಕೆ ಹೆಚ್ಚಿದೆ. ಆ ನಂಬಿಕೆಯನ್ನು ನಾವೂ ಗಳಿಸಿಕೊಳ್ಳಬೇಕಿದೆ. ❖

ಅರ್ಚನಾ ಕೊಟ್ಟಿಗೆ

‘ಶೇಷ 2016’ ಟೀಸರ್ ಬಿಡುಗಡೆ

ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರದ ಕುರಿತು ಕಥೆಯನ್ನು ಹೊಂದಿರುವ ‘ಶೇಷ 2016’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರದೀಪ್ ಅರಸೀಕೆರೆ ಚಿತ್ರವನ್ನು ನಿರ್ದೇಶಿಸಿದ್ದಾರೆ. ಮರಡಿಗುಡ್ಡ ಎಂಟರ್‌ಟೈನ್‌ಮೆಂಟ್ ಅಡಿಯಲ್ಲಿ ಮಂಜುವಾಣಿ ವಿ.ಎಸ್. ಹಾಗೂ ವೀಣಾ. ಎಸ್. ಬಂಡವಾಳ ಹೂಡಿದ್ದಾರೆ.

‘ಇದು ನನ್ನ ಮೊದಲ ನಿರ್ದೇಶನದ ಚಿತ್ರ. ಪೊಲೀಸ್ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು ನಡೆಸುತ್ತಿರುವ ಭ್ರಷ್ಟ ಚಟುವಟಿಕೆಗಳ ಬಗ್ಗೆ ಚಿತ್ರ ಮಾಡಿದ್ದೇನೆ. ಸಾಮಾನ್ಯವಾಗಿ ಎಲ್ಲದಕ್ಕೂ ಒಂದೊಂದು ಪರ್ಯಾಯ ವ್ಯವಸ್ಥೆ ಇರುತ್ತದೆ. ಸರ್ಕಾರಿ ಆಸ್ಪತ್ರೆ, ಶಾಲೆ ಇಲ್ಲದಿದ್ದರೆ ಖಾಸಗಿ ಆಯ್ಕೆಗಳಿವೆ. ಆದರೆ ಪೊಲೀಸ್ ಇಲಾಖೆಗೆ ಬದಲಿ ವ್ಯವಸ್ಥೆ ಇಲ್ಲ. ಇಂಥ ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರದಿಂದ ಜನರು ಹೇಗೆ ಸಮಸ್ಯೆಗಳನ್ನು ಎದುರಿಸುತ್ತಾರೆ, ಅದನ್ನು ಹೇಗೆ ನಿಭಾಯಿಸುತ್ತಾರೆ ಎಂಬುದೇ ಚಿತ್ರದ ಕಥೆ. ಸೆನ್ಸಾರ್ ಆಗಿ ಬಿಡುಗಡೆಗೆ ಸಿದ್ಧವಿದೆ. ಜೂನ್ ವೇಳೆಗೆ ತೆರೆಗೆ ಬರಲಿದೆ’ ಎಂದರು ನಿರ್ದೇಶಕರು.

ಕನ್ನಡ ಹಾಗೂ ಮಲಯಾಳ ಭಾಷೆಗಳಲ್ಲಿ ಚಿತ್ರ ಮೂಡಿಬಂದಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ, ಆರ್.ಎಸ್.ಆನಂದ ಕುಮಾರ್ ಛಾಯಾಚಿತ್ರಗ್ರಹಣವಿದೆ. ಪ್ರಮೋದ್ ಶೆಟ್ಟಿ, ಅರ್ಚನಾ ಕೊಟ್ಟಿಗೆ ಪ್ರಮುಖ ಪಾತ್ರದಲ್ಲಿದ್ದಾರೆ. ಸಿದ್ಲಿಂಗು ಶ್ರೀಧರ್, ಸಾಯಿ ಭೈರವ ಮುಂತಾದವರು ತಾರಾಗಣದಲ್ಲಿದ್ದಾರೆ. ❖

ದೈಜಿಯಲ್ಲಿ ರಮೇಶ್ ಜತೆ ದಿಗಂತ್

ರಮೇಶ್, ದಿಗಂತ್

ನಟ ರಮೇಶ್ ಅರವಿಂದ್ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತಿರುವ ‘ದೈಜಿ’ ಚಿತ್ರೀಕರಣ ಭರದಿಂದ ಸಾಗಿದೆ. ‘ಶಿವಾಜಿ ಸುರತ್ಕಲ್’ ಖ್ಯಾತಿಯ ಆಕಾಶ್ ಶ್ರೀವತ್ಸ ನಿರ್ದೇಶನದ ಚಿತ್ರಕ್ಕೆ ನಟ ದಿಗಂತ್ ಸೇರ್ಪಡೆಗೊಂಡಿದ್ದಾರೆ.

‘ಇದು ರಮೇಶ್ ಅರವಿಂದ್ ಅವರ 106ನೇ ಚಿತ್ರ. ದಿಗಂತ್, ರಮೇಶ್ ಅರವಿಂದ್ ಅವರ ತಮ್ಮನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ರಮೇಶ್ ಅರವಿಂದ್ ಸೂರ್ಯನ ಪಾತ್ರದಲ್ಲಿ, ರಾಧಿಕಾ ನಾರಾಯಣ್ ಭೂಮಿಯ ಪಾತ್ರದಲ್ಲಿ, ದಿಗಂತ್ ಗಗನ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದ ಶೂಟಿಂಗ್ ನಡೆಯುತ್ತಿದ್ದು ಶೇಕಡ 50ರಷ್ಟು ಚಿತ್ರೀಕರಣ ಮುಕ್ತಾಯಗೊಂಡಿದೆ’ ಎಂದಿದೆ ಚಿತ್ರತಂಡ.

ರವಿ ಕಶ್ಯಪ್ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಶ್ರೀಶಾ ಕುದುವಳ್ಳಿ ಛಾಯಾಚಿತ್ರಗ್ರಹಣವಿದೆ. ‘ಚಿತ್ರದ ಶೀರ್ಷಿಕೆ ‘ದೈಜಿ’ಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಅರ್ಥಗಳಿವೆ. ಕೊಂಕಣಿಯಲಿ ‘ದೈಜಿ’ ಎಂದರೆ ರಕ್ತ ಸಂಬಂಧ. ಜಪಾನೀ ಭಾಷೆಯಲ್ಲಿ ‘ದೈಜಿ’ ಎಂದರೆ ಬಹಳ ಕಾಳಜಿ ವಹಿಸಬೇಕಾದ ವಿಚಾರ. ಮಿಸ್ಟರಿ ಅಥವಾ ಹಾರರ್ ಕಥೆಯುಳ್ಳ ಚಿತ್ರ’ ಎಂದಿದ್ದಾರೆ ನಿರ್ದೇಶಕರು. ❖

‘ಕಲಾತ್ಮಕ ಚಿತ್ರಗಳಿಗೂ ಮಾರುಕಟ್ಟೆಯಿದೆ’

ಅಭಿಲಾಷ್ ಶೆಟ್ಟಿ

ಅಭಿಲಾಷ್ ಶೆಟ್ಟಿ ನಿರ್ಮಿಸಿ, ನಿರ್ದೇಶಿಸಿರುವ ‘ನಾಳೆ ರಜಾ ಕೋಳಿ ಮಜಾ’ ಚಿತ್ರ ಇಂದು (ಮೇ 9) ತೆರೆ ಕಾಣುತ್ತಿದೆ. ಸಾಕಷ್ಟು ಚಿತ್ರೋತ್ಸವಗಳಿಗೆ ಆಯ್ಕೆಯಾಗಿ ಪ್ರಶಸ್ತಿ ಪಡೆದಿರುವ ಈ ಚಿತ್ರ ಹಾಗೂ ತಮ್ಮ ಸಿನಿಪಯಣದ ಕುರಿತು ಅವರು ಮಾತನಾಡಿದ್ದಾರೆ.

ಚೊಚ್ಚಲ ಚಿತ್ರ ‘ಕೋಳಿತಾಳ್’ನಿಂದಲೇ ಗಮನ ಸೆಳೆದವರು ಅಭಿಲಾಷ್ ಶೆಟ್ಟಿ. ಮಲೆನಾಡು ಭಾಗದ ಹಾಸ್ಯಮಯ ಕಥೆಯನ್ನು ಹೊಂದಿದ್ದ ಚಿತ್ರ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಗೊಂಡಿತ್ತು. ತೆರೆಕಂಡು ಚಿತ್ರಮಂದಿರಗಳಲ್ಲಿಯೂ ಉತ್ತಮ ಪ್ರತಿಕ್ರಿಯೆ ಗಳಿಸಿತ್ತು. ಒಟಿಟಿ ಸೇರಿದಂತೆ ಬಿಡುಗಡೆ ನಂತರದ ಎಲ್ಲ ವಹಿವಾಟುಗಳನ್ನು ಕುದುರಿಸಿಕೊಂಡು ಅಚ್ಚರಿ ಮೂಡಿಸಿತ್ತು. ಆ ಕಥೆಯೊಂದಿಗೆ ಸಂಬಂಧ ಹೊಂದಿರುವ ಚಿತ್ರ ‘ನಾಳೆ ರಜಾ ಕೋಳಿ ಮಜಾ’.

‘ಹನ್ನೊಂದು ವರ್ಷದ ಹುಡುಗಿಗೆ ಗಾಂಧಿ ಜಯಂತಿಯಂದು ನಾನ್‌ವೆಜ್ ತಿನ್ನಬೇಕೆಂಬ ಬಯಕೆಯಾಗುತ್ತದೆ. ಆವತ್ತು ಭಾನುವಾರ ಕೂಡ. ಆ ಸನ್ನಿವೇಶದಲ್ಲಿ ಆಕೆಯ ದೃಷ್ಟಿಕೋನದಿಂದ ಜಗತ್ತು ಹೇಗಿರುತ್ತದೆ ಎಂಬುದೇ ಸಿನಿಮಾ. ಕಲಾತ್ಮಕ ಸಿನಿಮಾ ಎಂದಾಕ್ಷಣ ಸಾಮಾನ್ಯರು ನೋಡುವಂತೆ ಇರುವುದಿಲ್ಲ, ನಿಧಾನವಾಗಿರುತ್ತದೆ ಎಂಬ ಭಾವನೆ ಇದೆ. ಆದರೆ ಇದು ಸಂಪೂರ್ಣ ಹಾಸ್ಯಮಯ ಚಿತ್ರ. ನ್ಯೂಯಾರ್ಕ್ ಇಂಡಿಯನ್, ಜೋಗ್‌ಜಾ ಇಂಟರ್‌ನ್ಯಾಷನಲ್, ಶಿಕಾಗೋ ಏಷ್ಯನ್ ಪಾಪಪ್ ಚಿತ್ರೋತ್ಸವಗಳಿಗೆ ಆಯ್ಕೆಗೊಂಡು ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಗಳಿಸಿದೆ’ ಎನ್ನುತ್ತಾರೆ ಅಭಿಲಾಷ್.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅಭಿಲಾಷ್, ಕೆಲಸ ಬಿಟ್ಟು ಚಿತ್ರರಂಗದತ್ತ ಹೊರಳಿದವರು. ಶಾರ್ಟ್ ಫಿಲಂಗಳಿಂದ ಸಿನಿಪಯಣ ಪ್ರಾರಂಭಿಸಿ ಗ್ರಾಮೀಣ ಸೊಗಡಿನ ಕಥೆಯೊಂದಿಗೆ ಚೊಚ್ಚಲ ಚಿತ್ರದಲ್ಲಿಯೇ ಗಮನ ಸೆಳೆದರು. ಈ ಚಿತ್ರದಲ್ಲಿ ರಾಧಾ ರಾಮಚಂದ್ರ ಹೊರತುಪಡಿಸಿ ಮಿಕ್ಕವರು ಸ್ಥಳೀಯ ಕಲಾವಿದರು. ಸಾಗರ ಮತ್ತು ಕುಂದಾಪುರ ಭಾಗದಲ್ಲಿ ಚಿತ್ರೀಕರಣಗೊಂಡಿದೆ.

‘ಈ ರೀತಿ ಚಿತ್ರಕ್ಕೆ ಅದರದ್ದೇ ಆದ ಮಾರುಕಟ್ಟೆ ಇದೆ. ಸರಿಯಾದ ಲೆಕ್ಕಾಚಾರದೊಂದಿಗೆ ಸಿನಿಮಾ ಮಾಡಿದರೆ ಹಾಕಿದ ಬಂಡವಾಳವನ್ನು ಖಂಡಿತವಾಗಿ ಮರಳಿ ಪಡೆಯಬಹುದು. ಹೀಗಾಗಿ ನಾನೇ ಬಂಡವಾಳ ಹಾಕಿರುವೆ. ಚಿತ್ರಮಂದಿರದಲ್ಲಿ ಬಿಡುಗಡೆಗೊಂಡರಷ್ಟೆ ಸಿನಿಮಾಕ್ಕೆ ಬೆಲೆ. ಆಗ ವಹಿವಾಟಿನ ಒಂದಷ್ಟು ಬಾಗಿಲುಗಳು ತೆರೆಯುತ್ತವೆ. ಕ್ಯೂಬ್ ಸಿನಿಮಾ ಈ ಚಿತ್ರದ ಡಿಜಿಟಲ್ ವಿತರಣೆ ಹೊಣೆ ಹೊತ್ತುಕೊಂಡಿದೆ. ಶಿಪ್, ಏರ್‌ಲೈನ್ಸ್ ಮೊದಲಾದ ರೈಟ್ಸ್‌ಗಳಿವೆ. ಹಿಂದಿನ ಸಿನಿಮಾ ಕುಂದಾಪುರ, ಶಿವಮೊಗ್ಗ ಭಾಗದಲ್ಲಿ ಚಿತ್ರಮಂದಿರಗಳಲ್ಲಿಯೂ ಉತ್ತಮ ಗಳಿಕೆ ಕಂಡಿತ್ತು. ಅದೇ ಭರವಸೆ ಮೇಲೆ ಚಿತ್ರಮಂದಿರಕ್ಕೆ ಬರುತ್ತಿದ್ದೇವೆ’ ಎನ್ನುತ್ತಾರೆ ಅವರು. ❖

ನಾಲ್ಕು ಚಿತ್ರಗಳು ತೆರೆಗೆ

ಈ ವರ್ಷ ಜನವರಿ–ಫೆಬ್ರುವರಿಯಲ್ಲಿ ಸಿನಿಮಾ ಬಿಡುಗಡೆಗೆ ಚಿತ್ರಮಂದಿರಗಳೇ ಸಿಗುತ್ತಿರಲಿಲ್ಲ. ಅಷ್ಟು ಚಿತ್ರಗಳು ತೆರೆಗೆ ಅಪ್ಪಳಿಸಿದ್ದವು. ಆದರೆ ಕಳೆದ ಒಂದು ತಿಂಗಳಿಂದ ಸರಿಯಾದ ಸಿನಿಮಾಗಳೇ ಇಲ್ಲದೇ ಚಿತ್ರಮಂದಿರಗಳು ಬಿಕೋ ಎನ್ನುತ್ತಿವೆ. ಈ ನಡುವೆ ‘ನಾಳೆ ರಜಾ ಕೋಳಿ ಮಜಾ’ ಸೇರಿದಂತೆ ನಾಲ್ಕು ಚಿತ್ರಗಳು ಈ ವಾರ ತೆರೆ ಕಾಣುತ್ತಿವೆ.

ಸೂತ್ರಧಾರಿ

ಗಾಯಕ ಚಂದನ್ ಶೆಟ್ಟಿ ನಾಯಕನಾಗಿ ನಟಿಸಿರುವ ಮೊದಲ ಚಿತ್ರ ‘ಸೂತ್ರಧಾರಿ’. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಕಿರಣ್ ಕುಮಾರ್ ನಿರ್ದೇಶಿಸಿದ್ದಾರೆ. ಈಗಲ್ ಮೀಡಿಯಾ ಕ್ರಿಯೇಷನ್ಸ್ ಮೂಲಕ ನವರಸನ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

‘40 ಜನರಿಗೆ ಈ ಸಿನಿಮಾ ತೋರಿಸಿ ಅವರ ಅಭಿಪ್ರಾಯಗಳನ್ನು ಪಡೆದುಕೊಂಡು ಒಂದಿಷ್ಟು ಬದಲಾವಣೆಗಳನ್ನು ಮಾಡಿಕೊಂಡು ಅಂತಿಮ ಸಿನಿಮಾ ಪ್ರತಿ ಸಿದ್ಧಪಡಿಸಲಾಗಿದೆ’ ಎಂದಿದ್ದಾರೆ ನವರಸನ್.

ನಾಯಕಿಯಾಗಿ ಅಪೂರ್ವ ನಟಿಸಿದ್ದಾರೆ. ಸಂಜಯ್ ಗೌಡ, ‘ನಟನ’ ಪ್ರಶಾಂತ್, ಲೋಹಿತ್, ರಮೇಶ್ ಮಾಸ್ಟರ್, ಗಣೇಶ್ ನಾರಾಯಣ್ ತಾರಾಬಳಗದಲ್ಲಿದ್ದಾರೆ.

‘ನಾನು ಅಂಡರ್‌ಕವರ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದೇನೆ. ಚಿತ್ರದ ಆರಂಭದಲ್ಲಿ ಈತ ಓರ್ವ ಸೋಮಾರಿ ಪೊಲೀಸ್ ಅಧಿಕಾರಿ. ಪ್ರಕರಣಗಳ ತನಿಖೆಗೆ ಬೇಕಾದ ಬುದ್ಧಿವಂತಿಕೆ ಇದ್ದರೂ ಬಳಸದೇ ಇರುವ ಯುವ ಅಧಿಕಾರಿ. ಹೀಗಿರುವಾಗ ಕಾರಣವಿಲ್ಲದೇ ಸರಣಿ ಆತ್ಮಹತ್ಯೆಗಳು ನಡೆಯುತ್ತವೆ. ಇವುಗಳು ಆತ್ಮಹತ್ಯೆಯಲ್ಲ ಕೊಲೆ ಎಂದು ಪತ್ತೆ ಹಚ್ಚುವ ಈತ ಇವುಗಳ ತನಿಖೆ ಆರಂಭಿಸುತ್ತಾನೆ. ಈ ಸಂದರ್ಭದಲ್ಲಿ ಎದುರಾಗುವ ಕಷ್ಟಗಳು, ಗೊಂದಲವೇ ಚಿತ್ರದ ಕಥೆ’ ಎಂದು ಚಂದನ್ ಶೆಟ್ಟಿ ಹೇಳಿದ್ದಾರೆ.

ಚಂದನ್ ಶೆಟ್ಟಿಯೇ ಸಂಗೀತ ನೀಡಿದ್ದಾರೆ. ಪಿ.ಕೆ.ಹೆಚ್ ದಾಸ್ ಛಾಯಾಚಿತ್ರಗ್ರಹಣ, ಸತೀಶ್ ಚಂದ್ರ ಸಂಕಲನ ಚಿತ್ರಕ್ಕಿದೆ.

ದಸ್ಕತ್

ತುಳುವಿನಲ್ಲಿ ಬಿಡುಗಡೆಗೊಂಡು ಪ್ರಶಂಸೆ ಗಳಿಸಿದ್ದ ಚಿತ್ರವಿದು. ಚಿತ್ರೋತ್ಸವಗಳಲ್ಲಿ ಪ್ರಶಸ್ತಿಯನ್ನೂ ಪಡೆದ ಚಿತ್ರ ಕನ್ನಡದಲ್ಲಿ ಡಬ್ ಆಗಿ ತೆರೆ ಕಾಣುತ್ತಿದೆ. ಅನೀಶ್ ಪೂಜಾರಿ ವೇಣೂರು ನಿರ್ದೇಶನವಿದೆ.

ದಸ್ಕತ್ ಚಿತ್ರದ ದೃಶ್ಯ

‘ದಸ್ಕತ್ ಎಂದರೆ ಸಹಿ ಮಾಡುವುದು ಎಂಬ ಅರ್ಥ. ಒಂದು ಹಳ್ಳಿಯಲ್ಲಿ ಜನ ಸಹಿಗಾಗಿ ಎಷ್ಟು ಕಷ್ಟಪಡುತ್ತಾರೆ, ಒಂದು ಸಹಿಯಿಂದ ಏನೆಲ್ಲ ಅವಾಂತರ ಸೃಷ್ಟಿಯಾಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ಶ್ರೀಮಂತರು, ಬಡವರು ಹಾಗೂ ಅಧಿಕಾರಿಗಳ ನಡುವಿನ ತಳಮಳದ ಜೊತೆಗೆ ಬದುಕು ಹೇಗೆಲ್ಲ ಸಾಗುತ್ತದೆ ಎಂಬುದನ್ನು ಬಹಳ ಸೂಕ್ಷ್ಮವಾಗಿ ಹೇಳುವ ಪ್ರಯತ್ನ ಮಾಡಿದ್ದೇವೆ. ಕರಾವಳಿ ಭಾಗದ ಸುತ್ತ ಚಿತ್ರೀಕರಿಸಿರುವ ನಮ್ಮ ಈ ಚಿತ್ರ ತುಳುವಿನಲ್ಲಿ ಬಿಡುಗಡೆಗೊಂಡು 70 ದಿನ ಪೂರೈಸಿತ್ತು’ ಎಂದಿದ್ದಾರೆ ನಿರ್ದೇಶಕರು.

ದೀಕ್ಷಿತ್ ಚಿತ್ರದ ನಾಯಕ. ಮೋಹನ್ ಶೇಣಿ, ಭವ್ಯ ಪೂಜಾರಿ, ಹಾಸ್ಯ ನಟ ದೀಪಕ್ ರೈ ಪಾಣಾಜೆ ಮುಂತಾದವರು ತಾರಾಗಣದಲ್ಲಿದ್ದಾರೆ. ಸೆವೆಂಟಿ ಸೆವೆನ್ ಸ್ಟುಡಿಯೋಸ್ ಅಡಿ ರಾಘವೇಂದ್ರ ಕುಡ್ವ ನಿರ್ಮಾಣ ಮಾಡಿದ್ದು, ಸಂತೋಷ್ ಆಚಾರ್ಯ ಗುಂಪಲಾಜೆ ಛಾಯಾಚಿತ್ರಗ್ರಹಣ ಹಾಗೂ ಗಣೇಶ್ ನೀರ್ಚಾಲ್ ಸಂಕಲನವಿದೆ.

ವಿಕ್ಕಿ

ಮಧ್ಯಮ ವರ್ಗದ ಯುವಕನ ಕನಸುಗಳ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರವಿದು. ದೀಪಕ್ ಎಸ್ ಅವಂದಕರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಕೇಸರಿ ನಂದನ ಸಿನಿಕ್ರಿಯೇಷನ್ಸ್ ಲಾಂಛನದಲ್ಲಿ ನವನೀತ್ ಲಕ್ಷ್ಮಿ, ಕೆ.ಆರ್. ಸುರೇಶ್ ಬಂಡವಾಳ ಹೂಡಿದ್ದಾರೆ.

‘ವಿಕ್ಕಿ ಕಾಮಿಡಿ ಜಾನರ್ ಚಿತ್ರ. ಮಿಡಲ್ ಕ್ಲಾಸ್ ಹುಡುಗನೊಬ್ಬ ದೊಡ್ಡ ಕನಸು ಕಂಡು, ಅದನ್ನು ನನಸು ಮಾಡಿಕೊಳ್ಳಲು ಹೋದಾಗ ಏನೆಲ್ಲ ಆಗಬಹುದು ಎಂಬುದನ್ನು ಹಾಸ್ಯಮಯವಾಗಿ ಹೇಳುವ ಪ್ರಯತ್ನ ಮಾಡಿದ್ದೇವೆ. ಬೆಂಗಳೂರು, ಚಿಕ್ಕಮಗಳೂರು ಸುತ್ತಮುತ್ತ ಚಿತ್ರವನ್ನು ಚಿತ್ರೀಕರಿಸಿದ್ದೇವೆ’ ಎನ್ನುತ್ತಾರೆ ನಿರ್ದೇಶಕರು.

ಭರತ್ ತಾಳಿಕೋಟೆ ನಾಯಕ. ವಿಂಧ್ಯಾ ಹೆಗಡೆ, ವರುಣ್ ದೇವಯ್ಯ ಮೊದಲಾದವರು ಚಿತ್ರದಲ್ಲಿದ್ದಾರೆ. ಆರವ ರಿಶಿಕ್ ಸಂಗೀತ ಚಿತ್ರಕ್ಕಿದೆ. ❖

ಚಂದನ್, ಸಂಜನಾ ಆನಂದ್

‘ಬ್ಲಡಿ ಬಾಬು’ ಶೀಘ್ರದಲ್ಲಿ ತೆರೆಗೆ

ಹಿರಿಯ ನಿರ್ದೇಶಕ ರಾಜೇಶ್ ಮೂರ್ತಿ ತಮ್ಮ ಪುತ್ರನಿಗಾಗಿ ‘ಬ್ಲಡಿ ಬಾಬು’ ಚಿತ್ರ ನಿರ್ಮಿಸಿ, ನಿರ್ದೇಶಿಸಿದ್ದಾರೆ. ಸೈಕಲಾಜಿಕಲ್, ಆ್ಯಕ್ಷನ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

‘ಬೆಂಗಳೂರು, ನಂದಿಬೆಟ್ಟ ಹಾಗೂ ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಿಸಲಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಜೂನ್‌ನಲ್ಲಿ ಚಿತ್ರ ಬಿಡುಗಡೆ ಯೋಜನೆಯಿದೆ’ ಎಂದರು ನಿರ್ದೇಶಕರು.

ನಾಯಕ ಯಶಸ್ವಗೆ ಸ್ಮಿತಾ ಜೋಡಿಯಾಗಿದ್ದಾರೆ. ದಿಲೀಪ್ ಕುಮಾರ್, ನೆ.ಲ.ನರೇಂದ್ರ ಬಾಬು ಮುಂತಾದವರು ಚಿತ್ರದಲ್ಲಿದ್ದಾರೆ. ಈ ಚಿತ್ರದಲ್ಲಿ ಮೂರು ಹಾಡುಗಳಿದ್ದು, ನಿತೀಶ್ ಕುಮಾರ್ ಸಂಗೀತ ಸಂಯೋಜನೆಯಿದೆ. ವಿನೋದ್ ಆರ್. ಛಾಯಾಚಿತ್ರಗ್ರಹಣವಿದೆ. ❖


ಯಶಸ್ವ, ಸ್ಮಿತಾ

ಒಳ ಮೀಸಲಾತಿ ಸಮೀಕ್ಷೆ: ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಹೇಳಿಕೆ

‘ಛಲವಾದಿ, ಹೊಲಯ ಎಂದೇ ಬರೆಯಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸುವುದಕ್ಕಾಗಿ ನಡೆಯುತ್ತಿರುವ ಸಮೀಕ್ಷೆಯಲ್ಲಿ ಬಲಗೈ, ಛಲವಾದಿ, ಹೊಲಯ, ಮಹರ್, ಪರಯ್ಯ, ಮಾಲಾ, ಚನ್ನದಾಸರ ಎಂಬ ಮೂಲ ಜಾತಿಯನ್ನು ಬರೆಯಬೇಕು ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಹೇಳಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಸಿದ್ದಯ್ಯ, ‘ಒಳ ಮೀಸಲಾತಿಗೆ ಸಂಬಂಧಿಸಿದ ಜಾತಿ ಸಮೀಕ್ಷೆ ಮೂರು ಹಂತಗಳಲ್ಲಿ ನಡೆಯಲಿದೆ. ಮೊದಲನೇ ಹಂತದಲ್ಲಿ ಮೇ 5ರಿಂದ 17ರವರೆಗೆ ಮನೆ ಮನೆ ಸಮೀಕ್ಷೆ ಜರುಗಲಿದೆ. ಮೊದಲನೇ ಹಂತದ ಸಮೀಕ್ಷಾ ಪ್ರಕ್ರಿಯೆಯಲ್ಲಿ ಭಾಗವಹಿಸದವರು ಮೇ 19ರಿಂದ 21ರವರೆಗೆ ನಡೆಯುವ ಮತಗಟ್ಟೆ ಪ್ರದೇಶಗಳಲ್ಲಿ ಗುರುತಿಸಿರುವ ವಿಶೇಷ ಶಿಬಿರಗಳಲ್ಲಿ ನಡೆಯುವ ಎರಡನೇ ಹಂತದ ಸಮೀಕ್ಷೆಯಲ್ಲಿ ಭಾಗವಹಿಸಬಹುದು.

ಮುಖ್ಯಾಂಶಗಳು
- ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ನಮೂದಿಸಬೇಡಿ
- ಮೂಲ ಜಾತಿ, ಉಪ ಜಾತಿಯನ್ನೇ ನಮೂದಿಸಿ
- ಸಮುದಾಯಕ್ಕೆ ನಷ್ಟವಾಗದಂತೆ ಎಚ್ಚರವಹಿಸಿ

ಮೇ 19ರಿಂದ 23ರವರೆಗೆ ನಡೆಯುವ ಆನ್‌ಲೈನ್ ಸಮೀಕ್ಷೆಯಲ್ಲಿ ಜಾತಿ ಪ್ರಮಾಣ ಪತ್ರದ ಆರ್‌.ಡಿ ಸಂಖ್ಯೆಯ ಮೂಲಕ ಮಾಹಿತಿಯನ್ನು ಹಂಚಿಕೊಳ್ಳಬಹುದು’ ಎಂದು ತಿಳಿಸಿದರು.

‘ಕೆಲವು ಜಿಲ್ಲೆಗಳಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದು ಬಲಗೈ ಮತ್ತು ಎಡಗೈ ಎರಡೂ ಗುಂಪಿನ ಜಾತಿಗಳು ಗುರುತಿಸಿಕೊಂಡಿವೆ. ಆದ್ದರಿಂದ ಜಾತಿ ಸಮೀಕ್ಷೆಯ ಸಂದರ್ಭದಲ್ಲಿ ಮೂಲ ಜಾತಿ, ಉಪ ಜಾತಿಯ ಕಾಲಂನಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದು ನಮೂದಿಸಬಾರದು. ಬಲಗೈ ಗುಂಪಿಗೆ ಸೇರಿದ ಸ್ಥಳೀಯವಾಗಿ ಗುರುತಿಸುವ ಮೂಲ ಜಾತಿಯ ಹೆಸರಿನಡಿ ಬಲಗೈ, ಛಲವಾದಿ, ಹೊಲಯ, ಮಹರ್, ಪರಯ್ಯ, ಮಾಲಾ, ಚನ್ನದಾಸರ ಎಂದೇ ನಮೂದಿಸಬೇಕು’ ಎಂದು ಮನವಿ ಮಾಡಿದರು.

‘ಸರ್ಕಾರ ಸಮೀಕ್ಷೆಯ ಆಧಾರದ ಮೇಲೆ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಸೌಲಭ್ಯವನ್ನು ನೀಡುತ್ತದೆ. ಆದ್ದರಿಂದ ನಮ್ಮ ಮೂಲ ಜಾತಿ ಹಾಗೂ ಉಪ ಜಾತಿಯನ್ನು ನಮೂದಿಸಿದರೆ, ನಮ್ಮ ನಿಜವಾದ ಜನಸಂಖ್ಯೆಯ ಅನುಗುಣವಾಗಿ ಒಳ ಮೀಸಲಾತಿ ಸೌಲಭ್ಯ ದೊರೆಯಲಿದೆ. ಇಲ್ಲದಿದ್ದರೆ ನಮ್ಮ ಸಮುದಾಯಕ್ಕೆ ನಷ್ಟವಾಗಲಿದೆ’ ಎಂದು ತಿಳಿಸಿದರು.

‘ತರಾತುರಿ ಸಮೀಕ್ಷೆಯಿಂದ ಬಂಜಾರರಿಗೆ ಅನ್ಯಾಯ’

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸುವುದಕ್ಕಾಗಿ ನಡೆಯುತ್ತಿರುವ ತರಾತುರಿ ಸಮೀಕ್ಷೆಯಿಂದ ಸಮಂಜಸ ವರದಿ ನೀಡಲು ಸಾಧ್ಯವಿಲ್ಲ. ಇದರಿಂದ ಈ ಪಟ್ಟಿಯಲ್ಲಿ ಬರುವ ಎಲ್ಲ ಸಮುದಾಯಗಳಿಗೆ ಅನ್ಯಾಯವಾಗುತ್ತದೆ ಎಂದು ಕರ್ನಾಟಕ ಬಂಜಾರ (ಲಂಬಾಣಿ) ಹಕ್ಕು ಸಂರಕ್ಷಣಾ ಸಮಿತಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ರಾಜಾನಾಯ್ಕ, ಪ್ರಧಾನ ಕಾರ್ಯದರ್ಶಿ ರವಿಕಾಂತ ಆರ್. ಅಂಗಡಿ, ‘ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ಕೈಗೊಂಡಿರುವ ಸಮೀಕ್ಷೆಯಲ್ಲಿ ಯಾವ ಯಾವ ಅಂಶಗಳ ವಿವರ ಒದಗಿಸಬೇಕು ಎಂಬುದರ ಕುರಿತು ಸರಿಯಾದ ಮಾಹಿತಿಯನ್ನು ಯಾರಿಗೂ ನೀಡಿಲ್ಲ. ನಮ್ಮ ಸಮುದಾಯದ ಬಹುಪಾಲು ಜನರು ದಾಖಲೆರಹಿತ ಜನವಸತಿಗಳಲ್ಲಿ ವಾಸವಿರುವ ಅಮಾಯಕರು, ಅನಕ್ಷರಸ್ಥರು. ಬಹಳ ಮಂದಿ ಆರ್ಥಿಕ ಉದ್ಯೋಗಕ್ಕಾಗಿ ತಮ್ಮ ತಾಂಡಾಗಳನ್ನು ಬಿಟ್ಟು ಹೊರ ರಾಜ್ಯ, ಹೊರ ಜಿಲ್ಲೆಗಳಿಗೆ ವಲಸೆ ಹೋಗಿದ್ದಾರೆ. ಸಮೀಕ್ಷೆಯ ವೇಳಾಪಟ್ಟಿ ಗಮನಿಸಿದರೆ ಅವರ ಎಲ್ಲ ಮಾಹಿತಿ ಸಂಗ್ರಹಿಸಲು ಸಾಧ್ಯವಿಲ್ಲ’ ಎಂದು ದೂರಿದರು.

‘ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಸಮುದಾಯಗಳ ಜೀವನ ವಿಧಾನ, ವಾಸಸ್ಥಾನ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಔದ್ಯೋಗಿಕ ಸ್ಥಿತಿಗತಿಗಳು ವಿಭಿನ್ನವಾಗಿರುತ್ತವೆ. ಅವುಗಳ ವಾಸ್ತವಾಂಶಗಳನ್ನು ತಿಳಿಯಲು ನಡೆಸುತ್ತಿರುವ ಸಮೀಕ್ಷೆಯ ನಮೂನೆಯಲ್ಲಿ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿಲ್ಲ. ಕೆಲ ವಿಭಿನ್ನ ಸಮುದಾಯಗಳ ಮಾಹಿತಿ ಸಂಗ್ರಹಿಸಲು ಸಮೀಕ್ಷೆಯಲ್ಲಿ ಅವಕಾಶ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

‘ಆರ್ಥಿಕ ಉದ್ಯೋಗಕ್ಕಾಗಿ ತಾಂಡಾಗಳಿಂದ ಹೊರಗಡೆ ಹೋಗಿರುವ ಕುಟುಂಬದ ಸದಸ್ಯರನ್ನು ಸಮೀಕ್ಷೆ ನಡೆಯುವ ಹೊತ್ತಿನಲ್ಲಿ ಪತ್ತೆ ಹಚ್ಚುವುದು ಕಷ್ಟ. ಆದ್ದರಿಂದ ಸಮೀಕ್ಷೆಯ ಅವಧಿಯನ್ನು ದೀರ್ಘಾವಧಿಯವರೆಗೆ ವಿಸ್ತರಿಸಬೇಕು’ ಎಂದು ಆಗ್ರಹಿಸಿದರು.

‘52 ಕುಟುಂಬಗಳ ಎತ್ತಂಗಡಿ’

ನಾಗರಹೊಳೆ ಅರಣ್ಯದಿಂದ ಹೊರ ಹೋಗುವಂತೆ ಸೂಚನೆ

ಪ್ರಜಾವಾಣಿ ವಾರ್ತೆ

ಜೇನು ಕುರುಬ ಸಮುದಾಯಕ್ಕೆ ಸೇರಿದ ಕುಟುಂಬಗಳ ಮುಖಂಡರ ಜತೆ ಅರಣ್ಯ ಇಲಾಖೆಯ ಅಧಿಕಾರಿಗಳು ಗುರುವಾರ ಮಾತುಕತೆ ನಡೆಸಿದರು

ಮಡಿಕೇರಿ: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆಸ್ಸೂರುಕೊಲ್ಲಿ ಅರಣ್ಯ ಪ್ರದೇಶದಲ್ಲಿ ಮೇ 5ರಿಂದ ಪ್ರತಿಭಟಿಸುತ್ತಿದ್ದ ಜೇನು ಕುರುಬ ಸಮುದಾಯದ 52 ಕುಟುಂಬಗಳಿಗೆ ಅರಣ್ಯ ತೊರೆಯುವಂತೆ ಅರಣ್ಯ ಇಲಾಖೆ ಗುರುವಾರ ನೋಟಿಸ್ ನೀಡಿದೆ.

‘ಈ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸರ್ವೆ ಕಾರ್ಯ ನೆರವೇರಿದಂತೆ ಯಾವುದೇ ಚಟುವಟಿಕೆಗಳನ್ನು ಜುಲೈ 23ರವರೆಗೂ ಕೈಗೊಳ್ಳದಂತೆ ಮೇ 6ರಂದು ತಡೆಯಾಜ್ಞೆ ನೀಡಿದೆ. ಹಾಗಾಗಿ, ಕೂಡಲೇ ಅರಣ್ಯದಿಂದ ಹೊರಬರಬೇಕು’ ಎಂದು ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅನನ್ಯಕುಮಾರ್ ಸೂಚಿಸಿದ್ದಾರೆ.

ಈ ಮಧ್ಯೆ, ಪ್ರತಿಭಟನೆ ಬೆಂಬಲಿಸಲು ಅರಣ್ಯ ಪ್ರವೇಶಕ್ಕೆ ಮುಂದಾದವರನ್ನು ಪೊಲೀಸರು ಚೆಕ್‌ಪೋಸ್ಟ್ ನಿರ್ಮಿಸಿ ತಡೆದಿದ್ದಾರೆ. ಕೆಲವರ ವಿರುದ್ಧ ಪ್ರಕರಣ ದಾಖಲಿಸಿದೆ. ಬುಧವಾರ ರಾತ್ರಿ ಅರಣ್ಯದೊಳಗೆ ಪ್ಲಾಸ್ಟಿಕ್ ಜೋಪಡಿ ನಿರ್ಮಿಸುವ ಪ್ರಯತ್ನವನ್ನೂ ತಡೆದಿದೆ.

ವರದಿಗೆ ಸೂಚನೆ: ‘ಪ್ರಕರಣದಲ್ಲಿ ಅವರಿಗೆ ಕೈಗೊಂಡಿರುವ ಕ್ರಮಗಳು ಹಾಗೂ ನ್ಯಾಯಾಲಯದ ತೀರ್ಪುಗಳ ಅನುಸಾರ ಕುರಿತು ಸಮಗ್ರ ಮತ್ತು ವಾಸ್ತವ ವರದಿಯನ್ನು 2 ದಿನಗಳೊಳಗೆ ಸಲ್ಲಿಸಬೇಕು’ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಮುಖ್ಯದ ಮಳೆಯಲಿಗಾಗಿ ಹಾಕಿದ್ದ ಪ್ಲಾಸ್ಟಿಕ್ ಹೊದಿಕೆ ಪರದೆಯನ್ನೂ ಅರಣ್ಯ ಸಿಬ್ಬಂದಿ ರಾತ್ರಿ ಕಿತ್ತೆಸೆದಿದ್ದಾರೆ. ಹೋರಾಟವನ್ನು ಬೆಂಬಲಿಸಲು ಬರುತ್ತಿದ್ದವರನ್ನೂ ವಾಪಸ್ ಕಳುಹಿಸುತ್ತಿದ್ದಾರೆ. ನಮ್ಮ ಹೋರಾಟ ಮುಂದುವರಿಸುತ್ತೇವೆ’ ಎಂದು ನಾಗರಹೊಳೆ ಆದಿವಾಸಿ ಜಮ್ಮಾಪಾಳೆ ಹಕ್ಕು ಸ್ಥಾಪನಾ ಸಮಿತಿ ಕಾರ್ಯದರ್ಶಿ ಶಿವು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಗುತ್ತಿಗೆದಾರರ ಬೇಡಿಕೆ ಈಡೇರಿಸಲು ಬದ್ಧ: ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘದ ಎಲ್ಲ ಬೇಡಿಕೆಗಳನ್ನೂ ಈಡೇರಿಸುವ ಭರವಸೆ ನೀಡಿರುವ ವಸತಿ ಸಚಿವ ಜಮೀರ್ ಅಹಮದ್ ಖಾನ್, ಜ್ಯೇಷ್ಠತೆ ಆಧಾರದಲ್ಲೇ ಬಿಲ್ ಪಾವತಿಸುವುದಾಗಿ ಹೇಳಿದ್ದಾರೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಹಾಗೂ ಪದಾಧಿಕಾರಿಗಳೊಂದಿಗೆ ಸಚಿವರು ಗುರುವಾರ ಸಭೆ ನಡೆಸಿದರು.

‘ಬಾಕಿ ಬಿಲ್ ಪಾವತಿಯನ್ನು ಜ್ಯೇಷ್ಠತೆ ಆಧಾರದಲ್ಲಿ ಕೂಡಲೇ ಬಿಡುಗಡೆ ಮಾಡಲು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು. ಗುತ್ತಿಗೆದಾರರಿಗೆ ಯಾವುದೇ ರೀತಿಯ ತೊಂದರೆಯಾಗಿದ್ದರೆ ಅದನ್ನು ಪರಿಹರಿಸುವ ಭರವಸೆಯನ್ನೂ ನೀಡಿದ್ದಾರೆ. ಕಾಮಗಾರಿಗಳಲ್ಲಿ ರಾಜ್ಯದ ಗುತ್ತಿಗೆದಾರರಿಗೇ ಹೆಚ್ಚಿನ ಆದ್ಯತೆ ನೀಡುವುದಾಗಿಯೂ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು’ ಎಂದು ಆರ್. ಮಂಜುನಾಥ್ ತಿಳಿಸಿದರು.

‘ಜಲ ಸಂಪನ್ಮೂಲ, ಪಂಚಾಯತ್ ರಾಜ್, ವಸತಿ, ಸಣ್ಣ ನೀರಾವರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ ಹಾಗೂ ಪೌರಾಡಳಿತ ಇಲಾಖೆಯಲ್ಲಿ ಬಿಲ್ ಪಾವತಿ ವಿಳಂಬದ ಬಗ್ಗೆ ಆಯಾ ಸಚಿವರಿಗೆ ಪತ್ರ ಬರೆದು, ಸಮಸ್ಯೆ ಬಗೆಹರಿಸಲು ಮನವಿ ಮಾಡಿಕೊಳ್ಳಲಾಗಿತ್ತು. ಜಲಸಂಪನ್ಮೂಲ ಇಲಾಖೆಯ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬಿಟ್ಟು ಉಳಿದ ಆರೂ ಸಚಿವರು ನಮ್ಮ ಬೇಡಿಕೆಗೆ ಸ್ಪಂದಿಸಿದ್ದಾರೆ’ ಎಂದು ಹೇಳಿದರು.

ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಸಚಿವ ಜಮೀರ್ ಅಹಮದ್ ಖಾನ್ ಗುರುವಾರ ಸಭೆ ನಡೆಸಿದರು

‘ಗುತ್ತಿಗೆ ನೌಕರರ ಸೇವೆ ಕಾಯಂಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಗ್ರ ಶಿಕ್ಷಣ ಅಭಿಯಾನದ ಅಡಿಯಲ್ಲಿ ಬರುವ ಕೆಜಿಬಿವಿ, ಕೆಕೆಜಿಬಿವಿ, ಆರ್‌ಎಂಎಸ್‌ಎ ಹಾಗೂ ಇತರೆ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಗುತ್ತಿಗೆ ನೌಕರರ ಸೇವೆ ಕಾಯಂಗೊಳಿಸಬೇಕು’ ಎಂದು ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕೆ. ಸೋಮಶೇಖರ್ ಆಗ್ರಹಿಸಿದರು.

ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆಜಿಬಿವಿ) ಗುತ್ತಿಗೆ ನೌಕರರ ಸಂಘ ಗುರುವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು. ‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳಿಂದ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ಬೆಲೆ ಏರಿಕೆಯ ಈ ದಿನಗಳಲ್ಲಿ ಕೆಜಿಬಿವಿ ಗುತ್ತಿಗೆ ನೌಕರರು ಕಡಿಮೆ ಸಂಬಳದಲ್ಲಿ ಕೆಲಸ ಮಾಡುತ್ತಿರುವುದು ಅಮಾನವೀಯ. ಎಲ್ಲರೂ ಸಂಘಟಿತರಾಗಿ ಇದರ ವಿರುದ್ಧ ಧ್ವನಿ ಎತ್ತಬೇಕು’ ಎಂದು ಕರೆ ನೀಡಿದರು.

‘ಬೀದರ್‌ನಲ್ಲಿ ರಚಿಸಿರುವ ಕಾರ್ಮಿಕರ ವಿವಿಧೋದ್ದೇಶಗಳ ಸಹಕಾರಿ ಸಂಘದ ಮಾದರಿಯಲ್ಲಿ ಎಲ್ಲ ಜಿಲ್ಲೆಗಳಲ್ಲಿ ಸಹಕಾರಿ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಬೇಕು. 12 ತಿಂಗಳ ಪೂರ್ಣ ವೇತನ ಪಾವತಿಸಬೇಕು. ಕ್ರಾಫ್ಟ್ ಹುದ್ದೆಯನ್ನು ಮುಂದುವರೆಸಬೇಕು. ಹಗಲು ಮತ್ತು ರಾತ್ರಿಗೆ ಪ್ರತ್ಯೇಕವಾಗಿ ಕಾವಲುಗಾರರನ್ನು ನೇಮಿಸಿ, ಅವರಿಗೆ ಪ್ರತ್ಯೇಕ ವೇತನವನ್ನು ನಿಗದಿಪಡಿಸಬೇಕು’ ಎಂದು ಆಗ್ರಹಿಸಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಎನ್.ಎಸ್. ವೀರೇಶ್ ಮಾತನಾಡಿ, ‘ಕೆಜಿಬಿವಿ ಗುತ್ತಿಗೆ ನೌಕರರಿಗೆ ಕನಿಷ್ಠ ವೇತನ ನಿಗದಿಪಡಿಸಬೇಕು. ಅಡುಗೆ ಸಿಬ್ಬಂದಿ ಪೂರೈಕೆ ಮತ್ತು ಆಹಾರ ಪದಾರ್ಥಗಳ ಪೂರೈಕೆಗೆ ಒಂದೇ ಟೆಂಡರ್ ಕರೆಯಬಾರದು. ಅಡುಗೆ ಸಿಬ್ಬಂದಿ ಪೂರೈಕೆಗೆ ಮಾನವ ಸಂಪನ್ಮೂಲ ಪೂರೈಕೆ ಅಡಿಯಲ್ಲಿ ಪ್ರತ್ಯೇಕ ಟೆಂಡರ್ ಪ್ರಕ್ರಿಯೆ ನಡೆಸಬೇಕು. ಅವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು’ ಎಂದು ಒತ್ತಾಯಿಸಿದರು. ಸಂಘದ ಕಾರ್ಯದರ್ಶಿ ಟಿ.ಎಸ್. ರಮಾ, ಎಐಯುಟಿಯುಸಿ ರಾಜ್ಯ ಘಟಕದ ಉಪಾಧ್ಯಕ್ಷೆ ಡಿ. ನಾಗಲಕ್ಷ್ಮಿ ಉಪಸ್ಥಿತರಿದ್ದರು.

ಮೇ 15ರಿಂದ ಜೂನ್ 14ರವರೆಗೆ ನೌಕರರ ವರ್ಗಾವಣೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಮೇ 15ರಿಂದ ಜೂನ್ 14ರವರೆಗೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ಈ ಬಗ್ಗೆ ಸಚಿವ ಸಂಪುಟ ಸಭೆಯ ಅನುಮೋದನೆಗೆ ಪ್ರಸ್ತಾವ ಮಂಡಿಸಿದೆ.

ಗ್ರೂಪ್ ‘ಎ’, ‘ಬಿ’, ‘ಸಿ’ ಮತ್ತು ‘ಡಿ’ ವರ್ಗದ ನೌಕರರನ್ನು ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ 6ರಷ್ಟನ್ನು ಮೀರದಂತೆ ವರ್ಗಾವಣೆ ಮಾಡಬಹುದು. ‘ಎ’ ಮತ್ತು ‘ಬಿ’ ವೃಂದದ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಯ ಸಚಿವರಿಗೆ ಹಾಗೂ ‘ಸಿ’ ಮತ್ತು ‘ಡಿ’ ವೃಂದದ ನೌಕರರಿಗೆ ಸಂಬಂಧಿಸಿದಂತೆ ಆಯಾ ನೇಮಕಾತಿ ಪ್ರಾಧಿಕಾರಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಟಿಪ್ಪಣಿಯಲ್ಲಿ ಪ್ರಸ್ತಾಪಿಸಲಾಗಿದೆ.

ಒಂದು ಸ್ಥಳದಲ್ಲಿ ಎರಡು ವರ್ಷ ಕರ್ತವ್ಯ ಅವಧಿ ಪೂರ್ಣಗೊಳಿಸಿದ ಗ್ರೂಪ್ ‘ಎ’ ಮತ್ತು ‘ಬಿ’ ವೃಂದದ ಅಧಿಕಾರಿಗಳು, ನಾಲ್ಕು ವರ್ಷ ಪೂರ್ಣಗೊಳಿಸಿದ ‘ಸಿ’ ವೃಂದದ ಹಾಗೂ ಏಳು ವರ್ಷ ಪೂರ್ಣಗೊಳಿಸಿದ ‘ಡಿ’ ವೃಂದದ ನೌಕರರು ವರ್ಗಾವಣೆಗೆ ಅರ್ಹರು. ‘ಎ’ ಮತ್ತು ‘ಬಿ’ ವೃಂದ ಅಧಿಕಾರಿಗಳ ವರ್ಗಾವಣೆ ಪ್ರಸ್ತಾವವನ್ನು ಆಡಳಿತ ಇಲಾಖೆಯ ಮೂಲಕವೇ ಸಚಿವರಿಗೆ ಸಲ್ಲಿಸಬೇಕು ಎಂದೂ ಪ್ರಸ್ತಾವದಲ್ಲಿದೆ.

ಮರ ಕತ್ತರಿಸಿದರೆ ಕಠಿಣ ಕ್ರಮ: ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಭೂಮಿ, ಅರಣ್ಯ, ರಸ್ತೆ ಬದಿಯ ಮರಗಳನ್ನು ಅಕ್ರಮವಾಗಿ ಕಡಿಯುವವರ ವಿರುದ್ಧ ಕಠಿಣ ಕ್ರಮ ಜರುಗಿಸಲು, ಹೆಚ್ಚಿನ ದಂಡ ವಿಧಿಸಲು ವೃಕ್ಷ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಅರಣ್ಯ ಭವನದಲ್ಲಿ ಗುರುವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಭಿವೃದ್ಧಿಯ ನೆಪದಲ್ಲಿ ಮರಗಳನ್ನು ಕಡಿಯಲು ಅನುಮತಿ ನೀಡಲಾಗುತ್ತಿದೆ. ಸಕಾರಣವಿಲ್ಲದೆ ಮರಗಳನ್ನು ಕಡಿಯುವುದಕ್ಕೆ ಸುಪ್ರೀಂ ಕೋರ್ಟ್ ಸಹ ಆಕ್ಷೇಪ ವ್ಯಕ್ತಪಡಿಸಿದೆ. ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆಯ ಸನ್ನಿವೇಶದಲ್ಲಿ ವೃಕ್ಷ ಸಂರಕ್ಷಣೆಗೆ ಕಠಿಣ ಕಾನೂನಿನ ಅಗತ್ಯವಿದೆ ಎಂದರು.

2015ರ ನಂತರದ ಒತ್ತುವರಿ ತೆರವು: 2015ರ ಪೂರ್ವದ ಪಟ್ಟಾ ಜಮೀನು, ಒತ್ತುವರಿ ಸೇರಿ 3 ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ಜನರಿಗೆ ಪುನರ್ವಸತಿ ಕಲ್ಪಿಸುವವರೆಗೆ ತೊಂದರೆ ನೀಡಬಾರದು. 2015ರ ನಂತರ ಮಾಡಿದ ಒತ್ತುವರಿ, ದೊಡ್ಡ ಒತ್ತುವರಿಗಳನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಬೇಕು. ಅರಣ್ಯ ಇಂಡೀಕರಣ ಕೋರಿ ಉಪ ವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಸೂಚಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಪಿಸಿಸಿಎಫ್ (ವನ್ಯಜೀವಿ) ಸುಭಾಷ್ ಮಾಲ್ಕಡೆ ಉಪಸ್ಥಿತರಿದ್ದರು.

The Printers (Mysore) Pvt. Ltd

Publishers of DECCAN HERALD, PRAJAVANI, SUDHA & MAYURA

No.7-12, Kumbalgodu Indl. Area, Mysore Road, Bangalore - 74

ALUMINUM WASTE FOR SALE

Sealed Tenders are invited for the disposal of the following Scrapped Aluminmum wastes from our Press at Bangalore, Dharwad , Mangalore, Harihara, Mysore, Gulbarga and Hospet.

Details	Location - wise quantity in Kgs per month						
	Bangalore	Dharwad	Mangalore	Harihara	Mysore	Gulbarga	Hospet
Scrapped Aluminum Sheets	4-5 Tons	2-3 Tons	1-2 Tons	1-2 Tons	2 Tons	1-2 Tons	1-2 Tons

For clarification, contact Procurement Head at babu.v@printersmysore.co.in, venu.tl@printersmysore.co.in, 25880340/430 Mob: 9900042650. Sealed Tenders/mail may be addressed to Procurement Head and sent to the above address within 7 days from the date of this advertisement.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು ಜಿಲ್ಲೆ, ರಾಯಚೂರು–584101

OFFICE OF THE DEPUTY COMMISSIONER, RAICHUR DISTRICT, RAICHUR-584101

District Administration Building, Eklaspur, Raichur

Telephone No:08532-229011, Fax:08532-229012, eMail ID:dcrevrcr@gmail.com

ಸಂ:ಜಿಕಾರಾ:Revenue-District Unit:01/2024–25 ದಿನಾಂಕ:05–05–2025

ಟೆಂಡರ್ ಪ್ರಕಟಣೆ.

1) ಸಂಗ್ರಹಣೆ ಮಾಡಬೇಕಾದ ವಿವರ: Outsource tender for Various posts to DC office Raichur District. ಇಂಡೆಂಟ್ ಸಂಖ್ಯೆ: RD/2025-26/SE0442 ಮೊತ್ತ: ರೂ.114–00 ಲಕ್ಷಗಳು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 21.05.2025 @ 17.30 PM. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಇ– ಸಂಗ್ರಹಣಾ ವೇದಿಕೆಯ ಅಧಿಕೃತ ಜಾಲತಾಣದ ವಿಳಾಸ ಮತ್ತು ಪ್ರಿಬಿಡ್ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: https:kppp.karnataka. gov.in Pre-bid Meeting Details Date:- 13.05.2025 Time- 11-00 AM Place DC- Office, Raichur

ಸಹಿ/– ಜಿಲ್ಲಾಧಿಕಾರಿಗಳು
ರಾಯಚೂರು.

DIP/RCR/87/KSMC&A/87/2025-26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರವರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/139/2025–26 ದಿನಾಂಕ: 08.05.2025	
1	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ಸರಹದ್ದಿನಡಿ ಬರುವ 5 ಎಂಎಲ್‌ಡಿ ಸಾರಕ್ಕಿ ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ವಿವಿಧ ಸುಧಾರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.	ರೂ. 138.52 ಲಕ್ಷಗಳು / ರೂ. 2.07 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/141/2025–26 ದಿನಾಂಕ: 08.05.2025	
2	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ಸರಹದ್ದಿನಡಿ ಬರುವ 4 ಎಂಎಲ್‌ಡಿ ಮಡಿವಾಳ ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ವಿವಿಧ ಸುಧಾರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.	ರೂ. 120.00 ಲಕ್ಷಗಳು / ರೂ. 1.80 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/143/2025–26 ದಿನಾಂಕ: 08.05.2025	
3	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ಸರಹದ್ದಿನಡಿ ಬರುವ 90 ಎಂಎಲ್‌ಡಿ ಬೆಳ್ಳಂದೂರು ಅಮಾನಿಕೆರೆ ಎಸ್‌ಟಿಪಿ, 35 ಎಂಎಲ್‌ಡಿ ಅಗರ ಎಸ್‌ಟಿಪಿ ಮತ್ತು 10 ಎಂಎಲ್‌ಡಿ ಹುಳಿಮಾವು ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ವಿವಿಧ ಸುಧಾರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.	ರೂ. 252.46 ಲಕ್ಷಗಳು / ರೂ. 3.78 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/151/2025–26 ದಿನಾಂಕ: 08.05.2025	
4	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ಸರಹದ್ದಿನಡಿ ಬರುವ 35 ಎಂಎಲ್‌ಡಿ ಅಗರ ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ಅಲ್ಟ್ರಾ ಫಿಲ್ಟ್ರೇಷನ್ ಸಿಸ್ಟಮ್‌ನ ಸರಬರಾಜು, ಅಳವಡಿಕೆ ಮತ್ತು ಕಾರ್ಯಚಾಲನೆಗೊಳಿಸುವ ಕಾಮಗಾರಿ.	ರೂ. 406.28 ಲಕ್ಷಗಳು / ರೂ. 6.09 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/147/2025–26 ದಿನಾಂಕ: 08.05.2025	
5	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ಸರಹದ್ದಿನಡಿ ಬರುವ 90 ಎಂಎಲ್‌ಡಿ ಬೆಳ್ಳಂದೂರು ಅಮಾನಿಕೆರೆ ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ಅಲ್ಟ್ರಾ ಫಿಲ್ಟ್ರೇಷನ್ ಸಿಸ್ಟಮ್‌ನ ಸರಬರಾಜು, ಅಳವಡಿಕೆ ಮತ್ತು ಕಾರ್ಯಚಾಲನೆಗೊಳಿಸುವ ಕಾಮಗಾರಿ.	ರೂ. 406.28 ಲಕ್ಷಗಳು / ರೂ. 6.09 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/149/2025–26 ದಿನಾಂಕ: 08.05.2025	
6	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ಸರಹದ್ದಿನಡಿ ಬರುವ 10 ಎಂಎಲ್‌ಡಿ ಹುಳಿಮಾವು ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ಅಲ್ಟ್ರಾ ಫಿಲ್ಟ್ರೇಷನ್ ಸಿಸ್ಟಮ್‌ನ ಸರಬರಾಜು, ಅಳವಡಿಕೆ ಮತ್ತು ಕಾರ್ಯಚಾಲನೆಗೊಳಿಸುವ ಕಾಮಗಾರಿ.	ರೂ. 406.28 ಲಕ್ಷಗಳು / ರೂ. 6.09 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/145/2025–26 ದಿನಾಂಕ: 08.05.2025	
7	ಕಾನಿಅ(ತ್ಯಾನೀನಿ–ಎಸ್‌ಟಿಪಿ–ಸಿವಿ) ವಿಭಾಗದ ಸರಹದ್ದಿನಡಿ ಬರುವ 15 ಎಂಎಲ್‌ಡಿ ಎಲ್ಲೆಮಲ್ಲಪ್ಪ ಚೆಟ್ಟಿ ಎಸ್‌ಟಿಪಿಯಲ್ಲಿ ಯುವಿ ಡಿಸ್–ಇನ್ಫೆಕ್ಷನ್ ನೊಂದಿಗೆ 2.5 ಎಂಎಲ್‌ಡಿ ಅಲ್ಟ್ರಾ ಫಿಲ್ಟ್ರೇಷನ್ ಒದಗಿಸಿ, ಕಾರ್ಯಚಾಲನೆಗೊಳಿಸುವ ಕಾಮಗಾರಿ.	ರೂ. 406.28 ಲಕ್ಷಗಳು / ರೂ. 6.09 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/137/2025–26 ದಿನಾಂಕ: 08.05.2025	
8	ಕಾನಿಅ(ತ್ಯಾನೀನಿ–ಎಸ್‌ಟಿಪಿ–ಸಿವಿ) ವಿಭಾಗದ ಸರಹದ್ದಿನಡಿ ಬರುವ 150 ಎಂಎಲ್‌ಡಿ ಚಲ್ಲಘಟ್ಟ ಎಸ್‌ಟಿಪಿಯಲ್ಲಿ ಯುವಿ ಡಿಸ್–ಇನ್ಫೆಕ್ಷನ್ ನೊಂದಿಗೆ 2.5 ಎಂಎಲ್‌ಡಿ ಅಲ್ಟ್ರಾ ಫಿಲ್ಟ್ರೇಷನ್ ಒದಗಿಸಿ, ಕಾರ್ಯಚಾಲನೆಗೊಳಿಸುವ ಕಾಮಗಾರಿ.	ರೂ. 406.28 ಲಕ್ಷಗಳು / ರೂ. 6.09 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/135/2025–26 ದಿನಾಂಕ: 08.05.2025	
9	ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವಿಭಾಗದ ಸರಹದ್ದಿನಡಿ ಬರುವ 2 ಎಂಎಲ್‌ಡಿ ಹಲಸೂರು ಎಸ್‌ಟಿಪಿಯಲ್ಲಿ ಜಲ ಹೀ ಅಮೃತ್ ಯೋಜನೆಯಡಿ ವಿವಿಧ ಸುಧಾರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.	ರೂ. 121.19 ಲಕ್ಷಗಳು / ರೂ. 1.81 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.05.2025ರ ಸಂಜೆ 4.00 ಗಂಟೆವರೆಗೆ.** ಬಿಡ್‌ಗಳನ್ನು ತೆರೆಯುವ ದಿನಾಂಕ: **26.05.2025ರ ಸಂಜೆ 5.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು (ತ್ಯಾನೀನಿ–ಪೂರ್ವ)

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲ್ಕಂಡವರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/YC/569/2025-26

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ) ಬೆಂಗಳೂರು–560025
ದೂರವಾಣಿ ಸಂಖ್ಯೆ: 080–25584102/25594893 ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂಖ್ಯೆ:ಕಾಪಾಅ/ಕರಾಪೋವ&ಮೂಸೌಅನಿನಿ/ಸಿಎನ್‌ಟಿ/ಟೆಂಡರ್/04/2025–26/31 ದಿನಾಂಕ: 08.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರಾಪೋವ & ಮೂಸೌಅನಿನಿ ಇವರು ಕೆಪಿಪಿ 2000 ಕಾಯ್ದೆ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳಂತೆ ಕೆಪಿಪಿಪಿ https://kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗೆ ಆನ್‌ಲೈನ್ ಟೆಂಡರ್‌ಅನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ಚಿಕ್ಕಮಗಳೂರು ಜಿಲ್ಲಾ ಕಾರಾಗೃಹದಲ್ಲಿ 50 ಕೆಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ. (ಎಸ್‌ಟಿಪಿ)

ಟೆಂಡರಿಗಿಟ್ಟ ಮೊತ್ತ: ರೂ.42.31 ಲಕ್ಷಗಳು, ಜಿಎಸ್‌ಟಿ ಹೊರತುಪಡಿಸಿ.

ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಸ್ತಾವೇಜುಗಳು ಇತ್ಯಾದಿಗಳು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 12.05.2025ರಿಂದ ಲಭ್ಯವಿರುತ್ತದೆ. ಕರಾಪೋವ & ಮೂಸೌಅನಿನಿ ಸಂಸ್ಥೆಯು ಟೆಂಡರಿನ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಪುರಸ್ಕರಿಸುವ/ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು–ಗುತ್ತಿಗೆಗಳು

ಡಿಐಪಿಆರ್/ಸಿಪಿ/562/ಸಿಎಲ್/2025–26

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಧಾರವಾಡ KMF

ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ಧಾರವಾಡ –580004

ದೂರವಾಣಿ: 0836–2467603/2468380 e-mail: dharwarnin@gmail.com

ಐಎಫ್‌ಟಿ ಸಂಖ್ಯೆ:–KMF/2025–26/IND1348/CALL–2 ದಿನಾಂಕ:–08–05–2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ., (ಧಾಮುಲ್) ಧಾರವಾಡವು ತಾಂತ್ರಿಕ ಮತ್ತು ವಾಣಿಜ್ಯ ದ್ವಿ–ಲಕೋಟಿ ಪದ್ಧತಿಯಲ್ಲಿ ಈ ಕೆಳಕಂಡ ಸರಕು / ವಸ್ತುವನ್ನು ನಮ್ಮ ಟೆಂಡರ್ ತಾಂತ್ರಿಕ ತಪಶೀಲುಪಟ್ಟಿ ಪ್ರಕಾರ ಪೂರೈಸುವ ಕೆಲಸವನ್ನು ನಿರ್ವಹಿಸಲು ಅರ್ಹ ಮೂಲ ಉತ್ಪಾದಕರು / ಅಧಿಕೃತ ಡೀಲರ್/ಪೂರೈಕೆದಾರರಿಂದ ಇ–ಟೆಂಡರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ಸಲ್ಲಿಸುವ ಪೂರ್ವದಲ್ಲಿ ತಮ್ಮ ಸ್ವಂತ ವೆಚ್ಚದಲ್ಲಿ ಸ್ಥಳ ಪರಿವೀಕ್ಷಿಸಿ ಟೆಂಡರ್ ಸಲ್ಲಿಸುವುದಾಗಿದೆ.

Sl No	Particular	Qty	EMD Amount (In Rs.)
1	Supply, Testing and Commissioning of RECIPROCATING TYPE TRIPLEX PLUNGER PUMP (HIRO NISHA make or equivalent) for 30 MTPD Powder Plant at Main Dairy, Dharwad Milk Union Ltd., Dharwad as per our technical specification mentioned in tender documents.	1No	10,000/-

ಇ–ಟೆಂಡರ್ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ವನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ್ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ಲಾಗ್‌ಇನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ ಸಹಾಯವಾಣಿ ಸಂಖ್ಯೆ:– **080–46010000 / 68948777,** ಇ–ಮೇಲ್: support@eprochelpdsk.com ರ ಮೂಲಕ ಸಂಪರ್ಕಿಸಬಹುದು ಮತ್ತು ಉಳಿದ ಮಾಹಿತಿಯನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ್ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ–ಪೋರ್ಟಲ್ ಜಾಲತಾಣದಿಂದ ಟೆಂಡರ್ ದಾಖಲಾತಿ ಲಭ್ಯವಾಗುವ ದಿನಾಂಕ	ದಿ: 09.05.2025 ರಿಂದ ದಿ: 26.05.2025 ರ ಸಂಜೆ 4:00 ಗಂಟೆಗಿಂತ ಮೊದಲು
2	ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿ: 26.05.2025, ರಂದು ಸಂಜೆ 4.00 ರ ವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ: 27.05.2025, ರಂದು ಸಂಜೆ 04.30 ರ ನಂತರ
4	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ: 29.05.2025, ರಂದು ಬೆಳಿಗ್ಗೆ 11.00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501

ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಸಿಆರ್:04:2025–26, ದಿನಾಂಕ:06–05–2025

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೂರ್ಣಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭೆ ನಿಧಿ ಅನುದಾನದಲ್ಲಿ ರೂ.25.87 ಲಕ್ಷಗಳ 2 ಕಾಮಗಾರಿಗಳನ್ನು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. ವಿವರ ಈ ಕೆಳಕಂಡಂತೆ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಭೆಯ ಅಂತರ್‌ಜಾಲ www.chitradurgacity.mrc. gov.in ನಲ್ಲಿ ವರ್ಕ್ ಇಂಡೆಂಟ್ ನಂಬರ್, ಟೆಂಡರ್ ಮೀಸಲಾಯಿತಿ ಮತ್ತು ಟೆಂಡರ್ ನೋಟಿಫಿಕೇಷನ್ ಪಡೆಯಬಹುದಾಗಿದೆ. ಜಿ.ಎಸ್.ಟಿ. ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು. (2 ಕಾಮಗಾರಿಗಳ ಇಂಡೆಂಟ್‌ಗಳನ್ನು ಪ್ರತ್ಯೇಕವಾಗಿ ಪ್ರಚುರಪಡಿಸಲಾಗುವುದು) (ಗರಿಷ್ಠ ಮೊತ್ತ ರೂ.14.87 ಲಕ್ಷಗಳು)

(1) DMA/2025-26/OW/WORK_INDENT39768(Others)
(2) DMA/2025-26/OW/WORK_INDENT39769(Others),

* ಖಾಲಿ ಟೆಂಡರ್ ಫಾರಂಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 29–05–2025 ರ 5.00 ಗಂಟೆ ಸಂಜೆವರೆಗೆ
* ಟೆಂಡರ್‌ನ್ನು ತೆರೆಯುವ ದಿನಾಂಕ (ತಾಂತ್ರಿಕ) 30–05–2025 ರ 5.30 ಗಂಟೆಗೆ
* ಟೆಂಡರ್‌ನ್ನು ತೆರೆಯುವ ದಿನಾಂಕ (ಆರ್ಥಿಕ) 31–05–2025 ರ 5.30 ಗಂಟೆಗೆ
* ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ

DIPR/CTA/KSMCA/ 56/2025-26

ಸಹಿ/–ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ನಿರ್ಮಾಣ ಮತ್ತು ನಿರ್ವಹಣೆ ವಿಭಾಗ, ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು–560008.
ದೂ.ಸಂ: 080–25037203/25037214

ದಿನಾಂಕ: 08.05.2025

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಐಟಂದರದ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಎಲ್‌ಪಿಎಸ್‌ಸಿ(ಬಿ) ಬೆಂಗಳೂರು ಇಲ್ಲಿ ಎಲ್‌ಇಡಿ ಆಧಾರಿತ ಬೆಳಕಿನ ವ್ಯವಸ್ಥೆಗಳನ್ನು ಅನುಷ್ಠಾನಗೊಳಿಸುವುದು.
ಟೆಂಡರ್ ಪ್ರಕಟಣೆ ಸಂಖ್ಯೆ	ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/02/2020/ಇ/ಎಂಐ/002/2025–26 ದಿನಾಂಕ: 08.05.2025
ಅಂದಾಜು ಮೊತ್ತ	₹ 19.28 ಲಕ್ಷಗಳು
ಪೂರ್ಣಗೊಳಿಸುವ ಅವಧಿ	03 ತಿಂಗಳು
ಮಾರಾಟದ ಅವಧಿ	08.05.2025 ರಿಂದ 16.05.2025 ರವರೆಗೆ
ಇಎಂಡಿ	₹ 38,560/–

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in, www.lpsc.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಮುಖ್ಯಸ್ಥರು, ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ನಗರಸಭಾ ಕಾರ್ಯಾಲಯ ಚನ್ನಪಟ್ಟಣ

ರಾಮನಗರ ಜಿಲ್ಲೆ – 562 160. ದೂ. : 080–2725 1235.
ಇಮೇಲ್ : itstaff_ulb_channapatna@yahoo.co.in
ವೆಬ್‌ಸೈಟ್ : www.channapatnacity.mrc.gov.in

ಸಂಖ್ಯೆ : ನ.ಸ.ಚ./ಕಾ.ವಿ./ಟೆಂಡರ್/ಸಿಆರ್/02/25–26 ದಿನಾಂಕ : 07–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

2024–25 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ ಮತ್ತು 2022–23 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ 1ನೇ ಕಂತು ಅನುದಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಕೆ.ಪಿ.ಪಿ.ಪಿ. ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ (2 Cover) www.kppp.karnataka.gov.in ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು.

ಗುತ್ತಿಗೆದಾರರು ತಮ್ಮ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ.–3 ರ ಪ್ರಮಾಣಿತ ಟೆಂಡರ್ ದಸ್ತಾವೇಜಿನ ನಿಯಮಗಳಂತೆ ದಿನಾಂಕ : 15–05–2025 ರ ಸಂಜೆ 5.30 ಗಂಟೆಯೊಳಗೆ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ. ಮೊತ್ತ ಕೆ.ಪಿ.ಪಿ. ಪೋರ್ಟಲ್ ರೀತ್ಯಾ ಇರುತ್ತದೆ. ಪೋರ್ಟಲ್‌ನಲ್ಲಿ ಸ್ವೀಕೃತಿಯಾಗಿರುವ ಟೆಂಡರ್‌ಗಳನ್ನು ದಿನಾಂಕ : 17–05–2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಇಂಡೆಂಟ್ ಸಂಖ್ಯೆ : 1) 34358/ಕರೆ–2, 2) 34367/ಕರೆ–2, 3) 34368/ಕರೆ–2, 4) 34382/ಕರೆ–2, 5) 34391/ಕರೆ–2, 6) 34395/ಕರೆ–2, 7) 34397/ಕರೆ–2, 8) 34425/ಕರೆ–2, 9) 26917/ಕರೆ–2, 10) 26949/ಕರೆ–2.

ಹೆಚ್ಚಿನ ವಿವರಗಳಿಗೆ ಚನ್ನಪಟ್ಟಣ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಹಾಗೂ ನಗರಸಭೆಯ ವೆಬ್‌ಸೈಟ್ : www.channapatnacity.mrc.gov.in ರ ಟೆಂಡರ್ ವಿಭಾಗದಲ್ಲಿ ವಿವರವಾದ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಚನ್ನಪಟ್ಟಣ.

ಡಿಐಪಿಆರ್/ರಾಮನಗರ/69/ಮಣಿಪಾಲ್/2025–26

ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ

2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
ದೂರವಾಣಿ ಸಂ: 22032349

ಸಂ: ಅಪಜೀ 122 ಅಇವಿ 2021 ದಿನಾಂಕ: 25.04.2025

ತಿಳುವಳಿಕೆ ಪತ್ರ

ಶ್ರೀಮತಿ ಕವಿತಾ ಕೆ. ಗೌಡ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಆದ ನಿಮ್ಮ ವಿರುದ್ಧ ಅನಧಿಕೃತ ಗೈರುಹಾಜರಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಡಿ ದಿನಾಂಕ:19.10.2024ರ ಸರ್ಕಾರದ ಆದೇಶದಲ್ಲಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಿತ್ತು. ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿದ ವಿಚಾರಣಾಧಿಕಾರಿಗಳು ದಿನಾಂಕ : 03.03.2025ರಂದು ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ತಮ್ಮ ವಿರುದ್ಧದ ಆರೋಪವು ರುಜುವಾತಾಗಿರುವುದಾಗಿ ಅಭಿಪ್ರಾಯಿಸಿರುತ್ತಾರೆ.

ವಿಚಾರಣಾಧಿಕಾರಿಗಳ ವಿಚಾರಣಾ ವರದಿಯಂತೆ ತಮ್ಮ ಮೇಲಿನ ಆಪಾದನೆಗಳು ಸಾಬೀತಾಗಿರುವುದರಿಂದ, ನಿಮಗೆ ಏಕೆ ದಂಡನೆಯನ್ನು ವಿಧಿಸಬಾರದು ಎಂಬ ಬಗ್ಗೆ ದಿನಾಂಕ : 15.03.2025ರಂದು ಸರ್ಕಾರದಿಂದ ಎರಡನೇ ಕಾರಣ ಕೇಳುವ ನೋಟೀಸನ್ನು ಹೊರಡಿಸಲಾಗಿರುತ್ತದೆ. ಸಂಬಂಧಿಸಿದ ಎರಡನೇ ಕಾರಣ ಕೇಳುವ ನೋಟಿಸನ್ನು ಆರ್.ಪಿ.ಎ.ಡಿ. ಮೂಲಕ ಮತ್ತು ನೇರವಾಗಿ ನಿಮಗೆ ಜಾರಿ ಮಾಡಲು ಪ್ರಯತ್ನಿಸಿದರೂ ಸದರಿ ನೋಟೀಸ್ ಸ್ವೀಕೃತವಾಗದೇ ಹಿಂತಿರುಗಿರುತ್ತದೆ. ಆದ್ದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ದಿನದೊಳಗಾಗಿ ಮೇಲ್ಕಂಡ ಕಛೇರಿಗೆ ಹಾಜರಾಗಿ ಎರಡನೇ ಕಾರಣ ಕೇಳುವ ನೋಟೀಸನ್ನು ಸ್ವೀಕರಿಸುವಂತೆ ನಿಮಗೆ ಈ ಮೂಲಕ ಸೂಚಿಸಲಾಗಿದೆ. ತಪ್ಪಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ವಾಸಾಸಂಇ/ವಾಪ್ರ/ಜಿಎ/564/2025–26

ಪೆಟ್ರೋಲ್ ಬಂಕ್, ನರ್ಸಿಂಗ್ ಹೋಂ, ಲಾಡ್ಜ್ ನಡೆಸುತ್ತಿರುವ ಸುರಪುರ ತಾಲ್ಲೂಕು ಆರೋಗ್ಯಾಧಿಕಾರಿ

ಟಿಎಚ್‌ಒ ₹12 ಕೋಟಿ ಆಸ್ತಿ ಒಡೆಯ

ಶೋಧದ ವೇಳೆ ದೊರೆತದ್ದು	₹26.55 ಕೋಟಿ	₹21.30 ಕೋಟಿ	₹1.85 ಕೋಟಿ	₹1.84 ಕೋಟಿ	₹1.36 ಕೋಟಿ	₹17.42 ಲಕ್ಷ
	ನಾಲ್ವರು ಅಧಿಕಾರಿಗಳ ಒಟ್ಟು ಆಸ್ತಿಯ ಮೌಲ್ಯ	ಸ್ಥಿರಾಸ್ತಿಗಳ ಒಟ್ಟು ಮೌಲ್ಯ	ಚಿನ್ನಾಭರಣಗಳ ಮೌಲ್ಯ	ವಾಹನಗಳ ಮೌಲ್ಯ	ಗೃಹೋಪಯೋಗಿ ವಸ್ತುಗಳ ಮೌಲ್ಯ	ನಗದು

ಪ್ರಜಾವಾಣಿ ವಾರ್ತೆ

ಬೆಂಗಳೂರು/ಯಾದಗಿರಿ: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ಯಾದಗಿರಿಯ ಸುರಪುರ ತಾಲ್ಲೂಕು ಆರೋಗ್ಯಾಧಿಕಾರಿ (ಟಿಎಚ್‌ಒ) ಡಾ.ರಾಜಾ ವೆಂಕಪ್ಪ ನಾಯಕ ಅವರಿಗೆ ಸೇರಿದ ಐದು ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿರುವ ಲೋಕಾಯುಕ್ತ ಪೊಲೀಸರು, ಒಟ್ಟು ₹12.59 ಕೋಟಿಯಷ್ಟು ಆಸ್ತಿ ಪತ್ತೆ ಮಾಡಿದ್ದಾರೆ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಲ್ವರು ಅಧಿಕಾರಿಗಳ ವಿರುದ್ಧ ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದಲ್ಲಿ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಅದರಂತೆ ಯಾದಗಿರಿ, ದಾವಣಗೆರೆ, ಕೋಲಾರ ಮತ್ತು ಬೆಂಗಳೂರಿನ 24 ಕಡೆಗಳಲ್ಲಿ ಏಕಕಾಲದಲ್ಲಿ ಗುರುವಾರ ಶೋಧ ನಡೆಸಿದರು.

ಟಿಎಚ್‌ಒ ರಾಜಾ ವೆಂಕಪ್ಪ ನಾಯಕ ಅವರ ಸುರಪುರದ ನಿವಾಸ, ಕಲಬುರ್ಗಿಯ ನಿವಾಸ, ಪೆಟ್ರೋಲ್ ಬಂಕ್ ಮತ್ತು ನರ್ಸಿಂಗ್ ಹೋಂ, ಲಾಡ್ಜ್-ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಶೋಧ ನಡೆಸಿದರು. ನಾಯಕ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಇರುವ ಈ ಎಲ್ಲ ಸ್ಥಿರಾಸ್ತಿಗಳ ಒಟ್ಟು ಮೌಲ್ಯವೇ ₹11.05 ಕೋಟಿಯಷ್ಟು ಎಂಬುದನ್ನು ಲೋಕಾಯುಕ್ತ ಪೊಲೀಸರು ಅಂದಾಜು ಮಾಡಿದ್ದಾರೆ.

ಜತೆಗೆ ಚಿನ್ನಾಭರಣ, ವಾಹನಗಳು, ನಗದು ಸೇರಿ ₹1.54 ಕೋಟಿ ಮೌಲ್ಯದ ಚರಾಸ್ತಿ ಹೊಂದಿದ್ದಾರೆ. ಅವರ ಘೋಷಿತ ಆದಾಯಕ್ಕೆ ಹೋಲಿಸಿದರೆ ₹9.87 ಕೋಟಿ (ಶೇ 274ರಷ್ಟು) ಹೆಚ್ಚು ಆಸ್ತಿ ಹೊಂದಿದ್ದಾರೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಕೋಲಾರ ತಾಲ್ಲೂಕಿನ ಎಡಿಎಲ್‌ಆರ್ ಕಚೇರಿಯ ಸರ್ವೆ ಸೂಪರ್‌ವೈಸರ್ ಸುರೇಶ್ ಬಾಬು.ಜಿ ಅವರ ಬಳಿ ₹8.15 ಕೋಟಿ, ಬಿಬಿಎಂಪಿಯ ಮಲ್ಲೇಶ್ವರ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್ ಜಿ.ಶ್ರೀನಿವಾಸಮೂರ್ತಿ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ₹3.45 ಕೋಟಿ ಹಾಗೂ ದಾವಣಗೆರೆಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಬಿ.ರವಿ ಅವರ ಬಳಿ ₹2.31 ಕೋಟಿ ಮೌಲ್ಯದ ಆಸ್ತಿ ಇರುವುದು ಪತ್ತೆಯಾಗಿದೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಆಸ್ತಿ ವಿವರ



ಕೋಲಾರ ತಾಲ್ಲೂಕಿನ ಎಡಿಎಲ್‌ಆರ್ ಕಚೇರಿಯ ಸರ್ವೆ ಸೂಪರ್‌ವೈಸರ್ ಸುರೇಶ್ ಬಾಬು.ಜಿ ಅವರ ಮನೆಯಲ್ಲಿ ಶೋಧದ ವೇಳೆ ಪತ್ತೆಯಾದ ರಿವಾಲ್ವರ್ ಮತ್ತು ಗುಂಡುಗಳು

1. ಡಾ.ರಾಜಾ ವೆಂಕಪ್ಪ ನಾಯಕ, ತಾಲ್ಲೂಕು ಆರೋಗ್ಯಾಧಿಕಾರಿ, ಸುರಪುರ, ಯಾದಗಿರಿ
- ₹45 ಲಕ್ಷ ಮೌಲ್ಯದ 11 ನಿವೇಶನ, ₹3 ಕೋಟಿ ಮೌಲ್ಯದ 2 ಮನೆ, ₹20 ಲಕ್ಷ ಬೆಲೆಯ 13 ಎಕರೆ ಕೃಷಿ ಜಮೀನು
- ₹40 ಲಕ್ಷ ಮೌಲ್ಯದ ಪೆಟ್ರೋಲ್ ಬಂಕ್, ₹1.50 ಕೋಟಿಯ ನರ್ಸಿಂಗ್ ಹೋಂ, ₹5.5 ಕೋಟಿಯ ಲಾಡ್ಜ್-ಬಾರ್ ಅಂಡ್ ರೆಸ್ಟೋರೆಂಟ್
- ₹4.10 ಲಕ್ಷ ನಗದು, ₹60 ಲಕ್ಷದ ಚಿನ್ನಾಭರಣ, ₹70 ಲಕ್ಷದ ವಾಹನಗಳು, ₹20 ಲಕ್ಷ ಗೃಹಬಳಕೆ ವಸ್ತುಗಳು

2. ಜಿ.ಶ್ರೀನಿವಾಸಮೂರ್ತಿ, ಇಇ, ಮಲ್ಲೇಶ್ವರ ವಲಯ, ಬಿಬಿಎಂಪಿ
- ₹2.49 ಕೋಟಿ ಮೌಲ್ಯದ 4 ನಿವೇಶನ, 6 ಮನೆಗಳು
- ₹10 ಲಕ್ಷ ನಗದು, ₹72 ಲಕ್ಷದ ಚಿನ್ನಾಭರಣ, ₹13.70 ಲಕ್ಷ ಬೆಲೆಯ ವಾಹನಗಳು

3. ಸುರೇಶ್ ಬಾಬು.ಜಿ, ಸರ್ವೆ ಸೂಪರ್‌ವೈಸರ್, ಎಡಿಎಲ್‌ಆರ್ ಕಚೇರಿ, ಕೋಲಾರ
- ₹6.50 ಕೋಟಿ ಮೌಲ್ಯದ 3 ನಿವೇಶನ, 5 ವಾಸದ ಮನೆ, 5 ಎಕರೆ ಕೃಷಿ ಜಮೀನು
- ₹3 ಲಕ್ಷ ನಗದು, ₹18.24 ಲಕ್ಷದ ಚಿನ್ನಾಭರಣ, ₹80 ಲಕ್ಷದ ವಾಹನಗಳು, ₹66.87 ಲಕ್ಷದ ಗೃಹೋಪಯೋಗಿ ವಸ್ತುಗಳು

4. ಎಂ.ಬಿ.ರವಿ, ಎಇಇ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
- ₹1.25 ಕೋಟಿ ಮೌಲ್ಯದ 4 ನಿವೇಶನ, 2 ಮನೆ
- ₹31,500 ನಗದು, ₹35.72 ಲಕ್ಷದ ಚಿನ್ನಾಭರಣ, ₹20.77 ಲಕ್ಷದ ವಾಹನಗಳು, ₹50 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು

ಸುದ್ದಿ 2 ನಿಮಿಷ

ಅಲೆಮಾರಿಗಳ ಪ್ರತ್ಯೇಕ ಸಮೀಕ್ಷೆ ನಡೆಸಿ: ಜಿ.ಪಲ್ಲವಿ ಆಗ್ರಹ

ಶಿವಮೊಗ್ಗ: 'ಅವಕಾಶ ವಂಚಿತ ಅಲೆಮಾರಿ ಸಮುದಾಯಗಳ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ತಿಳಿಯಲು ಹೋಬಳಿ ಮಟ್ಟದಲ್ಲಿ ವಿಶೇಷ ಸಮೀಕ್ಷೆ ನಡೆಸಬೇಕು' ಎಂದು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಒತ್ತಾಯಿಸಿದರು.

ಪರಿಶಿಷ್ಟ ಜಾತಿಯವರಿಗೆ ಒಳಮೀಸಲಾತಿ ಹಂಚಿಕೆಗೆ ದತ್ತಾಂಶ ಸಂಗ್ರಹಿಸುವಾಗಲೇ ಅಲೆಮಾರಿಗಳ ಸ್ಥಿತಿಗತಿ ಸಮೀಕ್ಷೆ ಮಾಡಬಹುದಿತ್ತು. ಪ್ರಶ್ನಾವಳಿ ಪಟ್ಟಿ ಬೇರೆಯೇ ಆಗಬೇಕಿದೆ. ಪ್ರತ್ಯೇಕವಾಗಿ ಮೂರು ದಿನ ನಡೆಸಲಿ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಅಲೆಮಾರಿಗಳಲ್ಲಿ ಸಿಂಧೋಳು ಹಾಗೂ ದುರುಗಮುರುಗಿ ಎರಡೂ ಹೆಸರು ಒಂದೇ ಸಮುದಾಯಕ್ಕೆ ಸಂಬಂಧಿಸಿದೆ. ಜಾತಿ ಮತ್ತು ವೃತ್ತಿಯ ಹೆಸರಿನ ಕಾರಣಕ್ಕೆ ಪರಿಶಿಷ್ಟ ಜಾತಿ, ಪ್ರವರ್ಗ- 1 ಎರಡರಲ್ಲೂ ದಾಖಲಾಗಿದ್ದಾರೆ. ಇಂತಹ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಮೀಸಲಾತಿ ಸಮಾನ ಹಂಚಿಕೆಗಾಗಿ ಸಮೀಕ್ಷೆ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಚರ್ಚಿಸಿ ಬೋಧನಾ ಶುಲ್ಕ ನಿಗದಿ ಖಾಸಗಿ ಕಾಲೇಜುಗಳ ಬೇಡಿಕೆ

ಬೆಂಗಳೂರು: ಬೋಧನಾ ಶುಲ್ಕ ನಿಗದಿ ಮಾಡುವಾಗ ಖಾಸಗಿ ಕಾಲೇಜು ಆಡಳಿತ ಮಂಡಳಿಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಕರ್ನಾಟಕ ಅನುದಾನರಹಿತ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿಗಳ ಸಂಘ ಮನವಿ ಮಾಡಿದೆ.

ಸ್ಪರ್ಧಾ ಪರೀಕ್ಷೆಗಳಿಗೆ ತರಬೇತಿ ನೀಡುವ ಪಿಯು ಕಾಲೇಜುಗಳಿಗೆ ನಿರ್ಬಂಧ ಹೇರಬಾರದು. ಕಟ್ಟಡ ಸುರಕ್ಷತಾ ಪ್ರಮಾಣಪತ್ರ, ಅಗ್ನಿ ಸುರಕ್ಷತಾ ಪ್ರಮಾಣಪತ್ರವನ್ನು ಪ್ರತಿ ವರ್ಷ ನವೀಕರಿಸುವ ಬದಲು ಐದು ವರ್ಷಗಳಿಗೆ ಒಮ್ಮೆ ನಿಗದಿ ಮಾಡಬೇಕು. ಸ್ಥಳೀಯ ಸಂಸ್ಥೆಗಳಿಗೆ ಪಾವತಿಸುವ ಕಟ್ಟಡ ಶುಲ್ಕದಲ್ಲಿ ರಿಯಾಯಿತಿ ಕೊಡಿಸಬೇಕು. ರೋಸ್ಟರ್ ಪದ್ಧತಿಯಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ವಿದ್ಯಾರ್ಥಿಗಳ ಸೀಟು ಹೆಚ್ಚಿಸಬೇಕು ಎಂದು ಸಂಘದ ಅಧ್ಯಕ್ಷ ಎಂ. ಮೋಹನ್ ಆಳ್ವ, ಕಾರ್ಯದರ್ಶಿ ನರೇಂದ್ರ ಎಲ್. ನಾಯಕ್ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿ ಮಾಡಿದರು.

ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಸಿಇಟಿ ರ‍್ಯಾಂಕ್ ನಿಗದಿ ಮಾಡುವಾಗ ಗಣಿತದ ಆಂತರಿಕ ಅಂಕಗಳನ್ನು ಪರಿಗಣಿಸಬಾರದು. ನಕಲಿ ಪಿಯು ಕಾಲೇಜುಗಳನ್ನು ಪತ್ತೆಹಚ್ಚಿ, ಕ್ರಮ ಕೈಗೊಳ್ಳಬೇಕು ಎಂದು ಕೋರಿದರು.

ಮನವಿ ಸ್ವೀಕರಿಸಿದ ಸಚಿವ ಮಧು ಬಂಗಾರಪ್ಪ ಅವರು, ಖಾಸಗಿ ಕಾಲೇಜುಗಳ ಬೇಡಿಕೆಯನ್ನು ಕಾಲಮಿತಿಯ ಒಳಗೆ ಪರಿಹರಿಸುವ ಭರವಸೆ ನೀಡಿದರು.

ಜಾತ್ರೆ ಸಂಭ್ರಮ ಕೊಪ್ಪಳ ಜಿಲ್ಲೆ ಅಳವಂಡಿಯ ಹಲಗೇರಿ ಗ್ರಾಮದೇವಿ ದ್ಯಾಮಮ್ಮದೇವಿ ಜಾತ್ರೆ ನಿಮಿತ್ತ ನಡೆದ ರಥೋತ್ಸವಕ್ಕೆ ಅಸಂಖ್ಯ ಭಕ್ತರು ಗುರುವಾರ ಸಾಕ್ಷಿಯಾದರು ಪ್ರಜಾವಾಣಿ ಚಿತ್ರ

ಬಿಜೆಪಿಗೇಕೆ ಅಭಿವೃದ್ಧಿ ಕಾಣುತ್ತಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಪಂಚ ಗ್ಯಾರಂಟಿ ಯೋಜನೆಗಳಿಗೆ ಕಳೆದ ವರ್ಷ ₹53 ಸಾವಿರ ಕೋಟಿ ವೆಚ್ಚ ಮಾಡಿದ್ದೆವು. ಈ ಬಾರಿ ಬಜೆಟ್‌ನಲ್ಲಿ ₹50 ಸಾವಿರ ಕೋಟಿ ಮೀಸಲಿಟ್ಟಿದ್ದೇವೆ. ಆಸ್ತಿ ಸೃಜನೆಗೆ ₹83 ಸಾವಿರ ಕೋಟಿ ಇಟ್ಟಿದ್ದೇವೆ. ಬಿಜೆಪಿಯವರು ಆರೋಪಿಸುವಂತೆ ನಮ್ಮದು 'ಪಾಪರ್ ಸರ್ಕಾರ'ವಾಗಿದ್ದರೆ, ಇಷ್ಟು ಅಭಿವೃದ್ಧಿ ಸಾಧ್ಯವಿತ್ತೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದರು.

ನಗರದಲ್ಲಿ ಜಿಲ್ಲಾ ಕುರುಬರ ಸಂಘ ಗುರುವಾರ ಆಯೋಜಿಸಿದ್ದ ಬಾಲಕರ ವಿದ್ಯಾರ್ಥಿನಿಲಯದ ನೂತನ ಕಟ್ಟಡದ ಶಂಕುಸ್ಥಾಪನೆ ವೇಳೆ ಮಾತನಾಡಿ, 'ಬಿಜೆಪಿ ನಿರಂತರ ಸುಳ್ಳು ಹೇಳಿಕೊಂಡು ತಿರುಗುತ್ತಿದೆ. ಸರ್ಕಾರದ ಬೊಕ್ಕಸ ಖಾಲಿ ಎನ್ನುತ್ತಿದ್ದಾರೆ. ಆದರೆ ಜನರಿಗೆ ಕಾಣುತ್ತಿರುವ ಅಭಿವೃದ್ಧಿಪರ ಕಾರ್ಯಕ್ರಮಗಳು ಬಿಜೆಪಿಯವರಿಗೇಕೆ ಕಾಣುತ್ತಿಲ್ಲ. ಅವರು ಯಾವತ್ತಿಗೂ ಸಾಮಾಜಿಕ ನ್ಯಾಯದ ಪರವಾಗಿಲ್ಲ' ಎಂದರು.

> ಮೈಸೂರಿನಲ್ಲಿರುವ ಪಾಕ್‌ನ ಕೆಲವರು ಕೋರ್ಟ್ ಮೊರೆ ಹೋಗಿದ್ದಾರೆ. ಉಳಿದಂತೆ ಬಹುತೇಕ ಎಲ್ಲರೂ ಗಡಿಪಾರಾಗಿದ್ದಾರೆ. ಎಷ್ಟು ಜನ ಉಳಿದಿದ್ದಾರೆ ಎಂಬ ಮಾಹಿತಿ ಇಲ್ಲ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಅಣೆಕಟ್ಟುಗಳಿಗೆ ಭದ್ರತೆಗೆ ಸೂಚನೆ

ಅಣೆಕಟ್ಟುಗಳ ಸುರಕ್ಷತೆಯ ದೃಷ್ಟಿಯಿಂದ ಎಲ್ಲೆಡೆ ಎಚ್ಚರಿಕೆ ನೀಡಲಾಗಿದ್ದು, ಹೆಚ್ಚಿನ ಭದ್ರತೆ ಒದಗಿಸಲು ಸೂಚಿಸಿದ್ದೇನೆ. ಯಾವುದೇ ಕ್ಷಣದಲ್ಲಿ ಏನಾದರೂ ಆಗಬಹುದು ಎಂಬ ಕಾರಣಕ್ಕೆ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನನ್ನ ಹೆಂಡ್ತಿಗೂ ಫ್ರೀ: 'ಜಾತಿ ನೋಡಿ ಗ್ಯಾರಂಟಿ ಸೌಲಭ್ಯಗಳನ್ನು ಕೊಡುತ್ತಿಲ್ಲ. ಸಚಿವ ಚಲುವರಾಯಸ್ವಾಮಿ, ಶಾಸಕ ನರೇಂದ್ರಸ್ವಾಮಿ ಹಾಗೂ ನನ್ನ ಹೆಂಡತಿಯೂ ಶಕ್ತಿ ಯೋಜನೆಯಡಿ ಉಚಿತವಾಗಿ ಬಸ್‌ನಲ್ಲಿ ಹೋಗಬಹುದು' ಎಂದು ಸಿಎಂ ಹೇಳಿದಾಗ, ಸಭಿಕರು ಶಿಳ್ಳೆ ಹೊಡೆದು, ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿದರು.

ದಸಂಸ ಕಾರ್ಯಕರ್ತರ ವಶ: 'ಶೇ 75ರಷ್ಟು ಮೀಸಲಾತಿ ಹೆಚ್ಚಿಸುವ ಭರವಸೆ ಈಡೇರಿಸಿಲ್ಲ' ಎಂದು ದೂರಿ ಮುಖ್ಯಮಂತ್ರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಸಜ್ಜಾಗಿದ್ದ ದಲಿತ ಸಂಘರ್ಷ ಸಮಿತಿ ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಮುಕ್ತ ಚರ್ಚೆಗೆ ಜಾತಿ ದತ್ತಾಂಶ

ಆಕ್ಷೇಪಣೆ– ಸಲಹೆ ಸ್ವೀಕರಿಸಿ ಅಧಿವೇಶನದಲ್ಲಿ ಮಂಡಿಸಲು ಸರ್ಕಾರದ ಚಿಂತನೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ದತ್ತಾಂಶಗಳ ಅಧ್ಯಯನ ವರದಿಯಲ್ಲಿನ ಅಂಶಗಳನ್ನು ಸಾರ್ವಜನಿಕಗೊಳಿಸಿ, ಬಹಿರಂಗ ಚರ್ಚೆಗೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ದತ್ತಾಂಶ ಅಧ್ಯಯನ ವರದಿಯಲ್ಲಿರುವ ಮಾಹಿತಿಗಳು ಬಹಿರಂಗಗೊಂಡ ಬೆನ್ನಲ್ಲೇ, ಪರ-ವಿರೋಧ ವ್ಯಕ್ತವಾಗಿತ್ತು. ಸಮುದಾಯದ ಒತ್ತಡಕ್ಕೆ ಮಣಿದ ಸಚಿವರು ಇದರ ಬಗ್ಗೆ ತಕರಾರು ತೆಗೆದಿದ್ದರು. ಈ ಬೆಳವಣಿಗೆಗಳ ಬೆನ್ನಲ್ಲೆ, ವರದಿಯ ದತ್ತಾಂಶಗಳನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸಿ, ಜನಸಂಖ್ಯಾವಾರು ಅಂಕಿ ಅಂಶದ ಚರ್ಚೆಯನ್ನು ವಿಶಾಲ ನೆಲೆಗೆ ಕೊಂಡೊಯ್ಯಲು ಸರ್ಕಾರ ಹೆಜ್ಜೆ ಇಟ್ಟಿದೆ.

ಶುಕ್ರವಾರ (ಮೇ 9) ನಡೆಯಲಿರುವ ಸಚಿವ ಸಂಪುಟ ಸಭೆಗೆ ಈ ಕುರಿತ ಪ್ರಸ್ತಾವವನ್ನು ಮಂಡಿಸಿ ಅನುಮೋದನೆ ಪಡೆಯಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿರ್ಧರಿಸಿದೆ. ಸಭೆಗೆ ಸಿದ್ಧಪಡಿಸಿದ 21 ಪುಟಗಳ ವಿವರವಾದ ಟಿಪ್ಪಣಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಜಾತಿ ಜನಗಣತಿ ವರದಿಯಲ್ಲಿರುವ ಅಂಶಗಳನ್ನು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ ಒಂದು ತಿಂಗಳು ಪ್ರಚಾರಪಡಿಸಿ ದೃಢೀಕರಿಸಲು ಮತ್ತು ಈ ಅವಧಿಯಲ್ಲಿ ವರದಿಗೆ ಸಂಬಂಧಿಸಿದಂತೆ ಆಕ್ಷೇಪಣೆ-ಸಲಹೆಗಳನ್ನು ಸ್ವೀಕರಿಸಲು ಸರ್ಕಾರ ಮುಂದಡಿ ಇಟ್ಟಿದೆ. ಅಲ್ಲದೆ, ಸ್ವೀಕೃತಗೊಳ್ಳುವ ಆಕ್ಷೇಪಣೆ- ಸಲಹೆಗಳ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡು ವಿಧಾನಮಂಡಲ ಅಧಿವೇಶನದ ಉಭಯ ಸದನಗಳಲ್ಲಿ ವಿಷಯ ಮಂಡಿಸುವ ಬಗ್ಗೆಯೂ ಚರ್ಚೆ ನಡೆದಿದೆ. ವರದಿಯಲ್ಲಿರುವ ಶಿಫಾರಸುಗಳ ವಿವರಗಳನ್ನು ಹೈಕೋರ್ಟ್ ಗಮನಕ್ಕೆ ತರಲು ಕೂಡಾ ನಿರ್ಧರಿಸಿದೆ. ಈ ಎಲ್ಲ ಅಂಶಗಳನ್ನು ಪ್ರಸ್ತಾಪಿಸಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಸಚಿವ ಸಂಪುಟ ಸಭೆಯ ಅನುಮೋದನೆ ಕೋರಿದೆ.

ಇದೇ ಏಪ್ರಿಲ್ 11ರಂದು ನಡೆದ ಸಚಿವ ಸಂಪುಟ ಸಭೆ ಮತ್ತು 17ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಗೆ ಜಾತಿ ಜನಗಣತಿ ವರದಿಯನ್ನು ಇಲಾಖೆ ಮಂಡಿಸಿತ್ತು. 17ರಂದು ನಡೆದ ಸಭೆಯಲ್ಲಿ ಸಮೀಕ್ಷೆಯ ದತ್ತಾಂಶಗಳ ಕುರಿತು ಸುದೀರ್ಘ ಚರ್ಚೆ ನಡೆದು, ಹೆಚ್ಚಿನ ಚರ್ಚೆಗಾಗಿ ತಾಂತ್ರಿಕ ಮಾಹಿತಿಯೂ ಸೇರಿದಂತೆ ಇನ್ನಷ್ಟು ವಿವರ ಅಗತ್ಯ ಇದೆ ಎಂದು ಸಚಿವರು ಬೇಡಿಕೆ ಇಟ್ಟಿದ್ದರು. ಹೀಗಾಗಿ ಅದನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಅಂದಿನ ಸಭೆಯಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಸಚಿವರು ವರದಿಯ ಬಗ್ಗೆ ಹೆಚ್ಚಿನ ವಿವರಣೆ ಕೇಳಿದ್ದರು. ವಿವರ ನೀಡುವಂತೆ ಇಲಾಖೆಗೆ ಸೂಚಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಲಿಖಿತವಾಗಿ ಅಭಿಪ್ರಾಯ ತಿಳಿಸುವಂತೆ ಸಚಿವರಿಗೆ ಸಲಹೆ ನೀಡಿದ್ದರು. ಚರ್ಚೆ ಅಪೂರ್ಣಗೊಂಡಿದ್ದರಿಂದ ಮೇ 2ರಂದು ಸಚಿವ ಸಂಪುಟ ಸಭೆ ನಡೆಸಿ ಚರ್ಚಿಸಲು ತೀರ್ಮಾನಿಸಲಾಗಿತ್ತು. ಆದರೆ, ಮೇ 2ರಂದು ಸಭೆ ನಡೆದಿಲ್ಲ.

ಟಿಪ್ಪಣಿಯಲ್ಲಿ ಏನಿದೆ: ಸಮೀಕ್ಷೆಯ ದತ್ತಾಂಶಗಳ ವಿವರ ಹಾಗೂ ಅಧ್ಯಯನ ವರದಿಯ ಕುರಿತಂತೆ ಹೈಕೋರ್ಟ್‌ನಲ್ಲಿ ಹಲವು ರಿಟ್ ಅರ್ಜಿಗಳು ದಾಖಲಾಗಿವೆ. ಕೆಲವು ರಿಟ್ ಅರ್ಜಿಗಳನ್ನು ಒಗ್ಗೂಡಿಸಲಾಗಿದ್ದು, ಮುಂದಿನ ವಿಚಾರಣೆ ಜುಲೈ 17ರಂದು ನಡೆಯಲಿದೆ. ಪ್ರವರ್ಗ 2ಬಿಗೆ (ಮುಸ್ಲಿಂ ಸಮುದಾಯ) ನೀಡಿದ್ದ ಶೇ 4 ಮೀಸಲಾತಿಯನ್ನು ಹಿಂದಿನ ಬಿಜೆಪಿ ಸರ್ಕಾರ ರದ್ದುಪಡಿಸಿ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವ ರಿಟ್ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ. ಈ ಎಲ್ಲ ರಿಟ್ ಅರ್ಜಿಗಳ ವಿವರಗಳನ್ನು ಸಚಿವ ಸಂಪುಟ ಸಭೆಯ ಟಿಪ್ಪಣಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿವರವಾಗಿ ನೀಡಿದೆ.

'ನ್ಯಾಯಾಲಯದ ಅನುಮತಿ ಇಲ್ಲದೇ ಮೀಸಲಾತಿ ಶೇಕಡಾವಾರು ಪ್ರಮಾಣವನ್ನು ಮತ್ತು ಸಮುದಾಯಗಳ ಸಂಯೋಜನೆಯನ್ನು (ಪ್ರವರ್ಗವಾರು) ವ್ಯತ್ಯಯಗೊಳಿಸುವುದಿಲ್ಲ' ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗೆ ರಾಜ್ಯ ಸರ್ಕಾರ ಈಗಾಗಲೇ ಪ್ರಮಾಣಪತ್ರ ಸಲ್ಲಿಸಿದೆ. ಹಿಂದುಳಿದ ವರ್ಗಗಳ ಕಾಯ್ದೆಯ ಪ್ರಕಾರ ರಾಜ್ಯ ಸರ್ಕಾರವು ಪ್ರತಿ 10 ವರ್ಷಗಳಿಗೆ ಒಮ್ಮೆ ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸಬೇಕಾಗಿದೆ. ಈ ಪರಿಷ್ಕರಣೆ ಉದ್ದೇಶದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ' ಎಂದೂ ಇಲಾಖೆ ಸಮರ್ಥನೆ ನೀಡಿದೆ.

ಟಿಪ್ಪಣಿಯ ಜೊತೆಗೆ, ಜಾತಿ ಜನಗಣತಿ ವರದಿಯ ಕುರಿತು ಸಾರ್ವಜನಿಕವಾಗಿ ಚರ್ಚೆ ಆಗುತ್ತಿರುವ ಅಂಶಗಳ ಬಗ್ಗೆ ಪ್ರಶ್ನೆ ಮತ್ತು ಉತ್ತರ ಮಾದರಿಯಲ್ಲಿ ಎಂಟು ಪುಟಗಳಲ್ಲಿ ಇಲಾಖೆ ಮಾಹಿತಿ ನೀಡಿದೆ. ಈ ಸಮೀಕ್ಷೆ ಜಾತಿ ಗಣತಿಯೇ ಅಥವಾ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯೇ? ಸರ್ವೆ ಕಾರ್ಯ ಮಾಡುವಾಗ ಜಾತಿಯನ್ನು ದೃಢೀಕರಿಸಿದವರು ಯಾರು? ಎಲ್ಲಿಯೊ ಕುಳಿತು ಕೆಲವು ಜಾತಿಗಳಿಗೆ ಅನುಕೂಲವಾಗುವಂತೆ ಸಮೀಕ್ಷೆ ಮಾಡಿ ಕೆಲವು ಜಾತಿಗಳನ್ನು ಕಡಿಮೆ ತೋರಿಸಿದ್ದಾರೆಯೇ? ಒಂದು ಜಾತಿಯವರಿಗೆ ಅನುಕೂಲ ಮಾಡಿಕೊಡಲು ಸರ್ವೆ ಕಾರ್ಯ ಮಾಡಲಾಗಿದೆಯೇ? ಮುಸ್ಲಿಂ ಧರ್ಮವಲ್ಲವೇ, ಜಾತಿ ಎಂದು ಪರಿಗಣಿಸಿರುವುದು ಹೇಗೆ? ಮುಂತಾದ 14 ಪ್ರಶ್ನೆಗಳಿಗೆ ಇಲಾಖೆಯು ಉತ್ತರ ನೀಡಿದೆ.

ಮುಸ್ಲಿಮರ ಜನಸಂಖ್ಯೆಯ ವಾಸ್ತವವೇನು?

'ಸಮೀಕ್ಷಾ ವರದಿಯಲ್ಲಿ ಮುಸ್ಲಿಂ ಸಮುದಾಯವರ ಜನಸಂಖ್ಯೆ ಹೆಚ್ಚು ತೋರಿಸಲಾಗಿದೆ ಎಂಬ ಅಂಶವು ಸತ್ಯಕ್ಕೆ ದೂರವಾಗಿದೆ. ಕಾರಣವೇನೆಂದರೆ, 2011ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಮುಸ್ಲಿಂ ಸಮುದಾಯದ ಜನಸಂಖ್ಯೆ 78,93,065. ಅಂದರೆ, ಒಟ್ಟು ಜನಸಂಖ್ಯೆಗೆ ಶೇ 12.91ರಷ್ಟಿತ್ತು. 2015 ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪ್ರಕಾರ ಮುಸ್ಲಿಂ ಜಾತಿಯ ಎಲ್ಲ ಉಪ ಜಾತಿಗಳ ಒಟ್ಟು ಜನಸಂಖ್ಯೆ 76,98,425. ರಾಜ್ಯದ ಒಟ್ಟು ಜನಸಂಖ್ಯೆಯ ಶೇ 12.87. ಹೀಗಾಗಿ, ಸಮೀಕ್ಷಾ ವರದಿಯಲ್ಲಿ ಮುಸ್ಲಿಂ ಸಮುದಾಯದ ಜನಸಂಖ್ಯೆಯನ್ನು ಹೆಚ್ಚು ತೋರಿಸಿದ್ದಾರೆ ಎಂದು ಹೇಳುವ ಮಾತಿನಲ್ಲಿ ಹುರುಳಿಲ್ಲ' ಎಂದು ಸಚಿವ ಸಂಪುಟ ಸಭೆಗೆ ಸಲ್ಲಿಸಿರುವ ಅನುಬಂಧದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿವರಿಸಿದೆ.

ಭದ್ರತಾ ಲೋಪ ಇನ್‌ಸ್ಪೆಕ್ಟರ್ ಮುಲ್ಲಾ ಅಮಾನತು

ಪ್ರಜಾವಾಣಿ ವಾರ್ತೆ

ಅಲ್ತಾಫ್‌ಹುಸೇನ್ ಮುಲ್ಲಾ

ಬೆಳಗಾವಿ: ಇತ್ತೀಚೆಗೆ ಇಲ್ಲಿ ನಡೆದ ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಭದ್ರತಾ ಲೋಪಕ್ಕೆ ಕಾರಣವಾದ ಆರೋಪದಡಿ ಕ್ಯಾಂಪ್ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಅಲ್ತಾಫ್ ಹುಸೇನ್ ಮುಲ್ಲಾ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಅಂದು ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಷಣ ಮಾಡುವಾಗ, ಬಿಜೆಪಿ ಕಾರ್ಯಕರ್ತೆಯರು ಕಪ್ಪುಬಟ್ಟೆ ಪ್ರದರ್ಶಿಸಿದ್ದರು. 'ಈ ಬಗ್ಗೆ ಈಗಾಗಲೇ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತುಪಡಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ 'ಪ್ರಜಾವಾಣಿ'ಗೆ ತಿಳಿಸಿದರು.

ಪಿಎಫ್‌ಐ ಕೈವಾಡ: ಬಿಜೆಪಿ ನಿಯೋಗ ಆರೋಪ

ಸುಹಾಸ್ ಹತ್ಯೆ: ಎನ್‌ಐಎ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಕೈವಾಡ ಇದೆ. ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಬೇಕು ಎಂದು ಬಿಜೆಪಿಯ ಸಂಸದ, ಶಾಸಕರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಅವರಿಗೆ ಗುರುವಾರ ಮನವಿ ಸಲ್ಲಿಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಾಸಕ ವಿ.ಸುನಿಲ್ ಕುಮಾರ್, 'ಪೊಲೀಸ್ ಕಮಿಷನರ್ ಅವರಿಗೆ ಕೊಲೆ ಕುರಿತ ಅನುಮಾನಗಳನ್ನು ತಿಳಿಸಿದ್ದೇವೆ. ಹತ್ಯೆಯಲ್ಲಿ ಪಿಎಫ್‌ಐ ಕಾರ್ಯಕರ್ತರು ಭಾಗಿಯಾಗಿದ್ದು, ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ಮಟ್ಟದಿಂದ ಹಣಕಾಸು ಪೂರೈಕೆಯಾಗಿದೆ. ಯಾವುದೇ ಒತ್ತಡಕ್ಕೆ ಒಳಗಾಗದೇ ಈ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಲು ಶಿಫಾರಸು ಮಾಡಬೇಕು ಎಂದು ಕೋರಿದ್ದೇವೆ' ಎಂದರು.

'ಪ್ರಕರಣದಲ್ಲಿ ಎಂಟು ಮಂದಿಯನ್ನು ಮಾತ್ರ ಬಂಧಿಸಲಾಗಿದೆ. ಇದು, ಪೂರ್ವ-ನಿರ್ಧರಿತ ಕೃತ್ಯ. 35-40 ಮಂದಿ ಭಾಗಿಯಾಗಿದ್ದಾರೆ. ಕಾನ್‌ಸ್ಟೆಬಲ್ ಒಬ್ಬರು ಹತ್ಯೆ ಹಿಂದೆ ಇದ್ದಾರೆ ಎಂಬ ಬಗ್ಗೆಯೂ ಕಮಿಷನರ್ ಗಮನ ಸೆಳೆದಿದ್ದೇವೆ. ನೇರ ಕೈವಾಡವಿರುವ ಆರೋಪಿಗಳು, ಅವರಿಗೆ ಆಶ್ರಯ ನೀಡಿದವರು, ಸುಹಾಸ್ ಶೆಟ್ಟಿ ಚಲನವಲನ ಗಮನಿಸಿ ಮಾಹಿತಿ ನೀಡಿದವರು, ವಾಹನಗಳನ್ನು ಒದಗಿಸಿದವರನ್ನು, ಹಣಕಾಸು ನೆರವು ನೀಡಿದವರೆಲ್ಲರನ್ನು ಶೀಘ್ರವೇ ಬಂಧಿಸಬೇಕು' ಎಂದು ಅವರು ಒತ್ತಾಯಿಸಿದರು.

ಬಿಜೆಪಿ ಸರ್ಕಾರವಿದ್ದಾಗಲೇ ಸುಹಾಸ್ ಹೆಸರು ರೌಡಿ ಪಟ್ಟಿಗೆ ಸೇರಿದ್ದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರೌಡಿ ಶೀಟ್ ತೆರೆಯುವುದು ಸಹಜ ಪ್ರಕ್ರಿಯೆ. ಹೋರಾಟಗಾರ ಮತ್ತು ಕೊಲೆಗಾರರನ್ನು ಒಂದೇ ತಕ್ಕಡಿಯಲ್ಲಿ ತೂಗಲಾಗದು. ಶಾಸಕನಾಗುವ ಸಂದರ್ಭದಲ್ಲಿ ನನ್ನ ಮೇಲೂ ದೊಂಬಿ, ಕೊಲೆ ಯತ್ನದಂತಹ ಪ್ರಕರಣಗಳೂ ಸೇರಿ 27 ಮೊಕದ್ದಮೆಗಳಿದ್ದವು. ಸುಹಾಸ್ ಶೆಟ್ಟಿ ಕೂಡಾ ಸಿದ್ಧಾಂತಕ್ಕಾಗಿ ಹೋರಾಟ ಮಾಡುತ್ತಿದ್ದ ವ್ಯಕ್ತಿ' ಎಂದರು.

ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕರಾದ ಡಾ.ವೈ.ಭರತ್ ಶೆಟ್ಟಿ, ಡಿ.ವೇದವ್ಯಾಸ ಕಾಮತ್, ಉಮಾನಾಥ ಕೋಟ್ಯಾನ್, ಭಾಗಿರತಿ ಮುರುಳ್ಯ, ವಿಧಾನ ಪರಿಷತ್ ಸದಸ್ಯರಾದ ಪ್ರತಾಪಸಿಂಹ ನಾಯಕ್, ಕಿಶೋರ್ ಕುಮಾರ್ ಪುತ್ತೂರು ನಿಯೋಗದಲ್ಲಿದ್ದರು.

11ರಂದು ನಡ್ಡಾ ಭೇಟಿ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕೇಂದ್ರ ಸಚಿವ ಜಗತ್‌ಪ್ರಕಾಶ್ ನಡ್ಡಾ ಇದೇ 11 ರಿಂದ ಎರಡು ದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಮಾಡಲಿದ್ದು, 11ರ ಬೆಳಿಗ್ಗೆ ಸುಹಾಸ್ ಶೆಟ್ಟಿ ಮನೆಗೆ ಭೇಟಿ ನೀಡುವರು ಎಂದು ತಿಳಿಸಿದರು.

'ಕಾಂತಾರ ಪ್ರೀಕ್ವೆಲ್' ಕಲಾವಿದ ಸಾವು ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮುಂಬೈ: ಕೇರಳ ಮೂಲದ ಕಿರಿಯ ಕಲಾವಿದ ಎಂ.ಎಫ್. ಕಪಿಲ್ ಅವರ ಸಾವಿನ ಪ್ರಕರಣದ ಕುರಿತು ಕೂಲಂಕಷವಾಗಿ ತನಿಖೆ ನಡೆಸಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ಅಖಿಲ ಭಾರತ ಸಿನಿಮಾ ಕಾರ್ಮಿಕರ ಸಂಘಟನೆ (ಎಐಸಿಡಬ್ಲ್ಯುಎ)ಯು ಒತ್ತಾಯಿಸಿದೆ.

ಕೊಲ್ಲೂರು ಬಳಿ ನಡೆಯುತ್ತಿದ್ದ ಸಿನಿಮಾ ಚಿತ್ರೀಕರಣದ ಬಿಡುವಿನ ವೇಳೆ ಕಪಿಲ್ ಅವರು ಸೌಪರ್ಣಿಕ ನದಿಯಲ್ಲಿ ಈಜಲು ಹೋಗಿ ಮುಳುಗಿ, ಮೃತಪಟ್ಟಿದ್ದರು. ಮೃತ ಕಪಿಲ್ ಅವರು, ರಿಷಬ್ ಶೆಟ್ಟಿ ನಿರ್ಮಾಪರಾಗಿರುವ 'ಕಾಂತಾರ: ಚಾಪ್ಟರ್ 1'(ಕಾಂತಾರ ಪ್ರೀಕ್ವೆಲ್) ಚಿತ್ರದ ಭಾಗವಾಗಿದ್ದರು.

ಈ ಕುರಿತು ನಿಷ್ಪಕ್ಷಪಾತ ತನಿಖೆಗಾಗಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು. ಈ ಸಂಬಂಧ ರಿಷಬ್ ಶೆಟ್ಟಿ ವಿರುದ್ಧ ಪ್ರಕರಣ ದಾಖಲಿಸಬೇಕು. ಕಪಿಲ್ ಅವರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಐಸಿಡಬ್ಲ್ಯುಎ ಮನವಿ ಮಾಡಿದೆ.

'ಕೇರಳದ ವೈಕಮ್‌ನ ಮೂಸರಿಥಾರ ಗ್ರಾಮದವರಾದ ಕಿರಿಯ ಕಲಾವಿದ ಕಪಿಲ್, ಚಿತ್ರೀಕರಣ ನಡೆಯುತ್ತಿದ್ದ ಸಂದರ್ಭದಲ್ಲಿಯೇ ಮೇ 6ರಂದು 3.45ರ ಸುಮಾರಿಗೆ ಕರ್ನಾಟಕದ ಕೊಲ್ಲೂರಿನ ಸೌಪರ್ಣಿಕ ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ' ಎಂದು ಎಐಸಿಡಬ್ಲ್ಯುಎ 'ಎಕ್ಸ್'ನಲ್ಲಿ ತಿಳಿಸಿದೆ.

'ನದಿಯಲ್ಲಿ ಈಜಲು ಹೋಗಿ ಮುಳುಗಿ ಕಲಾವಿದ ಮೃತಪಟ್ಟಿದ್ದಾನೆ. ಈ ಕುರಿತು ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಸಿನಿಮಾ ನಿರ್ಮಾಪಕ ಮತ್ತು ಪ್ರೊಡಕ್ಷನ್ ಹೌಸ್ ಮಾಲೀಕ ರಿಷಬ್ ಶೆಟ್ಟಿ ಹೇಳಿದ್ದಾರೆ' ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಆರ್‌ಟಿಪಿಎಸ್‌ನಲ್ಲಿ ವಿದ್ಯುತ್ ಸ್ಪರ್ಶಿಸಿ ಕಾರ್ಮಿಕ ಸಾವು

ರಾಯಚೂರು: ಇಲ್ಲಿನ ರಾಯಚೂರು ವಿದ್ಯುತ್ ಶಾಖೋತ್ಪನ್ನ ಕೇಂದ್ರದಲ್ಲಿ (ಆರ್‌ಟಿಪಿಎಸ್)ವಾಟರ್ ಕ್ಲಾರಿಫೈರ್ ಸ್ವಚ್ಛಗೊಳಿಸುವಾಗ ವಿದ್ಯುತ್ ತಂತಿ ತಗುಲಿ ಕಾರ್ಮಿಕ ತಿಮ್ಮಾರೆಡ್ಡಿ (28) ಮೃತಪಟ್ಟಿದ್ದಾರೆ. ರಂಗಪ್ಪ ಹನುಮೇಶ ಮತ್ತು ವೀರೇಶ್ ಅವರು ಗಂಭೀರವಾಗಿ ಗಾಯಗೊಂಡಿದ್ದು, ಆರ್‌ಟಿಪಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ಕೆಲಸದ ವೇಳೆ ಸುರಕ್ಷತಾ ಸಾಮಗ್ರಿ ನೀಡಿರಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯವೇ ಕಾರ್ಮಿಕರ ಸಾವಿಗೆ ಕಾರಣ' ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಪ್ರಕರಣ ದಾಖಲಾಗಿದೆ.

ಅಪಘಾತ: ಮಕ್ಕಳು ಸೇರಿ ಆರು ಸಾವು

ಹಾವೇರಿ: ಜಿಲ್ಲೆಯ ಮೋಟೆಬೆನ್ನೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ಲಾರಿ -ಕಾರು ನಡುವೆ ಅಪಘಾತದಲ್ಲಿ ಕಾರಿನಲ್ಲಿದ್ದ 6 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ದಾವಣಗೆರೆ ಜಿಲ್ಲೆಯ ಹರಿಹರದ ಸೈಯದ್ ಫರ್ಹಾನ್ ಇನಾಮುಲ್ಲಾ (20), ಉಮ್ಮೆರಾ ಇನಾಮುಲ್ಲಾ (11), ಗೋವಾದ ಅಲೀಷಾ ಅಕ್ಬರ್ ನಾರಂಗಿ (22), ಪುರಾಖಾನ್ (14), ರಾಣೆಬೆನ್ನೂರಿನ ಉಮ್ಮಿಶೀಫಾ ಅಪ್ರೋಜ್ ಉದಗಟ್ಟಿ (13), ಧಾರವಾಡದ ಆಶೀಯಾ ಖಲಂದರ್ (12) ಮೃತರು' ಎಂದು ಬ್ಯಾಡಗಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ಇಬ್ಬರು ಗಾಯಗೊಂಡಿದ್ದಾರೆ. ಎಲ್ಲರೂ ಸಂಬಂಧಿಕರು. ಮಕ್ಕಳಿಗೆ ಶಾಲೆ ರಜೆ ಇದ್ದುದರಿಂದ ಹಾವೇರಿ ಜಿಲ್ಲೆಯ ತಡಸಕ್ಕೆ ತೆರಳುತ್ತಿದ್ದರು. ವಾಹನ ಹಿಂದಿಕ್ಕುವ ಯತ್ನದಲ್ಲಿ ಎರಡನೇ ಪಥದಲ್ಲಿದ್ದ ಲಾರಿಗೆ ಡಿಕ್ಕಿ ಹೊಡೆದರು' ಎಂದು ಎಸ್‌ಪಿ ಅಂಶುಕುಮಾರ ಹೇಳಿದರು.

ನಾಳೆ ಕಾಮೆಡ್‌–ಕೆ ಪರೀಕ್ಷೆ

ಬೆಂಗಳೂರು: ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕದ ವೈದ್ಯಕೀಯ ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ (ಕಾಮೆಡ್‌-ಕೆ) ಮೇ 10ರಂದು ಪ್ರವೇಶ ಪರೀಕ್ಷೆ ನಡೆಸುತ್ತಿದೆ.

ದೇಶಾದ್ಯಂತ 1,31,937 ಅಭ್ಯರ್ಥಿಗಳು ಪರೀಕ್ಷೆಗೆ ದಾಖಲಾಗಿದ್ದಾರೆ. 28 ರಾಜ್ಯಗಳು, 179 ನಗರಗಳು ಮತ್ತು 248 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಬೆಳಿಗ್ಗೆ 8.30ರಿಂದ 11.30, ಮಧ್ಯಾಹ್ನ 1ರಿಂದ ಸಂಜೆ 4 ಹಾಗೂ ಸಂಜೆ 5.30 ರಿಂದ ರಾತ್ರಿ 8.30 ರವರೆಗೆ ಮೂರು ಹಂತದ ಸಮಯ ನಿಗದಿ ಮಾಡಲಾಗಿದೆ. ಈ ಪರೀಕ್ಷೆಯು ಕಂಪ್ಯೂಟರ್ ಆಧಾರಿತವಾಗಿರುತ್ತದೆ.

ನಿಗೂಢ ಶಬ್ದ; ಬೆಚ್ಚಿಬಿದ್ದ ಜನತೆ

ಕೋಲಾರ: ಗಡಿಯಲ್ಲಿ ಯುದ್ಧದ ವಾತಾವರಣ ಮೂಡಿರುವ ಸನ್ನಿವೇಶದಲ್ಲಿ ನಗರದಲ್ಲಿ ಗುರುವಾರ ಸ್ಫೋಟದ ರೀತಿ ಭಾರಿ ಸದ್ದು ಕೇಳಿ ಬಂದಿದೆ. ಜನರು ಬೆಚ್ಚಿಬಿದ್ದಿದ್ದಾರೆ. ಭಾರಿ ಪ್ರಮಾಣದ ಸದ್ದು ಹಲವು ಚರ್ಚೆ ಹಾಗೂ ಕುತೂಹಲಕ್ಕೆ ಕಾರಣವಾಗಿದೆ.

ಬೆಳಗ್ಗೆ 10.30ರ ಸುಮಾರಿಗೆ ನಿಗೂಢ ಸದ್ದು ಕೇಳಿಬಂದಿದ್ದು, ಕೆಲವರ ಮನೆಗಳಲ್ಲಿ ಪಾತ್ರೆಗಳು ಬಿದ್ದಿವೆ. ಸದ್ದು ಬಂಗಾರಪೇಟೆ, ಕೆಜಿಎಫ್‌ವರೆಗೆ ಕೇಳಿಸಿದೆ.

ಪಾಕಿಸ್ತಾನದ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಭಾರತೀಯ ಸೇನೆ ದಾಳಿ ನಡೆಸುತ್ತಿದ್ದು, ರಕ್ಷಣಾ ಇಲಾಖೆ ಅಣಕು ಕಾರ್ಯಾಚರಣೆ ಕೈಗೊಂಡಿರಬಹುದು. ಇದು ಯುದ್ಧ ವಿಮಾನದ ಸದ್ದು ಇರಬಹುದು ಎಂದು ಜನರು ಚರ್ಚಿಸುತ್ತಿರುವುದು ಕಂಡು ಬಂತು.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎಂ.ಆರ್.ರವಿ, 'ನಮಗೂ ಸದ್ದಿನ ವಿಚಾರ ಗೊತ್ತಾಗಿದೆ. ಮೂಲ ಪತ್ತೆ ಹಚ್ಚುವ ಕೆಲಸ ನಡೆಯುತ್ತಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಜೊತೆ ಕೂಡ ಚರ್ಚಿಸಿದ್ದು, ಮಾಹಿತಿ ಕಲೆಹಾಕಲಾಗುತ್ತಿದೆ' ಎಂದರು.

ಚಾಮರಾಜನಗರ: ಮಳೆ,ಬೆಳೆಗೆ ಹಾನಿ

ಚಾಮರಾಜನಗರ: ಜಿಲ್ಲೆಯಾದ್ಯಂತ ಬುಧವಾರ ರಾತ್ರಿ ಹಾಗೂ ಗುರುವಾರ ಸುರಿದ ಬಿರುಸಿನ ಮಳೆಗೆ ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ.ವಿವಿಧೆಡೆ ಮರಗಳು ಉರುಳಿವೆ.

ಯರಿಯೂರಿನಲ್ಲಿ ತೆಂಗಿನ ಮರಗಳು ಬಿದ್ದಿವೆ, ಮದ್ದೂರು ಹಾಗೂ ಹೊನ್ನೂರು ಗ್ರಾಮದಲ್ಲಿ 10 ಎಕರೆ ಬಾಳೆ, 2 ಎಕರೆ ಅಡಿಕೆಗೆ ಹಾನಿಯಾಗಿದೆ. ಜಿಲ್ಲಾಕೇಂದ್ರ ಸೇರಿ ವಿವಿಧೆಡೆ ರಸ್ತೆಗಳು ಜಲಾವೃತಗೊಂಡು ಜನತೆ ಪರಿತಪಿಸಿದರು

ಬೆಳಗಾವಿ ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಚಾರ್ಯ, ಸಿಬ್ಬಂದಿ ನೆರವು

₹1.10 ಲಕ್ಷ ಸಂಗ್ರಹಿಸಿ ಸಮವಸ್ತ್ರ ಕೊಡುಗೆ

• ಇಮಾಮ್‌ಹುಸೇನ್ ಗೂಡುನವರ

ಒಳ್ಳೆ ಸುದ್ದಿ

ಬೆಳಗಾವಿ: ಇಲ್ಲಿನ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಗೆ ಪ್ರಾಚಾರ್ಯರು, ಪ್ರಾಧ್ಯಾಪಕರು, ಸಿಬ್ಬಂದಿ ಸ್ವಂತ ಹಣದಲ್ಲಿ ಸಮವಸ್ತ್ರದ ಬಟ್ಟೆ ಕೊಡಿಸಿದ್ದಾರೆ.

ಕಾಲೇಜಿನಲ್ಲಿ 628 ವಿದ್ಯಾರ್ಥಿನಿಯರು ಬಿ.ಎ, ಬಿ.ಕಾಂ ಕೋರ್ಸ್ ಓದುತ್ತಾರೆ. ಅವರಲ್ಲಿ ಬಿ.ಎ, ಬಿ.ಕಾಂ ಪ್ರಥಮವರ್ಷದ 210 ವಿದ್ಯಾರ್ಥಿನಿಯರಿಗೆ ಸಮವಸ್ತ್ರದ ಬಟ್ಟೆ ವಿತರಿಸಲಾಗಿದೆ.

₹1.10 ಲಕ್ಷ ವೆಚ್ಚ: 'ಪ್ರಾಚಾರ್ಯರು, 12 ಪ್ರಾಧ್ಯಾಪಕರು, ಐವರು ಬೋಧಕೇತರ ಸಿಬ್ಬಂದಿ ₹1.10 ಲಕ್ಷ ಸಂಗ್ರಹಿಸಿ, ವಿದ್ಯಾರ್ಥಿನಿಯರಿಗೆ ತಲಾ 2 ಜೊತೆ ಚೂಡಿದಾರ ಬಟ್ಟೆ ಕೊಟ್ಟಿದ್ದೇವೆ' ಎಂದು ಪ್ರಾಧ್ಯಾಪಕ ರಮೇಶ ಮಾಂಗಳೇಕರ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮ ವಿದ್ಯಾರ್ಥಿನಿಯರಲ್ಲಿ ಹಲವರು ಬಡ, ಮಧ್ಯಮ ವರ್ಗದವರು. ಪ್ರತಿ ವರ್ಷ ಸಮವಸ್ತ್ರ ಖರೀದಿಸಲು ಅವರಿಗೆ ಸಂಕಷ್ಟ. ಹೀಗಾಗಿ ಈ ಕ್ರಮ ಕೈಗೊಂಡೆವು' ಎಂದರು.

'ಸ್ಥಳೀಯವಾಗಿ ಖರೀದಿಸಿದರೆ, ಹೆಚ್ಚು ಹಣ ಖರ್ಚು ಮಾಡಬೇಕಿತ್ತು. ಅದಕ್ಕೆ ನಾವೇ ಗುಜರಾತ್‌ನ ಸೂರತ್‌ಗೆ ಹೋಗಿ, ಕಡಿಮೆ ದರದಲ್ಲೇ ಗುಣಮಟ್ಟದ ಬಟ್ಟೆಗೆ ಆರ್ಡರ್ ಮಾಡಿದೆವು. ತಲಾ 10 ಮೀಟರ್ (ತಲಾ ಐದು ಮೀಟರ್ ಟಾಪ್, ಪ್ಯಾಂಟ್) ಬಟ್ಟೆ ಸಿಗುತ್ತದೆ. ಹೊಲಿಗೆ ಖರ್ಚು ವಿದ್ಯಾರ್ಥಿನಿಯರೇ ಭರಿಸುವರು' ಎಂದರು.

ವಿದ್ಯಾರ್ಥಿನಿಯರಿಗೆ ಸಮವಸ್ತ್ರದ ಬಟ್ಟೆ ವಿತರಿಸಿದ ಪ್ರಾಧ್ಯಾಪಕರು

ಚಿತ್ರ: ಏಕನಾಥ ಅಗಸಿಮನಿ

> ವಿದ್ಯಾರ್ಥಿನಿಯರಿಗೆ ಅನುಕೂಲವಾಗಿದೆ. ಉಳಿತಾಯದ ಹಣವನ್ನು ಕಲಿಕಾ ಚಟುವಟಿಕೆಗೆ ಬಳಸುವರು. ಇದು ನಮ್ಮ ಅಳಿಲುಸೇವೆ
>
> **ಎನ್.ಆರ್.ಪಾಟೀಲ,** ಪ್ರಾಚಾರ್ಯ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು

> ಹಲವು ಸಂಕಷ್ಟದ ಮಧ್ಯೆಯೂ ಓದು ಮುಂದುವರಿಸಿದ್ದೇವೆ. ಸಿಬ್ಬಂದಿ ಸಮವಸ್ತ್ರದ ಬಟ್ಟೆ ಕೊಡಿಸಿದ್ದರಿಂದ ಒಂದಿಷ್ಟು ಹಣ ಉಳಿದಿದೆ. ಅದನ್ನು ಕಲಿಕೆಗೆ ಬಳಸುತ್ತೇವೆ
>
> **ರೇಷ್ಮಾ ಲಮಾಣಿ, ರೇಣುಕಾ ನಾಯ್ಕ, ಹೊಳೆವ್ವ ನಾಯ್ಕ,** ವಿದ್ಯಾರ್ಥಿನಿಯರು

ವಿವಿಧ ಇಲಾಖೆಗಳ ಕಾರ್ಯದರ್ಶಿಗಳ ಜತೆ ಮೋದಿ ಸಭೆ

'ರಾಷ್ಟ್ರೀಯ ಭದ್ರತೆಗೆ ಬದ್ಧ'

ನವದೆಹಲಿ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ 'ಆಪರೇಷನ್ ಸಿಂಧೂರ' ನಡೆದ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಕಾರ್ಯದರ್ಶಿಗಳೊಂದಿಗೆ ಗುರುವಾರ ಉನ್ನತ ಮಟ್ಟದ ಸಭೆ ನಡೆಯಿತು.

ಸಭೆಯಲ್ಲಿ ದೇಶದ ಭದ್ರತೆ ಮತ್ತು ಕಾರ್ಯಾಚರಣೆಗೆ ಸನ್ನದ್ಧವಾಗಿರುವ ಬದ್ಧತೆಯನ್ನು ಸರ್ಕಾರ ದೃಢೀಕರಿಸಿದೆ.

'ನಾಗರಿಕ ಭದ್ರತಾ ವ್ಯವಸ್ಥೆ, ತಪ್ಪು ಮಾಹಿತಿ ಮತ್ತು ಸುಳ್ಳು ಸುದ್ದಿಗಳ ನಿಗ್ರಹಕ್ಕೆ ಯತ್ನ ಹಾಗೂ ಬಹುಮುಖ್ಯವಾದ ಮೂಲಸೌಕರ್ಯಗಳ ಭದ್ರತೆಯನ್ನು ಖಾತ್ರಿಪಡಿಸುವ ಬಗ್ಗೆ ಚರ್ಚೆ ನಡೆಯಿತು. ರಾಜ್ಯದ ಅಧಿಕಾರಿಗಳು ಮತ್ತು ಸ್ಥಳೀಯ ಹಂತದ ಸಂಸ್ಥೆಗಳೊಂದಿಗೆ ನಿಕಟ ಸಮನ್ವಯ ಹೊಂದಿರಬೇಕು ಎಂದು ಸಚಿವಾಲಯಗಳಿಗೆ ಸೂಚಿಸಲಾಗಿದೆ' ಎಂದು ಪ್ರಧಾನಿ ಕಾರ್ಯಾಲಯ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಸಭೆಯಲ್ಲಿ ರಾಷ್ಟ್ರೀಯ ಸನ್ನದ್ಧ ಸ್ಥಿತಿ ಮತ್ತು ಸಚಿವಾಲಯಗಳ ಮಧ್ಯೆ ಪರಸ್ಪರ ಸಹಕಾರದ ಬಗ್ಗೆಯೂ ಪರಿಶೀಲನೆ ನಡೆಸಲಾಗಿದೆ.

ದೇಶವು ಸೂಕ್ಷ್ಮ ಪರಿಸ್ಥಿತಿ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಸಾಂಸ್ಥಿಕ ಸಮನ್ವಯತೆ ಮತ್ತು ಸ್ಪಷ್ಟ ಸಂವಹನದೊಂದಿಗೆ ಎಚ್ಚರಿಕೆಯಿಂದ ಮುಂದುವರಿಯಬೇಕು. ಸಚಿವಾಲಯಗಳ ಮಧ್ಯೆ ನಿರಂತರ ಸಹಕಾರ, ದೈನಂದಿನ ಕಾರ್ಯನಿರ್ವಹಣೆ ಮತ್ತು ಸಾಂಸ್ಥಿಕ ದಕ್ಷತೆಯನ್ನು ಎತ್ತಿಹಿಡಿಯಬೇಕು ಎಂದು ಪ್ರಧಾನಿ ಮೋದಿ ಅವರು ಒತ್ತಿ ಹೇಳಿದ್ದಾರೆ.

ಸೇನಾ ದಾಳಿ ನಡೆಸಿದರೆ ಪ್ರತ್ಯುತ್ತರ: ಜೈಶಂಕರ್

ನವದೆಹಲಿ (ಪಿಟಿಐ): 'ಪಾಕಿಸ್ತಾನದ ಜೊತೆಗಿನ ಬಿಗುವಿನ ಸ್ಥಿತಿ ಉಲ್ಬಣಗೊಳಿಸುವ ಇರಾದೆ ಭಾರತಕ್ಕಿಲ್ಲ. ಆದರೆ, ಸೇನಾ ದಾಳಿ ನಡೆದರೆ ಅದಕ್ಕೆ ತಕ್ಕುದಾದ ಪ್ರತ್ಯುತ್ತರ ನೀಡಲಾಗುವುದು' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಗುರುವಾರ ಸ್ಪಷ್ಟ ಎಚ್ಚರಿಕೆ ನೀಡಿದ್ದಾರೆ.

ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರ ಜತೆ ಇಲ್ಲಿ ನಡೆದ ಸಭೆಯಲ್ಲಿ ಜೈಶಂಕರ್ ಅವರು ಭಾರತದ ಈ ನಿಲುವನ್ನು ತಿಳಿಸಿದ್ದಾರೆ.

'ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯೊಂದಿಗೆ ನಂಟು ಇರುವ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಭಾರತವು ನಿಖರ, ಸ್ಪಷ್ಟ ದಾಳಿ ನಡೆಸಿದೆ' ಎಂದು ಸ್ಪಷ್ಟಪಡಿಸಿದರು. ನೆರೆಯ ಮತ್ತು ಭಾರತದ ಆಪ್ತ ಪಾಲುದಾರ ದೇಶವಾಗಿ ಇರಾನ್, ಈ ಎಲ್ಲ ಬೆಳವಣಿಗೆಗಳ ಬಗ್ಗೆ ಸ್ಪಷ್ಟ ಅರಿವು ಹೊಂದಿರುವುದು ಮುಖ್ಯ ಎಂದೂ ಅಭಿಪ್ರಾಯಪಟ್ಟರು.

ಜಮ್ಮು ಮತ್ತು ಕಾಶ್ಮೀರದ ಉರಿಯಲ್ಲಿರುವ ಸಲಾಮಾಬಾದ್ ಗ್ರಾಮದ ಮನೆಯೊಂದು ಪಾಕಿಸ್ತಾನ ಸೇನೆ ನಡೆಸಿದ ಶೆಲ್ ದಾಳಿಯಿಂದ ಹಾನಿಗೊಂಡಿದೆ —ಎಎಫ್‌ಪಿ ಚಿತ್ರ

'ಕಷ್ಟ ಅನುಭವಿಸುವವರು ನಾವು'

ಕಾಶ್ಮೀರ ಕಣಿವೆಯಲ್ಲಿ ಮನೆ ಮಾಡಿದ ಭೀತಿ • ಮಾತುಕತೆಯಲ್ಲಿ ವ್ಯಕ್ತವಾಗುವ ದುಗುಡ

• ಝುಲ್ಫಿಕರ್ ಮಜೀದ್

ಶ್ರೀನಗರ: ಕಾಶ್ಮೀರ ಕಣಿವೆಯಲ್ಲಿ ವಿಚಿತ್ರವಾದ, ಉಸಿರುಗಟ್ಟಿಸುವಂತಹ ಮೌನ ಮತ್ತೆ ಮನೆ ಮಾಡಿದೆ. ಈ ಮೌನವು ಶಾಂತಿಯ ಕಾರಣದಿಂದಾಗಿ ಉಂಟಾಗಿರುವಂಥದ್ದಲ್ಲ; ಭೀತಿಯ ಕಾರಣದಿಂದಾಗಿ ಸೃಷ್ಟಿ ಆಗಿರುವಂಥದ್ದು.

ಭಾರತ ಮತ್ತು ಪಾಕಿಸ್ತಾನದ ನಡುವಿನ ಬಿಕ್ಕಟ್ಟಿನ ಬಿಸಿಯು ಜಮ್ಮು ಮತ್ತು ಕಾಶ್ಮೀರದ ಗಡಿಯ ಆಚೆಗೂ, ಪಂಜಾಬ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿಯೂ ಅನುಭವಕ್ಕೆ ಬಂದಿದೆ. ಇತ್ತ ಕಾಶ್ಮೀರದ ಜನರಿಗೆ ಹಿಂದಿನ ಬಿಕ್ಕಟ್ಟಿನ ಸಂದರ್ಭಗಳ ನೆನಪುಗಳು ಕಾಡಲಾರಂಭಿಸಿವೆ. ಮುಂದಿನ ಅನಿಶ್ಚಿತ ದಿನಗಳ ಬಗ್ಗೆ ಚಿಂತೆ ಶುರುವಾಗಿದೆ.

ಕಣಿವೆಯ ಮಾರುಕಟ್ಟೆಗಳಲ್ಲಿ, ಮನೆಗಳಲ್ಲಿ, ಕಚೇರಿಗಳಲ್ಲಿ ನಡೆಯುವ ಮಾತುಕತೆಗಳು ಲವಲವಿಕೆಯನ್ನು ಕಳೆದುಕೊಂಡಿವೆ. ಮನೆಗಳಲ್ಲಿ ಜನರು ಟಿ.ವಿ. ಪರದೆಗಳ ಎದುರು ಆತಂಕದಿಂದ ಸೇರುತ್ತಿದ್ದಾರೆ, ಸುದ್ದಿವಾಹಿನಿಗಳನ್ನು ಒಂದಾದ ನಂತರ ಇನ್ನೊಂದರಂತೆ ಬದಲಾಯಿಸುತ್ತಿದ್ದಾರೆ. ಹದಿಹರೆಯದವರು, ಹಿರಿಯರು ತಮ್ಮ ಸ್ಮಾರ್ಟ್‌ಫೋನ್ ಪರದೆಗಳ ಮೇಲೆ ಕಣ್ಣು ನೆಟ್ಟಿದ್ದಾರೆ, ಹೊಸ ಸುದ್ದಿ ಏನಿದೆ ಎಂಬುದನ್ನು ಸ್ಮಾರ್ಟ್‌ಫೋನ್ ಮೂಲಕ ಗಮನಿಸುತ್ತಿದ್ದಾರೆ.

'ಬಾಂಬುಗಳು ದೆಹಲಿ, ಇಸ್ಲಾಮಾಬಾದ್ ಮೇಲೆ ಬೀಳುವುದಿಲ್ಲ. ಅವು ಇಲ್ಲಿ ಬೀಳುತ್ತವೆ' ಎಂದು ಗಡಿಗೆ ಹತ್ತಿರವಿರುವ ಉರಿ ಪಟ್ಟಣದ ಶಾಲಾ ಶಿಕ್ಷಕಿ ರುಬೀನಾ ಜಾನ್ ಹೇಳಿದರು. 'ಭೀತಿಯು ವಾಸ್ತವದಲ್ಲಿ ನಮ್ಮಿಂದ ದೂರವಾಗುವುದೇ ಇಲ್ಲ. ಅದು ನಮ್ಮ ಮನೆಗಳ ಮೂಲೆಗಳಲ್ಲಿ, ನಮ್ಮ ಮಕ್ಕಳ ಕನಸುಗಳಲ್ಲಿ ಅವಿತು ಕುಳಿತಿರುತ್ತದೆ' ಎಂದು ಅವರು ಹೇಳುತ್ತಾರೆ.

ಕಾಶ್ಮೀರದ ಪ್ರತಿ ವ್ಯಕ್ತಿಯ ಮನಸ್ಸಿನಲ್ಲಿಯೂ ಅಚ್ಚೊತ್ತಿರುವ ಸಂಗತಿಯೊಂದನ್ನು ಅವರ ಮಾತುಗಳು ಧ್ವನಿಸುತ್ತಿವೆ: ತಾವು ನಿರ್ಧಾರ ತೆಗೆದುಕೊಳ್ಳುವವರಲ್ಲ, ಆದರೆ ಎಲ್ಲ ಬಾರಿಯೂ ಭಾರಿ ಬೆಲೆ ತೆರುವವರು ತಾವು.

ಯುದ್ಧದ ಕಾರ್ಮೋಡವು ಹಳೆಯ ನೆನಪುಗಳನ್ನು ಮತ್ತೆ ಕೆದಕಿದೆ – ರಾತ್ರಿಯ ಆಗಸದಲ್ಲಿ ಸದ್ದು ಮಾಡುವ ವೈಮಾನಿಕ ದಾಳಿ, ಕೊನೆಯಿಲ್ಲದ ಕರ್ಫ್ಯೂ, ಮನೆಯ ಹಿಂದೆ ನಿರ್ಮಿಸುವ ಬಂಕರ್‌ಗಳು, ಪರ್ವತಗಳಿಂದ ಕೇಳಿಸುವ ಸೈರನ್ ಶಬ್ದ, ಶಾಲೆಗಳು ಆಶ್ರಯ ಶಿಬಿರಗಳಾಗುವುದು... ಇವೆಲ್ಲ ಆ ನೆನಪುಗಳು.

ಗಡಿ ಭಾಗದ ಪಟ್ಟಣಗಳಾದ ಉರಿ, ಕೆರನ್, ಪೂಂಛ್, ರಾಜೌರಿಯಲ್ಲಿ ಕುಟುಂಬಗಳು ತಮ್ಮ ವಸ್ತುಗಳನ್ನು ಕಟ್ಟಿಕೊಂಡು ಸುರಕ್ಷಿತ ಸ್ಥಳ ಅರಸಿ ಹೊರಟಿವೆ. 'ಯುದ್ಧ ಅಂದರೆ ನಾವು ನಮ್ಮ ಮನೆ ತೊರೆದು ಸಾಯಬೇಕೇ ಎಂದು 10 ವರ್ಷ ವಯಸ್ಸಿನ ನನ್ನ ಮಗ ನಿನ್ನೆ ರಾತ್ರಿ ಪ್ರಶ್ನಿಸಿದ. ಇದಕ್ಕೆ ಅಪ್ಪನಾಗಿ ಏನು ಉತ್ತರ ಕೊಡಬೇಕು' ಎಂದು ಕುಪ್ವಾರಾದಲ್ಲಿ ಟಂಗಧರ್‌ನ ಇಫ್ತಿಕಾರ್ ಅಹಮದ್ ಎನ್ನುವವರು ನಡುಗುವ ದನಿಯಲ್ಲಿ ಹೇಳಿದರು.

ಕಣಿವೆಯ ಮನಃಶಾಸ್ತ್ರಜ್ಞರು ಈಗಾಗಲೇ ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. 'ಕಾಶ್ಮೀರದಲ್ಲಿ ಸಮುದಾಯಗಳ ಮಟ್ಟದಲ್ಲಿ ಮಾನಸಿಕ ಆಘಾತ ಆಗಿದೆ. ಈಗಿನ ಪರಿಸ್ಥಿತಿಯು ಹೊಸದಾಗಿ ಭೀತಿ ಸೃಷ್ಟಿಸಬಹುದು. ಅದರಲ್ಲೂ ಮುಖ್ಯವಾಗಿ, ದೀರ್ಘ ಅವಧಿಯ ಅಶಾಂತಿಯನ್ನು ಕಂಡವರಲ್ಲಿ ಈ ರೀತಿ ಆಗಬಹುದು' ಎಂದು ಶ್ರೀನಗರದ ಸರ್ಕಾರಿ ವೈದ್ಯಕೀಯ ಕಾಲೇಜಿನ ಮನಃಶಾಸ್ತ್ರದ ಪ್ರೊಫೆಸರ್ ಡಾ. ಆರ್ಷಿದ್ ಹುಸೇನ್ ಹೇಳಿದರು.

ಗಡಿ ಪ್ರದೇಶಗಳಲ್ಲಿ ಶಾಲೆಗಳನ್ನು ಬಂದ್ ಮಾಡಲಾಗಿದೆ. ಶ್ರೀನಗರದಂತಹ ನಗರ ಪ್ರದೇಶಗಳ ಶಾಲೆಗಳಲ್ಲಿ ಹಾಜರಾತಿ ಕಡಿಮೆ ಆಗುತ್ತಿದೆ, ಸುರಕ್ಷತೆಯ ಖಾತರಿ ಇಲ್ಲವಾದ ಕಾರಣ ಪಾಲಕರು ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿಲ್ಲ. ಇಲ್ಲಿನವರನ್ನು ಬಾಂಬುಗಳು, ಗುಂಡುಗಳ ಭೀತಿಗಿಂತ ಹೆಚ್ಚು ನೋಯಿಸುತ್ತಿರುವುದು ಅಸಹಾಯಕತೆ.

'ನಾವು ಯುದ್ಧರಂಗದಲ್ಲಿ ಇರುವವರಲ್ಲ. ಹೀಗಿದ್ದರೂ ಯುದ್ಧ ನಮ್ಮನ್ನು ಅರಸಿ ಬರುತ್ತದೆ. ನಮ್ಮ ಭವಿಷ್ಯ ಅನಿಶ್ಚಿತವಾಗಿದೆ... ನಾವು ಆರಂಭಿಸಿರದ, ನಿಲ್ಲಿಸಲು ನಮ್ಮಿಂದ ಸಾಧ್ಯವಿರದ ಕದನದ ನೆರಳಿನಲ್ಲಿ ನಾವು ಬದುಕುತ್ತಿದ್ದೇವೆ' ಎಂದು ವಿಶ್ವವಿದ್ಯಾಲಯದ ವಿದ್ಯಾರ್ಥಿ ಫರ್ಜಾನಾ ಮಿರ್ ಹೇಳಿದರು.

ಕಣಿವೆಯಲ್ಲಿ ರಾತ್ರಿಯಾಗುತ್ತಿದ್ದಂತೆ ಭೀತಿಯು ಮಾತಿಗಿಂತ ಹೆಚ್ಚು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ.

ಗಡಿ ಜಿಲ್ಲೆಗಳ ಜನರ ಸ್ಥಳಾಂತರ

ಗಡಿ ನಿಯಂತ್ರಣ ರೇಖೆಗೆ ಸನಿಹದಲ್ಲಿ ವಾಸಿಸುವ ನಾಗರಿಕರಿಗೆ 'ಉರಿ'ಯಲ್ಲಿ ಇರುವ ಪದವಿ ಕಾಲೇಜಿನಲ್ಲಿ ಆಶ್ರಯ ನೀಡಲಾಗಿದೆ —ಎಎಫ್‌ಪಿ ಚಿತ್ರ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಗಡಿ ಜಿಲ್ಲೆಗಳಿಂದ ನಾಗರಿಕರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ಭಾರಿ ಪ್ರಮಾಣದ ಕಾರ್ಯಾಚರಣೆಗೆ ಅಧಿಕಾರಿಗಳು ಗುರುವಾರ ಚಾಲನೆ ನೀಡಿದ್ದಾರೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಬಿಕ್ಕಟ್ಟು ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಶುರುವಾಗಿದೆ. ಭಾರತವು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಹಲವು ಸ್ಥಳಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದ ನಂತರದಲ್ಲಿ ಪಾಕಿಸ್ತಾನದ ಸೇನೆಯು ನಡೆಸಿದ ದಾಳಿಗೆ ಜಮ್ಮುವಿನ ಪೂಂಛ್ ಜಿಲ್ಲೆಯಲ್ಲಿ ಕನಿಷ್ಠ 16 ಮಂದಿ ನಾಗರಿಕರು ಜೀವ ಕಳೆದುಕೊಂಡಿದ್ದಾರೆ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಬಿಕ್ಕಟ್ಟು ತೀವ್ರಗೊಂಡಿರುವ ಕಾರಣಕ್ಕೆ, ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡ, ಪೂಂಛ್ ಮತ್ತು ರಜೌರಿ ಜಿಲ್ಲೆಗಳಲ್ಲಿ ಗಡಿಗೆ ಸನಿಹ ಇರುವ ಜನವಸತಿ ಕೇಂದ್ರಗಳಿಂದ ನಾಗರಿಕರನ್ನು ಸ್ಥಳಾಂತರಿಸಲು ಅಧಿಕಾರಿಗಳು ಮುಂದಾದರು. ಇದಕ್ಕಾಗಿ ಹತ್ತಾರು ಬಸ್ಸುಗಳನ್ನು ಬಳಸಿಕೊಳ್ಳಲಾಯಿತು.

ಸುರಕ್ಷಿತ ಸ್ಥಳಗಳಿಗೆ ತೆರಳಲು ಜನರಿಗೆ ಮನವಿ ಮಾಡಲಾಯಿತು. ಶೆಲ್ ದಾಳಿ ಮತ್ತು ವೈಮಾನಿಕ ದಾಳಿಯ ಸಂದರ್ಭದಲ್ಲಿ ಶತ್ರುವಿಗೆ ಗುರಿಯನ್ನು ಗುರುತಿಸುವುದು ಸುಲಭವಾಗದಿರಲಿ, ಪ್ರಾಣಹಾನಿ ತಗ್ಗಲಿ ಎಂಬ ಕಾರಣದಿಂದ ದೀಪಗಳನ್ನು ಆರಿಸುವ ಸೂಚನೆ ನೀಡಲಾಯಿತು.

'ನಾಗರಿಕರ ಜೀವ ರಕ್ಷಣೆಗಾಗಿ ನಾವು ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಗಡಿನಿಯಂತ್ರಣ ರೇಖೆಗೆ ಸನಿಹದಲ್ಲಿ ಇರುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ಪಾಲಿಸಬೇಕಿರುವ ಕ್ರಮಗಳನ್ನು ಅಂತಿಮಗೊಳಿಸಲಾಗಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಆಸ್ಪತ್ರೆಗಳು ಮತ್ತು ಆರೋಗ್ಯ ಸೇವಾ ಕೇಂದ್ರಗಳ ಚಾವಣಿಯ ಮೇಲೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ನೀಡಲಾಗಿರುವ ರೆಡ್‌ಕ್ರಾಸ್ ಗುರುತಿನ ಬಣ್ಣ ಬಳಿಯುವ ಕೆಲಸವನ್ನು ಆರೋಗ್ಯ ಇಲಾಖೆ ಆರಂಭಿಸಿದೆ. ವೈದ್ಯಕೀಯ ಸೇವೆ ಒದಗಿಸುವ ಕೇಂದ್ರಗಳನ್ನು ವೈಮಾನಿಕ ದಾಳಿಯಿಂದ ರಕ್ಷಿಸುವ ಉದ್ದೇಶದಿಂದಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ರೆಡ್‌ಕ್ರಾಸ್‌ನ ಗುರುತು ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿ 'ತಟಸ್ಥ' ಸ್ಥಳವನ್ನು ಸೂಚಿಸುತ್ತದೆ, ಆರೋಗ್ಯಸೇವಾ ಕೇಂದ್ರಗಳು ಯುದ್ಧದ ಸಂದರ್ಭಗಳಲ್ಲಿ ಗುರಿಯಾಗಬಾರದು ಎಂಬ ಉದ್ದೇಶದಿಂದ ಈ ಗುರುತು ಹಾಕಲಾಗುತ್ತದೆ.

ಗಡಿ ಜಿಲ್ಲೆಯ ಅಧಿಕಾರಿಗಳ ಜತೆ ಒಮರ್ ಸಭೆ

ಶ್ರೀನಗರ (ಪಿಟಿಐ): ಪಾಕಿಸ್ತಾನ ಸೇನೆಯು ಗಡಿಯಲ್ಲಿ ತೀವ್ರ ಶೆಲ್ ದಾಳಿ ನಡೆಸುತ್ತಿದ್ದು, ಸ್ಥಿತಿ-ಗತಿಗಳ ಕುರಿತು ಅವಲೋಕಿಸಲು ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಗುರುವಾರ ಸಭೆ ನಡೆಸಿದ್ದಾರೆ.

ಒಮರ್ ಅಬ್ದುಲ್ಲಾ

ಈ ಬಗ್ಗೆ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಅಬ್ದುಲ್ಲಾ ಅವರು, 'ಗಡಿ ಭಾಗದ ಜನರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲು ಸಂಘಟಿತವಾಗಿ ಕೆಲಸ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಅಗತ್ಯವಿರುವವರಿಗೆ ಸಕಾಲದಲ್ಲಿ ವೈದ್ಯಕೀಯ ನೆರವು ನೀಡಲು ಸಿಬ್ಬಂದಿಯನ್ನು ತಯಾರುಗೊಳಿಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಗಡಿಯಲ್ಲಿನ ನಿವಾಸಿಗಳ ರಕ್ಷಣೆಗೆ ಭದ್ರತೆ ಹೆಚ್ಚಳ ಹಾಗೂ ತುರ್ತು ಸಂದರ್ಭದಲ್ಲಿ ಕ್ಷಿಪ್ರ ಕಾರ್ಯಾಚರಣೆ ಕೈಗೊಳ್ಳುವ ಸಂಬಂಧ ಒಮರ್ ಅಬ್ದುಲ್ಲಾ ಅವರು ಬುಧವಾರವೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದರು.

'ಉಗ್ರರ ನೆಲೆ ನಾಶ ಮಾಡುವ ಹಕ್ಕು ಭಾರತಕ್ಕೆ ಇದೆ'

ಲಂಡನ್(ಪಿಟಿಐ): 'ಭಾರತ ತನ್ನ ರಕ್ಷಣೆಗಾಗಿ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿದೆ. ದೇಶದ ಭದ್ರತೆಗೆ ಕಂಟಕವಾಗಿರುವ ಹಾಗೂ ಹಲವು ಜನರ ಸಾವಿಗೆ ಕಾರಣವಾಗಿರುವ ಉಗ್ರರ ಮೂಲಸೌಕರ್ಯಗಳನ್ನು ನಾಶ ಮಾಡುವ ಹಕ್ಕನ್ನೂ ಹೊಂದಿದೆ' ಎಂದು ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ಸಂಸದೆ ಪ್ರೀತಿ ಪಟೇಲ್ ಹೇಳಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಮತ್ತು ಪಾಕಿಸ್ತಾನದಲ್ಲಿನ ಉಗ್ರರ ನೆಲೆಗಳನ್ನು ಗುರಿಯಾಗಿಸಿ ಭಾರತ ನಡೆಸುತ್ತಿರುವ ದಾಳಿ ಕುರಿತು ಕೆಳಮನೆಯಲ್ಲಿ (ಹೌಸ್ ಆಫ್ ಕಾಮನ್ಸ್) ನಡೆದ ಚರ್ಚೆ ವೇಳೆ ಅವರು ಈ ಮಾತು ಹೇಳಿದ್ದಾರೆ.

ಪ್ರೀತಿ ಪಟೇಲ್

'ಪಾಕಿಸ್ತಾನದಲ್ಲಿರುವ ಉಗ್ರರು ಭಾರತ ಹಾಗೂ ಪಶ್ಚಿಮ ರಾಷ್ಟ್ರಗಳಿಗೆ ಬೆದರಿಕೆ ಒಡ್ಡುತ್ತಿದ್ದಾರೆ. ಇದೇ ಕಾರಣಕ್ಕೆ ಭಾರತದೊಂದಿಗೆ ಬ್ರಿಟನ್ ಭದ್ರತೆಗೆ ಸಂಬಂಧಿಸಿ ಸಹಕಾರ ಒಪ್ಪಂದ ಹೊಂದಿದೆ. ಈ ಹಿಂದೆ ಒಸಾಮಾ ಬಿನ್ ಲಾಡೆನ್‌ಗೆ ಪಾಕಿಸ್ತಾನ ಆಶ್ರಯ ನೀಡಿತ್ತು' ಎಂದು ಭಾರತ ಮೂಲದ ಸಂಸದೆ ಪ್ರೀತಿ ಪಟೇಲ್ ಹೇಳಿದ್ದಾರೆ.

'ಪಾಕಿಸ್ತಾನದಲ್ಲಿರುವ ಉಗ್ರರ ನೆಲೆಗಳನ್ನು ಸಂಪೂರ್ಣವಾಗಿ ನಾಶ ಮಾಡುವ ಅಗತ್ಯ ಇದೆ' ಎಂದು ಕನ್ಸರ್ವೇಟಿವ್ ಪಕ್ಷದ ಸಂಸದ ಬಾಬ್ ಬ್ಲ್ಯಾಕ್‌ಮನ್ ಪ್ರತಿಪಾದಿಸಿದ್ದಾರೆ.

ಪಾಕಿಸ್ತಾನ ಮೂಲದ ವಿಷಯ ಪ್ರಸಾರ ಬೇಡ: ಕೇಂದ್ರ

ನವದೆಹಲಿ (ಪಿಟಿಐ): ವೆಬ್ ಸರಣಿ, ಸಿನಿಮಾ ಹಾಗೂ ಪಾಡ್‌ಕಾಸ್ಟ್‌ಗಳು ಸೇರಿದಂತೆ ಪಾಕಿಸ್ತಾನ ಮೂಲದ ಯಾವುದೇ ವಿಷಯಗಳನ್ನು ಪ್ರಸಾರ ಮಾಡಬಾರದು ಎಂದು ಕೇಂದ್ರ ಸರ್ಕಾರವು ಒಟಿಟಿ ವೇದಿಕೆಗಳಿಗೆ ಗುರುವಾರ ಸಲಹೆ ನೀಡಿದೆ.

ಪಹಲ್ಗಾಮ್ ಉಗ್ರರ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನಾಪಡೆಯು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ ಬೆನ್ನಲ್ಲೇ, ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವಾಲಯ ಈ ಸಂದೇಶ ಹೊರಬಿದ್ದಿದೆ.

'ರಾಷ್ಟ್ರೀಯ ಭದ್ರತಾ ಹಿತಾಸಕ್ತಿಯ ಭಾಗವಾಗಿ, ಪಾಕಿಸ್ತಾನ ಮೂಲದ ಯಾವುದೇ ಪಾಡ್‌ಕಾಸ್ಟ್‌ಗಳು, ಸಿನಿಮಾಗಳು, ಹಾಡುಗಳು ಮತ್ತು ವೆಬ್ ಸರಣಿ ಸೇರಿದಂತೆ ಇನ್ನಿತರ ವಿಷಯಗಳನ್ನು ಒಟಿಟಿ ವೇದಿಕೆಗಳು, ಮೀಡಿಯಾ, ಮಾಧ್ಯಮ ಪ್ರಸಾರದ ವೇದಿಕೆಗಳು ಪ್ರಸಾರ ಮಾಡಬಾರದು. ಇದು ತಕ್ಷಣದಿಂದಲೇ ಜಾರಿಯಾಗಬೇಕು' ಎಂದು ಸಚಿವಾಲಯ ಹೇಳಿದೆ.

ಕಾಂಗ್ರೆಸ್‌ನಿಂದ 'ತಿರಂಗಾ ಯಾತ್ರೆ' ಇಂದು

ಬೆಂಗಳೂರು: 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ನಡೆಸುತ್ತಿರುವ ಭಾರತೀಯ ಸೈನ್ಯಕ್ಕೆ ಬೆಂಬಲ ಸೂಚಿಸಿ ನಗರದ ಕೆ.ಆರ್. ವೃತ್ತದಿಂದ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿಯ ಮಿನ್ಸ್ಕ್ ಸ್ಕ್ವೇರ್‌ವರೆಗೆ ಶುಕ್ರವಾರ 'ತಿರಂಗಾ ಯಾತ್ರೆ' ಹಮ್ಮಿಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ.

'ಬೆಳಿಗ್ಗೆ 9.30ರಿಂದ 10.30ರವರೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆಯಲಿರುವ ಈ ಯಾತ್ರೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು, ಸರ್ಕಾರಿ, ಖಾಸಗಿ ಉದ್ದಿಮೆಗಳ ನೌಕರರು, ಸಾಹಿತಿಗಳು, ಚಿಂತಕರು, ಚಿತ್ರರಂಗದವರು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಎಲ್ಲರಿಗೂ ಭಾಗವಹಿಸಲು ಮುಕ್ತ ಆಹ್ವಾನ ನೀಡಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ವೀಸಾ: ಪಾಕ್ ಮಕ್ಕಳ ಅರ್ಜಿ ವಜಾ

ಬೆಂಗಳೂರು: 'ತಮಗೆ ನೀಡಿರುವ ವೀಸಾ ಅವಧಿಯನ್ನು ವಿಸ್ತರಿಸಲು ನಿರ್ದೇಶಿಸಬೇಕು' ಎಂದು ಕೋರಿ; ಭಾರತೀಯ ತಾಯಿ ಮತ್ತು ಪಾಕಿಸ್ತಾನದ ತಂದೆಗೆ ಜನಿಸಿದ ಮೂರು ಪುಟ್ಟ ಮಕ್ಕಳು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಪಾಕಿಸ್ತಾನಕ್ಕೆ ಮರಳಲು ಸಾಧ್ಯವಾಗದ ಕಾರಣದಿಂದ ಬೀಬಿ ಯಾಮಿನಾ (8), ಮಹಮೂದ್ ಮುದಸ್ಸರ್ (4) ಮತ್ತು ಮಹಮೂದ್ ಯೂಸುಫ್ (3) ಪರ ಅವರ ತಾಯಿ ರಾಂಶ ಜಹಾನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ರಜಾಕಾಲದ ಏಕಸದಸ್ಯ ನ್ಯಾಯಪೀಠದ ನ್ಯಾಯಮೂರ್ತಿ ಎಂ.ಜಿ. ಉಮಾ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಕೇಂದ್ರ ಗೃಹ ಸಚಿವಾಲಯದ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಅವರ ವಾದ ಮನ್ನಿಸಿದ ನ್ಯಾಯಪೀಠ, 'ಅರ್ಜಿದಾರರ ಮನವಿಯನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿತು.

'ಭಾರತದಲ್ಲಿರುವ ಪಾಕಿಸ್ತಾನದ ಪ್ರಜೆಗಳು ಏಪ್ರಿಲ್ 27ರೊಳಗೆ ದೇಶಬಿಟ್ಟು ತೆರಳುವಂತೆ ಕೇಂದ್ರ ಸರ್ಕಾರ ಸೂಚನೆ ನೀಡಿತ್ತು. ದೇಶದ ನಾಗರಿಕರ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಕೇಂದ್ರ ಸಂಪುಟ ಸಮಿತಿ ಈ ಆದೇಶ ಮಾಡಿದೆ. ಇದರಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡುವುದಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಜಾಗೊಳಿಸಿ ಪೀಠ ಆದೇಶಿಸಿತು.

ಸೈನಿಕರಿಗಾಗಿ ಮಸೀದಿಗಳಲ್ಲಿ ಪ್ರಾರ್ಥಿಸಿ: ಜಮೀರ್

ಬೆಂಗಳೂರು: 'ಆಪರೇಷನ್ ಸಿಂಧೂರದ ಮೂಲಕ ದೇಶದ ರಕ್ಷಣೆ ಮತ್ತು ಶಾಂತಿಗಾಗಿ ಹೋರಾಡುತ್ತಿರುವ ಸೈನಿಕರ ಶ್ರೇಯಕ್ಕಾಗಿ ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ' ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಸೂಚಿಸಿದ್ದಾರೆ.

ವಕ್ಫ್ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಗುರುವಾರ ಪತ್ರ ಬರೆದಿರುವ ಜಮೀರ್ ಅವರು, 'ಕಾಶ್ಮೀರ ಕಣಿವೆಯ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು 26 ಭಾರತೀಯರನ್ನು ಹತ್ಯೆ ಮಾಡಿದ್ದರು. ಇದಕ್ಕೆ ಪ್ರತಿಯಾಗಿ ಭಾರತದ ಸೈನಿಕರು ಭಯೋತ್ಪಾದಕರ ನೆಲೆಗಳ ಮೇಲೆ ದಾಳಿ ಮಾಡಿ ಅವುಗಳನ್ನು ಧ್ವಂಸಗೊಳಿಸಿದ್ದಾರೆ' ಎಂದು ವಿವರಿಸಿದ್ದಾರೆ.

'ನಮ್ಮ ದೇಶದ ಹೆಮ್ಮೆಯ ಸೈನಿಕರಿಗೆ ಶಕ್ತಿ ತುಂಬಬೇಕಿದೆ. ಹೀಗಾಗಿ ವಕ್ಫ್ ಅಧೀನದಲ್ಲಿರುವ ರಾಜ್ಯದ ಎಲ್ಲ ಮಸೀದಿಗಳಲ್ಲಿ ಮತ್ತು ಇತರ ಮಸೀದಿಗಳಲ್ಲೂ ವಿಶೇಷ ಪ್ರಾರ್ಥನೆ ಸಲ್ಲಿಸಿ' ಎಂದು ಸೂಚಿಸಿದ್ದಾರೆ.

'ಉಗ್ರರ ವಿರುದ್ಧ ಹೋರಾಡಲು ಸೇನೆ ಸೇರುವೆ'

ಬಾಲೇಶ್ವರ (ಪಿಟಿಐ): 'ಪಾಕಿಸ್ತಾನದ ಭಯೋತ್ಪಾದಕರ ವಿರುದ್ಧ ಹೋರಾಡಲು ಭಾರತೀಯ ಸೇನೆಗೆ ಸೇರಲು ಬಯಸುತ್ತೇನೆ'–ಇದು ಪಹಲ್ಗಾಮ್ ದಾಳಿಯಲ್ಲಿ ತಂದೆಯನ್ನು ಕಳೆದುಕೊಂಡ 9 ವರ್ಷದ ಬಾಲಕ ತನುಜ್ ಕುಮಾರ್ ಸತ್ಪತಿ ಅವರ ಭಾವೋದ್ವೇಗದ ನುಡಿ.

ಒಡಿಶಾದ ಬಾಲೇಶ್ವರ ಜಿಲ್ಲೆಯಲ್ಲಿ ಗುರುವಾರ ಮಾತನಾಡಿದ ಬಾಲಕ, 'ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಲ್ಲಿ, ಮುಂದಿನ ದಿನಗಳಲ್ಲಿ ಯಾವುದೇ ಮಗುವಿಗೂ ನನ್ನ ಸ್ಥಿತಿ ಎದುರಾಗದಂತೆ ನೋಡಿಕೊಳ್ಳುವಂತೆ ಹೇಳುತ್ತೇನೆ. ನನಗೆ ಈಗ ತಂದೆಯ ಬೆಲೆ ಗೊತ್ತಾಗಿದೆ. ಭಾರತದ ನೆಲದಲ್ಲಿ ಭಯೋತ್ಪಾದನೆಗೆ ಅವಕಾಶ ಇಲ್ಲದಂತೆ ಪಹಲ್ಗಾಮ್ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಭದ್ರತೆ ಕಲ್ಪಿಸಬೇಕು' ಎಂದು ತಿಳಿಸಿದ್ದಾನೆ.

'ತಂದೆಯ ಸಾವಿನ ಪ್ರತೀಕಾರ ತೀರಿಸಿಕೊಳ್ಳಲು ಸೇನೆಗೆ ಸೇರಲು ನಿರ್ಧರಿಸಿದ್ದೇನೆ. ಸೇನೆಗೆ ಸೇರುವ ನಿಟ್ಟಿನಲ್ಲಿ ಉತ್ತಮವಾಗಿ ಓದುತ್ತೇನೆ. ಸೇನೆಗೆ ಸೇರಿ, ಪಾಕಿಸ್ತಾನ ಮತ್ತು ಭಯೋತ್ಪಾದಕರ ವಿರುದ್ಧ ಹೋರಾಡುತ್ತೇನೆ. ಬುಧವಾರ ಬೆಳಗ್ಗೆಯಿಂದ ಪ್ರಸಾರವಾಗುತ್ತಿರುವ ಸುದ್ದಿ ಕಂಡು ನನ್ನ ಅಮ್ಮ ಮತ್ತು ನನಗೆ ಖುಷಿಯಾಗಿದೆ. ನಮ್ಮ ಸೇನೆಯ ಬಗ್ಗೆ ಹೆಮ್ಮೆ ಇದೆ' ಎಂದಿದ್ದಾನೆ.

ಸುರಕ್ಷಿತ ಜಾಗಕ್ಕೆ ತೆರಳಿ ಅಮೆರಿಕ ಸೂಚನೆ

ಲಾಹೋರ್ (ಪಿಟಿಐ): ಡ್ರೋನ್ ದಾಳಿಗಳು ಮತ್ತು ಸಂಭಾವ್ಯ ವೈಮಾನಿಕ ದಾಳಿ ಕುರಿತ ವರದಿಗಳಿವೆ. ಹೀಗಾಗಿ, ಸುರಕ್ಷಿತ ಪ್ರದೇಶಗಳಲ್ಲಿ ಆಶ್ರಯ ಪಡೆದುಕೊಳ್ಳುವಂತೆ ತನ್ನ ಪ್ರಜೆಗಳು ಮತ್ತು ಸಿಬ್ಬಂದಿಗೆ ಲಾಹೋರ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ನಿರ್ದೇಶಿಸಿದೆ.

ಸುರಕ್ಷತೆ ಹಿನ್ನೆಲೆಯಲ್ಲಿ ಸಂಘರ್ಷಪೀಡಿತ ಪ್ರದೇಶದಿಂದ ತೆರಳುವಂತೆ ಅಮೆರಿಕದ ನಾಗರಿಕರಿಗೆ ಸೂಚಿಸಲಾಗಿದೆ. ಒಂದು ವೇಳೆ ಅಲ್ಲಿಂದ ತೆರಳುವುದು ಕಷ್ಟವಾಗಿದ್ದರೆ, ಅಲ್ಲಿಯೇ ಸುರಕ್ಷಿತ ಪ್ರದೇಶದಲ್ಲಿ ಆಶ್ರಯ ಪಡೆದುಕೊಳ್ಳುವಂತೆ ಅದು ಹೇಳಿದೆ.

'ಲಾಹೋರ್ ಕಂಟೋನ್ಮೆಂಟ್ ಪ್ರದೇಶದಲ್ಲಿ ಕನಿಷ್ಠ ನಾಲ್ಕು ಡ್ರೋನ್‌ಗಳು ದಾಳಿ ನಡೆಸಿವೆ. ಸಶಸ್ತ್ರ ಪಡೆಗಳು ಗುಂಡು ಹಾರಿಸಿವೆ ಮತ್ತು ಸೈರನ್‌ಗಳು ಮೊಳಗಿವೆ. ಇದರಿಂದ ಲಾಹೋರ್ ಮತ್ತು ಗಡಿ ಭಾಗದ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕರಾಚಿಯಲ್ಲಿ ಡ್ರೋನ್ ದಾಳಿಯಲ್ಲಿ ನಾಶವಾಗಿದೆ ಎನ್ನಲಾಗಿರುವ ಕಟ್ಟಡವನ್ನು ಪಾಕಿಸ್ತಾನ ಪೊಲೀಸ್ ಸಿಬ್ಬಂದಿ ಪರಿಶೀಲಿಸಿದರು– ಎಎಫ್‌ಪಿ ಚಿತ್ರ

ಭಾರತ ದಾಳಿ: ಮೂವರ ಸಾವು, 8 ಮಂದಿಗೆ ಗಾಯ

ಇಸ್ಲಾಮಾಬಾದ್/ಲಾಹೋರ್ (ಪಿಟಿಐ): ಭಾರತದ ಭದ್ರತಾ ಪಡೆಗಳು ನಡೆಸಿದ ಡ್ರೋನ್ ದಾಳಿಯಲ್ಲಿ ಮೂವರು ನಾಗರಿಕರು ಮೃತಪಟ್ಟಿದ್ದು, ನಾಲ್ವರು ಸೈನಿಕರು ಸೇರಿ 8 ಜನರು ಗಾಯಗೊಂಡಿದ್ದಾರೆ ಎಂದು ಪಾಕಿಸ್ತಾನ ಸೇನೆ ಗುರುವಾರ ಹೇಳಿದೆ.

ಸೇನೆ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ ಅವರೊಂದಿಗೆ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ವಿದೇಶಾಂಗ ಹಾಗೂ ಉಪಪ್ರಧಾನಿ ಇಶಾಕ್ ದರ್ ಈ ವಿಷಯ ತಿಳಿಸಿದ್ದು, 'ಭಾರತ ಹಲವು ಡ್ರೋನ್‌ಗಳನ್ನು ಬಳಸಿ ದಾಳಿ ನಡೆಸುತ್ತಿದೆ' ಎಂದು ಆರೋಪಿಸಿದರು.

'ಪಾಕಿಸ್ತಾನ ಈ ವರೆಗೂ ಸಂಯಮದಿಂದ ವರ್ತಿಸುತ್ತಿದೆ. ಆದರೆ, ಪ್ರತ್ಯುತ್ತರ ನೀಡುವ ಹಕ್ಕನ್ನು ಹೊಂದಿದೆ' ಎಂದು ದರ್ ಎಚ್ಚರಿಸಿದರು.

ಲಾಹೋರ್, ಗುಜ್ರನ್‌ವಾಲಾ, ಚಕ್ವಾಲ್, ಬಹಾವಲ್ಪುರ, ಮಿಯಾನೊ, ಕರಾಚಿ, ಚೋರ್, ರಾವಲ್ಪಿಂಡಿ ಮತ್ತು ಅಟೋಕ್‌ಗಳಲ್ಲಿ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ ತಿಳಿಸಿದರು.

'ಈವರೆಗೆ ಇಸ್ರೇಲ್ ನಿರ್ಮಿತ 25 ಡ್ರೋನ್‌ಗಳನ್ನು ಸೇನೆಯು ಹೊಡೆದುರುಳಿಸಿದೆ' ಎಂದೂ ಹೇಳಿದರು.

'ಆಪರೇಷನ್ ಸಿಂಧೂರ' ಮಾಹಿತಿ ಜಗತ್ತಿಗೆ ತಿಳಿಸಿದ ಸೋಫಿಯಾ ಖುರೇಷಿ

ಬೆಳಗಾವಿಗೆ 'ಸೊಸೆ ತಂದ ಸೌಭಾಗ್ಯ'

• ಸಂತೋಷ ಈ. ಚಿನಗುಡಿ

ಕೊಣ್ಣೂರ (ಬೆಳಗಾವಿ ಜಿಲ್ಲೆ): ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೊಣ್ಣೂರ ಗ್ರಾಮದ ಆ ಮನೆಯಲ್ಲಿ ಈಗ ಹಬ್ಬದ ಸಂಭ್ರಮ. ಗ್ರಾಮಸ್ಥರಿಗೆ ಹೆಮ್ಮೆಯ ಕ್ಷಣ. ಇದೆಲ್ಲವೂ 'ಸೊಸೆ ತಂದ ಸೌಭಾಗ್ಯ'.

'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಯಶಸ್ಸನ್ನು ಜಗತ್ತಿಗೆ ತಿಳಿಸಿದ ಕರ್ನಲ್ ಸೋಫಿಯಾ ಖುರೇಷಿ ಈ ಗ್ರಾಮದ ಸೊಸೆ. ಇದು ಬೆಳಗಾವಿಗಷ್ಟೇ ಅಲ್ಲ, ಕರುನಾಡಿಗೆ ಪುಳಕ ತಂದಿದೆ.

ಸೋಫಿಯಾ ಅವರ ಪತಿ ತಾಜುದ್ದೀನ್ ಬಾಗೇವಾಡಿ ಕೊಣ್ಣೂರಿನವರು. ಪತಿ, ಪತ್ನಿ ಇಬ್ಬರೂ ಭಾರತೀಯ ಸೇನೆಯಲ್ಲಿ ಕರ್ನಲ್ ಆಗಿದ್ದಾರೆ. ಸೋಫಿಯಾ ಮೂಲತಃ ಗುಜರಾತ್ ರಾಜ್ಯದ ಬರೋಡಾದವರು. 2015ರಲ್ಲಿ ತಾಜುದ್ದೀನ್ ಜತೆ ಪ್ರೇಮ ವಿವಾಹದ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಈ ದಂಪತಿಗೆ ಒಬ್ಬ ಪುತ್ರ ಇದ್ದಾನೆ.

ಪಹಲ್ಗಾಮ್‌ನಲ್ಲಿ ಭಾರತೀಯರ ಹತ್ಯಾಕಾಂಡಕ್ಕೆ ಪ್ರತೀಕಾರವಾಗಿ ಸಿಂಧೂರ ಕಾರ್ಯಾಚರಣೆ ಉದ್ದೇಶವನ್ನು ಸೋಫಿಯಾ ಖುರೇಷಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸುವ ಅವಕಾಶ ಪಡೆದರು. ಸದ್ಯ ಸೋಫಿಯಾ ಜಮ್ಮುವಿನಲ್ಲಿ, ತಾಜುದ್ದೀನ್ ಝಾನ್ಸಿಯಲ್ಲಿ ಇದ್ದಾರೆ.

ಮಿಲಿಟರಿಯಲ್ಲಿ ಮೂರನೇ ತಲೆಮಾರು: ಸೋಫಿಯಾ 1981ರಲ್ಲಿ ಗುಜರಾತ್‌ನ ವಡೋದರದಲ್ಲಿ ಜನಿಸಿದ್ದಾರೆ. ಜೀವ ರಸಾಯನ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರೆ. ಸೋಫಿಯಾ ತಂದೆ, ಅಜ್ಜ ಕೂಡ ಸೇನೆಯಲ್ಲಿದ್ದರು. 1999ರಲ್ಲಿ ಸೋಫಿಯಾ, 2011ರಲ್ಲಿ ತಾಜುದ್ದೀನ್ ಸೇನೆ ಸೇರಿದ್ದಾರೆ.

ತಾಜುದ್ದೀನ್ ಹಾಗೂ ಸೋಫಿಯಾ

'2016ರಲ್ಲಿ ಬಹುರಾಷ್ಟ್ರೀಯ ಮಿಲಿಟರಿ ಕವಾಯತಿನಲ್ಲಿ ಭಾರತೀಯ ತುಕಡಿಯನ್ನು ಮುನ್ನಡೆಸಿದ ಸೇನೆಯ ಮೊದಲ ಮಹಿಳಾ ಅಧಿಕಾರಿ' ಎಂಬ ಹೆಗ್ಗಳಿಕೆ ಸೋಫಿಯಾ ಅವರದ್ದು.

ಸೋಫಿಯಾ ಅವರ ಮಾವ ಗೌಸ್‌ಸಾಬ್, ಅತ್ತೆ ಫರ್ಜಾನಾ, ಭಾವ ಸಿಕಂದರ್ ಈ ಪುಟ್ಟ ಮನೆಯಲ್ಲಿ ವಾಸವಿದ್ದಾರೆ. ಗೌಸ್‌ಸಾಬ್ ಅವರ ಇನ್ನೊಬ್ಬ ಹಿರಿಯ ಪುತ್ರ ಆದಮ್ ಅಲಿ ಬೆಂಗಳೂರಿನಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಆಗಿದ್ದಾರೆ.

'ಹೆಣ್ಣುಮಕ್ಕಳ ಸಾಮರ್ಥ್ಯವೇ ಅಗಣಿತ'

'ತಾಜುದ್ದೀನ್–ಸೋಫಿಯಾ ದೇಶ ಸೇವೆಗೆ ಅರ್ಪಿಸಿಕೊಂಡವರು. ಪ್ರೀತಿಸಿ, ಮದುವೆಯಾಗುತ್ತೇವೆ ಎಂದಾಗ ಸಾಕಷ್ಟು ಆನಂದವಾಯಿತು. ಸೊಸೆಯನ್ನೂ ಸೇನಾ ಸಮವಸ್ತ್ರದಲ್ಲಿ ನೋಡಿ ಖುಷಿಪಡುತ್ತಿದ್ದೆ. ಈಗ ಇಡೀ ಜಗತ್ತು ಆಕೆಯ ಮಾತು ಕಿವಿಗೊಟ್ಟು ಕೇಳಿತು. ನನ್ನ ಆನಂದಕ್ಕೆ ಪಾರವೇ ಇಲ್ಲ. ನನ್ನ ಮನೆತನಕ್ಕೆ ಕೀರ್ತಿ ತರಲು ಹೇಳಿದ್ದೆ. ಆಕೆ ದೇಶಕ್ಕೇ ಕೀರ್ತಿ ತಂದಳು' ಎಂದು ಗೌಸ್‌ಸಾಬ್ 'ಪ್ರಜಾವಾಣಿ' ಜತೆ ಸಂತಸ ಹಂಚಿಕೊಂಡರು.

ಗೌಸ್‌ಸಾಬ್

'ಊರಿನ ಜನರೆಲ್ಲ ಮುಗಿಬಿದ್ದು ಅಭಿನಂದಿಸಿದರು. ನಮಸ್ಕಾರ ಮಾಡಿ, ಕೈ ಕುಲುಕಿ, ಖುಷಿಯಿಂದ ಸುಸ್ತು ಆಗಿದ್ದೇನೆ. ನಿನ್ನೆ ರಾತ್ರಿಯಿಂದ ನಾವು ಯಾರೂ ಮಲಗಿಲ್ಲ. 'ಭಲೇ ಕೂಸೆ' ಎಂದು ಸೊಸೆಗೆ ಶಹಬ್ಬಾಷ್ ಹೇಳಬೇಕೆಂದರೆ ಫೋನಿಗೂ ಸಿಗುತ್ತಿಲ್ಲ. ಅಲ್ಲಿ ಆಕೆಯ ಅವಶ್ಯಕತೆ ಇದೆ. ಇಲ್ಲಿಂದಲೇ ಕೋಟಿ ಆಶೀರ್ವಾದ ಮಾಡುತ್ತೇವೆ' ಎಂದರು.

'ಪಾಕಿಸ್ತಾನದಂಥ ದುಷ್ಟ ದೇಶ ಇನ್ನೊಂದಿಲ್ಲ. ಉಗ್ರರಿಗೆ ಆಶ್ರಯ ಕೊಟ್ಟ ದೇಶ ನಾಶವಾಗುತ್ತದೆ. ಅಮಾಯಕರ ಕೊಂದವರು ದುರ್ಮರಣಕ್ಕೆ ಈಡಾಗುತ್ತಾರೆ ಹೊರತು ದೈವಮರಣ ಸಿಗುವುದಿಲ್ಲ. ಕೊಲ್ಲುವವರನ್ನು ಖುದಾ ಕ್ಷಮಿಸುವುದಿಲ್ಲ' ಎಂದೂ ಅವರು ಅಭಿಪ್ರಾಯ ಪಟ್ಟರು. 'ದೇಶದ ವಿಷಯ ಬಂದಾಗ ನಾವೆಲ್ಲ ಒಂದೇ. ಹಿಂದೂಸ್ತಾನಿಗಳು. ಜಾತಿ, ಜನಾಂಗ, ಧರ್ಮ ಭೇದ ಮಾಡಕೂಡದು. ನಾನು ಕೆಂಪಜ್ಜನ ಮಠದ ಭಕ್ತ. ನಾಲ್ಕು ಬಾರಿ ಶಬರಿಮಲೆಗೆ ಹೋಗಿ ಹರಕೆ ತೀರಿಸಿದ್ದೇನೆ. ತಿರುಪತಿಗೆ ಮುಡಿ ಕೊಟ್ಟಿದ್ದೇನೆ.' ಎಂದರು.

'ಅಷ್ಟು ದೊಡ್ಡ ಹುದ್ದೆಯಲ್ಲಿದ್ದರೂ ಸೊಸೆಗೆ ಅಹಂ ಇಲ್ಲ. ಕೊಣ್ಣೂರಿಗೆ ಬಂದರೆ ನಮ್ಮಂತೆಯೇ ಸಾಧಾರಣಳಾಗಿ ಆಕೆ ಬೆರೆಯುತ್ತಾಳೆ. ವರ್ಷದ ಹಿಂದೆ ಮಗ ಮತ್ತು ಸೊಸೆ ಇಬ್ಬರೂ ಬಂದಿದ್ದರು. ಅವರಿಗೆ ಹೆಚ್ಚು ರಜೆ ಸಿಗುವುದಿಲ್ಲ. ಮುಂದಿನ ಬಕ್ರೀದ್‌ಗೆ ಬರುತ್ತೇವೆ ಎಂದಿದ್ದಾರೆ' ಎಂದರು.

ಸೋಫಿಯಾ ಸಾಧನೆ ಉಲ್ಲೇಖಿಸಿದ್ದ 'ಸುಪ್ರೀಂ'

ನವದೆಹಲಿ (ಪಿಟಿಐ): ಭಾರತೀಯ ಸೇನೆಯಲ್ಲಿ ಮಹಿಳೆಯರಿಗೆ ಕಾಯಂ ನೇಮಕಾತಿ ನೀಡುವ ಬಗ್ಗೆ ಸುಪ್ರೀಂ ಕೋರ್ಟ್ 2020ರಲ್ಲಿ ಐತಿಹಾಸಿಕ ತೀರ್ಪು ನೀಡಿತ್ತು. ತೀರ್ಪು ನೀಡುವ ವೇಳೆ ಕರ್ನಲ್ ಸೋಫಿಯಾ ಖುರೇಷಿ ಅವರ ಸಾಧನೆಯನ್ನು ಉಲ್ಲೇಖಿಸಿತ್ತು.

ಸೋಫಿಯಾ ಅವರು 'ಆಪರೇಷನ್ ಸಿಂಧೂರ'ದ ಕುರಿತು ಬುಧವಾರ ಪತ್ರಿಕಾಗೋಷ್ಠಿ ನಡೆಸಿ ಕಾರ್ಯಾಚರಣೆ ಕುರಿತು ಮಾಹಿತಿ ನೀಡಿದ್ದರು. ತೀರ್ಪು ನೀಡುವ ವೇಳೆ ಹಲವು ಮಹಿಳಾ ಅಧಿಕಾರಿಗಳ ಸಾಧನೆಗಳನ್ನು ನ್ಯಾಯಾಲಯ ಉಲ್ಲೇಖಿಸಿತ್ತು. ಸೋಫಿಯಾ ಅವರ ಸಾಧನೆಯನ್ನು ಕೂಡ ಉದಾಹರಣೆಯಾಗಿ ನೀಡಿತ್ತು.

'ಅದೇ ಮೊದಲ ಬಾರಿಗೆ ಭಾರತವು ದೊಡ್ಡ ಮಟ್ಟದಲ್ಲಿ ಆಯೋಜಿಸಿದ್ದ 'ಎಕ್ಸೈಜ್ ಫೋರ್ಸ್ 18' ಹೆಸರಿನ ವಿವಿಧ ದೇಶಗಳ ಸೇನಾಭ್ಯಾಸದಲ್ಲಿ ಭಾರತದ ಸೇನಾ ತಂಡವನ್ನು ಲೆಫ್ಟಿನೆಂಟ್ ಕರ್ನಲ್ ಸೋಫಿಯಾ ಖುರೇಷಿ ಅವರು ಮುನ್ನಡೆಸಿದ್ದರು' ಎಂದು ಸುಪ್ರೀಂ ಕೋರ್ಟ್ ಶ್ಲಾಘನೆ ವ್ಯಕ್ತಪಡಿಸಿತ್ತು.

'2006ರಲ್ಲಿ ಕಾಂಗೋದಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯಲ್ಲಿ ಸೋಫಿಯಾ ಅವರು ಪಾಲ್ಗೊಂಡಿದ್ದರು. ಈ ವೇಳೆ ಕದನ ವಿರಾಮ ಉಲ್ಲಂಘನೆಯಂಥ ಘಟನೆಗಳ ಮೇಲ್ವಿಚಾರಣೆ ಮತ್ತು ಮಾನವೀಯ ನೆರವು ಚಟುವಟಿಕೆಗಳ ನೇತೃತ್ವ ವಹಿಸಿದ್ದರು' ಎಂದೂ ಉಲ್ಲೇಖಿಸಿತ್ತು.

ಪ್ರಸಾರ ಭಾರತಿ
(ಭಾರತದ ಸಾರ್ವಜನಿಕ ಸೇವಾ ಪ್ರಸಾರಕ)
ದೂರದರ್ಶನ ಕೇಂದ್ರ, ಪ್ರಾದೇಶಿಕ ಸುದ್ದಿ ವಿಭಾಗ, ಬೆಂಗಳೂರು

ಬೆಂಗಳೂರು ದೂರದರ್ಶನ ಕೇಂದ್ರದ ಪ್ರಾದೇಶಿಕ ಸುದ್ದಿ ವಿಭಾಗಕ್ಕೆ ಸ್ಟ್ರಿಂಜರ್ (ಅರೆಕಾಲಿಕ ವರದಿಗಾರರು) ಆಗಿ ಕಾರ್ಯನಿರ್ವಹಿಸಲು 29 ಜಿಲ್ಲೆಗಳಲ್ಲಿ ಎಲ್ಲಾ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 16.05.2025. ಅರ್ಹತೆ, ಶೈಕ್ಷಣಿಕ ಹಿನ್ನೆಲೆ, ಅನುಭವ ಹಾಗೂ ಅರ್ಜಿ ನಮೂನೆ ಹೊಂದಿರುವ ಮಾಹಿತಿ https://prasarbharati.gov.in/pbvacancies/ ಜಾಲತಾಣದಲ್ಲಿ ಲಭ್ಯ.
ಅರ್ಜಿಗಳನ್ನು ಸ್ಪೀಡ್ ಪೋಸ್ಟ್ ಅಥವಾ ರಿಜಿಸ್ಟರ್ ಪೋಸ್ಟ್ ಮೂಲಕವೇ ನಿಗದಿತ ಡಿಡಿ ಯೊಂದಿಗೆ ಸಲ್ಲಿಸತಕ್ಕದ್ದು.
ಸಹಿ/-, ನಿರ್ದೇಶಕರು (ಸುದ್ದಿ)
ದೂರದರ್ಶನ ಕೇಂದ್ರ, ಬೆಂಗಳೂರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಮನಸ್ಸೇ ಎಲ್ಲಕ್ಕೂ ಮೂಲ, ಅದನ್ನು ಸರಿಪಡಿಸದ ವಿನಾ ಇನ್ನಾವುದೂ ಸರಿಯಾಗಲಾರದು.

–ಡಿ.ವಿ.ಜಿ

ಬಿಪಿಎಸ್ಎಲ್ ಪ್ರಕರಣದ ತೀರ್ಪು ಐಬಿಸಿ ಪುನರವಲೋಕನ ಅಗತ್ಯ

ಭೂಷಣ್ ಪವರ್ ಆ್ಯಂಡ್ ಸ್ಟೀಲ್ ಲಿಮಿಟೆಡ್ (ಬಿಪಿಎಸ್ಎಲ್) ಕಂಪನಿಯನ್ನು ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ಸ್ವಾಧೀನಕ್ಕೆ ತೆಗೆದುಕೊಂಡಿದ್ದನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ. ಕೋರ್ಟ್‌ನ ತೀರ್ಮಾನವು ಎರಡು ಕಂಪನಿಗಳು ದಿವಾಳಿ ಸಂಹಿತೆಯ (ಐಬಿಸಿ) ಅಡಿಯಲ್ಲಿ ತೆಗೆದುಕೊಂಡ ನಿರ್ಧಾರದ ಸರಿ–ತಪ್ಪುಗಳು, ಆ ನಿರ್ಧಾರದ ಕಾನೂನುಬದ್ಧತೆಯ ಆಚೆಗೂ ಚಾಚಿಕೊಂಡಿದೆ. ಐಬಿಸಿ ಅನುಷ್ಠಾನಕ್ಕೆ ಸಂಬಂಧಿಸಿದ ಹಾಗೂ ಆ ಕಾನೂನಿನ ಅಡಿಯಲ್ಲಿನ ಪ್ರಕ್ರಿಯೆಗಳ ಬಗ್ಗೆ ಇದು ಪ್ರಶ್ನೆಗಳನ್ನು ಎತ್ತಿದೆ. ಕೇಂದ್ರ ಸರ್ಕಾರವು 2016ರಲ್ಲಿ ಜಾರಿಗೆ ತಂದ ಈ ಕಾನೂನು, ಕಂಪನಿಗಳು ದಿವಾಳಿಯೆದ್ದಾಗ ಸೃಷ್ಟಿಯಾಗುವ ಸಮಸ್ಯೆಗಳನ್ನು ನಿಭಾಯಿಸಲು ಒಂದು ದಾರಿದೀಪ ಎಂದು ಭಾವಿಸಲಾಗಿದೆ. ಅಂತಹ ಪರಿಸ್ಥಿತಿಗಳನ್ನು ನಿರ್ವಹಿಸುವಲ್ಲಿ ಇದೊಂದು ಪ್ರಮುಖ ಪರಿಕರವಾಗಿ ಒದಗಿಬಂದಿದೆ ಕೂಡ. ಕಂಪನಿಗಳು ದಿವಾಳಿಯಾದ ಸಂದರ್ಭದಲ್ಲಿ ಕಾನೂನಿಗೆ ಅನುಗುಣವಾಗಿ, ನಿರೀಕ್ಷಿತವಾದ ಬಗೆಯಲ್ಲಿ, ವ್ಯವಸ್ಥಿತವಾಗಿ ಸಮಸ್ಯೆಯನ್ನು ಪರಿಹರಿಸಲಾಗುತ್ತದೆ ಎಂಬ ಭರವಸೆಯನ್ನು ಉದ್ದಿಮೆಗಳಿಗೆ, ಹೂಡಿಕೆದಾರರಿಗೆ, ಸಾಲದಾತರಿಗೆ ಮತ್ತು ಇತರ ಭಾಗೀದಾರರಿಗೆ ನೀಡುವ ಉದ್ದೇಶವು ಈ ಕಾನೂನಿಗೆ ಇದೆ. ಬಿಪಿಎಸ್ಎಲ್ ಕಂಪನಿಯನ್ನು ಮತ್ತೆ ಮೇಲಕ್ಕೆತ್ತಲು ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ಸಲ್ಲಿಸಿದ್ದ ಯೋಜನೆಯು ಕಾನೂನುಬಾಹಿರ ಎಂದು ಹೇಳಿರುವ ಸುಪ್ರೀಂ ಕೋರ್ಟ್‌ನ ತೀರ್ಪು, ಐಬಿಸಿ ಕಾನೂನಿನ ಅಡಿಯಲ್ಲಿ ವಿವರಿಸಲಾಗಿರುವ ಪ್ರಕ್ರಿಯೆಗಳಿಗೆ ಎದುರಾದ ದೊಡ್ಡ ಹಿನ್ನಡೆ.

ದಿವಾಳಿ ಸಂಹಿತೆ ರೂಪಿಸುವ ಮೊದಲು ಹಲವು ಕಂಪನಿಗಳು ನಡೆಸುತ್ತಿದ್ದ ಅಕ್ರಮಗಳು, ಈ ಸಂಹಿತೆ ಜಾರಿಗೆ ಬಂದ ನಂತರದಲ್ಲಿ ಇತರ ರೂಪಗಳಲ್ಲಿಯೂ ನಡೆಯಬಹುದು ಎಂಬುದನ್ನು ಕೋರ್ಟ್ ತೀರ್ಪು ಹೇಳಿದಂತಿದೆ

ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ಬಿಪಿಎಸ್ಎಲ್ ಕಂಪನಿಯ ಪುನರುಜ್ಜೀವನಕ್ಕೆ ಸಲ್ಲಿಸಿದ್ದ ಯೋಜನೆಗೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯು (ಎನ್‌ಸಿಎಲ್‌ಟಿ) 2019ರಲ್ಲಿ ಒಪ್ಪಿಗೆ ನೀಡಿತ್ತು. ಆದರೆ ಬಿಪಿಎಸ್ಎಲ್ ಕಂಪನಿಯ ಪುನರುಜ್ಜೀವನ ಪ್ರಕ್ರಿಯೆಯು ಎರಡು ವರ್ಷಗಳಿಗೂ ಹೆಚ್ಚಿನ ಅವಧಿಯನ್ನು ತೆಗೆದುಕೊಂಡಿತ್ತು, ಇದು ಐಬಿಸಿ ಕಾನೂನಿನಲ್ಲಿ ಹೇಳಿರುವ ಅವಧಿಗಿಂತ ಹೆಚ್ಚು. ಎರಡು ವರ್ಷಗಳ ನಂತರದಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ಬಿಪಿಎಸ್ಎಲ್ ಕಂಪನಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿತು. ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯ ಕ್ರಮವನ್ನು ಒಪ್ಪದ ನ್ಯಾಯಾಲಯವು ಬಿಪಿಎಸ್ಎಲ್ ಕಂಪನಿಯ ಪರಿಸಮಾಪ್ತಿಗೆ ಆದೇಶಿಸಿದೆ. ಪ್ರಕ್ರಿಯೆಯ ಎಲ್ಲ ಭಾಗೀದಾರರ ನಡೆಯನ್ನು ಪ್ರಶ್ನಿಸಿರುವ ನ್ಯಾಯಾಲಯವು ಪ್ರಕ್ರಿಯೆಯನ್ನು ಕೂಡ ಪ್ರಶ್ನಿಸಿದೆ. ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ತಪ್ಪು ಮಾಹಿತಿ ಒದಗಿಸಿದೆ, ಬಿಪಿಎಸ್ಎಲ್ ಪುನರುಜ್ಜೀವನಕ್ಕೆ ಒಪ್ಪಿಗೆ ಪಡೆದುಕೊಂಡ ಯೋಜನೆಗೆ ಅನುಗುಣವಾಗಿ ಸರಿಸುಮಾರು ಎರಡು ವರ್ಷಗಳ ಕಾಲ ನಡೆದುಕೊಂಡಿಲ್ಲ ಎಂದು ಹೇಳಿದೆ. ಪುನರುಜ್ಜೀವನ ಯೋಜನೆಯು ಐಬಿಸಿ ಹೇಳಿರುವ ರೀತಿಯಲ್ಲಿ ಇರಲಿಲ್ಲ, ಹಣಕಾಸಿನ ಸಂಕಷ್ಟಕ್ಕೆ ಸಿಲುಕಿದ ಕಂಪನಿಯ ಪುನರುಜ್ಜೀವನದ ಹೊಣೆ ಹೊತ್ತವರು ಶಾಸನಬದ್ಧವಾಗಿ ಕರ್ತವ್ಯ ನಿರ್ವಹಿಸಲು ವಿಫಲರಾದರು ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿದೆ. ಕಂಪನಿಯ ಪುನರುಜ್ಜೀವನದ ಯೋಜನೆಯನ್ನು ಒಪ್ಪಿಕೊಳ್ಳುವ ಸಂದರ್ಭದಲ್ಲಿ ಸಾಲದಾತರ ಸಮಿತಿಯು ತನ್ನ ವಿವೇಕವನ್ನು ಬಳಸಿಕೊಳ್ಳುವಲ್ಲಿ ವಿಫಲವಾಗಿದೆ, ಪರಸ್ಪರ ವಿರುದ್ಧವಾದ ನಿಲುವುಗಳನ್ನು ತಳೆಯುವ ಮೂಲಕ ಅದು ಸಾಲದಾತರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ವಿಫಲವಾಗಿದೆ ಎಂದು ಕೂಡ ಕೋರ್ಟ್ ಹೇಳಿದೆ. ಅಲ್ಲದೆ, ನಿಗದಿತವಾದ ಪ್ರಕ್ರಿಯೆಗಳನ್ನು ಎಲ್ಲ ಹಂತಗಳಲ್ಲಿಯೂ ಉಲ್ಲಂಘಿಸಲಾಯಿತು ಎಂದು ಹೇಳಿದೆ.

ಸುಪ್ರೀಂ ಕೋರ್ಟ್‌ನ ನಿರ್ಣಯವು ಐಬಿಸಿ ಅಡಿಯಲ್ಲಿ ರೂಪಿತವಾದ ವ್ಯವಸ್ಥೆಯನ್ನು ಪರಿಶೀಲನೆಗೆ ಒಳಪಡಿಸಿದೆ. ಇದು ಹಲವು ಪರಿಣಾಮಗಳನ್ನು ಉಂಟುಮಾಡಲಿದೆ. ಬಿಪಿಎಸ್ಎಲ್ ಕಂಪನಿಯು ದಿವಾಳಿ ಭೀತಿಯಲ್ಲಿದ್ದು, ಅದರ ಮೌಲ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಕಂಪನಿಗೆ ಸಾಲ ನೀಡಿದವರು ಕೂಡ ದುಷ್ಪರಿಣಾಮ ಅನುಭವಿಸಬೇಕಾಗುತ್ತದೆ. ಸಾಲ ಪಡೆದ ಕಾರ್ಪೊರೇಟ್ ಕಂಪನಿಗಳನ್ನು ಉಳಿಸುವ, ಬೇರೆ ಬೇರೆ ಪಾಲುದಾರರಿಗೆ ಆಗುವ ನಷ್ಟವನ್ನು ಕಡಿಮೆ ಮಾಡುವ, ಅರ್ಥವ್ಯವಸ್ಥೆಗೆ ಅನಪೇಕ್ಷಿತ ಹಾನಿ ಆಗದಂತೆ ನೋಡಿಕೊಳ್ಳುವ ಉದ್ದೇಶವು ಐಬಿಸಿ ಕಾನೂನಿಗೆ ಇದೆ. ಆದರೆ ಐಬಿಸಿ ರೂಪಿಸುವ ಮೊದಲು ಹಲವು ಕಂಪನಿಗಳು ನಡೆಸುತ್ತಿದ್ದ ಅಕ್ರಮಗಳು ಐಬಿಸಿ ಜಾರಿಗೆ ಬಂದ ನಂತರದಲ್ಲಿ ಇತರ ರೂಪಗಳಲ್ಲಿಯೂ ನಡೆಯಬಹುದು ಎಂಬುದನ್ನು ಕೋರ್ಟ್‌ನ ತೀರ್ಪು ಹೇಳಿದಂತಿದೆ. ಈ ಪ್ರಕರಣದಲ್ಲಿ ಐಬಿಸಿಯ ಆಶಯವನ್ನು ಉಲ್ಲಂಘಿಸಲಾಗಿದೆ. ಸುಪ್ರೀಂ ಕೋರ್ಟ್ ತೀರ್ಮಾನಕ್ಕೆ ಮೇಲ್ಮನವಿ ಸಲ್ಲಿಸುವ ಸಾಧ್ಯತೆ ಹೆಚ್ಚಿದೆ. ಆದರೆ ಈ ತೀರ್ಪು ಐಬಿಸಿ ಕಾನೂನಿನ ಅನುಷ್ಠಾನದ ಬಗ್ಗೆ ಪುನರವಲೋಕನ ಆಗಬೇಕು ಎಂಬುದನ್ನು ಹೇಳುತ್ತಿದೆ.

ದಿನದ ಟ್ವೀಟ್

ಗ್ರಾಮೀಣ ಉತ್ಸವದ ಮೆರುಗು

ಬೆಂಗಳೂರು ತನ್ನ ಸಂಪ್ರದಾಯದ ಬೇರುಗಳನ್ನು ಉಳಿಸಿಕೊಂಡಿರುವುದನ್ನು ನೋಡಲು ಖುಷಿಯಾಗುತ್ತದೆ! ಜಯನಗರದ ದಟ್ಟಣೆಯ ಬೀದಿಗಳಲ್ಲೂ ಗ್ರಾಮೀಣ ಉತ್ಸವಗಳು ಜರುಗುತ್ತವೆ. ಪಟಾಲಮ್ಮ ದೇವಿ ಉತ್ಸವವು ಐದು ಊರುಗಳಾದ ಯಡಿಯೂರು, ಕನಕಪಾಳ್ಯ, ನಾಗಸಂದ್ರ, ಭೈರಸಂದ್ರ, ಸಿದ್ಧಾಪುರದ ಊರ ಹಬ್ಬವಾಗಿದೆ. ಬೇರೆ ಯಾವ ನಗರವೂ ಈ ರೀತಿ ಸಂಭ್ರಮಿಸುವುದಿಲ್ಲ.

ಅಮಿತ್

ಕಿಡಿನುಡಿ

ವಿಡಿಯೊ ಅಥವಾ ಚಿತ್ರಗಳನ್ನು ಪೋಸ್ಟ್ ಮಾಡುವ ಮೊದಲು ಕನಿಷ್ಠ 10 ಬಾರಿಯಾದರೂ ಅವುಗಳ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಿ. ಸಾಮಾಜಿಕ ಜಾಲತಾಣಗಳಲ್ಲಿ ಲೈಕ್ಸ್, ಕಮೆಂಟ್ಸ್ ಪಡೆಯುವ ಸಲುವಾಗಿ ಸುಳ್ಳು ಸುದ್ದಿಗಳನ್ನು ಹರಡಬೇಡಿ. ಇದು ಭಾರತಕ್ಕೆ ನೀವು ಮಾಡಬಹುದಾದ ಕೆಟ್ಟ ಕೆಲಸಗಳಲ್ಲಿ ಒಂದು. ನೀವು ಪೋಸ್ಟ್ ಮಾಡುವ ಒಂದು ಸುಳ್ಳು ಸುದ್ದಿಯು ಭಾರತಕ್ಕೆ ಎಷ್ಟರಮಟ್ಟಿನ ಹಾನಿ ಉಂಟು ಮಾಡುತ್ತದೆ ಎಂಬುದನ್ನು ನೀವು ಊಹಿಸಲಾರಿರಿ.

ಮೋಹಿತ್ ಚೌಹಾಣ್

25 ವರ್ಷಗಳ ಹಿಂದೆ

ಮಂಗಳವಾರ, 9-5-2000

• ಪಿಯುಸಿ: ಮೌಲ್ಯಮಾಪನ ಬಹಿಷ್ಕಾರ ಮುಂದುವರಿಕೆ

ಬೆಂಗಳೂರು, ಮೇ 8– ಎಷ್ಟೇ ಒತ್ತಡ ಬಂದರೂ ಬೇಡಿಕೆ ಈಡೇರಿಸುವ ತನಕ ಪದವಿಪೂರ್ವ ತರಗತಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಬಹಿಷ್ಕಾರ ಮುಂದುವರಿಸುವ ನಿರ್ಧಾರವನ್ನು ಇಂದು ಇಲ್ಲಿ ಸಭೆ ಸೇರಿದ್ದ ಕಾಲೇಜು ಅಧ್ಯಾಪಕರು ಪುನರುಚ್ಚರಿಸಿದ್ದರಿಂದ ಸಮಸ್ಯೆ ಇನ್ನಷ್ಟು ಕಗ್ಗಂಟಾಗಿದೆ.

ಸರ್ಕಾರ ಮತ್ತು ಶಿಕ್ಷಕರ ನಡುವಣ ಸಂಘರ್ಷದಿಂದ ಈಗ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನದಲ್ಲಿದೆ.

ಅನೇಕ ದಿನಗಳಿಂದಲೂ ಅಧ್ಯಾಪಕರು ಮೌಲ್ಯಮಾಪನ ಬಹಿಷ್ಕರಿಸಿ ಪ್ರತಿಭಟಿಸುತ್ತಿದ್ದರೂ ಸರ್ಕಾರ ಅವರ ಬೇಡಿಕೆಗಳನ್ನು ತಿರಸ್ಕರಿಸುತ್ತಾ ಕಟು ಧೋರಣೆ ತಳೆದಿರುವ ಹಿನ್ನೆಲೆಯಲ್ಲಿ ರಾಜ್ಯ ಪದವಿ ಪೂರ್ವ ಶಿಕ್ಷಣ ಅಧಿಕಾರಿಗಳ, ಪ್ರಾಂಶುಪಾಲರ, ಉಪನ್ಯಾಸಕರ ಮತ್ತು ಬೋಧಕೇತರರ ಒಕ್ಕೂಟದ ಸಭೆ ನಡೆಸಿ, ಬೇಡಿಕೆಗಳ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಹೋರಾಡಲು ನಿರ್ಧರಿಸಲಾಯಿತು.

• ಪಟೇಲ್ ಅನ್ನನಾಳಕ್ಕೆ ಬ್ಯಾಂಡಿಂಗ್ ಚಿಕಿತ್ಸೆ

ನವದೆಹಲಿ, ಮೇ 8– ಕಾಮಾಲೆ ವ್ಯಾಧಿಯಿಂದ ಗುಣಮುಖರಾಗಲು ಕಳೆದ ಹತ್ತು ದಿನಗಳಿಂದ ಇಲ್ಲಿನ ಜಿ.ಬಿ.ಪಂತ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ಅನ್ನನಾಳಕ್ಕೆ ಇಂದು ಬ್ಯಾಂಡಿಂಗ್ ಚಿಕಿತ್ಸೆ ನಡೆಸಲಾಯಿತು. ಪಟೇಲ್ ಅವರು ಈ ಚಿಕಿತ್ಸೆಯ ನಂತರ ಕರ್ನಾಟಕ ಭವನಕ್ಕೆ ಮರಳಿ ವಿಶ್ರಾಂತಿ ಪಡೆಯುತ್ತಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 9-5-1975

• ಮರಗಳ ನಾಶಕ್ಕೆ ಕೊಡಲಿಪೆಟ್ಟು

ಬೆಂಗಳೂರು, ಮೇ 8– ಸಾರ್ವಜನಿಕ ಪ್ರದೇಶಗಳಲ್ಲಿನ ಮರಗಳನ್ನು ಕಡಿಯುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಶಾಸನವನ್ನು ಜಾರಿಗೆ ತರಬೇಕೆಂದು ನಗರಸಭೆಯ ಆಡಳಿತಾಧಿಕಾರಿ ಲಕ್ಷ್ಮಣ ರಾವ್ ಅವರು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಉದ್ಯಾನಗಳ ಸಂರಕ್ಷಣಾ ಶಾಸನಕ್ಕೆ ಈ ಕ್ರಮ ಸೇರಿಸಿ ತಿದ್ದುಪಡಿ ಮಾಡುವ ಸಂಭವ ಇದೆ. ಇದರೊಂದಿಗೆ ಮನೆ ಕಟ್ಟುವವರಿಗೆ ಮನೆಗಳ ವಿನ್ಯಾಸಗಳಿಗೆ ಸರಿಹೊಂದುವಂತೆ ಗಿಡಗಳನ್ನು ನೆಡಬೇಕೆಂದು ನಗರಸಭೆ ಸಲಹೆ ಮಾಡಲಿದೆ. ಈಗಾಗಲೇ ಅನೇಕರು ತೆಂಗಿನ ಮರಗಳನ್ನು ಒಳಗೊಂಡಂತೆ ಮನೆಗಳನ್ನು ಕಟ್ಟಿದ್ದಾರೆ. ಈ ವರ್ಷ ಮಳೆ ಪ್ರಾರಂಭವಾದ ಕೂಡಲೇ ನಗರಸಭೆ ನಗರದ ಎಲ್ಲೆಡೆ ಗಿಡ ನೆಡುವ ಕಾರ್ಯಕ್ರಮ ಹಾಕಿಕೊಂಡಿದೆ.

• 99 ಆಪಾದನೆ ಪರಿಶೀಲನೆ ವರದಿ ಬಗ್ಗೆ ಅರಸು ಅಚ್ಚರಿ

ಬೆಂಗಳೂರು, ಮೇ 8– ಮುಖ್ಯಮಂತ್ರಿ ದೇವರಾಜ ಅರಸು ಅವರು ಕೇಂದ್ರದ ಗೃಹ ಸಚಿವ ಕೆ.ಬ್ರಹ್ಮಾನಂದ ರೆಡ್ಡಿ ಅವರಿಗೆ ಪತ್ರ ಬರೆದು ತಮ್ಮ ಮತ್ತು ತಮ್ಮ ಮಂತ್ರಿಮಂಡಲದ ವಿರುದ್ಧ 99 ಆಪಾದನೆಗಳನ್ನು ಪರಿಶೀಲಿಸಲಾಗುತ್ತಿದೆಯೆಂಬ ಪತ್ರಿಕಾ ವರದಿಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆಂದು ಗೊತ್ತಾಗಿದೆ.

99 ಆಪಾದನೆಗಳನ್ನು ಪರಿಶೀಲಿಸಲಾಗುತ್ತಿದೆಯೆಂದು ರೆಡ್ಡಿ ಅವರು ತಮ್ಮ ಇಲಾಖೆಗೆ ಸಂಬಂಧಿಸಿದ ಸಮಾಲೋಚನಾ ಸಮಿತಿಯಲ್ಲಿ ಹೇಳಿದರೆಂದು ವರದಿಯಾಗಿತ್ತು.

ನಾಗರಿಕಸ್ನೇಹಿ ‘ಮಾದರಿ ಮಸೂದೆ ಬ್ಯಾಂಕ್’ ಅಸ್ತಿತ್ವಕ್ಕೆ

ಮಾದರಿ ಮಸೂದೆ: ಕರ್ನಾಟಕದ ಮಾದರಿ

ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಇತ್ತೀಚೆಗೆ ಬಿಡುಗಡೆಯಾಗಿರುವ ‘ಇಂಡಿಯಾ ಜಸ್ಟಿಸ್–2025’ ವರದಿ ಪ್ರಕಾರ, ಕಾನೂನು ನೆರವಿನಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದಿದೆ. ಬಂದಿಖಾನೆಗಳ ಒಟ್ಟಾರೆ ಕಾರ್ಯನಿರ್ವಹಣೆಯಲ್ಲಿ ಎರಡನೇ ಸ್ಥಾನ ಗಳಿಸಿದೆ. ಪೊಲೀಸ್ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಮೂರನೇ ಸ್ಥಾನ ಪಡೆದಿದೆ. ಪೊಲೀಸ್ ಇಲಾಖೆಯ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿರುವ ವಿಷಯದಲ್ಲೂ ಕರ್ನಾಟಕ ಮುಂದಿದೆ. ಕಾನೂನು ಇಲಾಖೆ ಈಗ ಮತ್ತೊಂದು ವಿನೂತನ ಪ್ರಯತ್ನಕ್ಕೆ ಮುಂದಾಗಿದೆ. ನಾಗರಿಕಸ್ನೇಹಿ ಮಾದರಿ ಮಸೂದೆಗಳನ್ನು ಒಳಗೊಂಡ ಬ್ಯಾಂಕೊಂದನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಬ್ಯಾಂಕ್‌ನಲ್ಲಿ ಸುಮಾರು ಒಂದು ಸಾವಿರ ಮಾದರಿ ಮಸೂದೆಗಳು ಲಭ್ಯವಾಗಲಿದ್ದು, ಅವಶ್ಯಕತೆ ಉಂಟಾದಾಗ ಸರ್ಕಾರ ಸೂಕ್ತ ಬದಲಾವಣೆ ಮತ್ತು ತಿದ್ದುಪಡಿ ಮಾಡಿ ಅವನ್ನು ಬಳಸಿಕೊಳ್ಳಬಹುದಾಗಿದೆ. ಬಹುಶಃ ದೇಶದಲ್ಲಿ ಇಂತಹ ಪ್ರಯತ್ನ ಇದೇ ಮೊದಲು ಎಂದು ತೋರುತ್ತದೆ.

ಪ್ರಜಾಪ್ರಭುತ್ವದಲ್ಲಿ ಕಾನೂನು ರಚಿಸುವ ಅಧಿಕಾರ ಇರುವುದು ಶಾಸನಸಭೆಗಳಿಗೆ ಮಾತ್ರ. ಸಾಮಾನ್ಯ ನಾಗರಿಕರು ಅದರಲ್ಲಿ ನೇರವಾಗಿ ಭಾಗವಹಿಸಲಾಗದು. ಕಾನೂನು ರಚಿಸುವ ಪ್ರಕ್ರಿಯೆಯಲ್ಲಿ ನಾಗರಿಕರ ಸಕ್ರಿಯ ಒಳಗೊಳ್ಳುವಿಕೆ ಇರಬೇಕೆಂಬ ವಿಷಯ ಬಹಳಷ್ಟು ಚರ್ಚೆಗೆ ಒಳಪಟ್ಟಿದೆ. ಇದಕ್ಕಾಗಿ ಹೋರಾಟವೂ ನಡೆದಿದೆ. ಕೆಲವು ವರ್ಷಗಳ ಹಿಂದೆ ಲೋಕಪಾಲ್ ಮಸೂದೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಈ ವಿಷಯ ಬಹಳಷ್ಟು ಚರ್ಚೆಗೆ ಒಳಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ಕಾನೂನು ರಚನೆಯಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಗೆ ಅವಕಾಶವೇ ಇಲ್ಲ ಎಂದರೆ ತಪ್ಪಾದೀತು.

ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಕಾನೂನು ರಚನೆಗೆ ಮೊದಲು ಸಮಾಲೋಚನೆ ನಡೆಸಲು ಅವಕಾಶ ಇದೆ. ಇದರ ಪ್ರಕಾರ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ಉದ್ದೇಶಿತ ಮಸೂದೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿ ಅದಕ್ಕೆ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಬೇಕು. ಸಾರ್ವಜನಿಕರು ತಮ್ಮ ಸಲಹೆ, ಸೂಚನೆ ಮತ್ತು ಅಭಿಪ್ರಾಯ ಸೂಚಿಸಲು ಮೂವತ್ತು ದಿನಗಳ ಕಾಲಾವಕಾಶ ನೀಡಲಾಗುತ್ತದೆ. ಆದರೆ ಈ ನಿಯಮ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ವಿಶೇಷವಾಗಿ ರಾಜ್ಯ ಮಟ್ಟದಲ್ಲಿ ಮಸೂದೆ ಬಗ್ಗೆ ಯಾವುದೇ ಮುನ್ಸೂಚನೆ ದೊರೆಯುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಮಸೂದೆ ಸಿದ್ಧವಾಗಿದೆ ಎಂದಾಗಲಿ, ಅದು ರಾಜ್ಯಪತ್ರದಲ್ಲಿ ಪ್ರಕಟವಾಗಿದೆ ಎಂದಾಗಲಿ ನಾಗರಿಕರಿಗೆ ತಿಳಿಯುವುದಿಲ್ಲ. ಸಂಬಂಧಪಟ್ಟ ಇಲಾಖೆಗಳು ಮಸೂದೆಗೆ ಅಗತ್ಯ ಪ್ರಚಾರ ನೀಡುವುದಿಲ್ಲ. ಹೀಗಾಗಿ, ಮಸೂದೆಯು ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆ ಇಲ್ಲದೇ ಕಾನೂನಿನ ರೂಪ ಪಡೆದುಕೊಳ್ಳುತ್ತದೆ. ಮಸೂದೆಯು ಶಾಸನಸಭೆಯಲ್ಲಿ ಮಂಡನೆಯಾದಾಗಲೇ ನಾಗರಿಕರಿಗೆ ಅದರ ಬಗ್ಗೆ ಗೊತ್ತಾಗುವುದು.

ಈ ಕಾರಣದಿಂದ, ರಾಜ್ಯ ಸರ್ಕಾರವು ಸ್ಥಾಪಿಸಲು ಹೊರಟಿರುವ ಮಾದರಿ ಮಸೂದೆ ಬ್ಯಾಂಕ್, ಕಾನೂನು ರಚನೆಯಲ್ಲಿ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆಯ ಒಂದು ಮಾದರಿ. ಈ ಬ್ಯಾಂಕ್‌ಗೆ ಮಸೂದೆಗಳನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವಾಲಯದ ನಿಯಂತ್ರಣಕ್ಕೆ ಒಳಪಟ್ಟಿರುವ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಗೆ ಹೊರಿಸಲಾಗಿದೆ. ಸಂಸ್ಥೆಯು ವಿಷಯ ತಜ್ಞರು, ವಕೀಲರು ಮತ್ತು ಸಾರ್ವಜನಿಕರ ಪ್ರತಿನಿಧಿಗಳನ್ನು ಒಳಗೊಂಡ ತಂಡಗಳನ್ನು ರಚಿಸಿದೆ. ಈ ತಂಡಗಳು ವಿಷಯಗಳನ್ನು ಆಯ್ಕೆ ಮಾಡಿಕೊಂಡು ಮಸೂದೆ ಸಿದ್ಧಪಡಿಸಬೇಕು. ಇದರ ಮೂಲಕ ಸರ್ಕಾರಕ್ಕೆ ವಿವಿಧ ಮೂಲಗಳಿಂದ ಸಲಹೆ, ಅಭಿಪ್ರಾಯಗಳು ದೊರೆಯಲಿವೆ. ಮಸೂದೆಯ ಗುಣಮಟ್ಟ ಹೆಚ್ಚುವುದಲ್ಲದೆ, ಕಾನೂನು ರಚನೆಯಲ್ಲಿ ಉಂಟಾಗುವ ವಿಳಂಬವನ್ನು ತಪ್ಪಿಸಬಹುದಾಗಿದೆ. ಅವಶ್ಯಕತೆ ಉಂಟಾದಾಗ ರಾಜ್ಯ ಸರ್ಕಾರವು ಈ ಮಾದರಿ ಮಸೂದೆಗಳನ್ನು ಬಳಸಿಕೊಳ್ಳಬಹುದು. ಆದರೆ ‘ಮಾದರಿ ಮಸೂದೆ ಬ್ಯಾಂಕ್’ನಲ್ಲಿರುವ ಮಸೂದೆಗಳು ಅಂತಿಮವಲ್ಲ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮಸೂದೆಯ ಮಂಡನೆ, ಚರ್ಚೆ, ತಿದ್ದುಪಡಿಯಂತಹ ನಿಯಮ ಪಾಲಿಸಲಾಗುತ್ತದೆ.

ಸಂಸ್ಥೆಯು ಮಾದರಿ ಮಸೂದೆಗಳ ರಚನೆಗೆ ಕೆಲವು ನಿಯಮಗಳನ್ನು ರೂಪಿಸಿದೆ. ಮಸೂದೆಯು ಸಂವಿಧಾನದ ಅನುಸಾರ ರಾಜ್ಯಪಟ್ಟಿಯಲ್ಲಿರುವ ವಿಷಯಗಳಿಗೆ ಸೀಮಿತವಾಗಿ ಇರಬೇಕು. ಮಸೂದೆಗಳ ಅನುಷ್ಠಾನದಿಂದ ಸರ್ಕಾರಕ್ಕೆ ಅಧಿಕ ಆರ್ಥಿಕ ಹೊರೆ ಆಗಬಾರದು. ಸಾಮಾನ್ಯವಾಗಿ ಮಸೂದೆಯಲ್ಲಿ ಹೊಸ ಪ್ರಾಧಿಕಾರ ರಚನೆಯ ಪ್ರಸ್ತಾಪ ಇರುತ್ತದೆ. ಇದರಿಂದ ಅಧಿಕಾರಿಗಳು, ಸಿಬ್ಬಂದಿ ನೇಮಕ ಮತ್ತು ಇತರ ಮೂಲ ಸೌಕರ್ಯಗಳಿಗೆ ಆರ್ಥಿಕ ಸಂಪನ್ಮೂಲ ಬೇಕಾಗುತ್ತದೆ. ಸಾಧ್ಯವಾದ ಮಟ್ಟಿಗೆ ಮಸೂದೆಯಲ್ಲಿ ಈ ರೀತಿಯ ವೆಚ್ಚಕ್ಕೆ ಅವಕಾಶ ಇರಬಾರದು ಎಂದು ಸೂಚಿಸಲಾಗಿದೆ. ರಾಜ್ಯ ಎದುರಿಸುತ್ತಿರುವ ಪ್ರಸ್ತುತ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸೂಚಿಸುವ ಮಸೂದೆಗಳಿಗೆ ಆದ್ಯತೆ ಇರಬೇಕು ಹಾಗೂ ಕಾಯ್ದೆ ಕಟ್ಟಳೆಗಳನ್ನು ಜಾರಿಗೆ ತರುವ ಅಧಿಕಾರಿಗಳ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವಕ್ಕೆ ಒತ್ತು ಕೊಡಬೇಕು. ಅನುಷ್ಠಾನದ ಪ್ರತಿ ಹಂತದಲ್ಲೂ ಉತ್ತರದಾಯಿತ್ವ ಇರುವಂತೆ ನೋಡಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಮಾದರಿ ಮಸೂದೆ ಬ್ಯಾಂಕ್‌ಗೆ ಬಹಳಷ್ಟು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮಾನವ ಹಕ್ಕುಗಳು, ಶಿಕ್ಷಣ, ಕಾರ್ಮಿಕರ ಕಲ್ಯಾಣ, ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳು, ಆಡಳಿತ, ಹಿರಿಯ ನಾಗರಿಕರು, ಸಂತ್ರಸ್ತರ ಹಕ್ಕುಗಳು, ಹಣಕಾಸು ವ್ಯವಹಾರ, ರೈತರ ಸಮಸ್ಯೆಗಳು, ಗುತ್ತಿಗೆ ಕಾರ್ಮಿಕರು, ನಾಗರಿಕರ ಜವಾಬ್ದಾರಿಯಂತಹ ವಿಷಯಗಳನ್ನು ಇದು ಒಳಗೊಂಡಿದೆ. ಗ್ರಾಹಕರ ಹಕ್ಕುಗಳಿಗೆ ಸಹ ಒತ್ತು ನೀಡಲಾಗಿದೆ. ಈ ವಿಷಯಗಳಲ್ಲದೆ, ಕೌಟುಂಬಿಕ ಹಿಂಸೆ, ವಕೀಲ ವೃತ್ತಿಗೆ ಸಂಬಂಧಿಸಿದ ನಿಯಂತ್ರಣ, ಖಾಸಗಿ ಶಾಲೆ ಮತ್ತು ಕಾನೂನು ಕಾಲೇಜು ಸೇರಿದಂತೆ ಇತರ ಶಿಕ್ಷಣ ಸಂಸ್ಥೆಗಳ ಶುಲ್ಕ ನಿಯಂತ್ರಣದ ಬಗ್ಗೆ ಮಾದರಿ ಮಸೂದೆಯನ್ನು ಸಿದ್ಧಪಡಿಸಲು ಅವಕಾಶ ಇದೆ.

ನಮ್ಮ ದೇಶದಲ್ಲಿ ಕಾನೂನುಗಳಿಗೆ ಬರವಿಲ್ಲ ಎಂಬ ಮಾತಿದೆ. ಇದರಲ್ಲಿ ಸತ್ಯಾಂಶವಿದ್ದರೂ ಒಳಹೊಕ್ಕು ನೋಡಿದಾಗ ಅದೆಷ್ಟೋ ವಿಷಯಗಳಿಗೆ ಕಾನೂನುಗಳು ಇಲ್ಲದಿರುವುದು ಗೋಚರಿಸುತ್ತದೆ. ಉದಾಹರಣೆಗೆ, ಆ್ಯಸಿಡ್ ಎರಚುವಿಕೆಯಿಂದ ಮುಖ, ಮೈ ಸುಟ್ಟವರಿಗೆ ಪರಿಹಾರ ನೀಡುವ ಯೋಜನೆ ಇದೆಯೇ ವಿನಾ ಅದಕ್ಕೆ ಕಾರಣರಾದವರನ್ನು ಶಿಕ್ಷೆಗೆ ಗುರಿಪಡಿಸುವ ಪ್ರತ್ಯೇಕ ಕಾನೂನು ಇಲ್ಲ. ಈಗ ದೇಶದಾದ್ಯಂತ ಕೋಚಿಂಗ್ ಕೇಂದ್ರಗಳ ಹಾವಳಿ ಹೆಚ್ಚಾಗುತ್ತಿದೆ. ಈ ಕೇಂದ್ರಗಳಲ್ಲಿ ವಸೂಲು ಮಾಡುವ ಶುಲ್ಕ, ನೀಡುವ ಶಿಕ್ಷಣದ ಗುಣಮಟ್ಟ, ಮೂಲ ಸೌಕರ್ಯದಂತಹವನ್ನು ನಿಯಂತ್ರಿಸುವ ಕಾನೂನು ಬೇಕಾಗಿದೆ.

ಖಾಸಗಿ ಬಸ್ ಮಾಲೀಕರು ಹಬ್ಬ ಮತ್ತು ರಜಾ ದಿನಗಳಲ್ಲಿ ಪ್ರಯಾಣಿಕರಿಂದ ವಸೂಲು ಮಾಡುವ ಮೊತ್ತವನ್ನು ಸಾಮಾನ್ಯ ದಿನಗಳ ಮೊತ್ತಕ್ಕಿಂತ ಹಲವು ಪಟ್ಟು ಹೆಚ್ಚಿಸುತ್ತಾರೆ. ಮನೆಗೆಲಸ ಮಾಡುವವರಿಗೆ ಯಾವುದೇ ರಕ್ಷಣೆ ಇಲ್ಲವಾಗಿದೆ. ಬೆಂಗಳೂರಿನಲ್ಲಿ ರಸ್ತೆಗುಂಡಿಗಳ ಕಾರಣದಿಂದ ಅಪಘಾತಕ್ಕೀಡಾಗಿ ಮೃತಪಟ್ಟವರು ಅಥವಾ ಗಾಯಗೊಂಡವರಿಗೆ ಪರಿಹಾರ ನೀಡುವ ಕಾನೂನು ಅವಶ್ಯವಾಗಿದ್ದರೂ ಸರ್ಕಾರ ಅದರ ಬಗ್ಗೆ ಚಿಂತನೆ ನಡೆಸಿಲ್ಲ. ಮದುವೆ, ಹುಟ್ಟುಹಬ್ಬದಂತಹ ಸಮಾರಂಭಗಳಲ್ಲಿ ಆಹಾರದ ಪೋಲನ್ನು ನಿಯಂತ್ರಿಸುವುದು ಅಗತ್ಯ. ಅದಕ್ಕೊಂದು ಪ್ರತ್ಯೇಕ ಕಾನೂನು ಬೇಕಾಗಿದೆ.

ಹೊಸಪೇಟೆ ಸಮೀಪದ ಹೋಮ್‌ಸ್ಟೇಯಲ್ಲಿ ಇತ್ತೀಚೆಗೆ ವಿದೇಶಿ ಮಹಿಳೆಯೊಬ್ಬರ ಮೇಲಿನ ಅತ್ಯಾಚಾರದ ಪ್ರಕರಣ ವರದಿಯಾಗಿದೆ. ಅತಿಥಿಗಳ ಸುರಕ್ಷತೆಗೆ ಸೂಕ್ತ ವ್ಯವಸ್ಥೆ ಮಾಡುವ ಕಾನೂನು ಬೇಕಿದೆ. ಇಂದಿನ ಯುವಕರು ಮತ್ತು ಪುಟ್ಟಮಕ್ಕಳು ವಾಟರ್ ರ‍್ಯಾಫ್ಟಿಂಗ್, ಸ್ಕೂಬಾ ಡೈವಿಂಗ್‌ನಂತಹ ಆಟಗಳಲ್ಲಿ ತೊಡಗುತ್ತಾರೆ. ದುಬಾರಿ ಹಣ ನೀಡಿದರೂ ಅವರ ಸುರಕ್ಷತೆಗೆ ಧಕ್ಕೆ ಉಂಟಾಗಿರುವ ಪ್ರಕರಣಗಳಿವೆ. ಶಾಲಾ ಮಕ್ಕಳನ್ನು ಚಾರಿತ್ರಿಕ ಸ್ಥಳಗಳಿಗೆ, ಮ್ಯೂಸಿಯಂಗಳಿಗೆ, ಕಲಾ ಗ್ಯಾಲರಿಗಳ ವೀಕ್ಷಣೆಗೆ ಕರೆದೊಯ್ಯುವ ಪದ್ಧತಿ ಈಗ ಕಂಡುಬರುತ್ತಿಲ್ಲ. ಮಕ್ಕಳಿಗೆ ಈಗ ವಿಹಾರ ಎಂದರೆ ರೆಸಾರ್ಟ್, ಈಜುವ ಕೊಳ ಅಷ್ಟೆ. ಇಲ್ಲಿಯೂ ಮಕ್ಕಳ ಸುರಕ್ಷತೆಯನ್ನು ಕಡೆಗಣಿಸಲಾಗುತ್ತಿದೆ. ಪ್ರವಾಸಿಗರ ಸುರಕ್ಷತೆಗೆ ಪ್ರತ್ಯೇಕ ಕಾನೂನಿನ ಅಗತ್ಯವಿದೆ.

ಈ ದಿಸೆಯಲ್ಲಿ ಕರ್ನಾಟಕ ಸರ್ಕಾರದ ಮಾದರಿ ಮಸೂದೆ ಬ್ಯಾಂಕ್ ಒಂದು ಉತ್ತಮ ಪ್ರಯತ್ನ. ತಜ್ಞರು ಮತ್ತು ಸಾರ್ವಜನಿಕರು ರೂಪಿಸುವ ಮಾದರಿ ಮಸೂದೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಅನುಷ್ಠಾನ ಮಾಡಬೇಕಿದೆ. ಶಾಸನಸಭೆಗಳಲ್ಲಿ ಮಂಡನೆಯಾಗುವ ಸದಸ್ಯರ ಖಾಸಗಿ ಮಸೂದೆಗಳಂತೆ ಇವೂ ಕಡೆಗಣನೆಗೆ ಒಳಗಾಗಬಾರದು.

ಚುರುಮುರಿ

ಸೂಸೈಡ್ ಬಾಂಬ್!

• ಬಿ.ಎನ್. ಮಲ್ಲೇಶ್

‘ನಾನೂ ಯುದ್ಧಕ್ಕೆ ಹೋಗ್ಬೇಕು ಅಂತ ಡಿಸೈಡ್ ಮಾಡಿದ್ದೀನಿ ಕಣ್ರಲೆ, ಸೊಂಟಕ್ಕೆ ಸೂಸೈಡ್ ಬಾಂಬ್ ಕಟ್ಕಂಡು ಹೋಗ್ತೀನಿ’ ಹರಟೆಕಟ್ಟೆಯಲ್ಲಿ ತೆಪರೇಸಿ ಹೇಳಿದಾಗ ಗುಡ್ಡೆ ಕಿಸಕ್ಕೆಂದ.

‘ಯಾಕಲೆ ನಗ್ತೀಯ? ನಾನು ಸೀರಿಯಸ್ಸಾಗಿ ಹೇಳ್ತಿದ್ದೀನಿ’ ತೆಪರೇಸಿಗೆ ಸಿಟ್ಟು ಬಂತು.

‘ಅಲ್ಲ, ಸೊಂಟಕ್ಕೆ ಬಾಂಬ್ ಕಟ್ತೀನಿ ಅಂದ್ಯಲ್ಲ, ನಿಂಗೆ ಸೊಂಟ ಎಲ್ಲೈತೋ? ದಪ್ಪ ಹೊಟ್ಟೆ ಒಂದೇ ಇರೋದು’ ಗುಡ್ಡೆಗೆ ಇನ್ನೂ ನಗು.

‘ಲೇಯ್, ದೇಶದ ವಿಷ್ಯದಲ್ಲಿ ತಮಾಷೆ ಬೇಡ. ತೆಪರ ಒಬ್ನೆ ಅಲ್ಲ, ಮನಿಗೊಬ್ಬರಂಗೆ ಯುದ್ಧಕ್ಕೆ ಹೋಗ್ಬೇಕು. ನಮಗೆ ದೇಶ ಮುಖ್ಯ’ ಎಂದಳು ಮಂಜಮ್ಮ.

‘ನಮ್ಗೂ ದೇಶಾನೇ ಮುಖ್ಯ ಮಂಜಮ್ಮ, ಅದಲ್ಲ... ಈ ತೆಪರ ಯಾವತ್ತಾದ್ರೂ ಬಾಂಬ್ ನೋಡಿದಾನಾ ಕೇಳು. ಇವನಿಗೆ ಆತ್ಮನೇ ಇಲ್ಲ, ಹುತಾತ್ಮ ಆಗಾಕೆ ಹೊಂಟಾನೆ’ ದುಬ್ಬೀರನೂ ನಕ್ಕ.

‘ಲೇ ತೆಪರ, ಈಗ ನೀನು ಸೊಂಟಕ್ಕೆ ಬಾಂಬ್ ಕಟ್ಕಂಡು ಯುದ್ಧಕ್ಕೆ ಹೋಗ್ತೀಯ, ಪಾಕಿಸ್ತಾನದ ಒಳಕ್ಕೆ ಹೋಗಿ ಬಾಂಬ್‌ನ ಬಟನ್ ಒತ್ತುತೀಯ, ಅಕಸ್ಮಾತ್ ಅದು ‘ಢಂ’ ಅನ್ನದಿದ್ರೆ ಏನ್ ಮಾಡ್ತೀಯ?’ ಕೊಟ್ರೇಶಿ ಕೊಕ್ಕೆ.

‘ಹಾ... ಕರೆಕ್ಟ್, ಆಗ ಉಗ್ರರು ನಿನ್ ಮೇಲೆ ಶಸ್ತ್ರಾಸ್ತ್ರ ದಾಳಿ ಮಾಡ್ತಾರೆ, ಆಗೇನ್ ಮಾಡ್ತೀಯ?’ ದುಬ್ಬೀರನೂ ದನಿಗೂಡಿಸಿದ.

‘ಆಗ ಅಲ್ಲಿಂದ ತಪ್ಪಿಸ್ಕಂಡ್ ಬರ್ತಾನೆ, ಅದ್ಯಾವ ದೊಡ್ಡ ವಿಷ್ಯ?’ ಗುಡ್ಡೆ ಹೇಳಿದ.

‘ತಪ್ಪಿಸ್ಕಂಡ್ ಬರ್ತಾನಾ? ಹೆಂಗೆ?’

‘ನಿನ್ನೆಲಿ, ತಪ್ಪಿಸ್ಕಳ್ಳೋದ್ರಲ್ಲಿ ತೆಪರ ಎಕ್ಸ್‌ಪರ್ಟು. ದಿನಾ ಮನೇಲಿ ಅವನೆಂಡ್ತಿ ಪಮ್ಮಿ ಇವನ ಮೇಲೆ ಎಂತೆಂಥಾ ಅಸ್ತ್ರಗಳನ್ನ ಎಸೀತಾಳೆ ಗೊತ್ತಾ? ಸೌಟು, ಲಟ್ಟಣಿಗೆ, ಪ್ಲೇಟು, ಸಾಸರು... ಎಲ್ಲ ಮಿಸೈಲ್ ಸ್ಪೀಡೇ. ಇಲ್ಲೀತಂಕ ಒಂದಾದ್ರೂ ಇವನಿಗೆ ಬಡಿದಿದಾವಾ? ಅಷ್ಟು ಚೆನ್ನಾಗಿ ತಪ್ಪಿಸ್ಕೋತಾನೆ, ಡೋಂಟ್ ವರಿ’.

ಗುಡ್ಡೆ ಕೀಟಲೆಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಐಸಿಯು: ಎಲ್ಲಿದೆ ಪಾರದರ್ಶಕತೆ?

ಐಸಿಯುನಲ್ಲಿ ಚಿಕಿತ್ಸೆಗೆ ಬೇಕಾದ ಅನುಮತಿ ಪತ್ರಕ್ಕೆ ಸಹಿ ಮಾಡಿಸಿಕೊಳ್ಳುವಾಗಿನ ಆಸಕ್ತಿ, ರೋಗಿಯ ಕಡೆಯವರಿಗೆ ಸ್ಪಷ್ಟ ಮಾಹಿತಿ ಕೊಡುವಾಗ ಇಲ್ಲದಿರುವುದು ಸೋಜಿಗದ ಸಂಗತಿ

• ಸದಾಶಿವ್ ಸೊರಟೂರು

ಮಗಳನ್ನು ಇತ್ತೀಚೆಗೆ ತೀವ್ರ ಅನಾರೋಗ್ಯದ ಕಾರಣ ರಾಜ್ಯದ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯೊಂದರ ಐಸಿಯುನಲ್ಲಿ ದಾಖಲಿಸಬೇಕಾಯಿತು. ಒಂದು ದಿನ ರಾತ್ರಿ ಒಂಬತ್ತರ ಸುಮಾರಿಗೆ ಪೈಪ್ ಮೂಲಕ ಹಾಕಲು (ಟ್ಯೂಬ್ ಫೀಡಿಂಗ್) ಎಳನೀರು ತಂದುಕೊಡುವಂತೆ ಕೇಳಿದರು. ಅಷ್ಟೊತ್ತಿನಲ್ಲಿ ಸಿಗುವುದೆಲ್ಲಿ? ಆದರೂ ಎಲ್ಲೆಲ್ಲೋ ಹುಡುಕಾಡಿ ತಂದುಕೊಟ್ಟೆ.

ಬೆಳಿಗ್ಗೆ ಸಂದರ್ಶನದ ಸಮಯದಲ್ಲಿ ಮಗುವನ್ನು ನೋಡಲು ಹೋದಾಗ ಅಚಾನಕ್ಕಾಗಿ ಆ ಎಳನೀರು ಡಬ್ಬಿಯ ಕಡೆ ಗಮನ ಹೋಯಿತು. ರಾತ್ರಿ ತಂದುಕೊಟ್ಟ ಎಳನೀರು ಅಲ್ಲೇ ಇತ್ತು. ಅಂದು ಸಂಜೆಯಾದರೂ ಹಾಗೇ ಇತ್ತು! ನರ್ಸ್ ಅವರನ್ನು ಜೋರು ಮಾಡಿ ಕೇಳಲು ಮಾತು ಬರಲಿಲ್ಲ. ಏಕೆಂದರೆ ನನ್ನ ಮಗಳು ಅವರ ಕೈಯಲ್ಲಿದ್ದಳು. ಇನ್ನೊಂದು ದಿನ ಅವರು ತರಿಸಿಕೊಂಡ ಗಂಜಿಯ ಕಥೆಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಹೆಚ್ಚಾಗಿ ನೋವಾದದ್ದು, ನಮ್ಮ ಪ್ರಾಣವನ್ನು ಅವರ ಕೈಯಲ್ಲಿಟ್ಟು ಅವರ ನಿರ್ಲಕ್ಷ್ಯವನ್ನು ನುಂಗಿಕೊಳ್ಳ ಬೇಕಾದ ಅಸಹಾಯಕತೆಗೆ.

ಇನ್ನೊಂದು ದಿನ ಸಂದರ್ಶನದ ಅವಧಿಯಲ್ಲಿ ಮಗಳನ್ನು ನೋಡಲು ಹೋದಾಗ, ಅವಳಿಗೆ ನೀಡಲಾದ ಔಷಧಿಗಳ ವಿವರ ಬರೆದಿಟ್ಟ ದಾಖಲೆಗಳತ್ತ ಕಣ್ಣು ಹಾಯಿಸುತ್ತಿದ್ದೆ. ಅದನ್ನು ಗಮನಿಸಿದ ಕಿರಿಯ ವೈದ್ಯರ ಸೂಚನೆಯಂತೆ ನರ್ಸ್ ಅದನ್ನು ಮುಚ್ಚಿ ಎತ್ತಿಟ್ಟುಕೊಂಡರು. ಈ ಪ್ರಕರಣವು ಆಸ್ಪತ್ರೆ ವ್ಯವಸ್ಥೆಯಲ್ಲಿ ರೋಗಿಯ ಕುಟುಂಬದವರಿಗೆ ಮಾಹಿತಿ ನೀಡುವಲ್ಲಿನ ಅಪಾರದರ್ಶಕತೆಯನ್ನು ಪ್ರಶ್ನಿಸುತ್ತದೆ.

ಬೆಳಿಗ್ಗೆಯಷ್ಟೇ ಭೇಟಿಗೆ ಬರುತ್ತಿದ್ದ ವೈದ್ಯರು ಒಂದು ನಿಮಿಷಕ್ಕಿಂತ ಹೆಚ್ಚು ಮಾತನಾಡುತ್ತಿರಲಿಲ್ಲ. ಅವರು ಇನ್ನೊಂದು ನಿಮಿಷ ಮಾತನಾಡಲು ಇನ್ನೂ ಹೆಚ್ಚು ಹಣ ಕೇಳಿದ್ದರೆ ಕೊಟ್ಟುಬಿಡುತ್ತಿದ್ದೆ. ಅದೊಂದು ತೀರಾ ಅಸಹಾಯಕ ಸ್ಥಿತಿ. ನಾವು ಅವರೊಡನೆ ಇನ್ನೊಂದು ನಿಮಿಷ ಮಾತನಾಡಬೇಕಾದರೂ ಮರುದಿನದವರೆಗೂ ಕಾಯಬೇಕು. ಇಡೀ ದಿನ ಎಂಥದ್ದೇ ಸಂದರ್ಭ ಇದ್ದರೂ ಅದು ಕಿರಿಯ ವೈದ್ಯರ ಹೆಗಲ ಮೇಲೆ.

ಐಸಿಯು ಒಂದು ಮುಚ್ಚಿಟ್ಟಿರುವ ವೈದ್ಯ ಜಗತ್ತು. ಅಲ್ಲೇನು ನಡೆಯುತ್ತದೆ ಎಂಬುದು ಅಷ್ಟು ಸುಲಭಕ್ಕೆ ತಿಳಿಯುವುದಿಲ್ಲ. ಅದನ್ನು ಡಿಸ್ಚಾರ್ಜ್ ಸಮರಿಯಲ್ಲಷ್ಟೇ ಓದಿಕೊಳ್ಳಬೇಕೇನೊ? ಆದರೆ, ಆ ದಾಖಲೆಗಳನ್ನು ಬರೆಯುವವರು ಆಸ್ಪತ್ರೆಯ ಸಿಬ್ಬಂದಿಯೇ ಆಗಿರುವುದರಿಂದ, ಅವು ಸಂಪೂರ್ಣವಾಗಿ ನಿಖರವಾಗಿ ಇರುತ್ತವೆಯೇ ಎಂಬ ಪ್ರಶ್ನೆ ಉಳಿಯುತ್ತದೆ. ಅದೊಂದು ಅಪರಿಚಿತ ಲೋಕ, ಅಲ್ಲಿ ನಾವು ಸುಮ್ಮನೆ ಒಪ್ಪಿಕೊಳ್ಳಬೇಕಷ್ಟೇ. ಚಿಕಿತ್ಸೆಗೆ ಬೇಕಾದ ಅನುಮತಿ ಪತ್ರಕ್ಕೆ ಸಹಿ ಮಾಡಿಸಿಕೊಳ್ಳುವಾಗಿನ ಆಸಕ್ತಿ, ರೋಗಿಯ ಕಡೆಯವರಿಗೆ ಸ್ಪಷ್ಟ ಮಾಹಿತಿ ಕೊಡುವಾಗ ಇರುವುದಿಲ್ಲ ಎಂಬುದು ನಿಜಕ್ಕೂ ಸೋಜಿಗದ ಸಂಗತಿ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್), ಆಸ್ಪತ್ರೆಗಳು ಮತ್ತು ಆರೋಗ್ಯಸೇವಾ ಪೂರೈಕೆದಾರರ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಎಬಿಎಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಐಸಿಯು ನಿರ್ವಹಣೆಗೆ ಸಂಬಂಧಿಸಿದಂತೆಸ್ಪಷ್ಟವಾದನಿಯಮಗಳನ್ನುರೂಪಿಸಿವೆ.ರೋಗಿಯ ಕುಟುಂಬಕ್ಕೆ ಪ್ರತಿದಿನ ಚಿಕಿತ್ಸೆಯ ವಿವರವಾದ ಮಾಹಿತಿಯನ್ನು ನೀಡಬೇಕು, ಒಬ್ಬ ರೋಗಿಗೆ ಒಬ್ಬ ನರ್ಸ್ ಇರಬೇಕು, ಅಗತ್ಯ ಸವಲತ್ತು, ಔಷಧಿಗಳಿರಬೇಕು, ರೋಗಿಯ ಕುಟುಂಬದವರೊಂದಿಗೆ ಆಪ್ತ ಸಮಾಲೋಚನೆ ನಡೆಸಬೇಕು ಎನ್ನುತ್ತವೆ.

ವೈದ್ಯರು ರೋಗಿಯ ಕಡೆಯವರಿಗೆ ಹೆಚ್ಚು ದುರ್ಲಭವಾಗುವುದು ತಮ್ಮ ವೃತ್ತಿಯ ಹೆಚ್ಚುಗಾರಿಕೆ ಎಂಬಂತೆ ಭಾವಿಸಿಕೊಂಡಂತಿದೆ. ನರ್ಸ್‌ಗಳು ಒಮ್ಮೊಮ್ಮೆ ರೋಗಿಗಳನ್ನು ಬರೀ ಮಾಂಸದ ಮುದ್ದೆಗಳಂತೆ ಕಾಣುವುದು ತುಂಬಾ ವಿಷಾದನೀಯ. ಸರ್ಕಾರಿ ಆಸ್ಪತ್ರೆಯಲ್ಲಿ ಅಗತ್ಯ ಸವಲತ್ತು, ವೈದ್ಯರು ಲಭ್ಯವಿಲ್ಲವೆಂದು ಜನ ಪೈಸೆ ಪೈಸೆ ಕೂಡಿಸಿಕೊಂಡು ಖಾಸಗಿ ಆಸ್ಪತ್ರೆಗಳ ಬಾಗಿಲು ಬಡಿಯುತ್ತಾರೆ. ಕೆಲವು ಖಾಸಗಿ ಆಸ್ಪತ್ರೆಗಳು ರೋಗಿಯ ಕಡೆಯವರ ಇಂತಹ ಭಯವನ್ನೇ ಬಂಡವಾಳ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತವೆ.

ಮಕ್ಕಳ ಐಸಿಯು ನಿಯಮಾವಳಿಗಳಲ್ಲಿ ಬಹಳಷ್ಟು ಸುಧಾರಣೆ ಆಗಬೇಕಿದೆ. ನನ್ನ ಮಗಳ ಪಕ್ಕದ ಹಾಸಿಗೆಯಲ್ಲಿದ್ದ ಮಗುವೊಂದು ಅದರ ತಾಯಿಗೆ ‘ನನ್ನನ್ನು ಕರೆದುಕೊಂಡು ಹೋಗು, ಇಲ್ಲದಿದ್ದರೆ ಸತ್ತೇ ಹೋಗುತ್ತೇನೆ’ ಎಂದು ಬೇಡಿಕೊಳ್ಳುತ್ತಿತ್ತು. ಮಗು ಮಾನಸಿಕವಾಗಿ ಗೆಲುವಾಗಿದ್ದರೆ, ಕಾಯಿಲೆಯೊಂದಿಗೆ ಬಡಿದಾಡಬಹುದು. ಪುಟ್ಟ ಮಕ್ಕಳನ್ನು ಬಿಗಿಯಾಗಿ ಬಂಧಿಸಿ ಔಷಧಿ ಸುರುವಿದ ತಕ್ಷಣ ಅವರು ಗುಣಮುಖರಾಗುವರೇ? ವೀಕ್ಷಣಾ ಅವಧಿಗಳನ್ನು ಹೆಚ್ಚಿಸಬೇಕು. ಪೋಷಕರು ಕಡ್ಡಾಯವಾಗಿ ಮಾಸ್ಕ್, ಗೌನ್ ಧರಿಸಿ ಆಗಾಗ್ಗೆ ತಮ್ಮ ಮಕ್ಕಳನ್ನು ಭೇಟಿಯಾಗಲು ಅವಕಾಶ ಮಾಡಿಕೊಡಬೇಕು. ತುರ್ತಿದ್ದಾಗ ಮಾತ್ರ ವೈದ್ಯರು ಐಸಿಯುಗೆ ಓಡಿಬರುವುದಲ್ಲ. ಒಬ್ಬ ನುರಿತ ವೈದ್ಯ ಸದಾ ಐಸಿಯುನಲ್ಲಿ ಇರುವಂತೆ ವ್ಯವಸ್ಥೆ ಮಾಡಬೇಕು. ಪ್ರತಿದಿನ ನಡೆಸಿದ ಪರೀಕ್ಷೆಗಳು, ನೀಡಲಾದ ಔಷಧಿ, ರೋಗದ ಸ್ಥಿತಿಗತಿಯ ಮಾಹಿತಿಯನ್ನು ರೋಗಿಯ ಕುಟುಂಬದವರಿಗೆ ಒದಗಿಸಬೇಕು. ರೋಗದ ಬಗ್ಗೆ, ಚಿಕಿತ್ಸೆಯ ಬಗ್ಗೆ ಬೇರೊಂದು ಕಡೆ ಎರಡನೇ ಅಭಿಪ್ರಾಯ ಪಡೆದುಕೊಳ್ಳಲು ಅದರಿಂದ ಸಹಾಯಕವಾಗುತ್ತದೆ. ಇದು ರೋಗಿಯ ಹಕ್ಕು.

ರೋಗಿಯನ್ನು ವ್ಯಾವಹಾರಿಕ ದೃಷ್ಟಿಕೋನದಿಂದ ನೋಡುವ ಈ ಕಾಲಘಟ್ಟದಲ್ಲಿ ಕೆಲವೇ ಕೆಲವು ಉತ್ತಮ ವೈದ್ಯರು ಮತ್ತು ಆಸ್ಪತ್ರೆಗಳಿಂದ ಕೆಲವು ಜೀವಗಳು ಸಾವನ್ನು ಗೆದ್ದು ಬರುತ್ತಿವೆ. ಅಂತಹ ವೈದ್ಯರ ಸಂತತಿ ಹೆಚ್ಚಾಗಲಿ. ಜೀವಗಳು ಉಳಿಯಲಿ.

ವಾಚಕರ ವಾಣಿ

ಹಿತೋಪದೇಶ: ರೇಜಿಗೆ ಹುಟ್ಟಿಸುವಂತಿದೆ

ಭಾರತ– ಪಾಕಿಸ್ತಾನದ ನಡುವೆ ಉದ್ವಿಗ್ನ ಪರಿಸ್ಥಿತಿ ಉಂಟಾಗಿರುವ ಸಂದರ್ಭದಲ್ಲಿ ಕೆಲವು ದೇಶಗಳ ನಾಯಕರು ನೀಡಿರುವ ಹಿತೋಪದೇಶ ರೇಜಿಗೆ ಹುಟ್ಟಿಸುವಂತಿದೆ. ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೋನಿಯೊ ಗುಟೆರಸ್ ಅವರು ಎರಡೂ ದೇಶಗಳು ಸಂಯಮ ಕಾಪಾಡುವಂತೆ ಕರೆ ಕೊಟ್ಟಿದ್ದಾರೆ! ರಷ್ಯಾ– ಉಕ್ರೇನ್ ಯುದ್ಧ ಶುರುವಾಗಿ ಮೂರು ವರ್ಷಗಳು ಕಳೆದರೂ ಈ ಮಹಾಶಯನಿಗೆ ಏನೂ ಮಾಡಲಾಗಲಿಲ್ಲ. ಉಕ್ರೇನ್ ಮೇಲೆ ಯುದ್ಧ ಸಾರಿ ಆ ದೇಶದ ಅವನತಿಗೆ ಕಾರಣವಾದ ರಷ್ಯಾ, ಮಾತುಕತೆ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳುವಂತೆ ಉಪದೇಶ ನೀಡಿದೆ.

ಅಮೆರಿಕವು ಭಯೋತ್ಪಾದನೆ ನಿರ್ಮೂಲನೆಯ ಹೆಸರಿನಲ್ಲಿ ಕೆಲವು ದೇಶಗಳಲ್ಲಿ ಇರುವ ಉಗ್ರರ ನೆಲೆಗಳ ಮೇಲೆ ಆಗಾಗ್ಗೆ ದಾಳಿ ನಡೆಸುತ್ತಲೇ ಇರುತ್ತದೆ. ಅಂತಹ ಅಮೆರಿಕ ಕೂಡ ಸಂಯಮ ಪಾಲಿಸುವಂತೆ ಕರೆ ಕೊಟ್ಟಿದೆ. ಇಸ್ರೇಲ್ ಅಂತೂ ಏಕಕಾಲದಲ್ಲಿ ಹಮಾಸ್, ಸಿರಿಯಾ, ಇರಾನ್ ಮುಂತಾದ ದೇಶಗಳ ವಿರುದ್ಧ ಸೆಣಸುತ್ತಲೇ ಇದೆ. ಉತ್ತರ ಕೊರಿಯಾದ ವಿನಾಶಕಾರಿ ಮಿಸೈಲ್ ಪರೀಕ್ಷೆಯ ಮೇಲೆ ಪ್ರತಿಬಂಧ ಹೇರಲು ವಿಶ್ವಸಂಸ್ಥೆಗೆ ಸಾಧ್ಯವಾಗಲಿಲ್ಲ. ಸಮಾಧಾನದ ಸಂಗತಿ ಎಂದರೆ ಭಾರತದ ಕಾರ್ಯಾಚರಣೆಗೆ ಇಸ್ರೇಲ್ ಸಂಪೂರ್ಣ ಬೆಂಬಲ ಘೋಷಿಸಿದೆ. ಉಳಿದವರೆಲ್ಲಾ ಆತ್ಮವಂಚನೆಯಲ್ಲಿ ತೊಡಗಿದ್ದಾರೆ.

ಗೋಸಾಡ ಕೃಷ್ಣ ಭಟ್, ಬೆಂಗಳೂರು

ಪ್ರಯೋಗಗಳ ಮೂದಲಿಕೆ ಬೇಡ

ವಿಜ್ಞಾನದ ಮುದ್ರೆ ಪಡೆಯುವ ತವಕದಲ್ಲಿ ಪುರಾತನ ಜ್ಞಾನವನ್ನು ಒರೆಗಲ್ಲಿಗೆ ಹಚ್ಚುವ ಯಾಗಗಳ ಕುರಿತು ನಾಗೇಶ ಹೆಗಡೆ ವಿವರಿಸಿದ್ದಾರೆ (ಪ್ರ.ವಾ., ಮೇ 8). ಅವರ ವಾದ ತಕ್ಕಮಟ್ಟಿಗೆ ಸರಿ. ಈ ಹಿಂದೆ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸದ್ದು ಮಾಡಿದ ಪರ್ಜನ್ಯ ಜಪ-ಹೋಮ ನೆನಪಿಗೆ ಬಂತು. ಆದರೆ ಸಂಶೋಧನಾತ್ಮಕ ಪ್ರಯತ್ನಗಳು ವಿಜ್ಞಾನದ ಅವಿಭಾಜ್ಯ ಅಂಗ. ಸತ್ಯದ ನಿಷ್ಕರ್ಷೆಯಾಗುವುದು ವೈಜ್ಞಾನಿಕ ತಳಹದಿಯ ಮೇಲೆ. ಅದಕ್ಕಾಗಿ, ಪ್ರಯೋಗಗಳನ್ನು ಮೂದಲಿಸುವುದು ಸರಿಯಲ್ಲ.

ಅನಿಲಕುಮಾರ ಮುಗಳಿ, ಧಾರವಾಡ

ದೇಶಕ್ಕಾಗಿ ಆಡಿದ ನಾಯಕನ ಅನಿರೀಕ್ಷಿತ ನಿರ್ಗಮನ

ಐಪಿಎಲ್ ಅಬ್ಬರದ ನಡುವೆ ರೋಹಿತ್ ಶರ್ಮಾ ಸದ್ದುಗದ್ದಲವಿಲ್ಲದೆ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಇದು ನೋವಿನ ಸಂಗತಿ. ಭಾರತಕ್ಕೆ ಕೆಲವು ಮಹತ್ವದ ಸರಣಿ ಗೆದ್ದುಕೊಟ್ಟ ನಾಯಕನ ಈ ರೀತಿಯ ನಿರ್ಗಮನವನ್ನು ಯಾರೂ ನಿರೀಕ್ಷಿಸಿರಲಿಲ್ಲ. ಹೌದು, ಅವರ ಬ್ಯಾಟ್ ಇತ್ತೀಚೆಗೆ ಕೆಂಪು ಬಾಲನ್ನು ಕಂಡರೆ ಇಷ್ಟಪಡುತ್ತಿರಲಿಲ್ಲ. ಅವರ ಮೈ ಮೇಲಿನ ಬಿಳಿ ಜೆರ್ಸಿಯು ದೂಳು ತಾಗುವಷ್ಟರಲ್ಲಿ ಮತ್ತೆ ಪೆವಿಲಿಯನ್‌ನಲ್ಲಿ ಇರುತ್ತಿತ್ತು. ಪದೇ ಪದೇ ಫಾರ್ಮ್ ಸಮಸ್ಯೆ, ದೇಹ ಸ್ಪಂದಿಸದಿರುವುದು ಅವರಿಗೆ ದುಬಾರಿಯಾಯಿತು.

ಶರ್ಮಾ ಅವರ ನಾಯಕತ್ವದಲ್ಲಿ ಭಾರತದ ತಂಡ ಅನೇಕ ಹೊಸತನಗಳನ್ನು ಕಂಡಿದೆ. ವೈಯಕ್ತಿಕ ದಾಖಲೆಗೆ ಆಡುವವರ ನಡುವೆ ಅವರು ದೇಶಕ್ಕಾಗಿ ಆಡಿದವರು. ಅದಕ್ಕಾದರೂ ವಿದಾಯದ ಪಂದ್ಯಕ್ಕೆ ಬಿಸಿಸಿಐ ಅವಕಾಶ ನೀಡಬೇಕಿತ್ತು.

ಮಣಿಕಂಠ ಪಾ ಹಿರೇಮಠ, ಬಾಗಲಕೋಟೆ

ಮಣಿಪುರ: ಶಾಂತಿಗೆ ಸಿಗಲಿ ಆದ್ಯತೆ

ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಜನಾಂಗೀಯ ಹಿಂಸಾಚಾರವು ಎರಡು ವರ್ಷ ಕಳೆದರೂ ಇನ್ನೂ ನಿಯಂತ್ರಣಕ್ಕೆ ಬಾರದಿರುವುದು ನಾಚಿಕೆಗೇಡಿನ ಸಂಗತಿ. ಮಾನವೀಯ ಮೌಲ್ಯಗಳನ್ನು ಪಸರಿಸಿದ ಮನುಷ್ಯ ಮತ್ತೆ ಪಶುಸ್ಥಿತಿಯತ್ತ ಸಾಗುತ್ತಿದ್ದಾನೆ. ಅನ್ನಮಯ ಕೋಶದಿಂದ ಆನಂದಮಯ ಕೋಶದ ಕಡೆ ಪಯಣಿಸಬೇಕಿರುವ ಮನುಷ್ಯ ಅವಿವೇಕತನದಿಂದ ಪಶುಸ್ಥಿತಿಯಲ್ಲಿಯೇ ಇದ್ದರೆ ಸಮಾಜ ಹೇಗೆ ಸುಧಾರಿಸುತ್ತದೆ? ಈ ಸಂಘರ್ಷದಲ್ಲಿ ಹಲವಾರು ಮಂದಿ ಮೃತಪಟ್ಟಿದ್ದಾರೆ. ಸಾವಿರಾರು ಮನೆಗಳು ಹಾಗೂ ನೂರಾರು ಧಾರ್ಮಿಕ ಸ್ಥಳಗಳು ಸಹ ಧ್ವಂಸಗೊಂಡಿವೆಯಂತೆ.

ಮುಖ್ಯಮಂತ್ರಿಯಾಗಿದ್ದ ಎನ್. ಬಿರೇನ್ ಸಿಂಗ್ ಅವರ ಕಾರ್ಯವೈಫಲ್ಯವನ್ನು ವಿಶ್ಲೇಷಕರು ಈ ಹಿಂದೆ ಎತ್ತಿತೋರಿಸಿದ್ದರು. ಈಗ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದೆ. ಆದರೂ ಹಿಂಸೆ ಪೂರ್ತಿ ನಿಂತಿಲ್ಲ. ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳದಿರುವುದೇ ಇದಕ್ಕೆ ಕಾರಣ. ರಾಜ್ಯದಲ್ಲಿ ಶಾಂತಿಯುತ ವಾತಾವರಣ ನೆಲೆಗೊಳ್ಳುವಂತೆ ಮಾಡುವುದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಆದ್ಯತೆಯಾಗಬೇಕು. ಜೊತೆಗೆ ಹಿಂಸೆಗೆ ಅಥವಾ ಹಲ್ಲೆಗೆ ಒಳಗಾದವರಿಗೆ ಸುರಕ್ಷಿತ ವಾಸಸ್ಥಾನ, ಜೀವನೋಪಾಯ ಮತ್ತು ಭದ್ರತೆಯನ್ನು ಒದಗಿಸಬೇಕು.

ಮಹೇಂದ್ರ ಟಿ.ಎಂ., ಶಂಕರಘಟ್ಟ

‘ಗಂಗೆ’ಯನ್ನು ಸ್ವಾಗತಿಸಬೇಕಿದೆ

ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾದ ಪ್ರದೇಶದಲ್ಲಿನ ಬಡಾವಣೆಯೊಂದರ ನಾಗರಿಕರು, ಹಣ ಪಾವತಿಸಿದರೂ ಕಾವೇರಿ ನೀರು ಬಾರದಿರುವುದರ ಕುರಿತು ವರದಿಯಾಗಿದೆ (ಪ್ರ.ವಾ., ಮೇ 8). ಕಾವೇರಿ ನದಿ ನೀರಿಗಾಗಿ ಜನ ಪರಿತಪಿಸುವ ಬದಲು, ಉಚಿತವಾಗಿ ದೊರೆಯುವ ಪರಿಶುದ್ಧ ಮಳೆನೀರಿನ ‘ಗಂಗೆ’ಯನ್ನು ಸ್ವಾಗತಿಸದಿರುವುದು ದುರದೃಷ್ಟಕರ. ಇದಕ್ಕೆ ಜನರಲ್ಲಿ ಜಲಸಾಕ್ಷರತೆ ಇಲ್ಲದಿರುವುದೇ ಕಾರಣ. ಮನೆಯ ತಾರಸಿ ಮೇಲೆ ಬೀಳುವ ಮಳೆನೀರನ್ನು ಶೋಧಿಸಿ ಸಂಗ್ರಹಿಸಿದರೆ ಕಾವೇರಿ ನದಿ ನೀರಿಗಾಗಿ ಕಾಯುವ ಅಗತ್ಯ ಬರುವುದಿಲ್ಲ. ಮಳೆನೀರಿನ ಸಂಗ್ರಹಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಿದ್ದರೂ ಅದು ಕಟ್ಟುನಿಟ್ಟಾಗಿ ಜಾರಿಗೆ ಬಾರದೇ ಇರುವುದಕ್ಕೆ ಅಧಿಕಾರಿಶಾಹಿ, ಗುತ್ತಿಗೆದಾರರ ‘ನೀರಿನ ಮಾಫಿಯಾ’ ಕಾರಣ ಇರಬಹುದು.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯುದ್ಧ ಪಾಕಿಸ್ತಾನಕ್ಕೆ ಇದೆಯೇ ಶಕ್ತಿ?

ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆಯು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಉಗ್ರರ ಒಂಬತ್ತು ನೆಲೆಗಳನ್ನು ನಾಶ ಪಡಿಸಲು 'ಸಿಂಧೂರ' ಕಾರ್ಯಾಚರಣೆ ನಡೆಸಿದ ನಂತರ ಪಾಕ್ ಭಾರತದೊಂದಿಗೆ ಸೇನಾ ಸಂಘರ್ಷಕ್ಕೆ ಇಳಿದಿದೆ. ಇದು ಅಣ್ವಸ್ತ್ರ ಸಾಮರ್ಥ್ಯ ಹೊಂದಿರುವ ಉಭಯ ರಾಷ್ಟ್ರಗಳ ನಡುವೆ ಯುದ್ಧದ ಕಾರ್ಮೋಡ ಕವಿಯುವಂತೆ ಮಾಡಿದೆ. ಆರ್ಥಿಕವಾಗಿ ಮತ್ತು ಸೇನಾ ಸಾಮರ್ಥ್ಯದಲ್ಲಿ ದುರ್ಬಲವಾಗಿರುವ ಪಾಕಿಸ್ತಾನವು ಭಾರತದೊಂದಿಗೆ ಪೂರ್ಣ ಪ್ರಮಾಣದ ಯುದ್ಧಕ್ಕೆ ಹೊರಡುವುದು ಅದಕ್ಕೆ ದುಬಾರಿಯಾದೀತು ಎಂದು ಹೇಳಲಾಗುತ್ತಿದೆ

ಪ್ರಜಾವಾಣಿ ವಾರ್ತೆ

ಭಾರತೀಯ ಸೇನೆ ಸಂಘಟಿಸಿದ್ದ 'ಆಪರೇಷನ್ ಸಿಂಧೂರ'ಕ್ಕೆ ಪ್ರತಿಯಾಗಿ ಪಾಕಿಸ್ತಾನ ಸೇನೆಯು ಜಮ್ಮು ಮತ್ತು ಕಾಶ್ಮೀರದ ಗಡಿಯಲ್ಲಿ ನಾಗರಿಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ. 16ಕ್ಕೂ ಹೆಚ್ಚು ನಾಗರಿಕರನ್ನು ಕೊಂದಿದೆ. ಭಾರತದ ಪ್ರಮುಖ ನಗರಗಳು, ಸೇನಾ ನೆಲೆಗಳ ಮೇಲೂ ಕ್ಷಿಪಣಿ, ಡ್ರೋನ್ ದಾಳಿಗಳನ್ನೂ ನಡೆಸಿದೆ. ಪಾಕ್ ಯತ್ನವನ್ನು ಭಾರತೀಯ ಸೇನೆಯು ತಡೆದಿದೆ. ಅಲ್ಲದೇ, ಅದರ ಸೇನಾ ಸ್ಥಳಗಳನ್ನು ಗುರಿಯಾಗಿಸಿಕೊಂಡು ಪ್ರತಿದಾಳಿಯನ್ನೂ ನಡೆಸಿದೆ. ಈಗಿನ ಬೆಳವಣಿಗೆಗಳನ್ನು ಗಮನಿಸಿದರೆ ಎರಡೂ ರಾಷ್ಟ್ರಗಳ ನಡುವೆ ಸೇನಾ ಸಂಘರ್ಷ ಇನ್ನೂ ಕೆಲವು ದಿನ ಮುಂದುವರಿಯಬಹುದು.

2019ರಲ್ಲಿ ಪುಲ್ವಾಮಾ ದಾಳಿಗೆ ಪ್ರತೀಕಾರವಾಗಿ ಭಾರತವು ಬಾಲಾಕೋಟ್ ಮೇಲೆ ನಿರ್ದಿಷ್ಟ ದಾಳಿ ಸಂಘಟಿಸಿದ್ದಾಗ, ಪಾಕಿಸ್ತಾನ ಈಗಿನಂತೆ ಪ್ರತಿಕ್ರಿಯಿಸಿರಲಿಲ್ಲ. ಪಾಕಿಸ್ತಾನದ ನೆಲದಲ್ಲಿ ಪತನಗೊಂಡಿದ್ದ ಭಾರತದ ಯುದ್ಧವಿಮಾನದ ಪೈಲಟ್ ಅಭಿನಂದನ್ ವರ್ತಮಾನ್ ಅವರನ್ನು ವಶಕ್ಕೆ ಪಡೆದಿದ್ದರೂ ನಂತರ ಭಾರತಕ್ಕೆ ಹಸ್ತಾಂತರಿಸಿತ್ತು. ಅಲ್ಲದೇ, ಭಾರತದ ಮೇಲೆ ದೊಡ್ಡ ಪ್ರಮಾಣದಲ್ಲಿ ಪ್ರತಿದಾಳಿ ನಡೆಸುವ ದುಸ್ಸಾಹಸಕ್ಕೆ ಕೈಹಾಕಿರಲಿಲ್ಲ. ಆದರೆ, ಈ ಬಾರಿ ಭಾರತವು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಉಗ್ರರ ನೆಲೆಗಳು ಮಾತ್ರವಲ್ಲದೇ, ಪಾಕಿಸ್ತಾನದ ನೆಲದಲ್ಲಿರುವ ಭಯೋತ್ಪಾದಕರ ನಾಲ್ಕು ನೆಲೆಗಳನ್ನೂ ಧ್ವಂಸಗೊಳಿಸಿದೆ. ಇದು ಪಾಕಿಸ್ತಾನಕ್ಕೆ ಜಾಗತಿಕ ಮಟ್ಟದಲ್ಲಿ ತೀವ್ರ ಮುಜುಗರ ಉಂಟು ಮಾಡಿದೆ. ಪಹಲ್ಗಾಮ್ ದಾಳಿಯ ನಂತರ ಭಾರತ ತೆಗೆದುಕೊಂಡಿದ್ದ ಸಿಂಧೂ ಜಲ ಒಪ್ಪಂದ ಅಮಾನತು, ಅಟ್ಟಾರಿ–ವಾಘಾ ಗಡಿ ಬಂದ್ ಸೇರಿದಂತೆ ಇತರ ರಾಜತಾಂತ್ರಿಕ ಕ್ರಮಗಳು ಕೂಡ ಪಾಕಿಸ್ತಾನವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದವು. ಭಾರತಕ್ಕೆ ತಕ್ಕ ಪ್ರತ್ಯುತ್ತರ ನೀಡುವುದಾಗಿ ಹೇಳುತ್ತಲೇ ಬಂದಿದ್ದ ಪಾಕಿಸ್ತಾನವು ಗಡಿ ನಿಯಂತ್ರಣ ರೇಖೆಯಲ್ಲಿ ನಿರಂತರವಾಗಿ ಕದನ ವಿರಾಮ ಉಲ್ಲಂಘಿಸುತ್ತಲೇ ಇತ್ತು. ಬುಧವಾರ ನಸುಕಿನಲ್ಲಿ ಭಾರತೀಯ ಸೇನೆ ಕೈಗೊಂಡ 'ಆಪರೇಷನ್ ಸಿಂಧೂರ'ದ ನಂತರ ಭಾರತದ ಮೇಲೆ ಪ್ರತಿದಾಳಿ ನಡೆಸಲೇಬೇಕಾದ ಒತ್ತಡ ಪಾಕಿಸ್ತಾನ ಸರ್ಕಾರದ ಮೇಲೆ ಬಿದ್ದಿದೆ.

ಸೇನಾಬಲ: ಭಾರತ ಮುಂದು

ಪಾಕಿಸ್ತಾನವು ಈವರೆಗೆ ಭಾರತದೊಂದಿಗೆ ಮೂರು ಬಾರಿ (1965, 1971, 1999) ಪೂರ್ಣ ಪ್ರಮಾಣದ ಯುದ್ಧ ನಡೆಸಿದೆ. ಮೂರರಲ್ಲೂ ಸೋಲು ಕಂಡಿದೆ. ಬಲಿಷ್ಠ ಸೇನೆಯನ್ನು ಹೊಂದಿರುವ ರಾಷ್ಟ್ರಗಳ ಪೈಕಿ ಮುಂಚೂಣಿಯಲ್ಲಿರುವ ಭಾರತಕ್ಕೆ ಸೇನಾ ಸಾಮರ್ಥ್ಯದಲ್ಲಿ ಪಾಕಿಸ್ತಾನವು ಯಾವತ್ತಿಗೂ ಸರಿಸಮಾನವಿಲ್ಲ. ಅಂಕಿ ಅಂಶಗಳೇ ಅದನ್ನು ಹೇಳುತ್ತವೆ.

ಗ್ಲೋಬಲ್‌ಫೈರ್‌ಪವರ್.ಕಾಂ ಇತ್ತೀಚೆಗೆ ಪ್ರಕಟಿಸಿರುವ ವರದಿಯ ಪ್ರಕಾರ, ಸೇನಾಬಲದಲ್ಲಿ ಭಾರತವು ನಾಲ್ಕನೇ ರ‍್ಯಾಂಕ್ ಗಳಿಸಿದೆ. ಪಾಕಿಸ್ತಾನದ್ದು 12ನೇ ರ‍್ಯಾಂಕ್. 145 ರಾಷ್ಟ್ರಗಳ ಸೇನಾ ಬಲವನ್ನು ಈ ವರದಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಮೊದಲ ಮೂರು ಸ್ಥಾನಗಳಲ್ಲಿ ಅಮೆರಿಕ, ಚೀನಾ ಮತ್ತು ರಷ್ಯಾಗಳಿವೆ.

'ಆಪರೇಷನ್ ಸಿಂಧೂರ'ವನ್ನು ಯಶಸ್ವಿಯಾಗಿ ಸಂಘಟಿಸಿರುವ ಭಾರತವು ಪಾಕಿಸ್ತಾನದ ಪ್ರತಿದಾಳಿಯನ್ನು ಎದುರಿಸಲು ಎಲ್ಲ ರೀತಿಯಿಂದಲೂ ಸನ್ನದ್ಧವಾಗಿದೆ. ಆರ್ಥಿಕವಾಗಿ ಕುಸಿದಿರುವ ಮತ್ತು ಸೇನಾ ಬಲದಲ್ಲೂ ದುರ್ಬಲವಾಗಿರುವ ಪಾಕಿಸ್ತಾನವು ಈ ಸಂದರ್ಭದಲ್ಲಿ ಪೂರ್ಣ ಪ್ರಮಾಣದ ಯುದ್ಧಕ್ಕೆ ಹೊರಡುವುದು ಅದಕ್ಕೆ ದುಬಾರಿಯಾಗಿ ಪರಿಣಮಿಸಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಹೀಗಾಗಿ ಅದೀಗ ಸೇನಾ ಸಂಘರ್ಷಕ್ಕೆ ಇಳಿದಿದೆ.

ಎರಡೂ ರಾಷ್ಟ್ರಗಳ ಸೇನೆಗಳು ದಾಳಿ–ಪ್ರತಿದಾಳಿಗೆ ಇಳಿದಿರುವುದರಿಂದ ಭಾರತ–ಪಾಕಿಸ್ತಾನ ಮಧ್ಯೆ ಮತ್ತೊಂದು ಯುದ್ಧದ ಕಾರ್ಮೋಡ ಕವಿದಿದೆ. ಈಗಿನ ಸೇನಾ ಸಂಘರ್ಷ ಪೂರ್ಣ ಪ್ರಮಾಣದ ಯುದ್ಧವಾಗಿ ಪರಿವರ್ತನೆಯಾಗುವ ಸಾಧ್ಯತೆ ಕಡಿಮೆ ಎಂದು ಹೇಳಲಾಗುತ್ತಿದೆ. ಉಗ್ರರು ಮತ್ತು ಭಯೋತ್ಪಾದನೆಯನ್ನು ಪೋಷಿಸುತ್ತಾ ಬಂದಿರುವ ಪಾಕಿಸ್ತಾನವು ಈಗ ಜಾಗತಿಕವಾಗಿ ಏಕಾಂಗಿಯಾಗಿದೆ. ಚೀನಾ, ಟರ್ಕಿ ಬಹಿರಂಗವಾಗಿ ಬೆಂಬಲ ಸೂಚಿಸಿರುವುದು ಬಿಟ್ಟರೆ ಬೇರೆ ರಾಷ್ಟ್ರಗಳು ಅದರ ಪರವಾಗಿ ಮಾತನಾಡಿಲ್ಲ. ಇದು ಒಂದು ಕಾರಣವಾದರೆ, ಅದರ ಆರ್ಥಿಕ ಪರಿಸ್ಥಿತಿ ಮತ್ತೊಂದು ಕಾರಣ. ಆರ್ಥಿಕವಾಗಿ ಪಾತಾಳಕ್ಕೆ ಕುಸಿದಿರುವ ಪಾಕಿಸ್ತಾನಕ್ಕೆ ಈಗ ಪೂರ್ಣ ಪ್ರಮಾಣದ ಯುದ್ಧ ಮಾಡುವ ಶಕ್ತಿ ಇಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ.

ಯುದ್ಧಕ್ಕೆ ದೊಡ್ಡ ಮಟ್ಟದ ವೆಚ್ಚ, ಶಸ್ತ್ರಾಸ್ತ್ರ ಖರೀದಿ ಮಾಡಬೇಕಾಗುತ್ತದೆ. ಆದರೆ, ಈಗಿನ ಪಾಕಿಸ್ತಾನಕ್ಕೆ ಆ ಸಾಮರ್ಥ್ಯವಿಲ್ಲ. ಒಂದು ವೇಳೆ ಸೇನಾ ಸಂಘರ್ಷ ದೀರ್ಘ ಅವಧಿಗೆ ಮುಂದುವರಿದಿದ್ದೇ ಆದರೆ, ಪಾಕಿಸ್ತಾನದ ಅರ್ಥವ್ಯವಸ್ಥೆ ಇನ್ನಷ್ಟು ಕುಸಿಯಲಿದ್ದು, ಅದರ ಅಭಿವೃದ್ಧಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಜಾಗತಿಕ ರೇಟಿಂಗ್ ಏಜೆನ್ಸಿ ಮೂಡೀಸ್ ಹೇಳಿದೆ.

₹6.8 ಲಕ್ಷ ಕೋಟಿ ಭಾರತದ ರಕ್ಷಣಾ ಬಜೆಟ್

₹2.5 ಲಕ್ಷ ಕೋಟಿ ಪಾಕಿಸ್ತಾನದ ರಕ್ಷಣಾ ಬಜೆಟ್

ಪ್ರಮುಖ ಕ್ಷಿಪಣಿಗಳು

ಭಾರತ

ದೂರಗಾಮಿ: ಅಗ್ನಿ–5 ಕ್ಷಿಪಣಿ (ಖಂಡಾಂತರ ಕ್ಷಿಪಣಿ–5,000 ಕಿ.ಮೀ ವ್ಯಾಪ್ತಿ)

ಮಧ್ಯಂತರ ಮತ್ತು ಮಧ್ಯಮ ವಾಪ್ತಿ ಕ್ಷಿಪಣಿ
ಅಗ್ನಿ–1, ಶೌರ್ಯ, ಅಗ್ನಿ–2, ಅಗ್ನಿ–3, ಅಗ್ನಿ–4, ಬ್ರಹ್ಮೋಸ್, ನಿರ್ಭಯ

ಕಡಿಮೆ ವ್ಯಾಪ್ತಿಯ ಕ್ಷಿಪಣಿ
ಪ್ರಹಾರ್, ಪೃಥ್ವಿ, ಪ್ರಳಯ

ಪಾಕಿಸ್ತಾನ

ಮಧ್ಯಂತರ ಮತ್ತು ಮಧ್ಯಮ ವಾಪ್ತಿ ಕ್ಷಿಪಣಿ
ರೋಡೊಂಗ್–1, ಘೋರಿ, ಶಾಹೀನ್–2, ಶಾಹೀನ್–3, ಅಬಾಬೀಲ್

ಕಡಿಮೆ ವ್ಯಾಪ್ತಿಯ ಕ್ಷಿಪಣಿ: ಅಬ್ದಲೀ, ಶಾಹೀನ್

ಸೇನಾ ಸಾಮರ್ಥ್ಯ

ಭಾರತ		ಪಾಕಿಸ್ತಾನ
ಸಿಬ್ಬಂದಿ (ಲಕ್ಷಗಳಲ್ಲಿ)		
14.56 ಸಕ್ರಿಯ		6.54 ಸಕ್ರಿಯ
11.55 ಮೀಸಲು		5.50 ಮೀಸಲು
25.27 ಅರೆ ಸೇನಾಪಡೆ		5 ಅರೆ ಸೇನಾಪಡೆ
ವಾಯುಪಡೆ		
2,229	ಒಟ್ಟು ವಿಮಾನಗಳು	1,399
513	ಯುದ್ಧ ವಿಮಾನಗಳು	328
270	ಸಾಗಣೆ ಉದ್ದೇಶದ ವಿಮಾನಗಳು	64
899	ಹೆಲಿಕಾಪ್ಟರ್‌ಗಳು	373
ಭೂ ಸೇನೆ		
4,201	ಯುದ್ಧಟ್ಯಾಂಕ್‌ಗಳು	2,627
1.49 ಲಕ್ಷ	ರಕ್ಷಾ ಕವಚದ ವಾಹನಗಳು	17,516
100	ಸ್ವಯಂಚಾಲಿತಫಿರಂಗಿಗಳು	662
3,975	ಫಿರಂಗಿಗಳು	2,629
264	ಮೊಬೈಲ್ ರಾಕೆಟ್ ಪ್ರಾಜೆಕ್ಟರ್‌ಗಳು	600
ನೌಕಾ ಪಡೆ		
293	ಯುದ್ಧನೌಕೆಗಳು	121
2	ಯುದ್ಧವಿಮಾನ ವಾಹಕಗಳು	0
18	ಜಲಾಂತರ್ಗಾಮಿ ನೌಕೆಗಳು	8
13	ವಿಧ್ವಂಸಕ ನೌಕೆ	0
14	ಫಿರಂಗಿ ಸಜ್ಜಿತ ನೌಕೆ	9
18	ಯುದ್ಧ ಹಾಯಿಹಡಗು	9
135	ಗಸ್ತು ನೌಕೆ	69
ಅಣ್ವಸ್ತ್ರ ಸಿಡಿತಲೆಗಳು		
180		170

ಪಾಕ್ ಆರ್ಥಿಕ ಪರಿಸ್ಥಿತಿ ಹೇಗಿದೆ?

ಭಾರತದಿಂದ ಬೇರ್ಪಟ್ಟು ಪ್ರತ್ಯೇಕ ರಾಷ್ಟ್ರವಾದಾಗಿನಿಂದಲೂ ಪಾಕಿಸ್ತಾನವು ರಾಜಕೀಯ ಅಸ್ಥಿರತೆಗೆ ಸಾಕ್ಷಿಯಾಗಿದೆ. ಹಲವು ದಶಕಗಳಿಂದ ಅಲ್ಲಿನ ಆಡಳಿತ ಹದಗೆಡುತ್ತಾ ಬಂದಿದೆ. ಆರ್ಥಿಕ ಶಿಸ್ತಿನ ಕೊರತೆಯೂ ದೇಶವನ್ನು ಬಾಧಿಸುತ್ತಿದ್ದು ಸರ್ಕಾರಗಳು ಮಿತಿಮೀರಿದ ಸಾಲ ಮಾಡುತ್ತಾ ಬಂದಿದ್ದವು. ಇವೆಲ್ಲದರ ಪರಿಣಾಮವಾಗಿ ಪಾಕಿಸ್ತಾನದ ಅರ್ಥವ್ಯವಸ್ಥೆ ಪಾತಾಳಕ್ಕೆ ಕುಸಿದಿದೆ. 2023ರಲ್ಲಿ ಅದು ಆರ್ಥಿಕವಾಗಿ ದಿವಾಳಿಯಾಗುವ ಹಂತಕ್ಕೂ ಬಂದಿತ್ತು. 2022–23ರಲ್ಲಿ ಅದರ ಆರ್ಥಿಕ ಬೆಳವಣಿಗೆ ದರ (ಜಿಡಿಪಿ) ಶೇ –0.2ಕ್ಕೆ ಕುಸಿದಿತ್ತು. ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ವಿಶ್ವ ಬ್ಯಾಂಕ್ ಮಧ್ಯಪ್ರವೇಶಿಸಿ ವಿಶೇಷ ಸಾಲ ಪ್ಯಾಕೇಜ್ ಘೋಷಿಸಿದ್ದರಿಂದ ಪಾಕಿಸ್ತಾನ ದಿವಾಳಿಯಾಗುವುದರಿಂದ ಬಚಾವಾಗಿತ್ತು. ಅದರ ವಿದೇಶಿ ವಿನಿಮಯ ಮೀಸಲು ಮೊತ್ತ 307 ಕೋಟಿ ಡಾಲರ್‌ಗೆ (ಭಾರತದ ಕರೆನ್ಸಿಯಲ್ಲಿ ₹26,209 ಕೋಟಿ) ಕುಸಿದಿತ್ತು. ಅಂದರೆ, ಒಂದು ತಿಂಗಳಲ್ಲಿ ಅದು ಮಾಡುವ ಆಮದಿನ ವೆಚ್ಚವನ್ನು ಭರಿಸುವಷ್ಟೂ ಮೀಸಲು ಅದರ ಬಳಿ ಇರಲಿಲ್ಲ.

ಆ ವರ್ಷ ಐಎಂಎಫ್ ಪಾಕಿಸ್ತಾನಕ್ಕೆ 300 ಕೋಟಿ ಡಾಲರ್ (₹25,611 ಕೋಟಿ) ಸಾಲ ನೀಡಿತ್ತು. 2024ರಲ್ಲಿ ಮತ್ತೆ 700 ಕೋಟಿ ಡಾಲರ್ (₹59,759 ಕೋಟಿ) ಮಂಜೂರು ಮಾಡಿದೆ. ಆ ನಂತರ ಪಾಕಿಸ್ತಾನದ ಆರ್ಥಿಕತೆ ಕೊಂಚ ಚೇತರಿಕೆ ಕಂಡಿದೆ. ಹಣದುಬ್ಬರ ಇಳಿಕೆಯಾಗಿದೆ. ವಿದೇಶಿ ವಿನಿಮಯ ಮೀಸಲು ಹೆಚ್ಚಾಗಿದೆ. ಸದ್ಯ ಅದು 1,500 ಡಾಲರ್‌ಗೆ (₹1.28 ಲಕ್ಷ ಕೋಟಿ) ಏರಿಕೆಯಾಗಿದೆ. ಹಾಗಿದ್ದರೂ, ಸಾಲವನ್ನು ಮರುಪಾವತಿ ಮಾಡಲು ಮತ್ತು ಆಮದು ವೆಚ್ಚವನ್ನು ಭರಿಸಲು ಇದು ಸಾಕಾಗದು ಎಂದು ಐಎಂಎಫ್ ಹೇಳಿದೆ.

ಇಂತಹ ಹೊತ್ತಿನಲ್ಲಿ ಭಾರತದೊಂದಿಗೆ ಸೇನಾ ಸಂಘರ್ಷಕ್ಕೆ ಇಳಿದರೆ ಪಾಕಿಸ್ತಾನದ ಆರ್ಥಿಕತೆಗೆ ಇನ್ನಷ್ಟು ಹೊಡೆತ ಬೀಳಲಿದೆ. ಆರ್ಥಿಕವಾಗಿ ಸದೃಢವಾಗಿರುವ ಭಾರತದ ಮೇಲೆ ಯುದ್ಧವು ಹೆಚ್ಚು ಪರಿಣಾಮ ಬೀರದು ಎಂದು ಮೂಡೀಸ್ ರೇಟಿಂಗ್ ಏಜೆನ್ಸಿ ಅಭಿಪ್ರಾಯಪಟ್ಟಿದೆ.

ಇದರ ನಡುವೆಯೇ, ಪಾಕಿಸ್ತಾನಕ್ಕೆ ಆರ್ಥಿಕ ನೆರವು ನೀಡುವ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗೆ ಭಾರತ ಮನವಿ ಮಾಡಿದೆ. ಈ ವರ್ಷ, ಹವಾಮಾನ ಬದಲಾವಣೆ ನಿಯಂತ್ರಣಕ್ಕಾಗಿ ಪಾಕಿಸ್ತಾನಕ್ಕೆ 130 ಕೋಟಿ ಡಾಲರ್ ಸಾಲವನ್ನು ನೀಡಲು ಐಎಂಎಫ್ ಮುಂದಾಗಿದ್ದು, ಈ ಬಗ್ಗೆ ಚರ್ಚಿಸಲು ಐಎಂಎಫ್ ಆಡಳಿತ ಮಂಡಳಿ ಶುಕ್ರವಾರ (ಮೇ 9) ಸಭೆ ಕರೆದಿದೆ. ಕಳೆದ ವರ್ಷ ಮಂಜೂರು ಮಾಡಿದ್ದ 700 ಕೋಟಿ ಸಾಲದಲ್ಲಿ ಇನ್ನೂ 100 ಕೋಟಿ ಡಾಲರ್ ಬರಬೇಕಿದೆ. ಭಾರತದ ವಿರುದ್ಧ ಸೇನಾ ಕಾರ್ಯಾಚರಣೆ ನಡೆಸುತ್ತಿರುವ ಪಾಕಿಸ್ತಾನಕ್ಕೆ ಸಾಲ ವಿಸ್ತರಿಸುವ ಬಗ್ಗೆ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂಬ ಕುತೂಹಲ ಮೂಡಿದೆ. ಒಂದು ವೇಳೆ ಸಾಲ ನೀಡಲು ನಿರಾಕರಿಸಿದರೆ ಪಾಕಿಸ್ತಾನಕ್ಕೆ ಆರ್ಥಿಕವಾಗಿ ಮತ್ತಷ್ಟು ಸವಾಲುಗಳು ಎದುರಾಗಲಿವೆ.



ಆಧಾರ: ಪಿಟಿಐ, ಐಎಂಎಫ್, ಗ್ಲೋಬಲ್‌ಫೈರ್‌ಪವರ್.ಕಾಂ, ಮಿಲಿಟರಿವಾಚ್ ಮ್ಯಾಗಜೀನ್

ರಾಷ್ಟ್ರೀಯ

'ಮಹಿಳೆ ಕೂಡದು ಎಂದರೆ ಅದು ಅಸಮ್ಮತಿ'

ಮುಂಬೈ (ಪಿಟಿಐ): ಸಂಭೋಗಕ್ಕೆ ಸಂಬಂಧಿಸಿದಂತೆ ಮಹಿಳೆಯು 'ಕೂಡದು' ಎಂದು ಅಸಮ್ಮತಿ ಸೂಚಿಸಿದರೆ ಅದನ್ನು ಹಾಗೆಯೇ ಪರಿಗಣಿಸಬೇಕು ಎಂದು ಹೇಳಿರುವ ಬಾಂಬೆ ಹೈಕೋರ್ಟ್, ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಮೂವರು ಅಪರಾಧಿಗಳ ವಿರುದ್ಧದ ಶಿಕ್ಷೆಯನ್ನು ಎತ್ತಿಹಿಡಿದಿದೆ.

ಮಹಿಳೆ 'ಕೂಡದು' ಎಂದು ಹೇಳಿದ ಮೇಲೆ, ಆಕೆಯ ಹಿಂದಿನ ಲೈಂಗಿಕ ಚಟುವಟಿಕೆಗಳನ್ನು ಆಧರಿಸಿ ಒಪ್ಪಿಗೆಯನ್ನು ಊಹಿಸಿಕೊಳ್ಳಲು ಅವಕಾಶವಿಲ್ಲ ಎಂದು ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ನಿತಿನ್ ಸೂರ್ಯವಂಶಿ ಮತ್ತು ಎಂ.ಡಬ್ಲ್ಯು. ಚಂದ್ವಾನಿ ಅವರ ಪೀಠವು ಈ ಕುರಿತು ಮೇ 6ರಂದು ತೀರ್ಪು ನೀಡಿದೆ.

'ಮಹಿಳೆಯ ಒಪ್ಪಿಗೆಯಿಲ್ಲದೆ ಲೈಂಗಿಕ ಕ್ರಿಯೆ ನಡೆಸಿದಾಗ ಅದು ಆಕೆಯ ದೇಹ, ಮನಸ್ಸು ಮತ್ತು ಖಾಸಗಿತನದ ಮೇಲಿನ ಹಲ್ಲೆ ಎಂದೇ ಪರಿಗಣಿಸಲಾಗುತ್ತದೆ' ಎಂದು ಕೋರ್ಟ್ ಹೇಳಿದೆ. ಅಲ್ಲದೆ, ಅತ್ಯಾಚಾರವು ನೈತಿಕ ಮತ್ತು ದೈಹಿಕವಾಗಿ ಘೋರ ಅಪರಾಧವಾಗಿದೆ ಎಂದು ಅದು ಉಲ್ಲೇಖಿಸಿದೆ.

ಶಿಕ್ಷೆ 20 ವರ್ಷಕ್ಕೆ ಇಳಿಕೆ: ಈ ಪ್ರಕರಣದಲ್ಲಿ ಮೂವರು ಅಪರಾಧಿಗಳ ವಿರುದ್ಧದ ಶಿಕ್ಷೆಯನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ. ಆದರೆ, ಅವರ ಶಿಕ್ಷೆಯನ್ನು ಜೀವಾವಧಿಯಿಂದ 20 ವರ್ಷಗಳ ಜೈಲು ಶಿಕ್ಷೆಗೆ ಇಳಿಸಿ ತೀರ್ಪು ನೀಡಿದೆ.

'ಮಹಿಳೆಯು ಆರಂಭದಲ್ಲಿ ತಮ್ಮ ಮೂವರಲ್ಲಿ ಒಬ್ಬರೊಂದಿಗೆ ಸಂಬಂಧ ಹೊಂದಿದ್ದರು. ಬಳಿಕ ಇನ್ನೊಬ್ಬ ಪುರುಷನೊಂದಿಗೆ ಲಿವ್–ಇನ್ ಸಂಬಂಧ ಬೆಳೆಸಿಕೊಂಡಿದ್ದರು' ಎಂದು ಈ ಅಪರಾಧಿಗಳು ತಮ್ಮ ಮೇಲ್ಮನವಿ ಅರ್ಜಿಯಲ್ಲಿ ಪ್ರತಿಪಾದಿಸಿದ್ದರು. ಆದರೆ, ಮಹಿಳೆಯ ನೈತಿಕತೆಯನ್ನು ಪ್ರಶ್ನಿಸಲು ಅಪರಾಧಿಗಳು ಮಾಡಿದ ಈ ಪ್ರಯತ್ನಕ್ಕೆ ಹೈಕೋರ್ಟ್ ಛೀಮಾರಿ ಹಾಕಿತು.

'ಮಹಿಳೆಯು ಪತಿಯಿಂದ ಬೇರ್ಪಟ್ಟ ಪತ್ನಿಯಾಗಿದ್ದರೂ, ವಿಚ್ಛೇದನ ಪಡೆಯದೆ ಇನ್ನೊಬ್ಬ ಪುರುಷನ ಜತೆ ವಾಸಿಸುತ್ತಿದ್ದರೂ, ಆಕೆಯ ಒಪ್ಪಿಗೆಯಿಲ್ಲದೆ ಯಾವುದೇ ವ್ಯಕ್ತಿಯು ಸಂಭೋಗಕ್ಕೆ ಒತ್ತಾಯಿಸುವಂತಿಲ್ಲ' ಎಂದು ಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಮಾಲೆಗಾಂವ್ ಸ್ಫೋಟ ಜುಲೈ 31ರಂದು ತೀರ್ಪು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಮಾಲೆಗಾಂವ್‌ನಲ್ಲಿ 2008ರಲ್ಲಿ ನಡೆದಿದ್ದ ಸ್ಫೋಟ ಪ್ರಕರಣದ ತೀರ್ಪನ್ನು ಎನ್‌ಐಎ ವಿಶೇಷ ಕೋರ್ಟ್ ಜುಲೈ 31ರಂದು ಪ್ರಕಟಿಸಲಿದೆ.

ಏಪ್ರಿಲ್ 19ರಂದು ಪ್ರಕರಣದ ವಿಚಾರಣೆ ಮುಗಿಸಿದ್ದ ಕೋರ್ಟ್, ಮೇ 8ರಂದು ಕೋರ್ಟ್‌ನಲ್ಲಿ ಹಾಜರಿರುವಂತೆ ಆರೋಪಿಗಳಿಗೆ ಸೂಚಿಸಿತ್ತು.

ನ್ಯಾಯಾಧೀಶರಾದ ಎ.ಕೆ. ಲಾಹೋಟಿ ಅವರು ಗುರುವಾರ, 'ಬೃಹತ್ ದಾಖಲೆಗಳಿದ್ದು, ತೀರ್ಪು ಪ್ರಕಟಿಸಲು ಹೆಚ್ಚಿನ ಸಮಯ ಬೇಕು. ಜುಲೈ 31ರಂದು ಎಲ್ಲ ಆರೋಪಿಗಳು ಹಾಜರಿರಬೇಕು' ಎಂದು ಆರೋಪಿಗಳಿಗೆ ತಿಳಿಸಿದರು. 2008ರ ಸೆ. 29ರಂದು ರಂಜಾನ್ ಮಾಸದಲ್ಲಿ ನವರಾತ್ರಿ ಆಚರಣೆಗೆ ಮುನ್ನಾದಿನ ಸ್ಫೋಟ ನಡೆದಿತ್ತು. 6 ಜನರು ಮೃತಪಟ್ಟು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

ಮುಂಬೈ ಭಯೋತ್ಪಾದಕರ ನಿಗ್ರಹ ಪಡೆ ಪ್ರಾಥಮಿಕ ತನಿಖೆ ನಡೆಸಿದ್ದು, ನಂತರ ತನಿಖೆಯ ಹೊಣೆಯನ್ನು ಎನ್‌ಐಎ ವಹಿಸಿಕೊಂಡಿತ್ತು.

ಬಿಜೆಪಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್, ಮಾಜಿ ಸೇನಾ ಅಧಿಕಾರಿ ಪ್ರಸಾದ್ ಪುರೋಹಿತ್ (ನಿವೃತ್ತ), ಮೇಜರ್ ರಮೇಶ್ ಉಪಾಧ್ಯಾಯ (ನಿವೃತ್ತ) ಸೇರಿ 7 ಆರೋಪಿಗಳ ಮೇಲೆ ಐಪಿಸಿ, ಯುಎಪಿಎ ಅನ್ವಯ ಆರೋಪ ಹೊರಿಸಲಾಗಿದೆ.

ಕೇರಳ ಮಹಿಳೆಯಲ್ಲಿ ನಿಫಾ ವೈರಸ್ ದೃಢ

ತಿರುವನಂತಪುರ (ಪಿಟಿಐ): ಕೇರಳದ ಮಲಪ್ಪುರಂ ಜಿಲ್ಲೆಯ 42 ವರ್ಷದ ಮಹಿಳೆಗೆ ನಿಫಾ ವೈರಸ್ ತಗುಲಿರುವುದು ದೃಢವಾಗಿದೆ. ಮಹಿಳೆಗೆ ಪೆರಿಂಥಲಮಣ್ಣ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ವೈರಸ್ ಹರಡದಂತೆ ಕ್ರಮ ಕೈಗೊಳ್ಳುವುದಾಗಿ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದರು. ಕಳೆದ ವರ್ಷ ನಿಫಾದಿಂದ ಮಲ್ಲಪ್ಪುರಂ ಜಿಲ್ಲೆಯ 14 ವರ್ಷದ ಬಾಲಕ 24ರ ಯುವಕ ಮೃತಪಟ್ಟಿದ್ದರು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮೇ 9, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ದ್ವಾದಶಿ ಗಂ. 14-57 ನಕ್ಷತ್ರ: ಹಸ್ತ ಗಂ. 24-09 ಯೋಗ: ವಜ್ರ ಗಂ. 26-58 ಕರಣ: ಬಾಲವ ಗಂ. 14-57, ಮೇಷ ಮಾಸದ 26 ನೇ ದಿನ.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-10 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ: 10 ಜುಲ್ಕಾಯದ್
ಅದೃಷ್ಟ ಸಂಖ್ಯೆ: 3, 5

ಮೇಷ: ಯಾವುದೇ ಬದಲಾವಣೆಯಾದರೂ ಅವು ಧನಾತ್ಮಕ ಫಲಿತಾಂಶಗಳನ್ನು ನೀಡುವುದಿಲ್ಲ. ಏನಕ್ಕೂ ಯೋಚಿಸಿ ನಿರ್ಧಾರಗಳನ್ನು ಕೈಗೊಳ್ಳಿ. ಅಲಂಕಾರಿಕ ವಸ್ತುಗಳ ಖರೀದಿಯಿಂದ ಸಂತೋಷವಾಗುವುದು.

ವೃಷಭ: ನಿರುದ್ಯೋಗಿಗಳಿಗೆ ಅನಿರೀಕ್ಷಿತ ಉದ್ಯೋಗ ಪ್ರಾಪ್ತಿ. ತಂಗಿಗಾಗಿ ಸಮಯ ಮತ್ತು ಹಣ ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಅನಿವಾರ್ಯದ ದೂರ ಸಂಚಾರವನ್ನು ರಾಹುಕಾಲದ ನಂತರ ಆರಂಭಿಸಿರಿ.

ಮಿಥುನ: ಕೆಲಸವನ್ನು ಸಂಪೂರ್ಣವಾಗಿ ಮುಗಿಸುವ ಪ್ರಯತ್ನ ನಡೆಸಿ. ಕಳೆದು ಹೋಗಿದ್ದ ಆದರೆ, ಮನಸ್ಸಿಗೆ ಹತ್ತಿರವಾದ ವಸ್ತುಗಳು ಶೀಘ್ರವೇ ಪತ್ತೆಯಾಗಿ ಕೈ ಸೇರುವುದು.

ಕರ್ಕಾಟಕ: ಗುರಿಯನ್ನು ಮುಟ್ಟುವತ್ತ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ಯೋಜನೆಗಳು ಆಲೋಚಿಸಿದ್ದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು. ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ.

ಸಿಂಹ: ಆಯ್ಕೆ ಮಾಡುವ ವಿಚಾರದಲ್ಲಿ ಮನಸ್ಸಿನ ಚಂಚಲ ಸ್ವಭಾವದಿಂದ ವಿಫಲರಾಗುವ ಸನ್ನಿವೇಶಗಳಿರುವುದು. ಮಗನಿಗೆ ಅವನಿಷ್ಟದಂತೆಯೇ ನೂತನ ಉದ್ಯೋಗ ದೊರೆಯಲಿದೆ. ಹಣದ ಅಡಚಣೆ ಇರುವುದಿಲ್ಲ.

ಕನ್ಯಾ: ಒಂಟಿತನ ಹೋಗಲಾಡಿಸಿಕೊಳ್ಳಲು ಕೃಷಿ ಕೆಲಸಗಳತ್ತ ಮನಸ್ಸು ಹರಿಸುವುದರಿಂದ ಶೀಘ್ರ ಸಮಾಧಾನ ಸಿಗಲಿದೆ. ಲೆಕ್ಕಾಚಾರವಿಲ್ಲದೇ ಖರ್ಚು ಮಾಡುವುದು, ವ್ಯವಹಾರದಲ್ಲಿ ಔದಾರ್ಯ ತೋರಿಸುವುದು ಸರಿಯಲ್ಲ.

ತುಲಾ: ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ಶೈಕ್ಷಣಿಕ ರಂಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗಲಿದೆ. ಹಿರಿಯರ ಭೇಟಿಯಿಂದ ಕುಟುಂಬದ ಬಗೆಗಿನ ಹಲವು ವಿಚಾರಗಳು ತಿಳಿಯಲಿವೆ.

ವೃಶ್ಚಿಕ: ಕಫ ಪ್ರಕೃತಿ ಹೊಂದಿದವರಿಗೆ ಶೀತ ತಲೆನೋವಿನಂಥ ಅನಾರೋಗ್ಯ ಎದುರಾಗಬಹುದು. ರಾಜಕೀಯ ವ್ಯಕ್ತಿಗಳಿಗೆ ಗೊಂದಲಗಳ ನಿವಾರಣೆಯಾಗಲಿದ್ದು, ಕಬ್ಬಿಣದ ಕಡಲೆಯಾಗುವುದು.

ಧನು: ಮಂಗಳ ಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತವೆ. ಗೃಹ ನಿರ್ಮಾಣದಂಥ ಕಾರ್ಯ ಕೈಗೊಂಡವರಿಗೆ ಮಾನಸಿಕ ಒತ್ತಡ ಹೆಚ್ಚುತ್ತದೆ. ಮನರಂಜನೆಗಾಗಿ ಅಲ್ಪ ಕಾಲ ಮೀಸಲಿಡಲು ಪ್ರಯತ್ನಿಸಿ.

ಮಕರ: ಅಧಿಕಾರಿಗಳು ಹೇಳಿದ್ದೇ ಒಂದು, ನೀವು ಮಾಡಿದ್ದೇ ಒಂದು ಅನ್ನುವಂತೆ ಆಗಬಹುದು. ನೌಕರವರ್ಗದವರಿಗೆ ಹೆಜ್ಜೆ ಹೆಜ್ಜೆಗೂ ವಿವೇಚನೆ ಅಗತ್ಯ. ಅಜೀರ್ಣದ ಸಮಸ್ಯೆ ಎದುರಾಗಲಿದೆ.

ಕುಂಭ: ಸಹಕಾರ ಬಯಸುವವರು ಎದುರಾದಾಗ ಅವರನ್ನು ಅಗೌರವಿಸಬೇಡಿ. ತಾತ್ಕಾಲಿಕ ವೃತ್ತಿಯವರಿಗೆ ಅಭಿವೃದ್ಧಿಯ ಸಂಕೇತ ಕಾಣುವುದು. ಸಾಂಸಾರಿಕ ಸಮಸ್ಯೆಗಳು ಮೌನದಿಂದ ನಿವಾರಣೆಯಾಗುವುದು.

ಮೀನ: ಕೊಂಚ ಎಚ್ಚರ ತಪ್ಪಿ ಕಾರ್ಯ ವಿಳಂಬವಾದರೂ ಅಪವಾದ ಕೇಳಬೇಕಾಗುತ್ತದೆ. ನೆಂಟರಿಷ್ಟರ ಸಲಹೆ ಸೂಚನೆಗಳನ್ನು ಆಲಿಸಿ, ಸನ್ಮಾರ್ಗದಲ್ಲಿ ನಡೆಯಿರಿ. ದೈವಬಲ ಒದಗಿಬಂದು ಅಭಿವೃದ್ಧಿಗೊಳ್ಳುವಿರಿ.

ಬಯಲ ಬದುಕು

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

191

ದಾರಿಯಲ್ಲಿ ಒಂದು ಸಸಿ ಬೆಳೆದಿತ್ತು. ಒಬ್ಬ ಮನುಷ್ಯ ಆ ಸಸಿಯನ್ನು ತುಳಿದು ಹೋದ. 15 ದಿನಗಳ ನಂತರ ಅದೇ ದಾರಿಯಲ್ಲಿ ವಾಪಸು ಬಂದ. ಯಾವ ಸಸಿಯನ್ನು ಆ ಮನುಷ್ಯ ತುಳಿದಿದ್ದನಲ್ಲ ಆ ಸಸಿ ಸ್ವಲ್ಪ ಎತ್ತರಕ್ಕೆ ಬೆಳೆದಿತ್ತು. ಒಂದು ಹೂವು ಬಂದಿತ್ತು. ಆ ಮನುಷ್ಯನನ್ನು ನೋಡಿ ಸಸಿ, 'ನನ್ನಲ್ಲಿ ಒಂದು ಹೂವು ಬೆಳೆದಿದೆ. ಅದನ್ನು ತೆಗೆದುಕೊಂಡು ಹೋಗಿ ನಿನ್ನ ಮನೆಯ ಜಗಲಿಯಲ್ಲಿ ಇಟ್ಟರೆ ನಿನ್ನ ಮನೆ ಸುಗಂಧಿತವಾಗುತ್ತದೆ' ಎಂದು ಹೇಳಿತು. ಆಗ ಭೂಮಿ ತಾಯಿ ಸಸಿಯನ್ನು ಉದ್ದೇಶಿಸಿ, 'ಮೊನ್ನೆಯಷ್ಟೇ ಈ ಮನುಷ್ಯ ನಿನ್ನ ತುಳಿದು ಹೋಗಿದ್ದಾನೆ. ಆದರೂ ಈಗ ನೀನು ಅವನಿಗೇ ಹೂವು ಕೊಡಲು ಮುಂದಾಗಿದ್ದೀಯಲ್ಲ' ಎಂದು ಕೇಳಿತು. ಅದಕ್ಕೆ ಸಸಿ, 'ಯಾರು ಬೆಳೆಯುತ್ತಾರೆ, ಅವರನ್ನೆಲ್ಲಾ ತುಳಿಯುವುದು ಮನುಷ್ಯರ ಹಳೆಯ ಚಾಳಿ' ಎಂದು ಹೇಳಿತು. 'ಅದು ಗೊತ್ತಿದ್ದೂ ತುಳಿದವರಿಗೇ ಯಾಕೆ ಹೂವು ಕೊಡುತ್ತಿದ್ದಿ' ಎಂದು ಭೂಮಿ ಮರು ಪ್ರಶ್ನೆ ಮಾಡಿತು. 'ತುಳಿದವರನ್ನೆಲ್ಲಾ ನನ್ನ ತಲೆಯಲ್ಲಿ ಇಟ್ಟುಕೊಂಡಿದ್ದರೆ ನನ್ನ ಹೃದಯದಲ್ಲಿ ಹೂವು ಅರಳಲು ಸಾಧ್ಯವಾಗುತ್ತಿರಲಿಲ್ಲ' ಎಂದು ಹೇಳಿತು ಸಸಿ. ಹಾಗೆಯೇ ಜೀವನದಲ್ಲಿ ಕೆಟ್ಟದ್ದನ್ನೆಲ್ಲಾ ಮರೆತು ಸುಂದರ ಬದುಕನ್ನು ಕಟ್ಟಿಕೊಳ್ಳಬೇಕು ಮನುಷ್ಯ. ಕೆಟ್ಟದ್ದರ ಮಧ್ಯದಲ್ಲಿಯೂ ಒಳ್ಳೆಯದನ್ನು ಮನುಷ್ಯ ಗುರುತಿಸಬೇಕು. ಸ್ವಚ್ಛ ಬದುಕಬೇಕು. ಸ್ವಸ್ಥ ಬದುಕೋದು. ಮಸ್ತ್ ಬದುಕೋದು. ಸುಸ್ತಾಗಿ ಬದುಕೋದಲ್ಲ. ಮೈ ಮತ್ತು ಮನಸ್ಸು ಎರಡೂ ಸ್ವಚ್ಛವಾಗಿರಬೇಕು. ಜೀವನದಲ್ಲಿ ಸ್ವಚ್ಛತೆಯನ್ನು ಕಲಿಯಬೇಕು.

'ಮಾಡುವ ನೀಡುವ ಭಕ್ತನ ಕಂಡೊಡೆ ನಿಧಿ ನಿಧಾನವ ಕಂಡಂತಾಯ್ತು' ಎಂದು ಬಸವಣ್ಣ ಹೇಳುತ್ತಾರೆ. ಮನುಷ್ಯ ದುಡಿಯಬೇಕು. ದುಡಿದಿದ್ದರಲ್ಲಿ ಸ್ವಲ್ಪವನ್ನಾದರೂ ಸಮಾಜಕ್ಕೆ ಖರ್ಚು ಮಾಡಬೇಕು. ಅಂತಹವರ ಹೃದಯದಲ್ಲಿ ದೇವರು ನೆಲಸುತ್ತಾನೆ. 'ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ಬಯಲ ಜೀವನ ಬಯಲ ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು ನಾ ನಿಮ್ಮ ಪೂಜಿಸಿ ಬಯಲಾದೆ ಗುಹೇಶ್ವರಾ' ಎಂದು ಅಲ್ಲಮಪ್ರಭುಗಳು ಹೇಳುತ್ತಾರೆ.

ಮನುಷ್ಯ ಒಂದು ತಿಳಕೋಬೇಕು. ಜೀವನ ಎಂದರೆ ಬಟಾ ಬಯಲು ಅಷ್ಟೆ. ತಾಯಿಯ ಗರ್ಭದಿಂದ ನಾವು ಬಂದಿದ್ದೇವೆ ಎನ್ನುತ್ತೇವೆ. ತಾಯಿಯ ಗರ್ಭಕ್ಕೆ ಬರುವ ಮೊದಲು ತಂದೆಯ ಹೊಟ್ಟೆಯಲ್ಲಿ ಇದ್ದೆವು. ತಂದೆಯ ಹೊಟ್ಟೆಗೆ ಬರುವುದಕ್ಕೆ ಅನ್ನ ಕಾರಣ. ಅನ್ನ ಎಲ್ಲಿಂದ ಬಂತು ಅಂದರೆ ಭೂಮಿಯಿಂದ. ಭೂಮಿ ಎಲ್ಲಿಂದ ಬಂತು ಅಂದರೆ ಬಯಲಿನಿಂದ. ಹೀಗೆ ಸಂಪೂರ್ಣ ನಮ್ಮ ಬದುಕು ಬಯಲಿನಿಂದಲೇ ಬಂದಿದ್ದು. ನಾವು ಬಂದಿದ್ದು ಬಯಲಿನಿಂದ ಮತ್ತು ಹೋಗುವುದೂ ಬಯಲಿಗೆ. ದೇಹ ಬಯಲು, ಮನಸ್ಸು ಬಯಲು. ಮೊದಲು ಇದ್ದಿದ್ದೂ ಬಯಲು, ನಾವು ಹೋದಮೇಲೆ ಉಳಿಯುವುದೂ ಬಯಲು. ಬದುಕು ಎನ್ನುವುದು ಕಲ್ಪನೆ ಅಷ್ಟೆ. ಮನಸ್ಸು ಎನ್ನುವುದು ಒಂದು ಆಕಾಶ. ಮನಸ್ಸಿನಲ್ಲಿ ಬರುವ ಆಲೋಚನೆಗಳು ಚಲಿಸುವ ಮೋಡಗಳು ಅಷ್ಟೆ. ಕಾಮ ಕ್ರೋಧ, ಮದ ಮತ್ಸರ, ಲೋಭ ಎಲ್ಲವೂ ಮೋಡಗಳಷ್ಟೆ. ಹುಟ್ಟುವಾಗ ಜಾತಿ ಇಲ್ಲ, ಸಾಯುವಾಗಲೂ ಜಾತಿ ಇಲ್ಲ. ಹುಟ್ಟು ಸಾವಿಗೆ ಇಲ್ಲದ ಜಾತಿ ಬದುಕಿಗೆ ಯಾಕೆ? ಜೀವನವನ್ನು ಜಾತಿ ಮೇಲೆ ಕಟ್ಟಬಾರದು. ನೀತಿ ಮೇಲೆ ಕಟ್ಟಬೇಕು.

ಪದಬಂಧ 6037

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸುದ್ದಿ ಸಂಗ್ರಹಕಾರ (4)
3.ಪದದಲ್ಲಿಯೇ ಪುಸ್ತಕದ ಸರ್ಗವನ್ನು ಹುಡುಕಿ! (4)
5.ಗುಟ್ಟು ಇಲ್ಲಿದೆ (3)
6.ಜಾಸ್ತಿ ದುಡ್ಡುಳ್ಳ ವ್ಯಕ್ತಿ (4)
8.ಭೂಗತವಾಗಿದ್ದ ದೆವ್ವ ತಿರುಗಿದಾಗ ಕಾಣಿಸಿಕೊಂಡಿತೇ? (2)
9.ಲೋಲುಪನ ಕುಂದು ಇಲ್ಲಿ ಕಂಡಿದೆ (2)
10.ಹಿಡಿತದಿಂದ ಖರ್ಚು ಮಾಡುವಿಕೆ (4)
12.ಧಾರಾಳ ಸ್ವಭಾವದವನು ಉರಿಯಲ್ಲಿದ್ದಾನಲ್ಲಾ! (3)
16.ಅತಿಯಾದ ಸಿಟ್ಟು (4)
17.ಹೂವಿನಲ್ಲಿನ ಸಿಹಿ ರಸ (4)

ಮೇಲಿಂದ ಕೆಳಕ್ಕೆ
1.ಬಾಗಿಲಿಗೆ ಸಿಕ್ಕಿಕೊಡಿರುವ ಲಾಂಗೂಲ (2)
2.ಜಂಗಮರಿಗೆ ಮಾಡುವ ಆರೋಗಣೆ (3)
3.ಪಣದಲ್ಲಿನ ಅಳತೆಯಿದು (4)
4 ದಡಿಯ ಹಿಡಿದಿರುವ ಬಿದಿರಿನ ಕೋಲು (2)
5.ಯುದ್ಧಭೂಮಿಯಿದು (4)
6.ಯೌವ್ವನ ಹೀಗೆ ಕಾಣಿಸುತ್ತಿದೆ (3)
7.ಈಕೆ ತೆಳ್ಳಗಿನ ಸೊಂಟದವಳು (4)
11.ನಿಷ್ಪ್ರಯೋಜಕ ಮಾತು (4)
13.ದಿಟ್ಟತನ ಇಲ್ಲಿ ಕಾಣುತ್ತಿದೆ (3)
14.ಅಂಕಣದಲ್ಲಿರುವ ಸಂಖ್ಯೆ ಕಾಣುತ್ತಿದೆಯೇ? (2)
15.ವಾದಕನ ಹತ್ತಿರ ನಡೆಸಿರುವ ಚರ್ಚೆ (2)



6036ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಳ್ಳೆದೆ 2.ಸಾರಜನಕ
4. ಸಾಕ್ಷಾತ್ಕಾರ 6.ವದಂತಿ
7.ತಮ 9.ದಿವಾನ
11.ತಲ 13.ನವಣೆ
14.ಕರವಾಲ 16.ಜಗಳಗಂಟಿ
17.ಹರಕೆ

ಮೇಲಿಂದ ಕೆಳಕ್ಕೆ:
1.ಅಹಿಂಸಾವ್ರತ
2.ಸಾಣೆ 3.ನವದಂಪತಿ
5.ರಶೀದಿ 8.ಮದುವಣಿಗ
10.ನರಕ 12.ಲವಲವಿಕೆ
15.ತುಟಿ

ಸುಡೊಕು 6421

			4		2		7	
3		6				2		5
	2			5			8	
8		5						1
			5	9	3		2	
7		2		6		5		4
				2		8		7
2		7					6	
			7		9	4		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6420 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಷೇರುಪೇಟೆ ವಹಿವಾಟು

411



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,414
ಇಂದಿನ ಅಂತ್ಯ	24,273
▼	140
ದಿನದ ಕನಿಷ್ಠ	24,150

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹540
12 ಕ್ಕೆ	₹72
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹205-540
ದ್ವಿತಳಿ (ಬಿ.ವಿ)	₹322-690

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹191
ಆರ್‌ಎಸ್‌ಎಸ್-5	₹186
ಗುಡ್ ಲಾಟ್	₹176

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹28050
ಎಸಿ	₹16100
ಆರ್‌ಪಿ	₹22000
ಆರ್‌ಸಿ	₹12280

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ		ಸಿದ್ದಾಪುರ		ಚಾಲಿ	34499-43719
ಹೊಸತು	25000-46000	ಬಿಳಿಗೋಟು	25899-32099	ಕೆಂಪುಗೋಟು	20869-23699
ಹಳತು	30000-50000	ಚಾಲಿ	35099-41009	ರಾಶಿ	41299-47989
ಪುತ್ತೂರು		ಕೋಕ	14619-26399	ಯಲ್ಲಾಪುರ	
ಕೋಕ	20000-30000	ಹಳೆಚಾಲಿ	37699-37699	ಅಪಿ	61600-65000
ಹೊಸತು	26000-46000	ಕೆಂಪುಗೋಟು	22599-27219	ಬಿಳಿಗೋಟು	13899-33900
ಶಿವಮೊಗ್ಗ		ರಾಶಿ	41099-47599	ಚಾಲಿ	34000-43777
ಬೆಟ್ಟೆ	51399-59099	ತಟ್ಟಿಬೆಟ್ಟೆ	28689-32699	ಕೋಕ	7699-19110
ಗೊರಬಲು	18161-33699	ಶಿರಸಿ		ಕೆಂಪುಗೋಟು	16899-26185
ರಾಶಿ	48099-56599	ಬೆಟ್ಟೆ	28299-45001	ರಾಶಿ	39409-59169
ಸರಕು	58129-96996	ಬಿಳಿಗೋಟು	19199-31808	ತಟ್ಟಿಬೆಟ್ಟೆ	28920-38199

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹17540-17540
ಪುತ್ತೂರು	₹12000-18000
ತಿಪಟೂರು	₹17000-18200

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಕಾಂತಮ್ಮ. ಅರ್
(ದಿ|| ಹೆಚ್.ಎಂ ಚಂದ್ರಶೇಖರಯ್ಯನವರ ಧರ್ಮಪತ್ನಿ)
ನಿವೃತ್ತ ಮುಖ್ಯ ಶಿಕ್ಷಕರು
ಜನನ: 05.06.1954 ಮರಣ: 01.05.2025
ಇವರು ದಿ.01.05.2025ರಂದು ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿ.11.05.2025 ಭಾನುವಾರ ಬೆಳಿಗ್ಗೆ 11.00ಘಂಟೆಗೆ, ಮೃತರ ಸ್ವಗ್ರಾಮ ಮೇಟಿಕುರ್ಕೆ, ಹಿರಿಯೂರು ತಾ||, ಚಿತ್ರದುರ್ಗ ಜಿಲ್ಲೆ. ಇಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು:
ಶ್ರೀಮತಿ ಲತಾ ಪದ್ಮನಾಭ, ಮಕ್ಕಳು, ಕುಟುಂಬವರ್ಗದವರು ಮತ್ತು ಬಂದು ಮಿತ್ರರು
Mob: 9900184653, 9538010606

ಚಿನ್ನದ ಬೆಲೆ ₹1,500 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ಧಾರಣೆಯು ಇಳಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1,500 ಇಳಿಕೆಯಾಗಿದ್ದು, ₹99,500 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ₹1,550 ಕಡಿಮೆಯಾಗಿದ್ದು, ₹98,800 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬುಧವಾರದ ವಹಿವಾಟಿನಲ್ಲಿ ಚಿನ್ನದ ಬೆಲೆಯು ₹1 ಲಕ್ಷದ ಗಡಿ ದಾಟಿತ್ತು.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಬ್ರಿಟನ್ ಜತೆಗೆ ವ್ಯಾಪಾರ ಒಪ್ಪಂದ ಕುರಿತು ಮಾತುಕತೆ ನಡೆಸುವುದಾಗಿ ಪ್ರಕಟಿಸಿದ್ದಾರೆ. ಇದು ಜಾಗತಿಕ ಮತ್ತು ದೇಶೀಯ ಮಾರುಕಟ್ಟೆಯಲ್ಲಿ ಹಳದಿ ಲೋಹದ ಬೆಲೆ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹740 ಇಳಿಕೆಯಾಗಿದ್ದು, ₹98,200 ಆಗಿದೆ.

ಷೇರುಪೇಟೆ ಮೇಲೂ ಪರಿಣಾಮ ಬೀರಿದ ಭಾರತ–ಪಾಕ್ ಸಂಘರ್ಷ

ಕುಸಿದ ಷೇರು ಸೂಚ್ಯಂಕಗಳು

ಮುಂಬೈ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಬಿಕ್ಕಟ್ಟು ದೇಶದ ಷೇರುಪೇಟೆ ಮೇಲೂ ಪರಿಣಾಮ ಬೀರಿದ್ದು, ಗುರುವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಬ್ಯಾಂಕಿಂಗ್, ಎಫ್‌ಎಂಸಿಜಿ ಮತ್ತು ಆಟೊ ಷೇರುಗಳ ಮಾರಾಟ ಹೆಚ್ಚಳವು ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು. ಇದರಿಂದ ಹೂಡಿಕೆದಾರರ ಸಂಪತ್ತು ₹5 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 411 ಅಂಶ ಇಳಿಕೆ ಕಂಡು, 80,334 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 759 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 140 ಅಂಶ ಇಳಿಕೆಯಾಗಿ 24,273 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 264 ಅಂಶ ಇಳಿಕೆ ಕಂಡಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಟರ್ನಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಮಾರುತಿ, ಬಜಾಜ್ ಫೈನಾನ್ಸ್, ಟಾಟಾ ಸ್ಟೀಲ್, ಭಾರ್ತಿ ಏರ್‌ಟೆಲ್, ಬಜಾಜ್ ಫಿನ್‌ಸರ್ವ್, ಏಷ್ಯನ್ ಪೇಂಟ್ಸ್, ಪವರ್ ಗ್ರಿಡ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರುಗಳ ಮೌಲ್ಯ ಇಳಿಕೆಯಾಗಿದೆ.

ಕೋಟಕ್ ಮಹೀಂದ್ರ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಟೈಟನ್, ಎಚ್‌ಸಿಎಲ್ ಟೆಕ್, ಟಾಟಾ ಮೋಟರ್ಸ್, ಇನ್ಫೊಸಿಸ್, ಟಿಸಿಎಸ್ ಷೇರಿನ ಮೌಲ್ಯ ಏರಿಕೆಯಾಗಿದೆ.

ಹೂಡಿಕೆದಾರರು ಲಾಭದ ಉದ್ದೇಶಕ್ಕಾಗಿ ಷೇರುಗಳ ಮಾರಾಟಕ್ಕೆ ಮುಂದಾಗಿದ್ದಾರೆ. ಅಲ್ಲದೆ, ಭಾರತ ಮತ್ತು ಪಾಕಿಸ್ತಾನದ ಗಡಿ ಭಾಗದಲ್ಲಿ ಉದ್ವಿಗ್ನ ಸ್ಥಿತಿ ತಲೆದೋರಿದೆ. ಇದು ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ರೂಪಾಯಿ ಮೌಲ್ಯ 81 ಪೈಸೆ ಇಳಿಕೆ

ಮುಂಬೈ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಬಿಕ್ಕಟ್ಟಿನಿಂದಾಗಿ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ತೀವ್ರವಾಗಿ ಕುಸಿತ ಕಂಡಿದೆ.

ಅಮೆರಿಕದ ಡಾಲರ್ ಎದುರು 81 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹85.58 ಆಗಿದೆ.

ಮತ್ತೊಂದೆಡೆ ಡಾಲರ್ ಸೂಚ್ಯಂಕ ಏರಿಕೆ ಕಂಡಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆಯಾಗಿದೆ. ಈ ಅಂಶಗಳು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಉಭಯ ದೇಶಗಳ ನಡುವಿನ ಬಿಕ್ಕಟ್ಟು ಮುಂದುವರಿದರೆ ರೂಪಾಯಿಯು ಮತ್ತಷ್ಟು ಒತ್ತಡಕ್ಕೆ ಸಿಲುಕುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಮತ್ತೆ ಪಾಕ್ ಷೇರುಪೇಟೆ ಪತನ

ಕರಾಚಿ (ಪಿಟಿಐ): ಸತತ ಎರಡನೇ ದಿನವಾದ ಗುರುವಾರವೂ ಪಾಕಿಸ್ತಾನದ ಪ್ರಮುಖ ಷೇರುಪೇಟೆಯಾದ ಕರಾಚಿ ಸ್ಟಾಕ್ ಎಕ್ಸ್‌ಚೇಂಜ್–100 ಸೂಚ್ಯಂಕ ಪತನ ಕಂಡಿದೆ.

6,948 ಅಂಶ ಕುಸಿತ (ಶೇ 6.32ರಷ್ಟು) ಕಂಡಿದ್ದು, 1,03,060 ಅಂಶಗಳಲ್ಲಿ ಸ್ಥಿರಗೊಂಡಿತು.

ಕರಾಚಿಯನ್ನು ಗುರಿಯಾಗಿಸಿಕೊಂಡು ಭಾರತೀಯ ಸೇನೆಯು ದಾಳಿ ನಡೆಸಬಹುದು ಎಂಬ ಭೀತಿ ಸೃಷ್ಟಿಯಾಗಿದೆ. ಈ ಬೆಳವಣಿಗೆಯು ಹೂಡಿಕೆದಾರರಲ್ಲಿ ತಳಮಳ ಸೃಷ್ಟಿಸಿದ್ದು, ಷೇರುಪೇಟೆಯ ಕುಸಿತಕ್ಕೆ ಕಾರಣವಾಗಿದೆ ಎಂದು ಅಲ್ಲಿನ ಹೂಡಿಕೆ ಸಲಹಾ ಸಂಸ್ಥೆಯಾದ ಎಕೆಡಿ ಸೆಕ್ಯುರಿಟೀಸ್‌ನ ಫಾತಿಮಾ ಬುಚಾ ತಿಳಿಸಿದ್ದಾರೆ.

‘ಆಪರೇಷನ್ ಸಿಂಧೂರ’ ಶೀರ್ಷಿಕೆಗೆ ಪೈಪೋಟಿ

ನವದೆಹಲಿ (ಪಿಟಿಐ): ಭಾರತೀಯ ಸಶಸ್ತ್ರ ಪಡೆಗಳು ಉಗ್ರರ ಶಿಬಿರಗಳ ಮೇಲೆ ನಡೆಸಿದ ಕಾರ್ಯಾಚರಣೆಗೆ ಇಟ್ಟಿರುವ ‘ಆಪರೇಷನ್ ಸಿಂಧೂರ’ ಹೆಸರಿನ ಟ್ರೇಡ್‌ಮಾರ್ಕ್ ಪಡೆಯಲು ಪೈಪೋಟಿ ಶುರುವಾಗಿದೆ.

ಕಾರ್ಯಾಚರಣೆ ಬಗ್ಗೆ ಸೇನಾ ಪಡೆಯ ಅಧಿಕಾರಿಗಳಿಂದ ಸುದ್ದಿಗೋಷ್ಠಿ ನಡೆದ ಕೆಲವೇ ಗಂಟೆಗಳಲ್ಲಿ ಕಂಟ್ರೋಲರ್ ಜನರಲ್ ಫಾರ್ ಪೇಟೆಂಟ್ಸ್, ಡಿಸೈನ್ಸ್ ಮತ್ತು ಟ್ರೇಡ್‌ಮಾರ್ಕ್ ಕಚೇರಿಗೆ ರಿಲಯನ್ಸ್ ಇಂಡಸ್ಟ್ರೀಸ್‌ನ ಘಟಕವಾದ ಜಿಯೊ ಸ್ಟುಡಿಯೋಸ್ ಸೇರಿ ನಾಲ್ಕು ಅರ್ಜಿಗಳು ಸಲ್ಲಿಕೆಯಾಗಿವೆ.

ವಾಯುಪಡೆಯ ನಿವೃತ್ತ ಅಧಿಕಾರಿ, ದೆಹಲಿ ಮೂಲದ ವಕೀಲ ಹಾಗೂ ಮುಂಬೈ ನಿವಾಸಿಯೊಬ್ಬರು ಅರ್ಜಿ ಸಲ್ಲಿಸಿದ್ದಾರೆ. ವಾಣಿಜ್ಯ ಉದ್ದೇಶಕ್ಕಾಗಿ ಈ ಶೀರ್ಷಿಕೆ ಬಳಕೆ ಮಾಡಿಕೊಳ್ಳುವುದು ಅವರ ಗುರಿಯಾಗಿದೆ.

ಶಿಕ್ಷಣ, ತರಬೇತಿ, ಸಿನಿಮಾ, ಮಾಧ್ಯಮ ಸೇವೆ, ಡಿಜಿಟಲ್ ಕಂಟೆಂಟ್ ಪ್ರಸಾರ ಮತ್ತು ಮುದ್ರಣ, ಸಂಸ್ಕೃತಿ ಮತ್ತು ಕ್ರೀಡಾ ಚಟುವಟಿಕೆ ವಿಷಯ ಒಳಗೊಂಡಿರುವ ಟ್ರೇಡ್‌ಮಾರ್ಕ್ ವರ್ಗ 41ರ ಅಡಿ ಅರ್ಜಿ ಸಲ್ಲಿಸಲಾಗಿದೆ.

ಇದರಡಿ ಅನುಮತಿ ದೊರೆತರೆ ಈ ಶೀರ್ಷಿಕೆಯನ್ನು ಒಟಿಟಿ, ಪ್ರೊಡಕ್ಷನ್ ಹೌಸ್, ಬ್ರಾಡ್‌ಕಾಸ್ಟ್, ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳಿಂದ ತಯಾರಿಸುವ ಸಿನಿಮಾ, ವೆಬ್ ಸರಣಿ ಅಥವಾ ಕಿರುಚಿತ್ರಗಳಿಗೆ ಶೀರ್ಷಿಕೆಯಾಗಿ ಬಳಸಬಹುದಾಗಿದೆ.

ಅರ್ಜಿ ಹಿಂಪಡೆದ ಜಿಯೊ ಸ್ಟುಡಿಯೋಸ್

ಕಂಪನಿಯ ಕಿರಿಯ ಅಧಿಕಾರಿಯೊಬ್ಬರು ಅನುಮತಿ ಇಲ್ಲದೆ ಮನರಂಜನೆ, ಮುದ್ರಣ ಮತ್ತು ಭಾಷಾ ತರಬೇತಿ ಉದ್ದೇಶಕ್ಕಾಗಿ ‘ಆಪರೇಷನ್ ಸಿಂಧೂರ’ ಶೀರ್ಷಿಕೆ ಬಳಕೆಗೆ ಅರ್ಜಿ ಸಲ್ಲಿಸಿದ್ದರು. ಅಜಾಗರೂಕತೆಯಿಂದ ಸಲ್ಲಿಸಿದ್ದ ಈ ಅರ್ಜಿಯನ್ನು ಹಿಂಪಡೆಯಲಾಗಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ತಿಳಿಸಿದೆ. ‘ಆಪರೇಷನ್ ಸಿಂಧೂರ’ವು ಭಾರತೀಯರ ಶೌರ್ಯದ ಸಂಕೇತವಾಗಿದೆ. ರಾಷ್ಟ್ರೀಯ ಪ್ರಜ್ಞೆಯ ಭಾಗವೂ ಆಗಿದೆ. ಹಾಗಾಗಿ, ಅದನ್ನು ವ್ಯಾಪಾರದ ಚಿಹ್ನೆಯಾಗಿ ಬಳಸುವ ಬಳಸುವ ಉದ್ದೇಶ ಹೊಂದಿಲ್ಲ ಎಂದು ಹೇಳಿದೆ.

ಸುದ್ದಿ 2 ನಿಮಿಷ

29ರಿಂದ ವಿಕಸಿತ ಕೃಷಿ ಸಂಕಲ್ಪ ಅಭಿಯಾನ: ಚೌಹಾಣ್

ನವದೆಹಲಿ (ಪಿಟಿಐ): ರೈತರಿಗೆ ಆಧುನಿಕ ತಂತ್ರಜ್ಞಾನ ಮತ್ತು ಹೊಸ ಬಿತ್ತನೆ ತಳಿಗಳ ಬಗ್ಗೆ ಅರಿವು ಮೂಡಿಸಲು ಕೇಂದ್ರ ಸರ್ಕಾರವು ಮೇ 29ರಿಂದ ಜೂನ್ 12ರ ವರೆಗೆ ದೇಶದಾದ್ಯಂತ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಹಮ್ಮಿಕೊಂಡಿದೆ.

15 ದಿನಗಳವರೆಗೆ ನಡೆಯುವ ಈ ಅಭಿಯಾನದಡಿ 1.5 ಕೋಟಿ ರೈತರಿಗೆ ಜಾಗೃತಿ ಮೂಡಿಸಲಾಗುತ್ತದೆ. ಆ ಮೂಲಕ ಮುಂಗಾರು ಅವಧಿಯಲ್ಲಿ ಉತ್ಪಾದನೆ ಹೆಚ್ಚಿಸುವ ಗುರಿ ಹೊಂದಲಾಗಿದೆ.

‘ಕೃಷಿ ವಿಜ್ಞಾನಿಗಳು, ಅಧಿಕಾರಿಗಳು, ಪ್ರಗತಿಪರ ರೈತರನ್ನು ಒಳಗೊಂಡ 2 ಸಾವಿರ ತಂಡಗಳ ಮೂಲಕ ಜಿಲ್ಲಾ ಮಟ್ಟದಲ್ಲಿ ಪ್ರತಿ ದಿನ ಮೂರು ಸಭೆ ನಡೆಸಲು ಉದ್ದೇಶಿಸಲಾಗಿದೆ. ನಿತ್ಯ 10ರಿಂದ 12 ಲಕ್ಷ ರೈತರಿಗೆ ಅರಿವು ಮೂಡಿಸಲಾಗುವುದು’ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಗುರುವಾರ ತಿಳಿಸಿದ್ದಾರೆ.

ಈ ತಂಡವು ಹವಾಮಾನಕ್ಕೆ ಹೊಂದಿಕೊಳ್ಳುವ ತಳಿಗಳು, ರಸಗೊಬ್ಬರದ ಲಭ್ಯತೆ, ಮುಂಗಾರು ಅಂದಾಜು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಲಿದೆ ಎಂದು ತಿಳಿಸಿದ್ದಾರೆ.

ನವೀನ ತಂತ್ರಜ್ಞಾನ ಮತ್ತು ಸಂಶೋಧನೆಯ ಪ್ರಯೋಜನವು ರೈತರಿಗೆ ಲಭ್ಯವಾಗಬೇಕು. ಕೃಷಿ ಉತ್ಪಾದನೆಯನ್ನು ಹೆಚ್ಚಿಸಬೇಕಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಈ ಅಭಿಯಾನ ನಡೆಯಲಿದೆ. ರೈತರೊಂದಿಗೆ ನೇರವಾಗಿ ಸಂವಹನ ನಡೆಸುವ ಮೂಲಕ ಶಿಕ್ಷಣ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಕಳಪೆ ಬಿತ್ತನೆ ಬೀಜಗಳ ಮಾರಾಟಕ್ಕೆ ಕಡಿವಾಣ ಹಾಕುವ ಮೂಲಕ ರೈತರ ಹಿತಕಾಯಲು ಬೀಜ ಕಾಯ್ದೆ 1966ಕ್ಕೆ ತಿದ್ದುಪಡಿ ತರಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಸಚಿವರು ಹೇಳಿದ್ದಾರೆ.

ದ್ವಿಪಥ ಹೆದ್ದಾರಿ ಚತುಷ್ಪಥವಾಗಿ ಅಭಿವೃದ್ಧಿ: ಸಚಿವ ಗಡ್ಕರಿ

ನವದೆಹಲಿ (ಪಿಟಿಐ): ‘ದೇಶದಲ್ಲಿ 30 ಸಾವಿರ ಕಿ.ಮೀ ದೂರದಷ್ಟು ದ್ವಿಪಥ ಹೆದ್ದಾರಿಗಳಿವೆ. ಇವುಗಳನ್ನು ₹10 ಲಕ್ಷ ಕೋಟಿ ವೆಚ್ಚದಡಿ ಚತುಷ್ಪಥವಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಗುರುವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಹೆದ್ದಾರಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಿದರೆ ದೇಶದ ಆರ್ಥಿಕತೆಯು ಸದೃಢಗೊಳ್ಳಲಿದೆ’ ಎಂದರು.

ನಿರ್ಮಾಣ, ನಿರ್ವಹಣೆ, ವರ್ಗಾವಣೆ (ಬಿಒಟಿ–ಟೋಲ್) ಮಾದರಿಯಡಿ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸಚಿವಾಲಯದಿಂದ ಈ ಮಾದರಿಯ ಪರಿಷ್ಕರಣೆ ಕಾರ್ಯವು ನಡೆಯುತ್ತಿದೆ ಎಂದರು.

15 ವರ್ಷದವರೆಗೆ ಸಚಿವಾಲಯವೇ ಟೋಲ್ ಸಂಗ್ರಹಿಸಲಿದೆ. ಬಂಡವಾಳ ಹೂಡಿಕೆ ಮಾಡಿದವರಿಗೆ ವಾರ್ಷಿಕ ಲೆಕ್ಕಾಚಾರದಲ್ಲಿ ಹಣ ಪಾವತಿಸಲು ಉದ್ದೇಶಿಸಲಾಗಿದೆ. ಆದರೆ, ಹೆದ್ದಾರಿಗಳ ನಿರ್ವಹಣೆ ಜವಾಬ್ದಾರಿಯು ಗುತ್ತಿಗೆದಾರರದ್ದೇ ಆಗಿರುತ್ತದೆ ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ,TVS, ಟಾಟಾಮೋಟಾರ್ಸ್, ಬ್ರಿಟಾನಿಯಾಗಳಿಗೆ SSLC, PUC, Degree, ITIನವರು. 18,000/- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ. 14,000-18,000. 8951315839, 7022770052

Marketing & Sales

REQUIRED AREA Sales Manager Location: Hubli, Shivamoga, Davanagere, Bellary, Tumkur, Mysore, Gulbarga, Hassan. Salary: 25,000 Rs per month + incentives. Experience: General Insurance sales. Contact: Richard 6366538671, prasun@letstransport.in

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Hassan

ಕಮರ್ಷಿಯಲ್ ನಾರ್ತ್ ಈಸ್ಟ್ ಕಾರ್ನರ್ KHB ಸೈಟ್ ಮಾರಾಟಕ್ಕೆ ಇದೆ, ಹೊಸ ಬಸ್ ನಿಲ್ದಾಣದ ಎದುರು ಹಾಸನ ಸಂಪರ್ಕಿಸಿ 6361444146

ಪ್ರವಾಸ

Travel

ಅಷ್ಟಜ್ಯೋತಿರ್ಲಿಂಗ ಯಾತ್ರೆ 12 ದಿನಗಳು ಚಾರ್‌ಧಾಮ್ ಯಾತ್ರೆ 14 ದಿನಗಳು. ಸಂಪರ್ಕಿಸಿ ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03 9448294477 9845311899

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಕೆನರಾ ಬ್ಯಾಂಕ್‌ಗೆ ₹5,070 ಕೋಟಿ ಲಾಭ

ಸತ್ಯನಾರಾಯಣ ರಾಜು

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹5,070 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹3,951 ಕೋಟಿ ಲಾಭ ಗಳಿಸಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 28ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಗುರುವಾರ ತಿಳಿಸಿದೆ.

ಸಾಲ ವಸೂಲಾತಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಬ್ಯಾಂಕ್‌ನಿಂದ ಹೂಡಿಕೆ ಹಾಗೂ ಬಾಹ್ಯ ಬ್ಯಾಂಕಿಂಗ್ ಸೇವೆಯ ವರಮಾನದಲ್ಲಿ ಏರಿಕೆಯಾಗಿದೆ. ಇದರಿಂದ ನಿವ್ವಳ ಲಾಭ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 11ರಷ್ಟು ಹೆಚ್ಚಳವಾಗಿದೆ. ಇದರ ಹೊರತಾಗಿಯೂ ಬಡ್ಡಿ ವರಮಾನದಲ್ಲಿ ಶೇ 1.44ರಷ್ಟು ಇಳಿಕೆಯಾಗಿದೆ. ಒಟ್ಟು ಬಡ್ಡಿ ವರಮಾನ ₹9,442 ಕೋಟಿ ಗಳಿಸಿದೆ.

ಬಡ್ಡಿಯೇತರ ವರಮಾನ ₹6,351 ಕೋಟಿ ಆಗಿದೆ. ಈ ವರಮಾನ ಸಂಗ್ರಹದಲ್ಲಿ ಒಟ್ಟಾರೆ ಶೇ 21.74ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 3.34ರಿಂದ ಶೇ 2.94ಕ್ಕೆ ತಗ್ಗಿದೆ.

‘2025–26ನೇ ಆರ್ಥಿಕ ವರ್ಷದಲ್ಲಿ ಸಾಲ ನೀಡಿಕೆಯಲ್ಲಿ ಶೇ 10ರಿಂದ ಶೇ 11ರಷ್ಟು ಬೆಳವಣಿಗೆ ಸಾಧಿಸುವ ಗುರಿ ಹೊಂದಲಾಗಿದೆ. ಠೇವಣಿ ಸಂಗ್ರಹದಲ್ಲಿ ಶೇ 9ರಷ್ಟಕ್ಕೂ ಹೆಚ್ಚು ಗುರಿ ಸಾಧಿಸಲಾಗುವುದು’ ಎಂದು ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ತಿಳಿಸಿದ್ದಾರೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ಲಾಭವನ್ನು (ಎನ್‌ಐಎಂ) ಶೇ 2.75ರಿಂದ ಶೇ 2.80ರ ನಡುವೆ ಕಾಯ್ದುಕೊಳ್ಳಲು ತೀರ್ಮಾನಿಸಲಾಗಿದೆ. ಜಿಎನ್‌ಪಿಎ ಅನ್ನು ಶೇ 2.50ಕ್ಕೆ ತಗ್ಗಿಸಲಾಗುವುದು ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸ್ಟಾರ್‌ಲಿಂಕ್‌ಗೆ ಪರವಾನಗಿ ಲಭ್ಯ

ನವದೆಹಲಿ (ಪಿಟಿಐ): ದೇಶದಲ್ಲಿ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆ ಆರಂಭಿಸಲು ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಗೆ ಕೇಂದ್ರ ದೂರಸಂಪರ್ಕ ಇಲಾಖೆಯು ಪರವಾನಗಿ ನೀಡಿದೆ.

ಈ ಕಂಪನಿಯು ಟವರ್‌ರಹಿತ ಅತಿವೇಗದ ಇಂಟರ್‌ನೆಟ್ ಸೇವೆ ಒದಗಿಸುವಲ್ಲಿ ಮುಂಚೂಣಿಯಲ್ಲಿದೆ. ಜಗತ್ತಿನಾದ್ಯಂತ 100ಕ್ಕೂ ಹೆಚ್ಚು ದೇಶಗಳಲ್ಲಿ ಸೇವೆ ಒದಗಿಸುತ್ತಿದೆ.

ದೇಶದ ದೂರಸಂಪರ್ಕ ಕಂಪನಿಗಳಾದ ರಿಲಯನ್ಸ್ ಜಿಯೊ ಮತ್ತು ಭಾರ್ತಿ ಏರ್‌ಟೆಲ್ ತನ್ನ ಗ್ರಾಹಕರಿಗೆ ಅತಿವೇಗದ ಇಂಟರ್‌ನೆಟ್ ಸೇವೆ ಒದಗಿಸಲು ಸ್ಟಾರ್‌ಲಿಂಕ್ ಜೊತೆಗೆ ಈಗಾಗಲೇ ಒಪ್ಪಂದಕ್ಕೆ ಸಹಿ ಹಾಕಿವೆ.

ಮಳೆ, ಚಂಡಮಾರುತದಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲೂ ಸ್ಟಾರ್‌ಲಿಂಕ್ ಇಂಟರ್‌ನೆಟ್ ಸೇವೆ ಒದಗಿಸಲಿದೆ. ಈ ಇಂಟರ್‌ನೆಟ್‌ನ ಸರಾಸರಿ ಡೌನ್‌ಲೋಡ್ ವೇಗವು 50ರಿಂದ 150 ಎಂಬಿಪಿಎಸ್ ಇದೆ ಎಂದು ಹೇಳಲಾಗಿದೆ.

ಸ್ಥಳೀಯ ನಿಯಮಗಳು ಮತ್ತು ಭದ್ರತಾ ಮಾನದಂಡಗಳನ್ನು ಪಾಲಿಸಬೇಕು ಎಂದು ಸ್ಟಾರ್‌ಲಿಂಕ್‌ಗೆ ಸರ್ಕಾರ ಸೂಚಿಸಿದೆ.

ಜೆರುಸಲೇಮ್: ವಿಶ್ವಸಂಸ್ಥೆಯ ಶಾಲೆ ಮುಚ್ಚಿಸಿದ ಇಸ್ರೇಲ್

ಜೆರುಸಲೇಂ(ಎಪಿ): ಪೂರ್ವ ಜೆರುಸಲೇಮ್‌ನಲ್ಲಿ ವಿಶ್ವಸಂಸ್ಥೆ ಸ್ಥಾಪಿಸಿರುವ ಆರು ಶಾಲೆಗಳನ್ನು ಇಸ್ರೇಲ್ ಶಾಶ್ವತವಾಗಿ ಮುಚ್ಚಿದೆ. ಇದರಿಂದಾಗಿ 800ಕ್ಕೂ ಹೆಚ್ಚು ವಿದ್ಯಾರ್ಥಿಗಳ ಶಿಕ್ಷಣವು ಅತಂತ್ರವಾಗಿದೆ.

ಪ್ಯಾಲೆಸ್ಟೀನ್ ನಿರಾಶ್ರಿತರಿಗಾಗಿ ವಿಶ್ವಸಂಸ್ಥೆಯ ಅಂಗ ಸಂಸ್ಥೆ (ಯುಎನ್‌ಆರ್‌ಡಬ್ಲ್ಯುಎ) ನಡೆಸುತ್ತಿರುವ ಆರು ಶಾಲೆಗಳನ್ನು 30 ದಿನಗಳಲ್ಲಿ ಮುಚ್ಚುವಂತೆ ಇಸ್ರೇಲ್ ನೀಡಿದ್ದ ಗಡುವು ಬುಧವಾರ ಅಂತ್ಯವಾಗಿದೆ. ವೆಸ್ಟ್‌ಬ್ಯಾಂಕ್‌ನಲ್ಲಿ ವಿಶ್ವಸಂಸ್ಥೆ ನಡೆಸುತ್ತಿರುವ ಶಾಲೆಗಳು ಮುಂದುವರಿಯಲಿವೆ.

ಮಕ್ಕಳ ಮೇಲಿನ ದಾಳಿ: ಜೆರುಸಲೇಮ್‌ನಲ್ಲಿ ತಾನು ಸ್ಥಾಪಿಸಿರುವ ಆರು ಶಾಲೆಗಳನ್ನು ಮುಚ್ಚುವ ಇಸ್ರೇಲ್ ನಿರ್ಧಾರಕ್ಕೆ ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

‘ಇಸ್ರೇಲ್‌ನ ಈ ಕ್ರಮ ಮಕ್ಕಳು ಹಾಗೂ ಶಿಕ್ಷಣ ವ್ಯವಸ್ಥೆ ಮೇಲಿನ ದಾಳಿ. ಈ ಕ್ರಮವು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ’ ಎಂದು ಯುಎನ್‌ಆರ್‌ಡಬ್ಲ್ಯುಎ ಮುಖ್ಯಸ್ಥ ಫಿಲಿಪ್ ಲಾಜರಿನಿ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಲಾಹೋರ್:ತೀರ್ಪು ಪ್ರಶ್ನಿಸಿ ಕೋರ್ಟ್‌ಗೆ ಉಗ್ರ ಹಫೀಜ್ ಅರ್ಜಿ

ಲಾಹೋರ್ (ಪಿಟಿಐ): ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಸೂತ್ರಧಾರಿ ಮತ್ತು ನಿಷೇಧಿತ ಜಮಾತ್–ಉದ್–ದಾವಾ (ಜೆಯುಡಿ) ಉಗ್ರ ಸಂಘಟನೆ ಮುಖ್ಯಸ್ಥ ಹಫೀಜ್ ಸಯೀದ್, ಭಯೋತ್ಪಾದಕ ಕೃತ್ಯಗಳಿಗೆ ಹಣಕಾಸು ನೆರವು ನೀಡಿದ ಪ್ರಕರಣಗಳಲ್ಲಿ ತನ್ನನ್ನು ತಪ್ಪಿತಸ್ಥ ಎಂದು ನೀಡಿರುವ ತೀರ್ಪು ಪ್ರಶ್ನಿಸಿ ಲಾಹೋರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾನೆ.

ಈ ಕುರಿತು ಸಯೀದ್ ಮತ್ತು ಜಮಾತ್–ಉದ್–ದಾವಾ ಸಂಘಟನೆಯ ಇತರ ಮುಖಂಡರು ಲಾಹೋರ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿ ವಿಚಾರಣೆಗೆ ಕೋರ್ಟ್ ಸಮ್ಮತಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸಿಂಧೂರ ಕಾರ್ಯಾಚರಣೆ ನಿಲ್ಲದು’

ಒಂದನೇ ಪುಟದಿಂದ...

ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ತಾಣಗಳ ಮೇಲೆ ನಡೆಸಿದ ಕಾರ್ಯಾಚರಣೆಯ ಉದ್ದೇಶ ಈಡೇರಿದೆ. ಇನ್ನಷ್ಟು ಸಂಘರ್ಷ ನಡೆಸಿ ಪರಿಸ್ಥಿತಿ ಉಲ್ಬಣಗೊಳಿಸಲು ಭಾರತ ಬಯಸುವುದಿಲ್ಲ. ಆದರೆ, ಅದೇ ಸಮಯದಲ್ಲಿ ಪಾಕಿಸ್ತಾನ ಯಾವುದೇ ದುಸ್ಸಾಹಸಕ್ಕೆ ಮುಂದಾದರೆ, ಭಾರತ ಸೂಕ್ತ ಪ್ರತ್ಯುತ್ತರ ನೀಡಲಿದೆ’ ಎಂದು ಸಿಂಗ್ ತಿಳಿಸಿದರು ಎಂಬುದಾಗಿ ಮೂಲಗಳು ಹೇಳಿವೆ.

ಸಾವು–ನೋವುಗಳು ಸೇರಿದಂತೆ ಕಾರ್ಯಾಚರಣೆಯ ವಿವಿಧ ವಿವರಗಳ ಬಗ್ಗೆ ನಾಯಕರು ಮಾಹಿತಿ ಕೇಳಿದರು. ಆಗ ಸಿಂಗ್, ‘ಕಾರ್ಯಾಚರಣೆ ಇನ್ನೂ ಮುಂದುವರಿದಿದೆ. ಈ ಹಂತದಲ್ಲಿ, ಸೇನೆಯ ಕಾರ್ಯಾಚರಣೆ ಕುರಿತ ಮಾಹಿತಿ ನೀಡಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದರು.

ಸರ್ಕಾರದ ಮಿಲಿಟರಿ ಕ್ರಮವನ್ನು ಸಂಪೂರ್ಣವಾಗಿ ಅನುಮೋದಿಸಿದ ಎಲ್ಲ ಪಕ್ಷಗಳ ನಾಯಕರು ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದರು. ರಾಷ್ಟ್ರೀಯ ಭದ್ರತೆಯ ವಿಷಯದಲ್ಲಿ ಸರ್ಕಾರದ ಕ್ರಮಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಕಾಂಗ್ರೆಸ್, ಎಐಎಂಐಎಂ, ತೃಣಮೂಲ ಕಾಂಗ್ರೆಸ್ ಮತ್ತು ಡಿಎಂಕೆ ಸೇರಿದಂತೆ ವಿವಿಧ ಪಕ್ಷಗಳ ನಾಯಕರು ವಾಗ್ದಾನ ನೀಡಿದರು. ರಾಷ್ಟ್ರೀಯ ಭದ್ರತೆ ಹಾಗೂ ಗಡಿ ಪ್ರದೇಶ ಸೇರಿದಂತೆ ವಿವಿಧ ಭಾಗಗಳಲ್ಲಿ ಭಾರತೀಯರ ಸುರಕ್ಷತೆ ಬಗ್ಗೆ ನಾಯಕರು ಕಳವಳ ವ್ಯಕ್ತಪಡಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಬಿಕ್ಕಟ್ಟಿನ ಸಮಯದಲ್ಲಿ ನಾವು ಸರ್ಕಾರದ ಜತೆಗೆ ಇದ್ದೇವೆ’ ಎಂದರು. ‘ಇದು ಸೂಕ್ಷ್ಮ ಸಮಯ. ದೇಶದ ಹಿತದೃಷ್ಟಿಯಿಂದ ವಿವರವಾದ ಪ್ರಶ್ನೆಗಳನ್ನು ಕೇಳಬಾರದು ಎಂದು ರಾಜನಾಥ್ ಮನವಿ ಮಾಡಿದರು’ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ‘ಪ್ರಸ್ತುತ ಸಮಸ್ಯೆಯ ಗಾಂಭೀರ್ಯವನ್ನು ಗಮನದಲ್ಲಿಟ್ಟುಕೊಂಡು ರಚನಾತ್ಮಕ ಮತ್ತು ಗಂಭೀರ ರೀತಿಯಲ್ಲಿ ಚರ್ಚೆ ನಡೆಸಲಾಯಿತು. ಆಪರೇಷನ್ ಸಿಂಧೂರ ಬಗ್ಗೆ ಎಲ್ಲ ನಾಯಕರಿಗೆ ರಕ್ಷಣಾ ಸಚಿವರು ಮಾಹಿತಿ ನೀಡಿದರು. ಪ್ರತಿಯೊಬ್ಬ ನಾಯಕರು ಜವಾಬ್ದಾರಿಯುತವಾಗಿ ಮತ್ತು ಪ್ರಬುದ್ಧತೆಯಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು’ ಎಂದರು.

‘ನಾವು ಸರ್ಕಾರಗಳನ್ನು ರಚಿಸುವುದಕ್ಕಾಗಿ ಮಾತ್ರ ರಾಜಕೀಯ ಮಾಡುವುದಿಲ್ಲ, ರಾಷ್ಟ್ರವನ್ನು ನಿರ್ಮಿಸುವುದಕ್ಕೂ ಸಹ ರಾಜಕೀಯ ಮಾಡುತ್ತೇವೆ’ ಎಂದು ಸಿಂಗ್ ಹೇಳಿದ್ದನ್ನು ರಿಜಿಜು ಉಲ್ಲೇಖಿಸಿದರು.

ಅಮಿತ್ ಶಾ, ಜೆ.ಪಿ. ನಡ್ಡಾ, ಎಸ್. ಜೈಶಂಕರ್, ನಿರ್ಮಲಾ ಸೀತಾರಾಮನ್ ಮತ್ತು ಕಿರಣ್ ರಿಜಿಜು (ಎಲ್ಲರೂ ಬಿಜೆಪಿ), ಚಿರಾಗ್ ಪಾಸ್ವಾನ್ (ಎಲ್‌ಜೆಪಿ-ಆರ್‌ವಿ), ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ (ಇಬ್ಬರೂ ಕಾಂಗ್ರೆಸ್), ಟಿ.ಆರ್. ಬಾಲು (ಡಿಎಂಕೆ), ಲಾವು ಕೃಷ್ಣ ದೇವರಾಯಲು (ಟಿಡಿಪಿ), ಸಂಜಯ್ ಝಾ (ಜೆಡಿಯು), ಜಾನ್ ಬ್ರಿಟ್ಟಾಸ್ (ಸಿಪಿಎಂ), ಅಸಾದುದ್ದೀನ್ ಓವೈಸಿ (ಎಐಎಂಐಎಂ), ಪಿ.ಸಿ. ಗುಪ್ತಾ (ಆರ್‌ಜೆಡಿ), ಪ್ರಫುಲ್ ಪಟೇಲ್ (ಎನ್‌ಸಿಪಿ), ಶ್ರೀಕಾಂತ್ ಶಿಂದೆ (ಶಿವಸೇನಾ), ಸಂಜಯ್ ರಾವತ್ (ಶಿವಸೇನಾ-ಯುಬಿಟಿ), ಸಂಜಯ್ ಸಿಂಗ್ (ಎಎಪಿ) ಮತ್ತು ಸುಪ್ರಿಯಾ ಸುಳೆ (ಎನ್‌ಸಿಪಿ-ಶರದ್ ಪವಾರ್ ಬಣ) ಸಭೆಯಲ್ಲಿ ಭಾಗವಹಿಸಿದ್ದರು.

ವಿಶೇಷ ಅಧಿವೇಶನಕ್ಕೆ ರಾಹುಲ್ ಆಗ್ರಹ

ಜಗತ್ತಿಗೆ ಸ್ಪಷ್ಟ ಸಂದೇಶ ಕಳುಹಿಸಲು ಈ ವಿಷಯದ ಬಗ್ಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕೆಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸರ್ಕಾರವನ್ನು ಒತ್ತಾಯಿಸಿದರು ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

‘ನೀವು ಮುಂದುವರಿಯಿರಿ ಮತ್ತು ನೀವು ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ನಾವು ನಿಮ್ಮೊಂದಿಗಿದ್ದೇವೆ ಮತ್ತು ಸೈನ್ಯದೊಂದಿಗೆ ನಿಲ್ಲುತ್ತೇವೆ’ ಎಂದು ಇಂಡಿಯಾ ಮೈತ್ರಿಕೂಟದ ಎಲ್ಲ ಪಕ್ಷಗಳ ನಾಯಕರು ಒಂದೇ ಧ್ವನಿಯಲ್ಲಿ ಹೇಳಿದರು’ ಎಂದರು.

‘ಪಾಕ್ ಪ್ರೇರಿತ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ನಾವೆಲ್ಲ ಒಗ್ಗಟ್ಟಾಗಿದ್ದೇವೆ. ನಾವು ಹೆಗಲಿಗೆ ಹೆಗಲು ಕೊಟ್ಟು ಹೋರಾಡಬೇಕು. ನಮ್ಮ ನಡುವೆ ಯಾವುದೇ ಭಿನ್ನಮತ ಇರಬಾರದು’ ಎಂದು ತೃಣಮೂಲ ಕಾಂಗ್ರೆಸ್‌ನ ಸುದೀಪ್ ಬಂಡೋಪಾಧ್ಯಾಯ ಹೇಳಿದರು.

> ಕಾರ್ಯಾಚರಣೆಯಿಂದ ಎಷ್ಟು ಮಂದಿ ಸತ್ತಿದ್ದಾರೆ ಎಂಬ ಬಗ್ಗೆ ನನ್ನ ಬಳಿ ಈಗ ಮಾಹಿತಿ ಇಲ್ಲ. ಕಾರ್ಯಾಚರಣೆ ನಡೆದು 36 ಗಂಟೆಗಳಷ್ಟೇ ನಡೆದಿದೆ. ಸೂಕ್ತ ಸಮಯದಲ್ಲಿ ಮಾಹಿತಿ ನೀಡಲಾಗುವುದು
>
> **ವಿಕ್ರಂ ಮಿಸ್ರಿ,**
> ವಿದೇಶಾಂಗ ಕಾರ್ಯದರ್ಶಿ
> (ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯೆ)

ಮೋದಿ ಗೈರು ಖರ್ಗೆ ಅಸಮಾಧಾನ

ಸರ್ವಪಕ್ಷ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಗೈರು ಹಾಜರಾಗಿದ್ದಕ್ಕೆ ಮಲ್ಲಿಕಾರ್ಜುನ ಖರ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಉಗ್ರರ ದಾಳಿಯ ಬಳಿಕ ನಡೆದ ಸರ್ವಪಕ್ಷ ಸಭೆಯಲ್ಲಿ ಮೋದಿ ಭಾಗಿಯಾಗಿರಲಿಲ್ಲ. ಮೋದಿ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ನಡೆಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿತ್ತು. ಆದರೆ, ರಾಜನಾಥ್ ಸಿಂಗ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಪಾಕಿಸ್ತಾನ ಸೇನೆ ನಡೆಸಿದ ಶೆಲ್ ದಾಳಿಯಿಂದ ಶ್ರೀನಗರದ ಸಲಾಮಾಬಾದ್ ಗ್ರಾಮದಲ್ಲಿ ಮನೆ ಹಾನಿಗೀಡಾಗಿದೆ ಎಎಫ್‌ಪಿ ಚಿತ್ರ

ಗಡಿಯಲ್ಲಿ ಸೇನಾ ಸಂಘರ್ಷ ತೀವ್ರ

ಒಂದನೇ ಪುಟದಿಂದ...

‘ಪಹಲ್ಗಾಮ್ ಭಯೋತ್ಪಾದಕ ದಾಳಿಯೊಂದಿಗೆ ಪರಿಸ್ಥಿತಿ ಉಲ್ಬಣಗೊಂಡ ಕಾರಣ, ಭಾರತವು ‘ಆಪರೇಷನ್ ಸಿಂಧೂರ’ ಮೂಲಕ ಅದಕ್ಕೆ ಪ್ರತಿಕ್ರಿಯಿಸಿತು. ನಮ್ಮದು ಕ್ರಿಯೆಗೆ ಪ್ರತಿಕ್ರಿಯೆ ಅಷ್ಟೆ. ಉದ್ವಿಗ್ನ ಶಮನಗೊಳಿಸುವ ಆಯ್ಕೆ ಪಾಕಿಸ್ತಾನದ ಕೈಯಲ್ಲಿದೆ’ ಎಂದು ತಿಳಿಸಿದರು.

‘ಪಾಕಿಸ್ತಾನವು ಜಾಗತಿಕ ಭಯೋತ್ಪಾದಕ ಕೇಂದ್ರವಾಗಿ ಪರಿವರ್ತನೆಗೊಂಡಿದೆ. ಜಗತ್ತಿನ ವಿವಿಧ ಕಡೆಗಳಲ್ಲಿ ನಡೆದ ಭಯೋತ್ಪಾದಕ ಕೃತ್ಯಗಳೇ ಇದಕ್ಕೆ ಸಾಕ್ಷಿ. ಪಾಕಿಸ್ತಾನವು ಉಗ್ರರ ಸುರಕ್ಷಿತ ಅಡಗುತಾಣವಾಗಿದೆ. ಭಾರತದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಪಾಕಿಸ್ತಾನವು ದಶಕಗಳಿಂದ ಪ್ರಚೋದನೆ ನೀಡುತ್ತಿದೆ’ ಎಂದು ಅವರು ದೂರಿದರು.

ಪ್ರಧಾನಿ ನೇತೃತ್ವದಲ್ಲಿ ಸಭೆ

ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಸಚಿವಾಲಯಗಳ ಕಾರ್ಯದರ್ಶಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿ ಅಗತ್ಯ ಸೇವೆಗಳಲ್ಲಿ ವ್ಯತ್ಯಯವಾಗದಂತೆ ಗರಿಷ್ಠ ಎಚ್ಚರಿಕೆ ವಹಿಸಬೇಕು ಸೂಚಿಸಿದರು.

ಸದ್ಯದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರಾಷ್ಟ್ರದ ಸನ್ನದ್ಧ ಸ್ಥಿತಿಯ ಕುರಿತು ಕೈಗೊಂಡ ಕ್ರಮಗಳ ಮಾಹಿತಿಯನ್ನೂ ಅವರು ಪಡೆದರು. ನಾಗರಿಕ ಸ್ವರಕ್ಷಣೆ ವ್ಯವಸ್ಥೆ ಬಲಪಡಿಸುವುದು, ಸುಳ್ಳು ಸುದ್ದಿಗಳು ಹರಡದಂತೆ ಜಾಗ್ರತೆ ವಹಿಸುವುದು, ರಾಜ್ಯ ಸರ್ಕಾರಗಳ ಜತೆ ಸಮನ್ವಯ ಸಾಧಿಸುವುದು ಸೇರಿದಂತೆ ಮಹತ್ವದ ವಿಷಯಗಳ ಕುರಿತು ಚರ್ಚೆ ನಡೆಸಿದರು ಎಂದು ಪ್ರಧಾನಿಯವರ ಕಚೇರಿ ಪ್ರಕಟಣೆ ತಿಳಿಸಿದೆ.

ಗಡಿ ಚೆಕ್‌ಪೋಸ್ಟ್‌ಗಳಲ್ಲಿ ‘ಬೀಟಿಂಗ್ ರಿಟ್ರೀಟ್’ ಸ್ಥಗಿತ

ನವದೆಹಲಿ (ಪಿಟಿಐ): ಭಾರತ–ಪಾಕಿಸ್ತಾನ ಗಡಿಯಲ್ಲಿರುವ ಪಂಜಾಬ್‌ನ 3 ಚೆಕ್‌ಪೋಸ್ಟ್‌ಗಳಲ್ಲಿ ಪ್ರತಿದಿನ ಸಂಜೆ ನಡೆಯುತ್ತಿದ್ದ ಕವಾಯತನ್ನು (ಬೀಟಿಂಗ್ ರಿಟ್ರೀಟ್) ಸ್ಥಗಿತಗೊಳಿಸಿರುವುದಾಗಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಗುರುವಾರ ತಿಳಿಸಿದೆ.

ಭಾರತ–ಪಾಕಿಸ್ತಾನದ ನಡುವಿನ ಪರಿಸ್ಥಿತಿ ವಿಷಮಗೊಂಡಿರುವ ಕಾರಣ ಸಾರ್ವಜನಿಕರ ಸುರಕ್ಷತಾ ಹಿತದೃಷ್ಟಿಯಿಂದ ಈ ಕ್ರಮ ಕೈಗೊಂಡಿರುವುದಾಗಿ ಬಿಎಸ್‌ಎಫ್ ಹೇಳಿದೆ. ಮುಂದಿನ ಆದೇಶದವರೆಗೂ ಸಾರ್ವಜನಿಕರಿಗೆ ಚೆಕ್‌ಪೋಸ್ಟ್‌ಗಳ ಪ್ರವೇಶ ನಿಷೇಧಿಸಲಾಗಿರುತ್ತದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಅಮೃತಸರದ ಅಟ್ಟಾರಿ–ವಾಘಾ ಗಡಿ, ಫಿರೋಜ್‌ಪುರದ ಹುಸೈನಿವಾಲಾ, ಫಾಜಿಲ್ಕಾ ಜಿಲ್ಲೆಯ ಸಡ್ಕಿ ಗಡಿ ಚೆಕ್‌ಪೋಸ್ಟ್‌ಗಳಲ್ಲಿ ಪ್ರತಿದಿನ ಸಂಜೆ ‘ಬೀಟಿಂಗ್ ರಿಟ್ರೀಟ್’ ನಡೆಯುತ್ತಿತ್ತು. ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಬೆನ್ನಲ್ಲೇ ರಿಟ್ರೀಟ್ ಸ್ಥಗಿತಗೊಳಿಸಿರುವುದು ಮಹತ್ವ ಪಡೆದಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಗುರಿಯಾಗಿಸಿ ವಾಗ್ದಾಳಿ ನಡೆಸಿದ ಪ್ರಕರಣ

ನಿಶಿಕಾಂತ ದುಬೆ ಕಿವಿ ಹಿಂಡಿದ ಕೋರ್ಟ್

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಅದರ ಮುಖ್ಯ ನ್ಯಾಯಮೂರ್ತಿಯನ್ನು (ಸಿಜೆಐ) ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದ್ದ ಸಂಸದ, ಬಿಜೆಪಿಯ ಮುಖಂಡ ನಿಶಿಕಾಂತ ದುಬೆ ಅವರನ್ನು ಕೋರ್ಟ್ ಖಂಡಿಸಿದೆ. ಅವರು ಆಡಿದ ಮಾತುಗಳು ತನ್ನ 'ಹೆಸರು ಕೆಡಿಸುವಂಥವು' ಎಂದು ಕೂಡ ಕೋರ್ಟ್ ಕಟುವಾಗಿ ಹೇಳಿದೆ.

'ನ್ಯಾಯಾಲಯಗಳು ಇಂತಹ ನಗೆಪಾಟಲಿನ ಮಾತುಗಳಿಂದಾಗಿ ಬಾಡಿ ಹೋಗುವುದಿಲ್ಲ, ನ್ಯಾಯಾಲಯಗಳು ಹೂವಿನಷ್ಟು ಮೃದುವೂ ಅಲ್ಲ' ಎಂದು ಸಿಜೆಐ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ವಕ್ಫ್ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಂಡಿದ್ದಕ್ಕಾಗಿ ದುಬೆ ಅವರು ಸುಪ್ರೀಂ ಕೋರ್ಟ್ ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದ್ದರು. 'ಸುಪ್ರೀಂ ಕೋರ್ಟ್ ದೇಶವನ್ನು ಅರಾಜಕ ಸ್ಥಿತಿಯತ್ತ ಒಯ್ಯುತ್ತಿದೆ' ಎಂದು ಅವರು ಆರೋಪಿಸಿದ್ದರು. 'ದೇಶದಲ್ಲಿನ ನಾಗರಿಕ ಸಮರಕ್ಕೆ ಸಿಜೆಐ ಸಂಜೀವ್ ಖನ್ನಾ ಅವರು ಹೊಣೆ' ಎಂದು ಅವರು ದೂರಿದ್ದರು.

ದುಬೆ ವಿರುದ್ಧ ನ್ಯಾಯಾಂಗ ನಿಂದನೆ ಕಾನೂನಿನ ಅಡಿ ಕ್ರಮ ಜರುಗಿಸಬೇಕು ಎಂಬ ಮನವಿ ಇರುವ ಅರ್ಜಿಯ ವಿಚಾರಣೆಯನ್ನು ಮೇ 5ರಂದು ನಡೆಸಿದ ಪೀಠವು, ಅರ್ಜಿಯನ್ನು ವಜಾಗೊಳಿಸಿದೆ ಯಾದರೂ ದುಬೆ ಅವರನ್ನು ಉದ್ದೇಶಿಸಿ ಖಾರವಾದ ಮಾತುಗಳನ್ನು ಆಡಿದೆ. ಕೋರ್ಟ್ ತೀರ್ಪಿನ ಪ್ರತಿಯು ಗುರುವಾರ ಲಭ್ಯವಾಗಿದೆ.

ದುಬೆ ಆಡಿರುವ ಮಾತುಗಳು ಸುಪ್ರೀಂ ಕೋರ್ಟ್‌ನ ಹೆಸರು ಕೆಡಿಸುವಂತೆ ಇವೆ, ಕೋರ್ಟ್‌ನ ಅಧಿಕಾರವನ್ನು ಕುಗ್ಗಿಸುವಂತೆ ಇವೆ ಎಂಬುದರಲ್ಲಿ ಅನುಮಾನವೇ ಇಲ್ಲ. ಮಾತುಗಳು ಬಹಳ ಬೇಜವಾಬ್ದಾರಿಯವು. ಸುಪ್ರೀಂ ಕೋರ್ಟ್ ಮತ್ತು ಈ ನ್ಯಾಯಾಲಯದ ನ್ಯಾಯಮೂರ್ತಿಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ, ಎಲ್ಲರ ಗಮನ ಸೆಳೆಯುವ ಅಭಿಲಾಷೆ ಹೊಂದಿರುವುದನ್ನು ಅದು ತೋರಿಸುತ್ತದೆ ಎಂದು ಪೀಠವು ಹೇಳಿದೆ.

ಜನಪ್ರತಿನಿಧಿ ಆಡಿರುವ ಮಾತುಗಳು ಸಾಂವಿಧಾನಿಕ ನ್ಯಾಯಾಲಯಗಳ ಪಾತ್ರದ ಬಗ್ಗೆ ಅವರಿಗೆ ಅರಿವಿಲ್ಲದಿರುವುದನ್ನು ತೋರಿಸುತ್ತಿವೆ ಎಂದು ಅದು ಹೇಳಿದೆ. 'ಸಾರ್ವಜನಿಕರು ನ್ಯಾಯಾಲಯಗಳ ಮೇಲೆ ಇರಿಸಿರುವ ವಿಶ್ವಾಸ ಮತ್ತು ನ್ಯಾಯಾಲಯಗಳ ವಿಶ್ವಾಸಾರ್ಹತೆಗೆ ಇಂತಹ ಅಸಂಬದ್ಧ ಮಾತುಗಳಿಂದಾಗಿ ಹಾನಿ ಆಗುತ್ತದೆ ಎಂಬುದಾಗಿ ನಾವು ಭಾವಿಸಿಲ್ಲ. ಆದರೆ ಆ ಮಾತುಗಳನ್ನು ಆಡಿದ್ದುದರ ಉದ್ದೇಶವು ಅದೇ ಆಗಿತ್ತು ಎಂಬುದರಲ್ಲಿ ಲವಲೇಶದ ಅನುಮಾನವೂ ಇಲ್ಲ' ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಆರ್‌ಟಿಐ ವ್ಯಾಪ್ತಿಗೆ ರಾಜಕೀಯ ಪಕ್ಷ: ವಿಚಾರಣೆ ಮುಂದಕ್ಕೆ

ದೇಶದ ಪ್ರಮುಖ ರಾಜಕೀಯ ಪಕ್ಷಗಳನ್ನು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ವ್ಯಾಪ್ತಿಗೆ ತರುವಂತೆ ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂದೂಡಿದೆ.

'ಈ ಅರ್ಜಿಗಳನ್ನು ಈಗ ವಿಚಾರಣೆಗೆ ಕೈಗೆತ್ತಿಕೊಳ್ಳುವುದಿಲ್ಲ. ಬಹುಶಃ ಮೇ 15ರಂದು ವಿಚಾರಣೆಗೆ ಬರಬಹುದು' ಎಂದು ಮುಖ್ಯ ನ್ಯಾಯಮೂರ್ತಿ ಖನ್ನಾ ಅವರು ಗುರುವಾರ ಹೇಳಿದ್ದಾರೆ. ಅವರು ತಮ್ಮ ಸ್ಥಾನದಿಂದ ಮೇ 13ರಂದು ನಿವೃತ್ತರಾಗಲಿದ್ದಾರೆ.

'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ಹಾಗೂ ವಕೀಲ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜೀವ್ ಕುಮಾರ್ ಅವರಿದ್ದ ಪೀಠವು ವಿಚಾರಣೆ ನಡೆಸಬೇಕಿತ್ತು.

ಅರ್ಜಿ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ, ಚುನಾವಣಾ ಆಯೋಗ ಹಾಗೂ ಕಾಂಗ್ರೆಸ್, ಬಿಜೆಪಿ ಸೇರಿ ಪ್ರಮುಖ 6 ರಾಜಕೀಯ ಪಕ್ಷಗಳಿಗೆ ಸುಪ್ರೀಂ ಕೋರ್ಟ್ ಫೆ. 14ರಂದು ಸೂಚಿಸಿತ್ತು.

ತಮ್ಮ ಅರ್ಜಿಯು ಕಳೆದ 10 ವರ್ಷಗಳಿಂದಲೂ ಇತ್ಯರ್ಥವಾಗದೆ ಉಳಿದಿದೆ ಎಂದು ಎಡಿಆರ್ ಪರ ವಕೀಲ ಪ್ರಶಾಂತ್ ಭೂಷಣ್ ಹೇಳಿದ್ದಾರೆ.

ನ್ಯಾಯಮೂರ್ತಿಗಳ ನೇಮಕ: ತ್ವರಿತ ತೀರ್ಮಾನಕ್ಕೆ ಸೂಚನೆ

ದೇಶದ ಹೈಕೋರ್ಟ್‌ಗಳಲ್ಲಿ ಏಳು ಲಕ್ಷ ಕ್ರಿಮಿನಲ್ ಮೇಲ್ಮನವಿಗಳ ವಿಚಾರಣೆ ಬಾಕಿ ಇದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ನ್ಯಾಯಮೂರ್ತಿಗಳ ಹುದ್ದೆ ಭರ್ತಿಗೆ ಶಿಫಾರಸು ಮಾಡಿರುವ ಹೆಸರುಗಳ ವಿಚಾರವಾಗಿ ತ್ವರಿತಗತಿಯಲ್ಲಿ ತೀರ್ಮಾನ ಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರಕ್ಕೆ ಗುರುವಾರ ಹೇಳಿದೆ.

ಅಲಹಾಬಾದ್ ಹೈಕೋರ್ಟ್‌ಗೆ 160 ನ್ಯಾಯಮೂರ್ತಿಗಳ ಹುದ್ದೆ ಮಂಜೂರಾಗಿದೆ. ಆದರೆ, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಮೂರ್ತಿಗಳ ಸಂಖ್ಯೆ 79 ಮಾತ್ರ. ಅಲ್ಲಿ ಅತ್ಯಧಿಕ ಸಂಖ್ಯೆಯ ಕ್ರಿಮಿನಲ್ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ವಲ್ ಭುಯಾನ್ ಅವರು ಇರುವ ವಿಭಾಗೀಯ ಪೀಠ ಹೇಳಿದೆ.

'ಕೇಂದ್ರ ಸರ್ಕಾರವು ಈ ವಿಚಾರದಲ್ಲಿ ಕ್ರಿಯಾಶೀಲ ಆಗಬೇಕಿದೆ. ಕೊಲಿಜಿಯಂ ಮಾಡಿದ ಶಿಫಾರಸುಗಳ ವಿಚಾರವಾಗಿ ತ್ವರಿತಗತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಿದೆ. ಬಾಕಿ ಇರುವ ಪ್ರಸ್ತಾವಗಳನ್ನು ಕೇಂದ್ರ ಸರ್ಕಾರವು ಬೇಗನೆ ವಿಲೇವಾರಿ ಮಾಡುತ್ತದೆ ಎಂದು ನಾವು ಆಶಿಸುತ್ತೇವೆ, ನಂಬಿದ್ದೇವೆ' ಎಂದು ಪೀಠವು ಹೇಳಿದೆ.

ಬಾಂಬೆ ಹೈಕೋರ್ಟ್‌ಗೆ ಮಂಜೂರಾಗಿರುವ ನ್ಯಾಯಮೂರ್ತಿಗಳ ಸಂಖ್ಯೆ 94. ಆದರೆ, ಅಲ್ಲಿ 66 ನ್ಯಾಯಮೂರ್ತಿಗಳು ಮಾತ್ರವೇ ಇದ್ದಾರೆ ಎಂದು ಅದು ತಿಳಿಸಿದೆ. ಕಲ್ಕತ್ತ ಹೈಕೋರ್ಟ್‌ನಲ್ಲಿ 44 ನ್ಯಾಯಮೂರ್ತಿಗಳು ಇದ್ದಾರೆ. ಆದರೆ ಅಲ್ಲಿಗೆ ಮಂಜೂರಾಗಿರುವ ನ್ಯಾಯಮೂರ್ತಿಗಳ ಹುದ್ದೆ 72 ಎಂದು ಪೀಠವು ವಿವರಿಸಿದೆ.

2023ರಲ್ಲಿ ಕಳುಹಿಸಿರುವ ನಾಲ್ಕು ಶಿಫಾರಸುಗಳು ಮತ್ತು 2024ರಲ್ಲಿ ಕಳುಹಿಸಿರುವ 13 ಶಿಫಾರಸುಗಳು ಕೇಂದ್ರ ಸರ್ಕಾರದ ಬಳಿ ಬಾಕಿ ಇವೆ.

ರಾಷ್ಟ್ರಪತಿ, ಪ್ರಧಾನಿಗೆ ಸಿಜೆಐ ಪತ್ರ

ನ್ಯಾ. ವರ್ಮಾ ನಿವಾಸದಲ್ಲಿ ಹಣ ಪತ್ತೆಯಾಗಿದ್ದ ಪ್ರಕರಣ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ನೋಟುಗಳ ಕಂತೆ ಪತ್ತೆಯಾದ ಪ್ರಕರಣದ ತನಿಖಾ ವರದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ಮೋದಿ ಅವರಿಗೆ ಸಿಜೆಐ ಸಂಜೀವ್ ಖನ್ನಾ ಕಳುಹಿಸಿದ್ದಾರೆ. ಇದರ ಜತೆಗೆ ವರ್ಮಾ ಅವರು ವರದಿ ಕುರಿತಂತೆ ನೀಡಿರುವ ಲಿಖಿತ ಪ್ರತಿಕ್ರಿಯೆಯನ್ನೂ ಸೇರಿಸಲಾಗಿದೆ ಎಂದು ಸುಪ್ರೀಂಕೋರ್ಟ್ ಗುರುವಾರ ತಿಳಿಸಿದೆ.

ಯಶವಂತ್ ವರ್ಮಾ

ನ್ಯಾಯಮೂರ್ತಿ ವರ್ಮಾ ಅವರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲು ವರದಿಯಲ್ಲಿ ಸೂಚಿಸಲಾಗಿದೆ ಎಂಬುದು ಬಹಿರಂಗಗೊಂಡಿಲ್ಲ. ಆದಾಗ್ಯೂ, ವರ್ಮಾ ಅವರನ್ನು ಪದಚ್ಯುತಿಗೊಳಿಸಲು ವರದಿ ಉಲ್ಲೇಖಿಸಿರಬಹುದು ಎಂದು ಕಾನೂನು ತಜ್ಞರು ವಿಶ್ಲೇಷಿಸಿದ್ದಾರೆ. ಜತೆಗೆ ವರ್ಮಾ ಅವರು ಸಲ್ಲಿಸಿದ ಪ್ರತಿಕ್ರಿಯೆಯಲ್ಲಿ ಏನಿದೆ ಎಂಬುದೂ ತಿಳಿದುಬಂದಿಲ್ಲ. ಆದರೆ, ಅವರ ಪ್ರತಿಕ್ರಿಯೆ ತೃಪ್ತಿಕರವಾಗಿಲ್ಲ ಎಂಬುದು ತಿಳಿದುಬಂದಿದೆ ಎನ್ನಲಾಗಿದೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್. ಸಂಧಾವಾಲಿಯಾ, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಅವರ ಸಮಿತಿ ಪ್ರಕರಣದ ಸಾಕ್ಷ್ಯ ಪರಿಶೀಲಿಸಿ, ಮೇ 4ರಂದು ತನಿಖಾ ವರದಿ ಸಲ್ಲಿಸಿತ್ತು. 50ಕ್ಕೂ ಅಧಿಕ ಮಂದಿಯ ಹೇಳಿಕೆ ಇದರಲ್ಲಿವೆ.

ವರ್ಮಾ ವಾಗ್ದಂಡನೆಗೆ ಸಿಜೆಐ ಶಿಫಾರಸು?

ನ್ಯಾಯಮೂರ್ತಿ ವರ್ಮಾ ಅವರನ್ನು ವಾಗ್ದಂಡನೆಗೆ ಗುರಿಪಡಿಸಲು ಕೇಂದ್ರ ಸರ್ಕಾರಕ್ಕೆ ಸಿಜೆಐ ಖನ್ನಾ ಶಿಫಾರಸು ಮಾಡಿರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಸಾಮಾನ್ಯವಾಗಿ ಹೈಕೋರ್ಟ್ ನ್ಯಾಯಮೂರ್ತಿಗಳ ಮೇಲಿನ ಯಾವುದೇ ಆರೋಪವನ್ನು ತನಿಖಾ ಸಮಿತಿ ದೃಢೀಕರಿಸಿದಲ್ಲಿ ಅದನ್ನು ಪರಿಶೀಲಿಸುವ ಸಿಜೆಐ, ಹೈಕೋರ್ಟ್ ನ್ಯಾಯಮೂರ್ತಿಗಳನ್ನು ರಾಜೀನಾಮೆ ನೀಡುವಂತೆ ಅಥವಾ ಸ್ವಯಂ ನಿವೃತ್ತಿ ಪಡೆಯುವಂತೆ ಕೇಳುತ್ತಾರೆ.

ನ್ಯಾಯಮೂರ್ತಿ ಒಪ್ಪದೇ ಇದ್ದಲ್ಲಿ ಮುಂದಿನ ಕ್ರಮಕ್ಕಾಗಿ ರಾಷ್ಟ್ರಪತಿ ಹಾಗೂ ಪ್ರಧಾನಿ ಅವರಿಗೆ ಮಾಹಿತಿ ನೀಡುತ್ತಾರೆ. ಇದೀಗ ರಾಷ್ಟ್ರಪತಿ ಮುರ್ಮು ಹಾಗೂ ಪ್ರಧಾನಿ ಮೋದಿ ಅವರಿಗೆ ಸಿಜೆಐ ಪತ್ರ ಬರೆದಿರುವ ಹಿನ್ನೆಲೆಯಲ್ಲಿ ವರ್ಮಾ ಅವರು ವಾಗ್ದಂಡನೆಗೆ ಗುರಿಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಹೆಲಿಕಾಪ್ಟರ್ ಪತನ: 6 ಮಂದಿ ಸಾವು

ಲಖನೌ: ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯಲ್ಲಿ ಗುರುವಾರ ಬೆಳಿಗ್ಗೆ ಹೆಲಿಕಾಪ್ಟರ್ ಪತನಗೊಂಡಿದ್ದು, ಪೈಲಟ್ ಸೇರಿದಂತೆ 6 ಮಂದಿ ಮೃತಪಟ್ಟಿದ್ದಾರೆ. ಈ ಕಾರಣದಿಂದಾಗಿ ಕೇದಾರನಾಥಕ್ಕೂ ಹೆಲಿಕಾಪ್ಟರ್ ಸೇವೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಡೆಹ್ರಾಡೂನ್ ಸಮೀಪವಿರುವ ಸಹಸ್ತ್ರಧಾರದ ಹರ್ಶಿಲ್ ಎಂಬ ಪ್ರೇಕ್ಷಣೀಯ ಸ್ಥಳಕ್ಕೆ ಹೆಲಿಕಾಪ್ಟರ್ ತೆರಳುತ್ತಿತ್ತು. ಮುಂಬೈನ ನಾಲ್ವರು, ಆಂಧ್ರಪ್ರದೇಶದ ಇಬ್ಬರು ಪ್ರವಾಸಿಗರು ಹಾಗೂ ಒಬ್ಬ ಪೈಲಟ್ ಕಾಪ್ಟರ್‌ನಲ್ಲಿದ್ದರು.

ಬೆಳಿಗ್ಗೆ 9 ಗಂಟೆ ವೇಳೆಗೆ ಹೆಲಿಕಾಪ್ಟರ್ ಗಂಗೋತ್ರಿ ರಾಷ್ಟ್ರೀಯ ಹೆದ್ದಾರಿ ಸಮೀಪಿಸುತ್ತಿದ್ದಂತೆಯೇ ಪತನಗೊಂಡಿದೆ. 7 ಮಂದಿಯ ಪೈಕಿ ಕೇವಲ ಒಬ್ಬರು ಬದುಕುಳಿದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಾರ್‌ಧಾಮ್ ಯಾತ್ರೆ ಕಾರಣಕ್ಕಾಗಿ ಭಾರಿ ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಉತ್ತರಾಖಂಡದ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಕೇದಾರನಾಥಕ್ಕೆ ತೆರಳುವ ಯಾತ್ರಾರ್ಥಿಗಳಿಗೆ ಫಟಾ, ಸಿರ್ಸಿ, ಗುಪ್ತಕಾಶಿಯಿಂದ ಹೆಲಿಕಾಪ್ಟರ್ ಸೇವೆ ಲಭ್ಯವಿತ್ತು.

ಮಳೆ ಅಬ್ಬರ

ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಗುರುವಾರ ಸುರಿದ ಭಾರಿ ಮಳೆಯ ನಡುವೆ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು
–ಪಿಟಿಐ ಚಿತ್ರ

ಬಾಹ್ಯಾಕಾಶ ತಂತ್ರಜ್ಞಾನ– ಉತ್ಪಾದನಾ ಪಾರ್ಕ್ ಸ್ಥಾಪನೆ

ರಾಜ್ಯ ಸರ್ಕಾರ – ಇನ್‌ಸ್ಪೇಸ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಹ್ಯಾಕಾಶ ತಂತ್ರಜ್ಞಾನಗಳ ಶ್ರೇಷ್ಠತಾ ಕೇಂದ್ರ ಮತ್ತು ಬಾಹ್ಯಾಕಾಶ ಉತ್ಪಾದನಾ ಪಾರ್ಕ್ ಸ್ಥಾಪಿಸಲು ರಾಜ್ಯ ಸರ್ಕಾರ ಮತ್ತು ಇನ್-ಸ್ಪೇಸ್ (ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಅಧಿಕಾರ ಕೇಂದ್ರ) ಎರಡು ಒಪ್ಪಂದಗಳಿಗೆ ಸಹಿ ಹಾಕಿವೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಇನ್-ಸ್ಪೇಸ್ ಅಧ್ಯಕ್ಷ ಪವನ್ ಗೋಯೆಂಕಾ ಅವರ ಸಮ್ಮುಖದಲ್ಲಿ ಎಲೆಕ್ಟ್ರಾನಿಕ್ಸ್, ಐಟಿ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್ ಮತ್ತು ಇನ್-ಸ್ಪೇಸ್ ಜಂಟಿ ಕಾರ್ಯದರ್ಶಿ ಲೋಚನ್ ಸೆಹ್ರಾ ಈ ಒಪ್ಪಂದಗಳಿಗೆ ಸಹಿ ಹಾಕಿದರು.

ಈ ಕುರಿತು ಪ್ರತಿಕ್ರಿಯಿಸಿರುವ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, 'ಉದ್ಯಮಶೀಲತೆ ಬೆಳೆಸುವ, ಉನ್ನತ ಕೌಶಲದ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ಬಾಹ್ಯಾಕಾಶ ಉತ್ಪಾದನೆಯಲ್ಲಿ ಜಾಗತಿಕ ಹೂಡಿಕೆ ಆಕರ್ಷಿಸುವ ಮೂಲಕ ಕರ್ನಾಟಕದ ನ್ಯೂಸ್ಪೇಸ್ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದಿದ್ದಾರೆ.

'ಇನ್-ಸ್ಪೇಸ್ ಜೊತೆಗಿನ ಸಹಯೋಗವು ನಮ್ಮ ಕರಡು ಬಾಹ್ಯಾಕಾಶ ತಂತ್ರಜ್ಞಾನ ನೀತಿಯಲ್ಲಿ ವಿವರಿಸಿರುವ ದೃಷ್ಟಿಕೋನದ ಪ್ರತಿಬಿಂಬವಾಗಿದೆ. ರಾಜ್ಯದ ಬಾಹ್ಯಾಕಾಶ ಮಹತ್ವಾಕಾಂಕ್ಷೆಗಳನ್ನು ಕೈಗಾರಿಕೀಕರಣಗೊಳಿಸುವ ಪ್ರಯತ್ನಗಳಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಮತ್ತು ಸ್ಪೇಸ್ ಮ್ಯಾನುಫ್ಯಾಕ್ಚರಿಂಗ್ ಪಾರ್ಕ್ ಪ್ರಮುಖ ಹೆಜ್ಜೆಗಳಾಗಿವೆ. ಈ ಒಪ್ಪಂದಗಳು ಮುಂದಿನ ಪೀಳಿಗೆಯ ಉದ್ಯಮಶೀಲತೆಯನ್ನು ಉತ್ತೇಜಿಸಲು ಸಹಾಯ ಮಾಡಲಿದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಇನ್‌ಸ್ಪೇಸ್ ಅಧ್ಯಕ್ಷ ಪವನ್ ಗೋಯೆಂಕಾ ಅವರ ಸಮ್ಮುಖದಲ್ಲಿ ಏಕರೂಪ್ ಕೌರ್ ಮತ್ತು ಲೋಚನ್ ಸೆಹ್ರಾ ಅವರು ಒಪ್ಪಂದಗಳಿಗೆ ಸಹಿ ಹಾಕಿದರು.

21ಕ್ಕೆ ವಿಚಾರಣೆ ಮುಂದೂಡಿದ ಕೋರ್ಟ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಆರೋಪಿಗಳಾಗಿರುವ ನ್ಯಾಷನಲ್ ಹೆರಾಲ್ಡ್ ಪ್ರಕರಣದ ವಿಚಾರಣೆಯನ್ನು ದೆಹಲಿಯ ನ್ಯಾಯಾಲಯ ಮೇ 21 ಮತ್ತು 22ಕ್ಕೆ ಮುಂದೂಡಿದೆ.

ಜಾರಿ ನಿರ್ದೇಶನಾಲಯದ (ಇ.ಡಿ) ವಾದ ಆಲಿಸಿದ ನಂತರ, ಪ್ರಕರಣದ ಎಲ್ಲಾ ಆರೋಪಿಗಳಿಗೆ ನೋಟಿಸ್ ತಲುಪಿರುವುದರನ್ನು ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಗುರುವಾರ ಖಚಿತಪಡಿಸಿಕೊಂಡರು.

'ಆದರೆ, ಪ್ರಕರಣದ ನಾಲ್ಕನೇ ಆರೋಪಿಯಾಗಿರುವ (ಸ್ಯಾಮ್ ಪಿತ್ರೋಡಾ) ಅವರಿಗೆ ಪರ್ಯಾಯ ಇ-ಮೇಲ್ ಐಡಿಯಲ್ಲಿ ಗುರುವಾರ ನೋಟಿಸ್ ಕಳುಹಿಸಲಾಗಿದೆ. ಆದ್ದರಿಂದ ಮುಂದಿನ ವಿಚಾರಣೆ ವೇಳೆ ವಾದ ಆಲಿಸುವುದು ಸೂಕ್ತವಾಗಿದೆ' ಎಂದು ಹೇಳಿದರು. ಆ ಬಳಿಕ ವಿಚಾರಣೆಯನ್ನು ಮೇ 21 ಮತ್ತು 22ಕ್ಕೆ ನಿಗದಿಪಡಿಸಿದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದ ಜತೆ ನಂಟಿನ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಸ್ಯಾಮ್ ಪಿತ್ರೋಡಾ ಮತ್ತು ಸುಮನ್ ದುಬೆ ಅವರಿಗೆ ನ್ಯಾಯಾಲಯ ಮೇ 2ರಂದು ನೋಟಿಸ್ ಜಾರಿ ಮಾಡಿತ್ತು.

ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು 2014ರಲ್ಲಿ ದಾಖಲಿಸಿದ್ದ ಖಾಸಗಿ ದೂರನ್ನು ಪಟಿಯಾಲಾ ಹೌಸ್ ನ್ಯಾಯಾಲಯದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಪರಿಗಣನೆಗೆ ತೆಗೆದು ಕೊಂಡ ನಂತರ 2021ರಲ್ಲಿ ವಿಚಾರಣೆ ಆರಂಭಿಸಿದ್ದ ಇ.ಡಿ ಕಳೆದ ತಿಂಗಳ 15ರಂದು ಆರೋಪಪಟ್ಟಿ ಸಲ್ಲಿಸಿತ್ತು.

ರಾಹುಲ್ ಗಾಂಧಿ ಪೌರತ್ವ ರದ್ದು ಕೋರಿ ಅರ್ಜಿ

ಲಖನೌ (ಪಿಟಿಐ): ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಭಾರತೀಯ ಪೌರತ್ವವನ್ನು ರದ್ದುಪಡಿಸಬೇಕು ಎಂಬ ಕೋರಿಕೆಯೊಂದಿಗೆ ಹೊಸ ಅರ್ಜಿಯೊಂದನ್ನು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದಲ್ಲಿ ಗುರುವಾರ ಸಲ್ಲಿಸಲಾಗಿದೆ.

ಈ ಅರ್ಜಿಯ ವಿಚಾರವಾಗಿ ತೀರ್ಮಾನ ಆಗುವವರೆಗೆ ರಾಹುಲ್ ಅವರಿಗೆ ವಿದೇಶ ಪ್ರವಾಸ ಕೈಗೊಳ್ಳಲು ಅವಕಾಶ ನೀಡಬಾರದು ಎಂದು ಕೂಡ ಕೋರಲಾಗಿದೆ.

ಕರ್ನಾಟಕದವರಾದ ಎಸ್.ವಿ. ಶಿಶಿರ್ ಎನ್ನುವವರು ಈ ಅರ್ಜಿಯನ್ನು ಸಲ್ಲಿಸಿದ್ದಾರೆ. ಆದರೆ ಕೋರ್ಟ್‌ನ ರಿಜಿಸ್ಟ್ರಿಯು ಈ ಅರ್ಜಿಯನ್ನು ವಿಚಾರಣೆಯ ಹಂತಕ್ಕೆ ರವಾನಿಸಲು ಈ ಹಂತದಲ್ಲಿ ಅನುಮತಿ ಕೊಟ್ಟಿಲ್ಲ. ಅರ್ಜಿಯನ್ನು ಪರಿಶೀಲಿಸಿದ ನಂತರದಲ್ಲಿ, ಅದನ್ನು ಪರಿಗಣನೆಗೆ ನ್ಯಾಯಪೀಠದ ಎದುರು ಇರಿಸಲಾಗುತ್ತದೆ.

ರಾಹುಲ್ ಅವರ ಪೌರತ್ವಕ್ಕೆ ಸಂಬಂಧಿಸಿದಂತೆ ಶಿಶಿರ್ ಅವರು ನ್ಯಾಯಾಲಯದ ಮೆಟ್ಟಿಲು ಏರಿರುವುದು ಇದೇ ಮೊದಲಲ್ಲ. ಅವರು ಈ ಹಿಂದೆ ಸಲ್ಲಿಸಿದ್ದ ಒಂದು ಅರ್ಜಿಯನ್ನು ವಿಭಾಗೀಯ ಪೀಠವು ಮೇ 5ರಂದು ಇತ್ಯರ್ಥಪಡಿಸಿದೆ.

ರಾಹುಲ್ ಅವರ ಪೌರತ್ವವನ್ನು ರದ್ದುಪಡಿಸಬೇಕು ಎಂಬ ಮನವಿಯನ್ನು ಅರ್ಜಿದಾರರು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಯು ಆ ಮನವಿಯನ್ನು ಪರಿಶೀಲಿಸಿ, ತೀರ್ಮಾನ ಕೈಗೊಳ್ಳಬೇಕು ಎಂದು ಪೀಠವು ಆ ಆದೇಶದಲ್ಲಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಶಿವಾಜಿ ಕೊಡುಗೆ ವಿಸ್ತೃತವಾಗಿ ಕಾಣಲಿ: ಸೂಚನೆ

ನವದೆಹಲಿ (ಪಿಟಿಐ): ಛತ್ರಪತಿ ಶಿವಾಜಿ ಮಹಾರಾಜರ ಅದ್ಭುತ ಕೊಡುಗೆಗಳನ್ನು ಪಠ್ಯ ಪುಸ್ತಕಗಳಲ್ಲಿ ವಿಸ್ತೃತವಾಗಿ ಅಳವಡಿಸಬೇಕು ಎಂದು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಮಿತಿಗೆ (ಎನ್‌ಸಿಇಆರ್‌ಟಿ) ತಿಳಿಸಿರುವುದಾಗಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹೇಳಿದ್ದಾರೆ.

ಧರ್ಮೇಂದ್ರ ಪ್ರಧಾನ್

ಮಹಾರಾಷ್ಟ್ರ ಶಿಕ್ಷಣ ಸಚಿವ ದಾದಾಜಿ ಭುಸೆ ಅವರನ್ನು ಭೇಟಿ ಮಾಡಿದ ಬಳಿಕ ಸಾಮಾಜಿಕ ಜಾಲತಾಣ 'ಎಕ್ಸ್' ಖಾತೆಯಲ್ಲಿ ಪ್ರಧಾನ್ ಪೋಸ್ಟ್ ಮಾಡಿದ್ದಾರೆ.

'ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಗೆ ಶಿವಾಜಿಯ ಮಾದರಿ ಜೀವನ ಮತ್ತು ಪರಂಪರೆಯು ಸ್ಫೂರ್ತಿದಾಯಕವಾಗಿದೆ. ಹೀಗಾಗಿ ಈ ವಿಷಯಕ್ಕೆ ಪಠ್ಯಪುಸ್ತಕದಲ್ಲಿ ಸರಿಯಾದ ಸ್ಥಳಾವಕಾಶ ಸಿಗಬೇಕು' ಎಂದು ಬರೆದುಕೊಂಡಿದ್ದಾರೆ.

ಸ್ಫೋಟ: ಮೂವರು ಪೊಲೀಸರ ಸಾವು

ಹೈದರಾಬಾದ್ (ಪಿಟಿಐ): ತೆಲಂಗಾಣ ಹಾಗೂ ಛತ್ತೀಸಗಢ ಗಡಿಯ ಮುಲುಗು ಜಿಲ್ಲೆಯಲ್ಲಿ ಗುರುವಾರ ನಕ್ಸಲರು ಹುದುಗಿಸಿದ್ದ ನೆಲಬಾಂಬ್ ಸ್ಫೋಟಗೊಂಡು ಮೂವರು ಪೊಲೀಸರು ಸಾವಿಗೀಡಾಗಿದ್ದಾರೆ.

ವಾಜೀಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪೊಲೀಸರು ಎಂದಿನಂತೆ ಬಾಂಬ್ ಶೋಧ ಕರ್ತವ್ಯದಲ್ಲಿದ್ದಾಗ ನೆಲಬಾಂಬ್ ಸ್ಫೋಟಗೊಂಡಿದೆ. ನಿಷೇಧಿತ ನಕ್ಸಲರು ಅರಣ್ಯ ಪ್ರದೇಶಗಳಲ್ಲಿ ಕಚ್ಚಾಬಾಂಬ್‌ಗಳನ್ನು ಹುದುಗಿಸಿ ಇಟ್ಟಿದ್ದು, ಪೊಲೀಸರು ಹೆಚ್ಚಿನ ಶೋಧ ನಡೆಸುತ್ತಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಭಾರತದಲ್ಲಿ ಅಮೆರಿಕದ ಮೊದಲ ವಿ.ವಿ

ನವದೆಹಲಿ (ಪಿಟಿಐ): ಷಿಕಾಗೊದ ಇಲಿನಾಯ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿಶ್ವವಿದ್ಯಾಲಯವು ಭಾರತದಲ್ಲಿ ತನ್ನ ಕ್ಯಾಂಪಸ್ ತೆರೆಯಲು ವಿಶ್ವವಿದ್ಯಾಲಯಗಳ ಅನುದಾನ ಆಯೋಗದಿಂದ (ಯುಜಿಸಿ) ಅನುಮೋದನೆ ಪಡೆದಿದೆ. ಈ ಮೂಲಕ ಭಾರತದಲ್ಲಿ ಕ್ಯಾಂಪಸ್ ತೆರೆಯಲಿರುವ ಅಮೆರಿಕದ ಪ್ರಥಮ ವಿವಿ ಎಂಬ ಖ್ಯಾತಿಗೂ ಪಾತ್ರವಾಗಿದೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಮುಂಬೈನಲ್ಲಿ ಇಲಿನಾಯ್ಸ್ ಕ್ಯಾಂಪಸ್ ಸ್ಥಾಪನೆಯಾಗಲಿದ್ದು, 2026ರಲ್ಲಿ ವಿವಿ ಉದ್ಘಾಟನೆಯಾಗಲಿದೆ. ಬಹುಬೇಡಿಕೆಯ ಕ್ಷೇತ್ರಗಳಾದ ಕಂಪ್ಯೂಟರ್ ಸೈನ್ಸ್, ಎಂಜಿನಿಯರಿಂಗ್ ಹಾಗೂ ಬಿಸಿನೆಸ್ ವಿಭಾಗಗಳಲ್ಲಿ ಪದವಿ ಪೂರ್ವ ಮತ್ತು ಪದವಿ ಕೋರ್ಸ್‌ಗಳನ್ನು ಇಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗಲಿದೆ ಎಂದು ವಿವಿಯ ಅಧ್ಯಕ್ಷ ರಾಜ್ ಎಚಂಬಾಡಿ ಹೇಳಿದ್ದಾರೆ.

ಲಾಲು ವಿರುದ್ಧ ಕ್ರಮಕ್ಕೆ ಅನುಮತಿ

ನವದೆಹಲಿ (ಪಿಟಿಐ): ರೈಲ್ವೆಯಲ್ಲಿ ಉದ್ಯೋಗಕ್ಕಾಗಿ ಭೂಮಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅನುಮತಿ ನೀಡಿದ್ದಾರೆ. ಸಿಆರ್‌ಪಿಸಿ 197 (1) (ಭಾರತೀಯ ನ್ಯಾಯ ಸಂಹಿತೆ–2013ರ ಸೆಕ್ಷನ್ 218) ಅನ್ವಯ ರಾಷ್ಟ್ರಪತಿ ಅವರು ಈ ಕುರಿತು ಅನುಮತಿ ನೀಡಿದ್ದಾರೆ.

'ಮಸೂದ್ ಅಜರ್‌ನ ಸಹೋದರ ಹತ'

ನವದೆಹಲಿ (ಪಿಟಿಐ): ಸಂಸತ್ ಮೇಲಿನ ದಾಳಿ ಸೇರಿದಂತೆ ಭಾರತದಲ್ಲಿ ನಡೆದ ಹಲವು ಭಯೋತ್ಪಾದಕ ದಾಳಿಗಳಲ್ಲಿ ಬೇಕಾಗಿದ್ದ ಜೈಷ್-ಎ-ಮೊಹಮ್ಮದ್ (ಜೆಇಎಂ) ಸಂಘಟನೆಯ ಉಗ್ರ ಅಬ್ದುಲ್ ರವೂಫ್ ಅಜರ್, 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಹತನಾಗಿದ್ದಾನೆ ಎಂದು ಬಿಜೆಪಿ ಗುರುವಾರ ಹೇಳಿದೆ.

ರವೂಫ್, ಜೆಇಎಂ ಸ್ಥಾಪಕ ಮೌಲಾನಾ ಮಸೂದ್ ಅಜರ್‌ನ ಸಹೋದರ ಎಂದು ವರದಿಯಾಗಿದೆ. ಅಜರ್‌ನ ಅನುಪಸ್ಥಿತಿಯಲ್ಲಿ ನಿಷೇಧಿತ ಸಂಘಟನೆಯ ನೇತೃತ್ವ ವಹಿಸಿದ್ದ ಎನ್ನಲಾಗಿದೆ.

'ಮೋಸ್ಟ್ ವಾಂಟೆಡ್' ಭಯೋತ್ಪಾದಕ ಅಬ್ದುಲ್ ರವೂಫ್ ಅಜರ್ ಭಾರತೀಯ ಸೇನೆಯ ದಾಳಿಯಲ್ಲಿ ಕೊಲ್ಲಲ್ಪಟ್ಟಿದ್ದಾನೆ ಎಂದು ಬಿಜೆಪಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಬಹಾವಲ್ಪುರದಲ್ಲಿರುವ ಜೈಷ್-ಎ-ಮೊಹಮ್ಮದ್ ಕೇಂದ್ರ ಕಚೇರಿಯ ಮೇಲೆ ನಡೆದ ದಾಳಿಯಲ್ಲಿ ಬಲಿಯಾದ ಮಸೂದ್ ಅಜರ್‌ನ ಕುಟುಂಬದ 10 ಸದಸ್ಯರಲ್ಲಿ ಈತನೂ ಒಬ್ಬ ಎಂದಿದೆ.

2001ರಲ್ಲಿ ಸಂಸತ್ತಿನ ಮೇಲೆ ನಡೆದ ಭಯೋತ್ಪಾದಕ ದಾಳಿ ಅಲ್ಲದೆ, ಕಂದಹಾರ್ ವಿಮಾನ ಅಪಹರಣ ಮತ್ತು ಪಠಾಣ್‌ಕೋಟ್ ಭಯೋತ್ಪಾದಕ ದಾಳಿಯಲ್ಲಿಯೂ ರವೂಫ್ ಭಾಗಿಯಾಗಿದ್ದ. ಕುಟುಂಬದ 10 ಸದಸ್ಯರು ಮತ್ತು ನಾಲ್ವರು ಆಪ್ತರು ಸೇರಿದಂತೆ 14 ಮಂದಿ ಸತ್ತಿರುವುದನ್ನು ಮಸೂದ್ ಅಜರ್ ಕೂಡ ಖಚಿತಪಡಿಸಿದ್ದ.

ಅಮೃತಸರ: ಲೋಹದ ಅವಶೇಷ ಪತ್ತೆ

ಅಮೃತಸರ (ಪಿಟಿಐ): ನಗರದ ಹೊರವಲಯದಲ್ಲಿರುವ ಜೇಠುವಾಲ ಗ್ರಾಮದಲ್ಲಿ ಗುರುವಾರ ಲೋಹದ ಭಗ್ನಾವಶೇಷಗಳು ಪತ್ತೆಯಾಗಿವೆ. ಇವು ಕ್ಷಿಪಣಿಗಳ ಅವಶೇಷಗಳಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ.

ಜೇಠೂವಾಲದ ಬಯಲು ಪ್ರದೇಶ ಹಾಗೂ ಕೆಲ ಮನೆಗಳ ಬಳಿ ಈ ಅವಶೇಷಗಳು ಪತ್ತೆಯಾಗಿವೆ. ಆಸ್ತಿಪಾಸ್ತಿಗಳಿಗೆ ಯಾವುದೇ ಹಾನಿಯಾಗಿಲ್ಲ ಎಂದು ಸ್ಥಳೀಯರು ಹೇಳಿದ್ದಾರೆ. ಅವಶೇಷಗಳು ಬಿದ್ದಿರುವುದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ತಿಳಿಸಿದ್ದಾರೆ. ಬಳಿಕ, ಪೊಲೀಸರು ಈ ಕುರಿತು ಸೇನೆಗೆ ಮಾಹಿತಿ ನೀಡಿದ್ದಾರೆ. ಪತ್ತೆಯಾದ ವಸ್ತುಗಳು ಯಾವುವು ಎಂದು ತನಿಖೆಯ ಬಳಿಕವಷ್ಟೇ ಖಚಿತವಾಗಲಿದೆ ಎಂದು ಪೊಲೀಸರು ಹೇಳಿದ್ದಾರೆ.

ಫುಟ್‌ಬಾಲ್: ಉಜ್ಬೇಕ್ ವಿರುದ್ಧ ಆಡಲಿರುವ ಭಾರತ ಮಹಿಳಾ ತಂಡ

ನವದೆಹಲಿ (ಪಿಟಿಐ): ಭಾರತ ಸೀನಿಯರ್ ಮಹಿಳಾ ತಂಡವು, ಬೆಂಗಳೂರಿನಲ್ಲಿ ಉಜ್ಬೇಕಿಸ್ತಾನ ವಿರುದ್ಧ ಎರಡು ಅಂತರರಾಷ್ಟ್ರೀಯ ಸೌಹಾರ್ದ ಪಂದ್ಯಗಳನ್ನು ಆಡಲಿದೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಗುರುವಾರ ತಿಳಿಸಿದೆ.

ಈ ಎರಡು ಪಂದ್ಯಗಳು ಮೇ 30 ಮತ್ತು ಜೂನ್ 3ರಂದು ಬೆಂಗಳೂರಿನ ಪಡುಕೋಣೆ- ದ್ರಾವಿಡ್ ಕ್ರೀಡಾ ಉತ್ಕೃಷ್ಟತಾ ಕೇಂದ್ರದಲ್ಲಿ ನಡೆಯಲಿವೆ.

ಎಎಫ್‌ಸಿ ಮಹಿಳಾ ಏಷ್ಯನ್ ಕಪ್ 2026ರ ಕ್ವಾಲಿಫೈರ್ಸ್‌ಗೆ ಸಿದ್ಧತೆ ನಡೆಸುತ್ತಿರುವ ತಂಡವು ಕ್ರಿಸ್ಪಿನ್ ಛೆಟ್ರಿ ಅವರ ಮಾರ್ಗದರ್ಶನದಲ್ಲಿ ಬೆಂಗಳೂರಿನಲ್ಲಿ ಮೇ 1ರಿಂದ ತರಬೇತಿ ಶಿಬಿರದಲ್ಲಿ ಭಾಗಿಯಾಗಿದೆ.

ಏಷ್ಯನ್ ಕಪ್ ಕ್ವಾಲಿಫೈರ್ಸ್‌ನಲ್ಲಿ ಆಡುವ ಭಾರತ ತಂಡವು 'ಬಿ' ಗುಂಪಿನಲ್ಲಿದೆ. ಮಂಗೋಲಿಯಾ ವಿರುದ್ಧ (ಜೂನ್ 23), ತೈಮೂರ್–ಲೆಸ್ಟೆ (ಜೂನ್ 29) ಮತ್ತು ಆತಿಥೇಯ ಥಾಯ್ಲೆಂಡ್ ವಿರುದ್ಧ (ಜುಲೈ 5) ಚಿಯಾಂಗ್ ಮೈ ನಗರದಲ್ಲಿ ಪಂದ್ಯಗಳನ್ನು ಆಡಲಿದೆ.

ಕ್ರಿಸ್ಪಿನ್ ಛೆಟ್ರಿ

ಭಾರತ ತಂಡ ಫಿಫಾ ಮಹಿಳಾ ರ‍್ಯಾಂಕಿಂಗ್‌ನಲ್ಲಿ 69ನೇ ಸ್ಥಾನದಲ್ಲಿದೆ. ಉಜ್ಬೇಕ್ ತಂಡ 50ನೇ ಸ್ಥಾನದಲ್ಲಿದೆ. ಇವೆರಡು ತಂಡಗಳು 13 ಸಲ ಮುಖಾಮುಖಿಯಾಗಿದ್ದು, ಉಜ್ಬೇಕಿಸ್ತಾನ 9 ಸಲ ಜಯಗಳಿಸಿದೆ. ಭಾರತ ಒಮ್ಮೆ ಜಯಗಳಿಸಿದೆ. ಮೂರು ಪಂದ್ಯಗಳು ಡ್ರಾ ಆಗಿವೆ.

ವಿಶ್ವಕಪ್ ಆರ್ಚರಿ: ಭಾರತದ ರಿಕರ್ವ್ ತಂಡಗಳಿಗೆ ನಿರಾಸೆ

ಕಾಂಪೌಂಡ್: ಸೆಮಿಗೆ ಮಧುರಾ, ರಿಷಭ್

ಶಾಂಘೈ (ಪಿಟಿಐ): ಭಾರತದ ಕಾಂಪೌಂಡ್ ಆರ್ಚರಿ ಸ್ಪರ್ಧಿಗಳು ವಿಶ್ವಕಪ್ ಸ್ಟೇಜ್ 2 ಕೂಟದಲ್ಲಿ ಪ್ರಾಬಲ್ಯವನ್ನು ಮುಂದುವರಿಸಿದ್ದಾರೆ. ರಿಷಭ್ ಯಾದವ್ ಮತ್ತು ಮಧುರಾ ಧಾಮಣಗಾಂವಕರ್ ಅವರು ಗುರುವಾರ ವೈಯಕ್ತಿಕ ವಿಭಾಗದ ಸೆಮಿಫೈನಲ್‌ಗೆ ಮುನ್ನಡೆದರು. ಆದರೆ ರಿಕರ್ವ್ ವಿಭಾಗದಲ್ಲಿ ಭಾರತ ತಂಡಗಳು ಪದಕದ ಸುತ್ತಿಗೇರಲು ವಿಫಲವಾದವು.

ತೀವ್ರ ಹೋರಾಟದಿಂದ ಕೂಡಿದ ಕ್ವಾರ್ಟರ್‌ಫೈನಲ್‌ನಲ್ಲಿ ಯಾದವ್ ಅವರು ಶೂಟ್–ಆಫ್‌ನಲ್ಲಿ ಡೆನ್ಮಾರ್ಕ್‌ನ ಮಥಾಯಸ್ ಫುಲ್ಲರ್ಟನ್ ಅವರನ್ನು ಸೋಲಿಸಿದರು. ಇವರಿಬ್ಬರ ನಡುವಣ ಸ್ಕೋರ್ 147–147ರಲ್ಲಿ ಸಮನಾಗಿತ್ತು. ನಾಲ್ಕನೇ ಶ್ರೇಯಾಂಕದ ಯಾದವ್ ಶೂಟ್ ಆಫ್‌ನಲ್ಲಿ 10*–10 ರಲ್ಲಿ ಜಯಗಳಿಸಿದರು.

ಸೆಮಿಫೈನಲ್‌ನಲ್ಲಿ ಯಾದವ್, ವಿಶ್ವದ ಅಗ್ರಮಾನ್ಯ ಬಿಲ್ಗಾರ, ನೆದರ್ಲೆಂಡ್ಸ್‌ನ ಮೈಕ್ ಸ್ಕ್ಲೋಸರ್ ಅವರನ್ನು ಎದುರಿಸಲಿದ್ದಾರೆ.

ಮಹಿಳಾ ಕಾಂಪೌಂಡ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಮಧುರಾ ಸ್ಫೂರ್ತಿಯುತ ಪ್ರದರ್ಶನ ನೀಡಿ ಸ್ವದೇಶದ ಅನುಭವಿ ಸ್ಪರ್ಧಿ ಜ್ಯೋತಿ ಸುರೇಖಾ ವೆನ್ನಂ ಅವರನ್ನು 142–141 ರಿಂದ ಸೋಲಿಸಿದರು.

ಎರಡನೇ ಬಾರಿ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುತ್ತಿರುವ ಮಧುರಾ ಸೆಮಿಫೈನಲ್‌ನಲ್ಲಿ ಟರ್ಕಿಯ ಹಝಲ್ ಬುರುನ್ ಅವರನ್ನು ಎದುರಿಸಲಿದ್ದಾರೆ.

ಆದರೆ ಅಭಿಷೇಕ್ ವರ್ಮಾ ಮತ್ತು ಉದಯ್ ಕಾಂಬೋಜ್ ಅವರು ಎರಡನೇ ಸುತ್ತಿನಲ್ಲಿ ಹೊರಬಿದ್ದರು.

ಬುಧವಾರ, ಅಗ್ರ ಕ್ರಮಾಂಕದ ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಕಾಂಪೌಂಡ್ ವಿಭಾಗದ ಫೈನಲ್ ತಲುಪಿದ್ದವು. ಭಾರತ ಶನಿವಾರ ನಡೆಯುವ ಫೈನಲ್‌ನ ಎರಡೂ ವಿಭಾಗಗಳಲ್ಲಿ ಮೆಕ್ಸಿಕೊ ತಂಡವನ್ನು ಎದುರಿಸಲಿದೆ.

ನಿರಾಸೆ: ಭಾರತದ ಪುರುಷರ ಮತ್ತು ಮಹಿಳಾ ರಿಕರ್ವ್ ತಂಡಗಳು ಮತ್ತೆ ನಿರಾಸೆ ಅನುಭವಿಸಿದವು. ಪುರುಷರ ತಂಡ ನಾಲ್ಕನೇ ಸ್ಥಾನ ಪಡೆದರೆ, ಮಹಿಳೆಯರ ತಂಡ ಪ್ರಿಕ್ವಾರ್ಟರ್‌ಫೈನಲ್‌ನಲ್ಲೇ ಹೊರಬಿತ್ತು.

ಧೀರಜ್ ಬೊಮ್ಮದೇವರ, ಅತನು ದಾಸ್ ಮತ್ತು ತರುಣದೀಪ್ ರೈ ಅವರನ್ನು ಒಳಗೊಂಡ ಏಳನೇ ಶ್ರೇಯಾಂಕದ ಪುರುಷರ ತಂಡ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಅಮೆರಿಕ ತಂಡದ ಎದುರು 3–5 ರಿಂದ ಸೋಲನುಭವಿಸಿತು. ಭಾರತ 56–57ರ ಅಲ್ಪಅಂತರದಲ್ಲಿ ಮೊದಲ ಸೆಟ್ ಸೋತಿತು.

ಇದಕ್ಕೆ ಮೊದಲು ಭಾರತ ತೀವ್ರ ಹೋರಾಟದ ಸೆಮಿಫೈನಲ್‌ನಲ್ಲಿ ಫ್ರಾನ್ಸ್ ಎದುರು 4–5 (25–26) ರಲ್ಲಿ ಸೋಲನುಭವಿಸಿ, ಕಂಚಿನ ಪದಕದ ಹಣಾಹಣಿಗೆ ಸೀಮಿತಗೊಂಡಿತ್ತು.

ಮಹಿಳೆಯರ ವಿಭಾಗದಲ್ಲಿ ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಅನ್ಶಿಕಾ ಕುಮಾರಿ ಅವರನ್ನು ಒಳಗೊಂಡ ತಂಡ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 14ನೇ ಶ್ರೇಯಾಂಕದ ಮೆಕ್ಸಿಕೊ ತಂಡದ ಎದುರು 4–5 ರಲ್ಲಿ (26–27) ಸೋಲನುಭವಿಸಿತು.

ಕ್ವಾರ್ಟರ್‌ಗೆ ಆಯುಷ್, ಉನ್ನತಿ

ತೈಪೆ (ಪಿಟಿಐ): ಭಾರತದ ಯುವ ತಾರೆಯರಾದ ಆಯುಷ್ ಶೆಟ್ಟಿ ಮತ್ತು ಉನ್ನತಿ ಹೂಡಾ ಅವರು ತೈಪೆ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ತಲುಪಿದರು.

ಪುರುಷರ ಸಿಂಗಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 20 ವರ್ಷ ವಯಸ್ಸಿನ ಆಯುಷ್ 21-16, 15-21, 21-17ರಿಂದ ಸ್ವದೇಶದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರನ್ನು ಮೂರು ಗೇಮ್‌ಗಳ ಹೋರಾಟದಲ್ಲಿ ಹಿಮ್ಮೆಟ್ಟಿಸಿದರು.

ಹಿಂದಿನ ಸುತ್ತಿನಲ್ಲಿ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ರನ್ನರ್ ಅಪ್ ಲೀ ಚಿಯಾ ಹಾವೊ (ತೈವಾನ್) ಅವರಿಗೆ ಆಘಾತ ನೀಡಿದ್ದ ಕನ್ನಡಿಗ ಆಯುಷ್ ಅವರು ಎಂಟರ ಘಟ್ಟದ ಪಂದ್ಯದಲ್ಲಿ ಏಳನೇ ಶ್ರೇಯಾಂಕದ ಬ್ರಿಯಾನ್ ಯಂಗ್ (ಕೆನಡಾ) ಅವರನ್ನು ಎದುರಿಸಲಿದ್ದಾರೆ.

17 ವರ್ಷ ವಯಸ್ಸಿನ ಉನ್ನತಿ ಮಹಿಳೆಯರ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 21-12, 21-7ರಿಂದ ಆತಿಥೇಯ ಚೀನಾ ತೈಪೆಯ ಲಿನ್ ಸಿಹ್ ಯುನ್ ಅವರನ್ನು ಸೋಲಿಸಿದರು. ಉನ್ನತಿ ಮುಂದಿನ ಸುತ್ತಿನಲ್ಲಿ ಮತ್ತೊಬ್ಬ ಸ್ಥಳೀಯ ಆಟಗಾರ್ತಿ ಹಂಗ್ ಯಿ ಟಿಂಗ್ ಅವರನ್ನು ಎದುರಿಸುವರು.

ಆಯುಷ್ ಶೆಟ್ಟಿ

2023ರ ರಾಷ್ಟ್ರೀಯ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ತರುಣ್ ಮನ್ನೆಪಲ್ಲಿ ಅವರು ಪುರುಷರ ಸಿಂಗಲ್ಸ್‌ನಲ್ಲಿ ನಿರಾಸೆ ಮೂಡಿಸಿದರು. ಅವರು ಎರಡನೇ ಸುತ್ತಿನಲ್ಲಿ 13-21, 9-21ರಿಂದ ಇಂಡೊನೇಷ್ಯಾದ ಮೊಹ್ ಜಾಕಿ ಉಬೈದಿಲ್ಲಾ ವಿರುದ್ಧ ಸೋತರು.

ತೂಗುಯ್ಯಾಲೆಯಲ್ಲಿ ಪಿಎಸ್‌ಎಲ್ ಭವಿಷ್ಯ

ಕರಾಚಿ (ಪಿಟಿಐ): ಭಾರತದ ಸೇನಾ ದಾಳಿಯಿಂದ ಕಂಗಾಲಾಗಿರುವ ಪಾಕಿಸ್ತಾನದಲ್ಲಿ ಈಗ ಪಾಕಿಸ್ತಾನ ಸೂಪರ್ ಲೀಗ್ (ಪಿಎಸ್‌ಎಲ್) ಕ್ರಿಕೆಟ್ ಪಂದ್ಯಗಳ ಭವಿಷ್ಯ ತೂಗುಯ್ಯಾಲೆಯಲ್ಲಿದೆ. ಈಗ ನಡೆಯುತ್ತಿರುವ ಪಿಎಸ್‌ಎಲ್‌ನ ಉಳಿದ ಪಂದ್ಯಗಳನ್ನು ಸ್ಥಗಿತಗೊಳಿಸಬೇಕೇ ಎಂಬ ಬಗ್ಗೆ ಚರ್ಚಿಸಲು ಪಿಸಿಬಿ ತುರ್ತು ಸಭೆ ಕರೆದಿದೆ.

ಆರು ಫ್ರಾಂಚೈಸಿಗಳಿರುವ ಪಿಎಸ್‌ಎಲ್ ಅಂತಿಮ ಹಂತದಲ್ಲಿದ್ದು ರಾವಲ್ಪಿಂಡಿಯಲ್ಲಿ ಪ್ರಸ್ತುತ ಪಂದ್ಯಗಳು ನಡೆಯುತ್ತಿವೆ. ಮೇ 18ರಂದು ಲಾಹೋರ್‌ನಲ್ಲಿ ಟೂರ್ನಿ ಮುಕ್ತಾಯಗೊಳ್ಳಲಿದೆ. ಈ ಲೀಗ್‌ನಲ್ಲಿ ವಿದೇಶಿ ಆಟಗಾರರೂ ಭಾಗವಹಿಸುತ್ತಿದ್ದಾರೆ.

ಸರ್ಕಾರದ ಸಲಹೆಯನ್ನು ಸ್ವೀಕರಿಸಿ ಪಿಸಿಬಿ ಅದರಂತೆ ನಡೆಯಲಿದೆ ಎಂದು ವಿಶ್ವಾಸಾರ್ಹ ಮೂಲವೊಂದು ತಿಳಿಸಿದೆ.

ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಪಂದ್ಯ ಇಂದು • ಒತ್ತಡದಲ್ಲಿ ರಿಷಭ್ ಪಂತ್

ಪ್ಲೇಆಫ್ ಗುರಿಯತ್ತ ಆರ್‌ಸಿಬಿ ಚಿತ್ತ

ಲಖನೌ (ಪಿಟಿಐ): ಈ ಬಾರಿ ಸ್ಥಿರ ಪ್ರದರ್ಶನ ನೀಡುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶುಕ್ರವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಬೆಂಗಳೂರು ತಂಡವು, ಪರದಾಡುತ್ತಿರುವ ರಿಷಭ್ ಪಂತ್ ಪಡೆಯ ವಿರುದ್ಧ ಈ ಪಂದ್ಯ ಗೆದ್ದು ಪ್ಲೇಆಫ್‌ಗೆ ಸ್ಥಾನ ಖಚಿತಪಡಿಸುವ ವಿಶ್ವಾಸದಲ್ಲಿದೆ.

ಈ ಪಂದ್ಯ ಗೆದ್ದರಷ್ಟೇ ಲಖನೌ ತಂಡಕ್ಕೆ ಪ್ಲೇ ಆಫ್ ಆಸೆ ಜೀವಂತವಾಗಿ ಉಳಿಯಬಹುದು. ಮೆಗಾ ಹರಾಜಿನಲ್ಲಿ ದಾಖಲೆ ಮೊತ್ತ ಪಡೆದ ನಾಯಕ ರಿಷಭ್ ಪಂತ್ ಅವರು ಅದಕ್ಕೆ ನ್ಯಾಯವನ್ನೇ ಒದಗಿಸಿಲ್ಲ. ಲೀಗ್ ಅಂತಿಮ ಹಂತದತ್ತ ಕಾಲಿಟ್ಟರೂ, ಅವರು ವಿಫಲರಾಗುತ್ತಿರುವ ಪರಿಣಾಮ, ತಂಡವೂ ಸಂಕಷ್ಟದಲ್ಲಿದೆ. ತಂಡವು ಕೊನೆಯ ಐದು ಪಂದ್ಯಗಳಲ್ಲಿ ನಾಲ್ಕು ಸೋತಿದ್ದು, ಉಳಿದ ಮೂರು ಗೆದ್ದರೂ 16 ಅಂಕ ಮಾತ್ರ ಗಳಿಸಬಹುದು.

ಲಖನೌ ತಂಡದ ಪರದಾಟ ಒಂದೆಡೆಯಾದರೆ, ರಜತ್ ಪಾಟೀದಾರ್ ಪಡೆ ಕೊನೆಯ ಆರು ಪಂದ್ಯಗಳಲ್ಲಿ ಐದನ್ನು ಗೆದ್ದು ಆತ್ಮವಿಶ್ವಾಸದಲ್ಲಿದೆ. ತಂಡ ಇನ್ನೊಂದು ಗೆದ್ದರೂ ಪ್ಲೇಆಫ್ ಸ್ಥಾನ ಖಚಿತವಾಗಲಿದೆ. 18 ಅಂಕ ಗಳಿಸುವ ತಂಡ ಪ್ಲೇ ಆಫ್ ದೃಷ್ಟಿಯಿಂದ ಸುರಕ್ಷಿತ ಸ್ಥಿತಿಯಲ್ಲಿರುತ್ತದೆ.

ರಿಷಭ್ ಪಂತ್‌ಗೆ ಈ ಐಪಿಎಲ್ ನಿರಾಶಾದಾಯಕವಾಗಿದೆ. ಈ ಆಕರ್ಷಕ ಬ್ಯಾಟರ್–ಕೀಪರ್ 99.92 ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದು ಅವರ ನೀರಸ ನಿರ್ವಹಣೆಗೆ ಕನ್ನಡಿಯಾಗಿದೆ. ಈ ತಂಡ ಮೊದಲ ಮೂವರು ಆಟಗಾರರ ಕೊಡುಗೆಯನ್ನೇ ಬಹುವಾಗಿ ನೆಚ್ಚಿಕೊಂಡಿದೆ. ಮಿಚೆಲ್ ಮಾರ್ಷ್, ಏಡನ್ ಮರ್ಕರಂ ಮತ್ತು ನಿಕೋಲಸ್ ಪೂರನ್ ಮಾತ್ರ ಯಶಸ್ಸು ಕಂಡಿದ್ದಾರೆ. ಪೂರನ್ ಮೊದಲ ಕೆಲವು ಪಂದ್ಯಗಳಲ್ಲಿ ಅಮೋಘ ಆಟವಾಡಿದ್ದರು. ನಂತರ ಅದೇ ಲಹರಿಯಲ್ಲಿ ಮುಂದುವರಿದಿಲ್ಲ.

ಬೌಲಿಂಗ್ ವಿಭಾಗದಲ್ಲೂ ತಂಡ ಸುಧಾರಿತ ಪ್ರದರ್ಶನ ನೀಡಬೇಕಾಗಿದೆ.

ಪುನರಾಗಮನ ಮಾಡಿ ರುವ ಎಕ್ಸ್‌ಪ್ರೆಸ್ ವೇಗಿ ಮಯಂಕ್ ಯಾದವ್ ಮೊದಲಿನ ರೀತಿ ಅಪಾಯ ಒಡ್ಡುತ್ತಿಲ್ಲ. ತಂಡದ ಫೀಲ್ಡಿಂಗ್–ಕ್ಯಾಚಿಂಗ್ ಕೂಡ ನಿರೀಕ್ಷಿತ ಮಟ್ಟದಲ್ಲಿಲ್ಲ.

ಮೊದಲ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಆರ್‌ಸಿಬಿ ಈ ಐಪಿಎಲ್‌ನಲ್ಲಿ ಉತ್ಸಾಹದ ಪ್ರದರ್ಶನ ನೀಡಿದೆ. ತಾರಾ ಆಟಗಾರ ವಿರಾಟ್ ಕೊಹ್ಲಿ ಅಮೋಘ ಲಯದಲ್ಲಿದ್ದಾರೆ. 11 ಇನಿಂಗ್ಸ್‌ಗಳಲ್ಲಿ ಏಳು ಅರ್ಧ ಶತಕ ಬಾರಿಸಿದ್ದಾರೆ. ಅವರು ಉತ್ತಮ ಆರಂಭ ನೀಡುತ್ತಿರುವ ಕಾರಣ ರಜತ್ ಪಾಟೀದಾರ್ ಮತ್ತು ರೊಮೆರಿಯೊ ಶೆಫರ್ಡ್ ಅವರಿಗೆ ರಟ್ಟೆಯರಳಿಸಲು ಅವಕಾಶವಾಗುತ್ತಿದೆ.

ಕೆಲವು ಪಂದ್ಯಗಳಲ್ಲಿ ಯಶಸ್ಸು ಕಂಡಿದ್ದ ದೇವದತ್ತ ಪಡಿಕ್ಕಲ್ ಬದಲು ಮತ್ತೊಬ್ಬ ಕನ್ನಡಿಗ ಆಟಗಾರ ಮಯಂಕ್ ಅಗರವಾಲ್ ತಂಡವನ್ನು ಸೇರಿಕೊಂಡಿದ್ದಾರೆ. ಅವಳಿ ಸ್ಪಿನ್ನರ್‌ಗಳಾದ ಕೃಣಾಲ್ ಪಾಂಡ್ಯ ಮತ್ತು ಸುಯಶ್ ಶರ್ಮಾ ಅವರು ಪರಿಣಾಮಕಾರಿ ಎನಿಸಿದ್ದಾರೆ. ವೇಗದ ಬೌಲಿಂಗ್ ವಿಭಾಗದಲ್ಲಿ ಜೋಶ್ ಹೇಜಲ್‌ವುಡ್ ಮತ್ತು ಯಶ್ ದಯಾಳ್ ಒತ್ತಡದಲ್ಲೂ ಬಿಗಿಯಾಗಿ ಬೌಲಿಂಗ್ ಮಾಡಿದ್ದಾರೆ.

ತವರಿನಿಂದಾಚೆ ಅಜೇಯವಾಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ದಂಡಯಾತ್ರೆಯನ್ನು ತಡೆದು ನಿಲ್ಲಿಸಲು ಲಖನೌ ತಂಡಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಕಠಿಣವಾಗಬಹುದು. ಅದು ವಿಶೇಷ ಪ್ರಯತ್ನದೊಡನೆ ಕಣಕ್ಕಿಳಿಯಬೇಕಾಗಿದೆ.

ಪಂದ್ಯ ಆರಂಭ: ರಾತ್ರಿ 7.30, **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಅಭ್ಯಾಸದ ವೇಳೆ ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಅವರೊಂದಿಗೆ ಲಖನೌ ತಂಡದ ನಾಯಕ ರಿಷಭ್ ಪಂತ್ ಮತ್ತು ಶಾರ್ದೂಲ್ ಠಾಕೂರ್ ಮಾತುಕತೆ ನಡೆಸಿದರು

ರಜತ್ ಪಾಟೀದಾರ್

‘ಸರ್ಕಾರದ ನಿರ್ದೇಶನಕ್ಕೆ ಕಾಯುತ್ತಿದ್ದೇವೆ’

ಧರ್ಮಶಾಲಾ (ಪಿಟಿಐ): ‘ಗಡಿಯಲ್ಲಿ ಸಂಘರ್ಷದ ವಾತಾವರಣ ಇರುವುದರಿಂದ ಐಪಿಎಲ್ ಲೀಗ್ ಮುಂದುವರಿಸಬೇಕೇ, ಬೇಡವೇ ಎಂಬ ವಿಷಯದಲ್ಲಿ ಕೇಂದ್ರ ಸರ್ಕಾರದ ನಿರ್ದೇಶನಕ್ಕಾಗಿ ಕಾಯುತ್ತಿದ್ದೇವೆ’ ಎಂದು ಐಪಿಎಲ್ ಅಧ್ಯಕ್ಷ ಅರುಣ್ ಧುಮಾಲ್ ಗುರುವಾರ ಹೇಳಿದರು.

ಶುಕ್ರವಾರದ ಪಂದ್ಯದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಈಗಿನ ಪ್ರಕಾರ ಲಖನೌ ಸೂಪರ್ ಜೈಂಟ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಣ ಪಂದ್ಯ ನಿಗದಿಯಂತೆ ನಡೆಯಲಿದೆ. ಆದರೆ, ಯಾವುದೇ ಕ್ಷಣದಲ್ಲಿ ಪರಿಸ್ಥಿತಿ ಬದಲಾಗಬಹುದಾಗಿದ್ದು, ಭಾಗಿದಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದೇವೆ. ಆಟಗಾರರ ಸುರಕ್ಷತೆ ಸೇರಿದಂತೆ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ತೆಗೆದು ಕೊಳ್ಳಲಾಗುತ್ತದೆ ಎಂಬುದು ಸ್ಪಷ್ಟ’ ಎಂದು ಪಿಟಿಐಗೆ ಅವರು ಹೇಳಿದರು.

ಧರ್ಮಶಾಲಾ ಕ್ರೀಡಾಂಗಣದಲ್ಲಿ ಗುರುವಾರ ಪಂದ್ಯ ಸ್ಥಗಿತಗೊಂಡ ಬಳಿಕ ಪ್ರೇಕ್ಷಕರನ್ನು ಹೊರನಡೆದರು ಪಿಟಿಐ ಚಿತ್ರ

ಕಿಂಗ್ಸ್–ಡೆಲ್ಲಿ ಪಂದ್ಯ ಸ್ಥಗಿತ: ತೂಗುಗತ್ತಿಯಲ್ಲಿ ಲೀಗ್ ಭವಿಷ್ಯ

ಧರ್ಮಶಾಲಾ ಪಂದ್ಯ ‘ಬ್ಲ್ಯಾಕ್‌ಔಟ್’

ಧರ್ಮಶಾಲಾ (ಪಿಟಿಐ): ಧರ್ಮಶಾಲಾಕ್ಕೆ ಸನಿಹದ ಸ್ಥಳಗಳಲ್ಲಿ ವೈಮಾನಿಕ ದಾಳಿಯ ಮುನ್ನೆಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಣ ಐಪಿಎಲ್ ಪಂದ್ಯವನ್ನುಗುರುವಾರಅರ್ಧದಲ್ಲಿಯೇರದ್ದುಗೊಳಿಸಲಾಯಿತು. ಫ್ಲಡ್‌ಲೈಟ್‌ಗಳನ್ನು ಬಂದ್ ಮಾಡಿ ಹಿಮಾಲಯದ ತಪ್ಪಲಿನ ಈ ತಾಣವನ್ನು ‘ಬ್ಲ್ಯಾಕ್‌ಔಟ್’ ಮಾಡಲಾಯಿತು.

ಗಡಿಯಲ್ಲಿ ಸೇನಾ ಸಂಘರ್ಷದ ಕಾರಣ ಹಾಲಿ ಐಪಿಎಲ್ ಭವಿಷ್ಯದ ಮೇಲೆ ಅಭದ್ರತೆಯ ನೆರಳು ಆವರಿಸಿದೆ.

ಮಳೆಯಿಂದಾಗಿ ಈ ಪಂದ್ಯ 45 ನಿಮಿಷ ತಡವಾಗಿ ಆರಂಭವಾಯಿತು. ಟಾಸ್ ಗೆದ್ದ ಪಂಜಾಬ್ ಬ್ಯಾಟಿಂಗ್ ಮಾಡಲು ನಿರ್ಧರಿಸಿ 10.1 ಓವರುಗಳಲ್ಲಿ 1 ವಿಕೆಟ್‌ಗೆ 122 ರನ್ ಗಳಿಸಿತ್ತು. ಮೊದಲ ವಿಕೆಟ್ ಬಿದ್ದ ಬೆನ್ನಲ್ಲೇ ರಾತ್ರಿ 9.28ರ ಹೊತ್ತಿಗೆ ಹೊನಲು ಬೆಳಕು ಸ್ಥಗಿತಗೊಳಿಸಿ ‘ಬ್ಲ್ಯಾಕ್‌ಔಟ್’ ಮಾಡಲಾಯಿತು.

ಸುರಕ್ಷತೆ ದೃಷ್ಟಿಯಿಂದ ತಂಡಗಳನ್ನು ಮತ್ತು ಸುಮಾರು 23,000 ಪ್ರೇಕ್ಷಕರನ್ನು ಕ್ರೀಡಾಂಗಣದಿಂದ ಹೊರಗೆ ಕಳುಹಿಸಲಾಯಿತು. ಈ ವೇಳೆ ಪ್ರೇಕ್ಷಕರು ಪಾಕಿಸ್ತಾನದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಆಟಗಾರರನ್ನು ಇಲ್ಲಿಂದ 85 ಕಿ.ಮೀ. ದೂರದ ಪಠಾಣ್ ಕೋಟ್‌ನಿಂದ ವಿಶೇಷ ರೈಲಿನಲ್ಲಿ ದೆಹಲಿಗೆ ಕಳುಹಿಸಲಾಯಿತು.

ಲೀಗ್‌ನಲ್ಲಿ ಭಾಗವಹಿಸುತ್ತಿರುವ ವಿದೇಶಿ ಆಟಗಾರರು ಸುರಕ್ಷತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಗುರುವಾರದ ಪಂದ್ಯದ ಸ್ಥಗಿತಗೊಂಡ ಬಳಿಕ ಲೀಗ್ ಮುಂದುವರಿಯುವುದೇ ಎಂಬ ಬಗ್ಗೆ ಅಸ್ಪಷ್ಟತೆ ತಲೆದೋರಿದೆ. ಈ ಬಗ್ಗೆ ಚರ್ಚಿಸಲು ಬಿಸಿಸಿಐ ಸಭೆ ನಡೆಸುತ್ತಿದೆ ಎನ್ನಲಾಗಿದೆ.

ಉತ್ತಮ ಆರಂಭ: ಪಂಜಾಬ್ ಕಿಂಗ್ಸ್ ತಂಡಕ್ಕೆ ಪ್ರಿಯಾಂಶ್ ಆರ್ಯ (70, 34 ಎಸೆತ) ಮತ್ತು ಪ್ರಭಸಿಮ್ರನ್ ಸಿಂಗ್ (ಔಟಾಗದೇ 50, 28ಎಸೆತ) ಬಿರುಸಿನ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ 122 ರನ್‌ಗಳು ಹರಿದುಬಂದವು.

ಇಬ್ಬರೂ ಆರಂಭದಿಂದಲೇ ಆಕ್ರಮಣಕ್ಕಿಳಿದರು. ಈ ಋತುವಿನಲ್ಲಿ ಒಂದು ಶತಕ, ಒಂದು ಅರ್ಧ ಶತಕ ಗಳಿಸಿದ್ದ ಪ್ರಿಯಾಂಶ್ ವೇಗವಾಗಿ ಆಡಿದರು. ಇವರಿಬ್ಬರು ಐದು ಓವರುಗಳಲ್ಲೇ 65 ರನ್ ಸೇರಿಸಿದರು. ನಂತರದ ಓವರ್‌ನಲ್ಲಿ ವೇಗಿ ಟಿ.ನಟರಾಜನ್ ಬರೇ ನಾಲ್ಕು ರನ್ ನೀಡಿದ್ದು ಪವರ್ ಪ್ಲೇ ಬಳಿಕ ತಂಡ 69 ರನ್ ಗಳಿಸಿತ್ತು.

ನಟರಾಜನ್ ಅವರೇ ಈ ಜೊತೆಯಾಟ ಮುರಿದರು. ಲೆಗ್‌ಸೈಡ್ ಕಡೆ ಭರ್ಜರಿ ಹೊಡೆತದ ಯತ್ನದಲ್ಲಿ ಪ್ರಿಯಾಂಶ್ ಅವರು ಶಾರ್ಟ್ ಥರ್ಡ್‌ಮ್ಯಾನ್‌ನಲ್ಲಿದ್ದ ಮಾಧವ ತಿವಾರಿ ಅವರಿಗೆ ಕ್ಯಾಚಿತ್ತರು. ಅವರ ಆಟದಲ್ಲಿ ಐದು ಬೌಂಡರಿ, ಆರು ಸಿಕ್ಸರ್‌ಗಳಿದ್ದವು.

ಪಂದ್ಯ ರದ್ದುಗೊಳಿಸಿದ ವೇಳೆ ಪ್ರಭಸಿಮ್ರನ್ 28 ಎಸೆತಗಳಲ್ಲಿ ಏಳು ಬೌಂಡರಿಗಳಿದ್ದ 50 ರನ್ ಗಳಿಸಿ ಅಜೇಯರಾಗುಳಿದಿದ್ದರು.

ಬ್ಯಾಟಿಂಗ್ ದಿಗ್ಗಜನಿಗೆ ಕಪಿಲ್ ದೇವ್ ಮೆಚ್ಚುಗೆ

‘ರೋಹಿತ್ ರೀತಿ ಆಡಿದವರು ವಿರಳ’

ರೋಹಿತ್



ಕಪಿಲ್

ನವದೆಹಲಿ (ಪಿಟಿಐ): ದೇಶದಲ್ಲಿ ಕೆಲವೇ ಕೆಲವರು ರೋಹಿತ್ ಶರ್ಮಾ ಅವರ ಹಾಗೆ ಕ್ರಿಕೆಟ್ ಆಡಿದ್ದಾರೆ ಮತ್ತು ರಾಷ್ಟ್ರೀಯ ತಂಡವನ್ನು ಮುನ್ನಡೆಸಿದ್ದಾರೆ ಎಂದು ದಿಗ್ಗಜ ಕ್ರಿಕೆಟಿಗ ಕಪಿಲ್ ದೇವ್ ಮೆಚ್ಚುಗೆ ಸೂಚಿಸಿದ್ದಾರೆ.
ರೋಹಿತ್ ಅವರು ಟೆಸ್ಟ್ ಕ್ರಿಕೆಟ್‌ಗೆ ಬುಧವಾರ ವಿದಾಯ ಹೇಳಿದ್ದರು.

‘ಅವರು ಅಮೋಘ ರೀತಿಯಲ್ಲಿ ಆಡಿದರು. ವರ್ಷಗಳಿಂದ ಅವರು ನಡೆದುಕೊಂಡು ಬಂದ ರೀತಿ, ನಾಯಕತ್ವ ನಿರ್ವಹಿಸಿದ ರೀತಿ, ಎಲ್ಲಕ್ಕಿಂತ ಮುಖ್ಯವಾಗಿ ಅವರು ಆಡುತ್ತಿದ್ದ ಪರಿ ಮೆಚ್ಚುವಂಥದ್ದು. ಭಾರತದಲ್ಲಿ ಕೆಲವೇ ಕೆಲವರು ಅವರ ಹಾಗೆ ಆಡಿದ್ದರು’ ಎಂದು ಕಪಿಲ್ ಗುರುವಾರ ಪಿಟಿಐ ವಿಡಿಯೋಸ್‌ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮುಂಬೈ ಕ್ರಿಕೆಟಿನಗ ಗುಣಗಾನ ಮಾಡಿದರು.

ಮುಂಬರುವ ದಿನಗಳಲ್ಲಿ ಭಾರತ ಟೆಸ್ಟ್ ತಂಡ ಮುನ್ನಡೆಸಲು ಉತ್ತಮ ಆಟಗಾರ ಯಾರು ಎಂಬ ಪ್ರಶ್ನೆಗೆ, ‘ನಾಯಕನನ್ನು ಆಯ್ಕೆ ಮಾಡುವುದು ಆಯ್ಕೆಗಾರರ ಕೆಲಸ’ ಎಂದು ಕಪಿಲ್ ದೇವ್ ಉತ್ತರಿಸಿದರು.

ರೋಹಿತ್ ಏಳಿಗೆ ಕೊಂಡಾಡಿದ ಸಚಿನ್

ಸಚಿನ್

ರೋಹಿತ್ ಶರ್ಮಾ ಅವರಿಗೆ 2013ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಸರಣಿಯಲ್ಲಿ ಟೆಸ್ಟ್ ಕ್ಯಾಪ್ ನೀಡಿದ ಆಟಗಾರ ಬೇರಾರೂ ಅಲ್ಲ. ಅದು ಸಚಿನ್ ತೆಂಡೂಲ್ಕರ್. ಅದು ಸಚಿನ್ ಅವರ ವಿದಾಯದ ಸರಣಿಯೂ ಆಗಿತ್ತು.

ಸಚಿನ್ ಆ ಸಂದರ್ಭವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ ಪೋಸ್ಟ್‌ನಲ್ಲಿ ಮೆಲುಕು ಹಾಕಿದ್ದಾರೆ. ‘ಈಡನ್ ಗಾರ್ಡನ್‌ನಲ್ಲಿ 2013ರಲ್ಲಿ ನಿಮಗೆ ಟೆಸ್ಟ್ ಕ್ಯಾಪ್ ನೀಡಿದ ದಿನ ಇನ್ನೂ ನೆನಪಿದೆ. ಮೊನ್ನೆಯಷ್ಟೇ ವಾಂಖೆಡೆ ಕ್ರೀಡಾಂಗಣದ ಬಾಲ್ಕನಿಯಲ್ಲಿ ನಿಂತಿದ್ದೂ ಮರೆತಿಲ್ಲ. ನಿಮ್ಮ ಜೊತೆಗಿನ ಪಯಣ ಅಸಾಧಾರಣವಾದುದು’ ಎಂದು ಸಚಿನ್ ಬರೆದಿದ್ದಾರೆ.

‘ಅಂದಿನಿಂದ ನೀವು ಆಟಗಾರನಾಗಿ ಮತ್ತು ನಾಯಕನಾಗಿ ಭಾರತದ ಕ್ರಿಕೆಟ್‌ಗೆ ಒಳ್ಳೆಯ ಕೊಡುಗೆ ನೀಡಿದ್ದೀರಿ. ವೆಲ್‌ಡನ್. ನಿಮಗೆ ಮುಂದಿನ ದಿನಗಳು ಶುಭವಾಗಲಿ’ ಎಂದು ಸಚಿನ್ ಹಾರೈಸಿದ್ದಾರೆ.

‘ಡ್ರೆಸಿಂಗ್ ರೂಮ್‌ನಲ್ಲಿ ನಿಮ್ಮ ಉಪಸ್ಥಿತಿ ಮತ್ತು ನೀವು ಬೀರಿದ ಪ್ರಭಾವ ಎಂದೆಂದೂ ಪ್ರತಿಧ್ವನಿಸಲಿದೆ’ ಎಂದು ರಿಷಭ್ ಪಂತ್ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಾಕಿದ್ದಾರೆ.

ರೋಹಿತ್ ನಾಯಕರಾಗಿದ್ದಾಗ, ಟೆಸ್ಟ್‌ಗೆ ಪದಾರ್ಪಣೆ ಮಾಡಿದ ಯುವ ವಿಕೆಟ್ ಕೀಪರ್ ಧ್ರುವ್ ಜುರೆಲ್ ಅವರು ‘ನೀವು ಎಂದೆಂದೂ ನನ್ನ ಮೊದಲ ನಾಯಕ’ ಎಂದು ಭಾವುಕರಾಗಿ ಬರೆದಿದ್ದಾರೆ.

ವಿದಾಯ ತೀರ್ಮಾನ ಸದ್ಯಕ್ಕಿಲ್ಲ: ಧೋನಿ



ಕೋಲ್ಕತ್ತ (ಪಿಟಿಐ): ತಾವು ಕ್ರಿಕೆಟ್ ಜೀವನದ ಸಂಧ್ಯಾ ಕಾಲದಲ್ಲಿರುವ ವಿಷಯವನ್ನು ಅಲ್ಲಗಳೆಯಲು ಆಗದು. ಆದರೆ ಮುಂದಿನ ಆರರಿಂದ ಎಂಟು ತಿಂಗಳ ಒಳಗೆ, ಕಠಿಣ ಶ್ರಮದ ಒತ್ತಡಕ್ಕೆ ತಮ್ಮ ದೇಹ ಹೇಗೆ ಸ್ಪಂದಿಸುವುದೊ ಅದರ ಆಧಾರದಲ್ಲಿ ಐಪಿಎಲ್ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳುವುದಾಗಿ ಚೆನ್ನೈ ಸೂಪರ್ ಕಿಂಗ್ಸ್ ನಾಯಕ ಮಹೇಂದ್ರ ಸಿಂಗ್ ಧೋನಿ ಹೇಳಿದ್ದಾರೆ.

ಭಾರತದ ಕ್ರಿಕೆಟ್ ದಿಗ್ಗಜ ಈಡನ್‌ನಲ್ಲಿ ಕೊನೆಯ ಪಂದ್ಯ ಆಡುವರೆಂಬ ನಿರೀಕ್ಷೆಯಲ್ಲಿ ಬುಧವಾರ ಅಭಿಮಾನಿಗಳ ದೊಡ್ಡ ದಂಡೇ ಪ್ರೇಕ್ಷಕರ ಗ್ಯಾಲರಿಯಲ್ಲಿ ಕಾಣಿಸಿತ್ತು.

‘ನನ್ನ ಕ್ರಿಕೆಟ್ ಬದುಕಿನುದ್ದಕ್ಕೂ ಅಭಿಮಾನಿಗಳ ಪ್ರೀತಿ ಮತ್ತು ಅಕ್ಕರೆ ಲಭಿಸಿದೆ. ಆದರೆ ನನಗೆ ಈಗ 43 ವರ್ಷ ಎಂಬುದನ್ನು ಮರೆಯುವಂತಿಲ್ಲ. ದೀರ್ಘ ಕಾಲದಿಂದ ಆಡುತ್ತಿದ್ದೇನೆ. ನನ್ನ ಕೊನೆಯ ಪಂದ್ಯ ಯಾವುದು ಇರಬಹುದು ಎಂಬುದು ಅವರಲ್ಲಿ ಬಹುತೇಕರಿಗೆ ಗೊತ್ತಿಲ್ಲ. ಹೀಗಾಗಿ ಅವರು ಕ್ರೀಡಾಂಗಣಕ್ಕೆ ಬಂದು ಆಡುವುದನ್ನು ನೋಡಲು ಬಯಸುತ್ತಾರೆ’ ಎಂದು ಚೆನ್ನೈ ತಂಡ ಬುಧವಾರ ಕೆಕೆಆರ್ ತಂಡವನ್ನು 2 ವಿಕೆಟ್‌ಗಳಿಂದ ಸೋಲಿಸಿದ ನಂತರ ಧೋನಿ ಪ್ರತಿಕ್ರಿಯಿಸಿದರು.

‘ಯಾವುದನ್ನೂ ಈಗಲೇ ನಿರ್ಧರಿಸುವುದಿಲ್ಲ. ಆದರೆ ನನಗೆ ಸಿಗುತ್ತಿರುವ ಪ್ರೀತಿ ಮತ್ತು ಅಭಿಮಾನ ಅತ್ಯುನ್ನತವಾದುದು’ ಎಂದು ಧೋನಿ ಹೇಳಿದರು.

11ರ ಧರ್ಮಶಾಲಾ ಪಂದ್ಯ ಅಹಮದಾಬಾದಿಗೆ ಸ್ಥಳಾಂತರ

ನವದೆಹಲಿ (ಪಿಟಿಐ): ಇದೇ 11ರಂದು ಧರ್ಮಶಾಲಾದಲ್ಲಿ ನಿಗದಿಯಾಗಿದ್ದ ಪಂಜಾಬ್ ಕಿಂಗ್ಸ್–ಮುಂಬೈ ಇಂಡಿಯನ್ಸ್ ನಡುವಣ ಪಂದ್ಯವನ್ನು ಅಹಮದಾಬಾದಿಗೆ ಸ್ಥಳಾಂತರ ಮಾಡಲಾಗಿದೆ. ಪಾಕಿಸ್ತಾನ ಮತ್ತು ಪಿಒಕೆಯಲ್ಲಿ ಬುಧವಾರ ನಸುಕಿನಲ್ಲಿ ಉಗ್ರರ ನೆಲೆಗಳ ಮೇಲೆ ಭಾರತ ಕ್ಷಿಪಣಿ ದಾಳಿ ನಡೆಸಿದ ನಂತರ ಧರ್ಮಶಾಲಾದ ವಿಮಾನ ನಿಲ್ದಾಣವನ್ನು ಮುಚ್ಚಲಾಗಿರುವ ಕಾರಣ ಬಿಸಿಸಿಐ ಈ ಕ್ರಮ ಕೈಗೊಂಡಿದೆ.

ಈ ಪಂದ್ಯವನ್ನು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಧ್ಯಾಹ್ನ 3.30 ರಿಂದ ಆಡಲಾಗುವುದು ಎಂದು ಬಿಸಿಸಿಐ ಗುರುವಾರ ಹೇಳಿಕೆಯಲ್ಲಿ ತಿಳಿಸಿದೆ. ‘ಪ್ರಯಾಣದ ಸವಾಲುಗಳ ಕಾರಣ ಪಂದ್ಯದ ಸ್ಥಳ ಬದಲಾವಣೆ ಮಾಡಲಾಗಿದೆ’ ಎಂದೂ ತಿಳಿಸಿದೆ.

ಇದಕ್ಕೆ ಮೊದಲು, ಪಂದ್ಯ ಸ್ಥಳಾಂತರದ ಬೆಳವಣಿಗೆಯನ್ನು ಗುಜರಾತ್ ಕ್ರಿಕೆಟ್ ಸಂಸ್ಥೆ ಕಾರ್ಯದರ್ಶಿ ಅನಿಲ್ ಪಟೇಲ್ ಪಿಟಿಐಗೆ ಖಚಿತಪಡಿಸಿದ್ದರು.

‘ಬಿಸಿಸಿಐನಿಂದ ಈ ಕೋರಿಕೆ ಬಂದಿದ್ದು ನಾವು ಒಪ್ಪಿಕೊಂಡಿದ್ದೇವೆ. ಮುಂಬೈ ಇಂಡಿಯನ್ಸ್ ಗುರುವಾರ ರಾತ್ರಿ ತಲುಪಿದೆ. ಪಂಜಾಬ್ ಕಿಂಗ್ಸ್ ತಂಡದ ಪ್ರಯಾಣ ಕಾರ್ಯಕ್ರಮ ನಂತರ ಗೊತ್ತಾಗಲಿದೆ’ ಎಂದು ಪಟೇಲ್ ತಿಳಿಸಿದರು.

ಧರ್ಮಶಾಲಾದ ವಿಮಾನ ನಿಲ್ದಾಣದಲ್ಲಿ ಮೇ 10ರವರೆಗೆ ವಾಣಿಜ್ಯ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ.

ಬಾಂಬ್ ಬೆದರಿಕೆ

ಜೈಪುರ (ಪಿಟಿಐ): ಕೋಲ್ಕತ್ತದ ಈಡನ್ ಗಾರ್ಡನ್ಸ್ ನಂತರ ಜೈಪುರದ ಸವಾಯಿ ಮಾನ್ ಸಿಂಗ್ ಕ್ರೀಡಾಂಗಣಕ್ಕೂ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಮೇ 16ರಂದು ಪಂಜಾಬ್ ಕಿಂಗ್ಸ್ ವಿರುದ್ಧ ನಡೆಯಲಿರುವ ಐಪಿಎಲ್ ಪಂದ್ಯಕ್ಕೂ ಮುನ್ನ ಕ್ರೀಡಾಂಗಣವನ್ನು ಸ್ಫೋಟಿಸುವುದಾಗಿ ಇ-ಮೇಲ್ ಬಂದಿದೆ ಎಂದು ರಾಜಸ್ಥಾನ ಕ್ರೀಡಾ ಮಂಡಳಿ ಅಧ್ಯಕ್ಷ ನೀರಜ್ ಕೆ. ಪವನ್ ತಿಳಿಸಿದ್ದಾರೆ.

‘ಆಪರೇಷನ್ ಸಿಂಧೂರ’ಕ್ಕೆ ಪ್ರತಿಯಾಗಿ ಬಾಂಬ್ ದಾಳಿ ನಡೆಸುವುದಾಗಿ ಹೇಳಲಾಗಿದೆ. ತಕ್ಷಣವೇ ಕ್ರೀಡಾಂಗಣದಲ್ಲಿ ಬಾಂಬ್ ನಿಷ್ಕ್ರಿಯ ದಳ ಸೇರಿದಂತೆ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡುಬಂದಿಲ್ಲ.

ಐಪಿಎಲ್ ನೀತಿಸಂಹಿತೆ ಉಲ್ಲಂಘನೆ: ಚಕ್ರವರ್ತಿಗೆ ದಂಡ

ಕೋಲ್ಕತ್ತ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಐಪಿಎಲ್ ನೀತಿಸಂಹಿತೆಯನ್ನು ಉಲ್ಲಂಘಿಸಿದ ಕಾರಣಕ್ಕೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರಿಗೆ ಪಂದ್ಯ ಸಂಭಾವನೆಯ ಶೇ 25ರಷ್ಟು ದಂಡ ವಿಧಿಸಲಾಗಿದೆ ಮತ್ತು ಅವರ ಶಿಸ್ತಿನ ದಾಖಲೆಯಲ್ಲಿ ಒಂದು ಡಿಮೆರಿಟ್ ಅಂಕ ಸೇರಿಸಲಾಗಿದೆ.

ಅರ್ಧ ಶತಕ ಸಿಡಿಸಿದ ಡೆವಾಲ್ಡ್ ಬ್ರೆವಿಸ್ ಅವರ ವಿಕೆಟ್ ಪಡೆದ ಉತ್ಸಾಹದಲ್ಲಿ ಚಕ್ರವರ್ತಿ ಅವರು ಫೀಲ್ಡ್ ತೊರೆಯುವಂತೆ ದಕ್ಷಿಣ ಆಫ್ರಿಕಾದ ಬ್ಯಾಟರ್‌ಗೆ ಸಂಜ್ಞೆ ಮಾಡಿದ್ದರು. ಬ್ರೆವಿಸ್ ಅವರ ಆಟ ಸಿಎಸ್‌ಕೆ ಚೇತರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ಸಂದೀಪ್ ಶರ್ಮಾ ಬದಲು ನಾಂಡ್ರೆ

ನವದೆಹಲಿ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡವು, ಗಾಯಾಳಾಗಿರುವ ವೇಗದ ಬೌಲರ್ ಸಂದೀಪ್ ಶರ್ಮಾ ಅವರ ಬದಲು ಐಪಿಎಲ್‌ನ ಉಳಿದ ಪಂದ್ಯಗಳಿಗೆ ದಕ್ಷಿಣ ಆಫ್ರಿಕಾದ ಎಡಗೈ ವೇಗದ ಬೌಲರ್ ನಾಂಡ್ರೆ ಬರ್ಗರ್ ಅವರನ್ನು ಸೇರ್ಪಡೆ ಮಾಡಿಕೊಂಡಿದೆ. ಇನ್ನೊಬ್ಬ ಗಾಯಾಳು ನಿತೀಶ್ ರಾಣಾ ಅವರ ಬದಲು ದಕ್ಷಿಣ ಆಫ್ರಿಕಾದ ಲ್ಹುವಾನ್ ಡ್ರೆ ಪ್ರಿಟೋರಿಯಸ್ ಅವರಿಗೆ ಅವಕಾಶ ನೀಡಿದೆ.

KROPEX AUTO: Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641
PRERANA MOTORS: Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
ADISHAKTI CARS: Hebbal: 7506023837; Dasarahalli: 9167982568; Kalyana Nagar: 9167163087
BELLAD ENTERPRISES PVT LTD: Bommsandra 8238883535, 9035354160; Sarajpura: 8879932503
CAUVERY MOTORS: Avalahalli: 8879156068; Mekhri Circle: 8422849049; Devanahalli: 8879078454
KEY MOTORS: JP Nagar Kanakapura Road: 7506023980, Mysore Road: 9167395034, Kanakapura City: 8879145649, BG Road: 9167395164, Nelamangala: 9167881890, Sunkadakatte Magadi Road: 9167882027
KHT MOTORS: Whitefield: 7506023988; Domlur: 7506024006, Kolar: 9731149668
SREE AUTO: Tumkur: 7506024318, Tiptur: 9619050469, Chitradurga: 9619033465, Kunigal: 8879046819, Chikkaballapur: 9167082428, Chintamani: 8291927028

Images and Illustrations are indicative and for information purposes only. All features/specifications are not available in all variants and may vary for different variants. Specifications/features are subject to change without prior information. Colours may vary due to printing limitations. *Benefits up to differs from model to model and is inclusive of consumer offer, exchange bonus and maximum corporate offer. *ADAS with Adaptive Cruise Control in AT only. L2+ available only on Stealth. Local taxes and octroi extra. *India's safest as per 5 Star GNCAP 2023 & 5 Star BNCAP safety rating for Harrier and Safari in 2023. ++Safari and Harrier, built on Omegarc Architecture, which is derived from Land Rover's D8 platform. ^^Price mentioned is Harrier and Safari Smart MT, ex-showroom Delhi Local taxes extra. *Offers are from multiple Financiers. *Finance at sole discretion of Financier. Terms and Conditions apply.